
ಗೌರಿ

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

02 ಮಾರ್ಚ್ 2016 ಪುಟ 20 ರೂ. 15/-



ಸಾಹಿತ್ಯ ಪರಿಷತ್ತಿಗೆ ಬೇಕು ಮನು ಬಳಿಗಾರ್

ಉಪಚುನಾವಣೆ

ಲಾಭವೂ ಇಲ್ಲ ನಷ್ಟವೂ ಇಲ್ಲ





ಇದೇ ಅಸಲಿ ದೇಶಪ್ರೇಮ

ಜಿ.ಪಂ-ತಾ.ಪಂ ಚುನಾವಣೆ


ಮೈಸೂರು: ಒಗ್ಗಟ್ಟಿನ ಕಾಂಗ್ರೆಸ್ ಚಿಕ್ಕಟ್ಟಿನ ಜೆಡಿಎಸ್

ಕರಾವಳಿ: ಕಾಂಗ್ರೆಸ್‌ಗೆ ಬಲ ಬಿಜೆಪಿಗೆ ತಳಮಳ

ಮಂಡ್ಯ: ಜೆಡಿಎಸ್ ಕೋಟೆಯಲ್ಲಿ ಕಾಂಗ್ರೆಸ್‌ನ ಜಿದ್ದಾಜಿದ್ದಿ

ಸರಕು ಮತ್ತು ಸೇವಾ ತೆರಿಗೆ - ಜಿಎಸ್‌ಟಿ: ಅಸಲೀಯತ್ತೇನು

ಅಂಚಿನಿಂದ...



ಡಾ.ವಾಸು ಎಚ್.ವಿ.

ಎಲ್ಲವೂ ಮೋದಿ ಸರ್ಕಾರ ಅಂದುಕೊಂಡಿದ್ದಂತೆ ನಡೆದಿದ್ದರೆ, ಇದೇ ಏಪ್ರಿಲ್ 1ರಂದು ಈ ದೇಶದಲ್ಲಿ ಹೊಸ ರೀತಿಯ ತೆರಿಗೆ ನೀತಿ ಜಾರಿಗೆ ಬರಬೇಕಾಗಿತ್ತು. ಅದೇ ಜಿಎಸ್‌ಟಿ, ಅಂದರೆ ಸರಕು ಮತ್ತು ಸೇವಾ ತೆರಿಗೆ. ಆದರೆ, ಹಾಗಾಗಿಲ್ಲ, ಏಕೆಂದರೆ, ಈ ಸಾರಿಯ ಬಜೆಟ್ ಅಧಿವೇಶನದಲ್ಲಿ ಜಿಎಸ್‌ಟಿ ಚರ್ಚೆಗೆ ಬರುವುದು ಅನುಮಾನ. ಸಾಮಾನ್ಯವಾಗಿ ಬಜೆಟ್ ಅಧಿವೇಶನದಲ್ಲಿ ಇಂತಹ ಪ್ರಮುಖ ಅಂಶಗಳು ಚರ್ಚೆಯಾಗಿ, ಅಂಗೀಕೃತಗೊಳ್ಳುವುದಿಲ್ಲ. ಪ್ರಮುಖ ಎಂದರೆ, ಅತೀ ಪ್ರಮುಖವಾದ ಬದಲಾವಣೆ ಇದು. ಮೋದಿ ಸರ್ಕಾರವು ತರಬೇಕೆಂದುಕೊಂಡಿರುವ ಭೂಸ್ವಾಧೀನ ಕಾಯ್ದೆ ಮತ್ತು ಕಾರ್ಮಿಕ ಕಾಯ್ದೆ ತಿದ್ದುಪಡಿಗಳಷ್ಟೇ ತೂಕದ ಬದಲಾವಣೆ. ಇದು ಜಾರಿಗೆ ಬಂದರೆ, ಆರ್ಥಿಕ ಉದಾರೀಕರಣದ ಶಕೆಯಲ್ಲಿ ಕಳೆದ 10 ವರ್ಷಗಳಲ್ಲಿ ಜಾರಿಗೆ ಬರುವ ಅತ್ಯಂತ ಪ್ರಮುಖ ಬದಲಾವಣೆ ಎಂದು ಹೇಳಲಾಗುತ್ತಿದೆ. ಇಷ್ಟೆಲ್ಲಾ 'ಹಿರಿಮೆ' ಹೊಂದಿರುವ ಜಿಎಸ್‌ಟಿಯ ಬಗ್ಗೆ ಬಿಜೆಪಿ ಸರ್ಕಾರದ ನೇತಾರರು ಬಹಳ ಹೇಳಿಕೊಳ್ಳುತ್ತಿದ್ದಾರೆ. ಈ ಕಾಯ್ದೆ ಜಾರಿಯಾಗಿ ಬಿಟ್ಟರೆ ದೇಶದ ಜಿಡಿಪಿಯು ಒಂದರಿಂದ ಎರಡು ಶೇಕಡಾ ಹೆಚ್ಚುತ್ತದೆ ಎಂಬುದು ಅವರ ಅಂಬೋಣ. ಆದರೆ, ಜನಸಾಮಾನ್ಯರಿಗೆ ಇದರ ಬಗ್ಗೆ ಎಷ್ಟು ಗೊತ್ತು? ಬಹುತೇಕರಿಗೆ ಗೊತ್ತಿಲ್ಲ, ಹಾಗೆ ನೋಡಿದರೆ, ಭೂಸ್ವಾಧೀನ ಕಾಯ್ದೆ ಮತ್ತು ಕಾರ್ಮಿಕ ಕಾಯ್ದೆ ತಿದ್ದುಪಡಿಗಳ ಬಗ್ಗೆ ಗೊತ್ತಿದ್ದಷ್ಟೂ ಗೊತ್ತಿಲ್ಲ. ಈ ಕುರಿತು ಜನಸಾಮಾನ್ಯರಿಗೆ ತಿಳಿಸಬೇಕಾಗಿದ್ದ ವಿರೋಧ ಪಕ್ಷಗಳು, ಅದರಲ್ಲೂ ಕಾಂಗ್ರೆಸ್ ಸಹ ತಿಳಿಸುತ್ತಿಲ್ಲ, ಹಾಗಾಗಿ ಈ ಅಂಕಣದ ಮಿತಿಯಲ್ಲಿ ಕೆಲವು ಸಂಗತಿಗಳನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ದೇಶದಲ್ಲಿ ಎರಡು ಬಗೆಯ ತೆರಿಗೆಗಳಿವೆ. ನೇರ ತೆರಿಗೆ ಮತ್ತೊಂದು ಪರೋಕ್ಷ ತೆರಿಗೆ. ನೇರ ತೆರಿಗೆಯೆಂದರೆ ಆದಾಯ ತೆರಿಗೆ, ಸಂಪತ್ತಿನ ತೆರಿಗೆ, ಕಾರ್ಪೋರೇಟ್ ತೆರಿಗೆ ಇತ್ಯಾದಿ. ಇವು ಹೆಚ್ಚು ಆದಾಯವುಳ್ಳ ಮೇಲ್‌ಸ್ತರದ ಜನರಿಗೆ ಹೆಚ್ಚಾಗಿ ಅನ್ವಯಿಸುತ್ತವೆ. ಆದರೂ, ತುಂಬಾ ಮೇಲ್‌ಸ್ತರದ ಜನರಿಗೆ ಅಷ್ಟೊಂದು ತೊಂದರೆಯೇನೂ ಕೊಡುವುದಿಲ್ಲ, ಏಕೆಂದರೆ, ವಾರ್ಷಿಕ ಇಂತಿಷ್ಟು ಲಕ್ಷ ರೂ ಆದಾಯಕ್ಕೆ ಇಂತಿಷ್ಟು ತೆರಿಗೆ ಎಂದು ತೀರ್ಮಾನವಾಗಿರುತ್ತದೆ. ಅದು ಒಂದು ಹಂತವನ್ನು ದಾಟಿದ ಮೇಲೆ ತೆರಿಗೆ ಇನ್ನೂ ಹೆಚ್ಚಾಗಬೇಕು. ಆಗುವುದಿಲ್ಲ, ಅಲ್ಲಿಗೇ ನಿಂತುಬಿಡುತ್ತದೆ. ಹಾಗಾಗಿಯೇ ಮಧ್ಯಮ ವರ್ಗದ ಮೇಲ್‌ಸ್ತರದವರಿಗೆ ಯಾವಾಗಲೂ ಇದರ ಬಗ್ಗೆ ಕೋಪ. ಇನ್ನೂ ಮೇಲಿನವರಿಗೆ (ಅಂದರೆ ಲಕ್ಷ ಕೋಟಿಗಳ ವಹಿವಾಟು, ಆಸ್ತಿ ಹೊಂದಿರುವ ಕುಬೇರರಿಗೆ) ಇನ್ನೂ ಹೆಚ್ಚು ತೆರಿಗೆ ಹಾಕುತ್ತಿಲ್ಲವಲ್ಲಾ ಎಂಬ ಕೋಪ ಅಲ್ಲ; ಇನ್ನೂ ಕೆಳಗಿನ ಜನರಿಗೂ ಈ ತೆರಿಗೆ ಹಾಕಿ ಅಥವಾ ನಮಗೂ ಈ ತೆರಿಗೆ ಹಾಕಬೇಡಿ ಎಂಬುದು ಅವರ ತಕರಾರು.

ಅದೇನೇ ಇರಲಿ. ಈ ನೇರ ತೆರಿಗೆಯ ಪ್ರಮಾಣ ದಿನೇದಿನೇ ಕಡಿಮೆಯಾಗುತ್ತಿದೆ. ಅಂದರೆ, ಶ್ರೀಮಂತರ ಮೇಲೆ ಹಾಕುವ ತೆರಿಗೆಯ ಪ್ರಮಾಣ ಕಡಿಮೆಯಾಗುತ್ತಿದೆ. ಎಲ್ಲಾ ಬಗೆಯ ಸರಕುಗಳು ಮತ್ತು ಸೇವೆಗಳ ಮೇಲೆ ಹಾಕಲಾಗುವ ತೆರಿಗೆಯನ್ನು ಹೆಚ್ಚಿಸಲಾಗುತ್ತಿದೆ. ಇದೇ ಪರೋಕ್ಷ ತೆರಿಗೆ. ಇದನ್ನು ಜನಸಾಮಾನ್ಯರೇ ಹೆಚ್ಚೆಚ್ಚು ಕಟ್ಟುತ್ತಾರೆ. ಅದು ಹೇಗೆ? ಈ ದೇಶದಲ್ಲಿ ಜನಸಾಮಾನ್ಯರೆಂದು ಕರೆಯಬಹುದಾದ ಮಧ್ಯಮ ವರ್ಗಕ್ಕಿಂತ ಕೆಳಗಿನ ಜನರೇ ಶೇ.80ಕ್ಕಿಂತ ಹೆಚ್ಚಿದ್ದಾರೆ. ಹಾಗಾಗಿ ಅಷ್ಟು ಬೃಹತ್ ಸಂಖ್ಯೆಯ ಜನರು ಕೊಳ್ಳುವ ಸರಕುಗಳು ಮತ್ತು ಸೇವೆಗಳ ಪ್ರಮಾಣವೂ ಬೃಹತ್ ಆಗಿರುತ್ತದೆ.

ಹಾಗಾದರೆ, ಶ್ರೀಮಂತರು ಸರಕುಗಳು ಮತ್ತು ಸೇವೆಗಳಿಗೆ ತೆರಿಗೆ ಕಟ್ಟುವುದಿಲ್ಲವೇ? ಕಟ್ಟುತ್ತಾರೆ. ಆದರೆ, ಜನಸಾಮಾನ್ಯರ ಆದಾಯದ ಹೆಚ್ಚಿನ ಪಾಲು (ಉದಾಹರಣೆಗೆ ರೂ. 10,000 ಮಾಸಿಕ ಆದಾಯವಿರುವ ಒಂದು ಕುಟುಂಬದಲ್ಲಿ 9,500 ರೂ.) ನಿತ್ಯ ಬಳಕೆಯ ವಸ್ತುಗಳು ಮತ್ತು ಸೇವೆಗಳ ಖರೀದಿಗೆ ಹೋಗಿಬಿಡುತ್ತದೆ. ವಾಸ್ತವಕ್ಕೆ ಇನ್ನೂ ಹತ್ತಿರ ಬರಬೇಕೆಂದರೆ, 10,000 ರೂ ಆದಾಯವಿರುವವರು ಕನಿಷ್ಠ ಮಟ್ಟದ ಜೀವನ ನಡೆಸಲು 12,000 ರೂಗಳ ಖರೀದಿ ಮಾಡಬೇಕಾಗುತ್ತದೆ. ಅಂದರೆ, ಒಂದೋ ಅವರು ಸಾಲ ಮಾಡಬೇಕಾಗುತ್ತದೆ. ಇಲ್ಲವೇ ಕನಿಷ್ಠ ಮಟ್ಟಕ್ಕಿಂತ ಕನಿಷ್ಠ ಮಟ್ಟದ ಜೀವನ ಮಾಡಬೇಕಾಗುತ್ತದೆ. ನಮ್ಮ ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುವ ಸಂದರ್ಭ ಹೀಗೆಯೇ ಬರುತ್ತಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ, ಮಾಸಿಕ 2 ಲಕ್ಷ ಆದಾಯವಿರುವ ಮೇಲ್ಮಧ್ಯಮ ವರ್ಗದ ಕುಟುಂಬ ಹೊಟ್ಟೆ ಬಿರಿಯುವ ಹಾಗೆ ತಿಂದು, 2 ಜೊತೆ ಬಟ್ಟೆಯ ಜಾಗದಲ್ಲಿ 25 ಜೊತೆ ಕೊಂಡು, ಮಲ್ಟಿಪ್ಲೆಕ್ಸ್‌ನಲ್ಲಿ ಸಿನಿಮಾ ನೋಡಿ ದುಂದು ಮಾಡಿದರೂ, ಅದರ ಈ ಬಗೆಯ ಖರ್ಚು 40 ಸಾವಿರ ದಾಟುವುದಿಲ್ಲ. ಅಂದರೆ, ಪರೋಕ್ಷ ತೆರಿಗೆಯು ಕಡಿಮೆ ಆದಾಯವಿರುವವರ ಬದುಕನ್ನು ಹಿಂಡಿಬಿಡುವ ರೀತಿಯಲ್ಲಿ ಹೆಚ್ಚಿನ ಆದಾಯವಿರುವವರ ಬದುಕನ್ನು ಹಿಂಡುವುದಿಲ್ಲ.

ಈ ಜಿಎಸ್‌ಟಿ ಎಂದರೆ ಏನು? ಜಿಎಸ್‌ಟಿ - **Goods and service tax** - ಎನ್ನುವುದು ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಪರೋಕ್ಷ ತೆರಿಗೆಯನ್ನು ಮತ್ತಷ್ಟು ಹೆಚ್ಚಿಸುವ ಒಂದು ವಿಧಾನ. ಆದರೆ, ನಿಮಗೆ ಜಿಎಸ್‌ಟಿಯ ಕುರಿತ ಯಾವ ಪರಿಚಯ ಪತ್ರದಲ್ಲೂ ಅದನ್ನು ಹೇಳುವುದಿಲ್ಲ, ಬದಲಿಗೆ, ಜಿಎಸ್‌ಟಿ ಎಂದರೆ, ಇಂದು ಪರೋಕ್ಷ ತೆರಿಗೆಯ ವಿಭಾಗದಲ್ಲಿ ಇರುವ ಕೇಂದ್ರ ಮತ್ತು ರಾಜ್ಯಗಳೆರಡರ ಸೇವಾತೆರಿಗೆ, ಮಾರಾಟ ತೆರಿಗೆ, ವಾಣಿಜ್ಯ ತೆರಿಗೆ, ಅಬಕಾರಿ ತೆರಿಗೆ, ಆಕ್ಟ್ರಾಯ್ ಇತ್ಯಾದಿಗಳೆಲ್ಲವನ್ನೂ ತೆಗೆದು, ದೇಶಾದ್ಯಂತ ಒಂದೇ ಬಗೆಯ ಸರಳ ತೆರಿಗೆಯ ಪದ್ಧತಿಯನ್ನು ಜಾರಿಗೆ ತರುವುದು ಎಂದು ಹೇಳಲಾಗುತ್ತದೆ. ಇದು ನಿಜವೇ. ಆದರೆ, ಈ ರೀತಿಯ ಒಂದೇ ಬಗೆಯ ತೆರಿಗೆಯು ತೆರಿಗೆಯ ವಿಧಾನವನ್ನು ಸರಳಗೊಳಿಸುವುದರ ಜೊತೆಗೆ, ಜನಸಾಮಾನ್ಯರನ್ನೂ ಹಿಂಡಿ ಹಾಕುತ್ತದೆ ಎಂಬುದೂ ನಿಜ. ಏಕೆಂದರೆ, ದೇಶದ ಸಮಸ್ತ ಸರಕು ಹಾಗೂ ಸೇವೆಗಳಿಗೆ ಒಂದೇ ಪ್ರಮಾಣದ ತೆರಿಗೆ



ಹಾಕುವುದರ ಮೂಲಕ ಇಂದು ಬಡವರು ಬಳಸುವ ಸರಕು-ಸೇವೆಗಳನ್ನೂ, ಶ್ರೀಮಂತರು ಬಳಸುವ ಸರಕು-ಸೇವೆಗಳನ್ನೂ ತೆರಿಗೆಯ ವಿಚಾರದಲ್ಲಿ ಒಂದೇ ಮಟ್ಟಕ್ಕೆ ತರಲಾಗುತ್ತದೆ. ಒಂದು ವೇಳೆ, ಒಂದೇ ಮಟ್ಟಕ್ಕೆ ಅಲ್ಲದಿದ್ದರೂ ಈಗ ವ್ಯಾಟ್ ತೆರಿಗೆಯ ವಿಚಾರದಲ್ಲಿ ಇರುವಂತೆ ಎರಡು ಅಥವಾ ಹೆಚ್ಚೆಂದರೆ ಮೂರು ಬಗೆಯಲ್ಲಿ ವಿಭಜಿಸಲಾಗುತ್ತದೆ.

ಜನರಿಂದ ಆಯ್ಕೆಯಾಗುವ ಒಂದು ಸರ್ಕಾರವು, ತನಗೆ ಓಟು ಹಾಕಿದ ಸಾಮಾನ್ಯ ಜನರು ಬಳಸುವ ವಸ್ತುಗಳು ಹಾಗೂ ಸೇವೆಗಳ ಮೇಲೆ ಕಡಿಮೆ ತೆರಿಗೆ ವಿಧಿಸುವ ಸ್ವಾತಂತ್ರ್ಯವನ್ನು ಇದು ಕಿತ್ತುಕೊಳ್ಳುತ್ತದೆ. ಸಾಮಾನ್ಯವಾಗಿ ರಾಜ್ಯ ಸರ್ಕಾರಗಳು, ತಮ್ಮ ರಾಜಕೀಯ ಅನುಕೂಲಕ್ಕಾಗಿಯೂ, ಅವರು ಜನರೊಂದಿಗೆ ಇನ್ನೂ ಹತ್ತಿರದ ಸಂಪರ್ಕದಲ್ಲಿರಲೇಬೇಕಾದ ಅನಿವಾರ್ಯತೆಯಿಂದಲೂ ಹೆಚ್ಚೆಚ್ಚು ಜನಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುತ್ತವೆ. ತಮಿಳುನಾಡು ಸರ್ಕಾರ ಅದಕ್ಕೊಂದು ಉದಾಹರಣೆ, ಇಂತಹ ಜನಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಬೇಕಾದಲ್ಲಿ, ಶ್ರೀಮಂತರಿಗೆ ಅನ್ವಯಿಸುವ ಕೆಲವು ಸರಕು-ಸೇವೆಗಳ ಮೇಲೆ ಮಾತ್ರ ಹೆಚ್ಚಿನ ತೆರಿಗೆ ವಿಧಿಸುವ ಸ್ವಾತಂತ್ರ್ಯವನ್ನು ಇದುವರೆಗೆ ಹೊಂದಿದ್ದವು. ಈ ಜಿಎಸ್‌ಟಿ ಅದನ್ನು ಕಿತ್ತುಕೊಳ್ಳುತ್ತದೆ. ಏಕೆಂದರೆ, ಜಿಎಸ್‌ಟಿ ಬಂದಮೇಲೆ ದೇಶಾದ್ಯಂತ ಒಂದೇ ಬಗೆಯ ತೆರಿಗೆ ಪ್ರಮಾಣ ಇರುತ್ತದೆ. ಅದನ್ನು ಕೇಂದ್ರ ಸರ್ಕಾರದ ನೇತೃತ್ವದ ಜಿಎಸ್‌ಟಿ ಮಂಡಳಿ ನಿರ್ಧರಿಸುತ್ತದೆ.

ಇಂದು ಇರುವ ತೆರಿಗೆಯ ಇಡೀ ಪದ್ಧತಿಯನ್ನೇ ಇದು ಬದಲಾಯಿಸುವುದರಿಂದ, ಸರ್ಕಾರದ ಒಂದು ತೀರ್ಮಾನದಿಂದ ಇದನ್ನು ಜಾರಿ ಮಾಡುವುದು ಸಾಧ್ಯವಿರಲಿಲ್ಲ, ಹಾಗಾಗಿ ಅದಕ್ಕೆ ಸಂವಿಧಾನ ತಿದ್ದುಪಡಿಯನ್ನೇ ಮಾಡುವುದು ಅಗತ್ಯ ಬಿತ್ತು, ಹಾಗಾಗಿ ಸಂವಿಧಾನದ 122ನೇ ತಿದ್ದುಪಡಿಯನ್ನಾಗಿ ಇದನ್ನು ಮೋದಿ ಸರ್ಕಾರವು 2014ರ ಡಿಸೆಂಬರ್ 19ರಂದು ಮಂಡಿಸಿತು. ಎಲ್ಲಾ ತೆರಿಗೆಯೂ ಕೇಂದ್ರಕ್ಕೆ ಹೋಗುವುದರಿಂದ, ಅದರಿಂದ ರಾಜ್ಯಗಳಿಗೆ ಪಾಲು ನಿಗದಿಪಡಿಸುತ್ತಾರೆ. ಮೊದಲ ಐದು ವರ್ಷಗಳ ಕಾಲ ರಾಜ್ಯ ಸರ್ಕಾರಗಳ ಪಾಲನ್ನು ಸಂಸತ್ತೇ ನಿರ್ಧರಿಸುತ್ತದೆ.



ಅದೇನೇ ಇದ್ದರೂ, ರಾಜ್ಯಗಳಿಗೆ ಇದ್ದ ಆರ್ಥಿಕ ಸ್ವಾಯತ್ತತೆಯನ್ನು ಇದು ಒಂದೇ ಏಟಿಗೆ ನಾಶ ಮಾಡುತ್ತದೆ. ಸದಾ ಕೇಂದ್ರದ ಮರ್ಜಿಯಲ್ಲೇ ತನ್ನೆಲ್ಲಾ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಈಗಾಗಲೇ ಯಾವುದೇ ರಾಜ್ಯವು ಪ್ರಮುಖವಾದ ಅಭಿವೃದ್ಧಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದರೆ, ಕೇಂದ್ರದ ಮುಂದೆ ಭಿಕ್ಷಾಪಾತ್ರೆ ಹಿಡಿದು ನಿಲ್ಲುವ ಸ್ಥಿತಿ ಇದೆ. ಈ ಸಂವಿಧಾನ ತಿದ್ದುಪಡಿ ಮತ್ತು ತದನಂತರ ಜಾರಿಗೆ ಬರಲಿರುವ ಕಾನೂನು ಈ ಸ್ಥಿತಿಯನ್ನು ಮತ್ತಷ್ಟು ಕೆಟ್ಟದಾಗಿಸುತ್ತದೆ. ಇದುವರೆಗೆ ತನ್ನ ರಾಜ್ಯದೊಳಗಿನ ತೆರಿಗೆಯ ಪ್ರಮಾಣವನ್ನು ನಿರ್ಧರಿಸುವ ಸ್ವಾಯತ್ತತೆ ಇಲ್ಲವಾಗಬಿಡುತ್ತದೆ.

ಇದಕ್ಕೆ ಕಾಂಗ್ರೆಸ್ ಪಕ್ಷವು ವಿರೋಧ ಮಾಡಿದ್ದರಿಂದ ರಾಜ್ಯಸಭೆಯಲ್ಲಿ ಸ್ಥಗಿತಗೊಂಡು ನಿಂತಿದೆ. ಆದರೆ, ಕಾಂಗ್ರೆಸ್‌ನ ವಿರೋಧವು ಇಂತಹದೊಂದು ಅಪಾಯಕಾರಿ ಬದಲಾವಣೆಯನ್ನೇ ತಪ್ಪಿಸಲು ಅಲ್ಲ. ಅದರಲ್ಲಿ ಕೆಲವು ಸಣ್ಣಪುಟ್ಟ ಮಾರ್ಪಾಡುಗಳು ಆಗಬೇಕು ಎಂದಷ್ಟೇ ಅದು ಕೇಳುತ್ತಿದೆ. ಒಂದು, ಜಿಎಸ್‌ಟಿಯ ದರವು ಅತೀ ಹೆಚ್ಚೆಂದರೆ ಶೇ.18 ಮಾತ್ರ ಇರಬೇಕು ಎಂದು ಅದು ಹೇ[...] ಮತ್ತು ಅದನ್ನು ಕಾಯ್ದೆಯ ಒಳಗೇ ಸೇರಿಸಬೇ[...] ಕೇಳುತ್ತಿದೆ. ಎರಡನೆಯದಾಗಿ, ಒಂದು ರಾಜ[...] ಇನ್ನೊಂದು ರಾಜ್ಯಕ್ಕೆ ಸರಕು ಸಾಗಣೆ ಮಾಡುವಾಗ ಶೇ[...] ಲೆವಿ ವಿಧಿಸಬೇಕೆಂದು ಹೇಳುತ್ತಿರುವ ಎನ್‌ಡಿಎ ಪ್ರಸ್ತಾ[...] ತೆಗೆಯಬೇಕು ಎಂದು ಕಾಂಗ್ರೆಸ್ ಹೇಳುತ್ತಿದೆ. ಮ[...] ತಂಬಾಕು, ಮದ್ಯ, ವಿದ್ಯುತ್ತನ್ನೂ ಜಿಎಸ್‌ಟಿಯ [...] ತರಬೇಕೆಂದು ಕೇಳುತ್ತಿದೆ. ಏನಾದರೂ ವಿವಾದ ಉಂ[...] ಅದನ್ನು ನಿವಾರಣೆ ಮಾಡಿಕೊಳ್ಳಲು ಒಂದು [...] ಯಂತ್ರಾಂಗ ಬೇಕೆಂಬುದೂ ಅದರ ಪ್ರಸ್ತಾಪದಲ್ಲಿದೆ[...] ಇರುವ ಜಿಎಸ್‌ಟಿ ಮಂಡಳಿಯಲ್ಲಿ ಕೇಂದ್ರದ ಪ್ರತಿ[...] ಮೂರನೇ ಒಂದು ಭಾಗದಷ್ಟಿದ್ದು, ಅದನ್ನು ನಾ[...] ಒಂದು ಭಾಗಕ್ಕಿಳಿಸಬೇಕೆಂಬುದೂ ಕಾಂಗ್ರೆಸ್‌ನ ಇನ[...] ಬೇಡಿಕೆ.

ಶೇ.18ಕ್ಕಿಂತ ಹೆಚ್ಚಾದರೆ, ಜನಸಾಮಾ[...] ತೊಂದರೆಯಾಗುತ್ತದೆ, ರಾಜ್ಯಗಳಿಗೆ ಮಂಡಳಿಯಲ್ಲಿ [...] ಪಾಲು ಇರಬೇಕು ಎಂಬುದು ಸರಿಯಾದ ತಿದ್ದುಪ[...] ಆಗಿವೆ ಎಂದು ಭಾವಿಸಬಹುದು. ಆದರೆ, ಈ ರೀ[...] ತೋರಿಕೆಯ ಬದಲಾವಣೆಗಳಿಂದಷ್ಟೇ ಜಿಎಸ್[...] ಜನವಿರೋಧಿ ಗುಣ ಇಲ್ಲವಾಗುವುದಿಲ್ಲ.

ಸದ್ಯ ರಿಯಲ್ ಎಸ್ಟೇಟ್ ಮತ್ತು ಶಿಕ್ಷಣ ಕ್ಷೇತ್ರ[...] ಇದರ ವ್ಯಾಪ್ತಿಯಿಂದ ಹೊರಗಿವೆ. ಆದರೆ ಜಿ[...] ಮಂಡಳಿಯು ಕಾಲಾನುಕ್ರಮದಲ್ಲಿ ಅವನ್ನೂ ಸೇರಿಸಿಕೊ[...] ತೀರ್ಮಾನ ಕೈಗೊಳ್ಳುವುದಿಲ್ಲ ಎಂಬ ಗ್ಯಾರಂಟಿ[...] ಬಡವರು ಸ್ವಂತ ಮನೆ ಕಟ್ಟಿಕೊಳ್ಳುವ ಆಸೆಯನ್ನು ಈಗ[...] ಬಿಟ್ಟಿದ್ದಾರೆ. ಇನ್ನು ಮಧ್ಯಮವರ್ಗಕ್ಕೂ ಅದು ಇಲ್ಲವಾಗ[...] ಶಿಕ್ಷಣದ್ದೂ ಅದೇ ಕಥೆಯಾಗಿದೆ. ಈಗ ಮೋದಿ ಸರ್ಕಾ[...] ದಕ್ಕಿರುವ ರೀತಿಯ ಘಾತುಕ ಬಹುಮತ ಯಾವ [...] ಸಿಕ್ಕಿದರೂ, ದೇಶದ ಜನಸಾಮಾನ್ಯರನ್ನು ಹೀರುವ [...] ಹೊಸ ವಿಧಾನಗಳನ್ನು ಆವಿಷ್ಕರಿಸುತ್ತಾರೆ. ಆಗ ಜಿ[...] ಮಂಡಳಿಯಲ್ಲಿ ಮಾತ್ರವಲ್ಲ, ರಾಜ್ಯಸಭೆಯನ್ನೊಳಗೆ[...] ಸಂಸತ್ತಿನಲ್ಲಿ ತಮಗೆ ಬೇಕಾದ ತಿದ್ದುಪಡಿಗ[...] ಮಾಡಿಕೊಂಡು ದೇಶದ ಪ್ರಜಾಪ್ರಭುತ್ವವೇ ನಾಶವಾಗು[...]

ದೇಶದಲ್ಲಿನ ಇಷ್ಟು ರಾಜ್ಯಗಳು, ಕೇಂದ್ರಾಡ[...] ಪ್ರದೇಶಗಳು, ತೆರಿಗೆ ವಿಧಿಸಲಾಗುತ್ತಿರುವ ಸುಮಾರು[...] ಲಕ್ಷ ಸರಕು ಮತ್ತು ಸೇವೆಗಳನ್ನು ಬಾಧಿಸುವ ಸಂವಿ[...] ತಿದ್ದುಪಡಿ ಇದು. ಇದರ ಕುರಿತು ದೇಶದ ಜ[...] ತಿಳಿಸದೇ ಪ್ರಮುಖ ರಾಜಕೀಯ ಪಕ್ಷಗಳು ಒಂ[...] ಶ್ರೀಮಂತರ ಪರವಾಗಿ ಸಂಸತ್ತನ್ನು ನಡೆಸುತ್ತಿವೆ. ಇವೆ[...] ಬಗ್ಗೆ ಮತ್ತಷ್ಟು ಬೆಳಕು ಚೆಲ್ಲುವ ಕೆಲಸ ಆಗಬೇಕಿದ[...]

ಭಾರತದ ಯುವ ಜನತೆಗೊಂದು 'ಜೈ ಭೀಮ್'



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ನಿಮಗೆ ಹೇಗೆ ಅನ್ನಿಸುತ್ತಿದೆಯೋ ಗೊತ್ತಿಲ್ಲ, ...ರೆ ನನ್ನ ತಲೆಯಂತೂ ಚಿಟ್ ಅನ್ನುತ್ತಿದೆ. ಇದನ್ನು ...ಯಲು ಶುರುಮಾಡುತ್ತಿದ್ದಂತೆ ಟಿವಿ ಪರದೆಯ ...ಲೆ ದೆಹಲಿಯ ವಕೀಲರು ಪಟಿಯಾಲ ಹೌಸ್ ...ಯಾಲಯದ ಆವರಣದಲ್ಲಿ ಮತ್ತೊಮ್ಮೆ ಕನ್ನಯ್ಯ ...ತ್ತು ಇತರರ ಮೇಲೆ ದಾಳಿ ಮಾಡಿರುವ ಸುದ್ದಿ ...ತ್ತರಗೊಳ್ಳುತ್ತಿದೆ. ನಿನ್ನೆ ಅದೇ ನ್ಯಾಯಾಲಯದ ...ವರಣದಲ್ಲಿ ಜೆಎನ್‌ಯು ಶಿಕ್ಷಕರ, ವಿದ್ಯಾರ್ಥಿಗಳ ...ತ್ತು ಇತರೆ ಬೆಂಬಲಿಗರ ಮೇಲಾದ ದಾಳಿ ...ತ್ತೊಮ್ಮೆ ಮರುಕಳಿಸದಂತೆ ನೋಡಿಕೊಳ್ಳಲು ...ೀಲರಿಗೂ, ಪೊಲೀಸರಿಗೂ ಸುಪ್ರೀಂಕೋರ್ಟ್ ...ಚ್ಚರಿಕೆ ನೀಡಿದ್ದರೂ ಇವತ್ತು ಮತ್ತೆ ದಾಳಿ ನಡೆದಿದೆ. ...ಯ್ಯನನ್ನು ಪೊಲೀಸರ ಸಮ್ಮುಖದಲ್ಲೇ ...ದಾಡಲಾಗಿದೆ. ಚೆಡ್ಡಿ ವಕೀಲರು ...ಶದ್ರೋಹಿ'ಗಳನ್ನು 'ದೇಶದ ನಾಯಿಗಳು' ಎಂದು ...ದಿಸುತ್ತಾ ಪ್ರತಿಭಟಿಸಿದ್ದಾರೆ. ಮತ್ತೊಮ್ಮೆ ...ಪ್ರೀಂಕೋರ್ಟ್ ಕೆಂಡಕಾರಿದೆ. ಆದರೆ ...ವ್ಯಾವುದರಿಂದಲೂ ಚೆಡ್ಡಿಗಳ ಬಾಲ ...ಟ್ಟಿಗಾಗುವುದಾಗಲಿ, ಅವರ ಬುದ್ಧಿ ...ದಲಾಗುವುದಾಗಲಿ ಸಾಧ್ಯವಿಲ್ಲ, ಯಾಕೆಂದರೆ ...ವರೆಲ್ಲರ ರಕ್ಷಣೆಗೆ ನರೇಂದ್ರ ಮೋದಿ ಮತ್ತಾತನ ...ರೆಸ್ಸೆಸ್ ಎಂಬ ಅಪ್ಪಟ ದೇಶದ್ರೋಹಿಗಳೇ ...ತಿದ್ದಾರೆ.

ಆರೆಸ್ಸೆಸ್, ಬಿಜೆಪಿ ಮತ್ತು ಎಬಿವಿಪಿ ಪ್ರಕಾರ



...ಯಾರು ಅವರ ಹಿಂದೂತ್ವವಾದವನ್ನು ...ರೋಧಿಸುತ್ತಾರೋ ಅವರೆಲ್ಲರೂ ದೇಶದ್ರೋಹಿಗಳು. ...ದ್ದರಿಂದ ಅವರೆಲ್ಲ ದಾಳಿಗೆ, ದಮನಕ್ಕೆ, ಗುಂಡೇಟಿಗೆ ...ರ್ಹರು. ಅಲ್ಲಾ 'ಬೇರೆಯವರು ದೇಶಪ್ರೇಮಿಗಳೊ ...ಲ್ಲವೋ ಎಂದು ಸರ್ಟಿಫಿಕೇಟ್ ಕೊಡಲು ...ವರ್‍ಯಾರು? ಇವರ ದೇಶಪ್ರೇಮ ಎಂತಹದ್ದು?' ...ಎಂದು ಪ್ರಶ್ನಿಸುವವರೇ ಇಲ್ಲದಂತಾಗಿದೆ.

ಹೈದರಾಬಾದಿನಲ್ಲಿ ರೋಹಿತ್ ವೇಮುಲ ಎಂಬ ...ದ್ಯಾರ್ಥಿ ಯಾಕೂಬ್ ಮೆನನ್‌ನನ್ನು ಗಲ್ಲಿಗೇರಿಸಿದ್ದನ್ನು ...ರೋಧಿಸಿದಂತೆಯೇ ಜೆಎನ್‌ಯು ವಿದ್ಯಾರ್ಥಿ ಕನ್ನಯ್ಯ ...ಮಾರ್ ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದ್ದನ್ನು ...ರೋಧಿಸಿದರು. ಈ ಹಿಂದೆ ಅದೆಷ್ಟೋ ...ನ್ಯಾಯಮೂರ್ತಿಗಳು, ನ್ಯಾಯವಾದಿಗಳು, ಚಿಂತಕರು, ...ಲೇಖಕರು, ಮಾನವಹಕ್ಕು ಸಂಘಟನೆಗಳು ಈ ...ರಡೂ ಕೊಲೆಗಳನ್ನು ವಿರೋಧಿಸಿದ್ದವು. ಈ ಬಗ್ಗೆ ...ಲೇಖನಗಳನ್ನು ಪ್ರಕಟಿಸಿದ್ದವು. ಅಷ್ಟೇ ಯಾಕೆ, ನಮ್ಮ ...ಲಂಕೇಶ್ ಪ್ರಕಾಶನ ಅರುಂಧತಿ ರಾಯ್ ಮತ್ತು ...ತರರು ಬರೆದಿರುವ 'ಡಿಸೆಂಬರ್ 13 - ಭಾರತೀಯ ...ಪಾರ್ಲಿಮೆಂಟಿನ ಮೇಲೆ ದಾಳಿ ಎಂಬ ವಿಚಿತ್ರ ...ಪ್ರಕರಣ' ಎಂಬ ಪುಸ್ತಕದ ಕನ್ನಡ ಅನುವಾದವನ್ನೂ ...ಪ್ರಕಟಿಸಿದೆ. ಆದರೆ ಎಬಿವಿಪಿ ಎಂಬ ಕೋಮುವಾದಿ ...ಸಂಘಟನೆಯ ಪ್ರಕಾರ ಯಾರು ಯಾಕೂಬ್ ಮೆನನ್ ...ಮತ್ತು ಅಫ್ಜಲ್ ಗುರು ಕೊಲೆಗಳನ್ನು ಖಂಡಿಸುತ್ತಾರೋ ...ಅವರೆಲ್ಲ ದೇಶದ್ರೋಹಿಗಳು.

ಇದೇ ಸಂಚಿಕೆಯಲ್ಲಿ ಕನ್ನಯ್ಯ ಕುಮಾರ್ ಮಾಡಿದ ...ಭಾಷಣ ಮತ್ತು ಚೆಡ್ಡಿಗಳಿಗೆ ಯಾವ ಸಂದರ್ಭದಲ್ಲಿ ...ದೇಶಭಕ್ತಿ ಉಕ್ಕಿಬರುತ್ತದೆ ಎಂದು ವಿವರಿಸುವ ...ಲೇಖನಗಳು ಪ್ರಕಟಗೊಂಡಿವೆ. ಆದ್ದರಿಂದ ಇಲ್ಲಿ ಇತರೆ ...ವಿಚಾರಗಳತ್ತ ಗಮನ ಹರಿಸಲು ಯತ್ನಿಸುತ್ತೇನೆ. ...ಪ್ರಗತಿಪರರಿಗೆ, ಎಡಪಂಥೀಯರಿಗೆ, ಅಂಬೇಡ್ಕರ್ ...ಅನುಯಾಯಿಗಳಿಗೆ, ಗಾಂಧಿವಾದಿಗಳಿಗೆ, ನಾಸ್ತಿಕರಿಗೆ ...ಮತ್ತು ಇಂತಹದ್ದೇ ಚಿಂತನೆಯ ಇತರರಿಗೆ ಇವತ್ತು

ಆರೆಸ್ಸೆಸ್ ದೇಶಪ್ರೇಮ, ದೇಶಭಕ್ತಿ ಇತ್ಯಾದಿಗಳ ಬಗ್ಗೆ ಪಾಠ ಹೇಳಿಕೊಡಲು ಸಜ್ಜಾಗಿದೆ. ಆದರೆ ಸೋಜಿಗದ ಸಂಗತಿ ಯಾವುದೆಂದರೆ ಅದೇ ಆರೆಸ್ಸೆಸಿಗೆ ದೇಶಪ್ರೇಮ ಏನೆಂಬುದೇ ಗೊತ್ತಿಲ್ಲ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆರೆಸ್ಸೆಸ್ ಭಾಗಿಯಾಗದೆ ಬ್ರಿಟಿಷರ ಪರ ನಿಂತದ್ದು; ಅವರ ಆರಾಧ್ಯದೈವ 'ವೀರ' ಸಾವರ್ಕರ್ ಹೇಡಿಯಂತೆ ಬ್ರಿಟಿಷರ ಕ್ಷಮೆ ಯಾಚಿಸಿ ಅವರ ಗುಲಾಮನಂತೆ ಕೆಲಸ ಮಾಡುವೆ ಎಂದು ಮಾತು ಕೊಟ್ಟಿದ್ದು; ಅವರ ಕಣ್ಮಣಿ ವಾಜಪೇಯಿ ಬ್ರಿಟಿಷರಿಗೆ ನಿಜವಾದ ಸ್ವಾತಂತ್ರ್ಯ ಹೋರಾಟಗಾರರನ್ನು ಹಿಡಿದು ಕೊಡುವ ಮೂಲಕ ದೇಶಕ್ಕೆ ದ್ರೋಹ ಬಗೆದದ್ದು; ಆರೆಸ್ಸೆಸ್‌ನ ಮತ್ತೊಬ್ಬ ನಾಯಕ ಬಾಳಾಸಾಹೇಬ್ ದೇವರಸ್ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ "ಅಮ್ಮಾ, ಇಂದಿರಮ್ಮಾ, ಭಾರತದ ಮಾತೆ, ನಮ್ಮ ಸಂಘಟನೆಯ ಮೇಲಿರುವ ನಿಷೇಧವನ್ನು ತೆರವುಗೊಳಿಸು, ನಿನ್ನ 'ಇಪ್ಪತ್ತು ಅಂಶ ಕಾರ್ಯಕ್ರಮ'ಕ್ಕಾಗಿ ನಾವೆಲ್ಲಾ ದುಡಿಯುತ್ತೇವೆ" ಎಂದು ಇಂದಿರಾ ಗಾಂಧಿಯವರನ್ನು ಬೇಡಿಕೊಂಡದ್ದು, ಇವೆಲ್ಲವೂ ನಮ್ಮ ಓದುಗರಿಗೆ ಗೊತ್ತಿರುವುದರಿಂದ ಅವುಗಳನ್ನು ದೀರ್ಘವಾಗಿ ಚರ್ಚಿಸಲು ಇಲ್ಲಿ ಹೋಗುವುದಿಲ್ಲ.

ಆರೆಸ್ಸೆಸ್‌ನ ಇಂತಹ ದೇಶದ್ರೋಹಿ ಕೆಲಸಗಳನ್ನು ಕನ್ನಯ್ಯ ಕುಮಾರ್ ವಿದ್ಯಾರ್ಥಿ ನಾಯಕನಾಗಿರುವ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ (ಎಐಎಸ್‌ಎಫ್)ಯ ಕೆಲಸಗಳೊಂದಿಗೆ ಹೋಲಿಸಿ ನೋಡಿದರೆ ಯಾವುದು ದೇಶದ್ರೋಹಿ ಸಂಘಟನೆ, ಯಾವುದು ದೇಶಪರ ಸಂಘಟನೆ ಎಂಬುದು ಸ್ಪಷ್ಟವಾಗುತ್ತದೆ. 1936ರಲ್ಲಿ ಜನ್ಮ ತಾಳಿದ ಎಐಎಸ್‌ಎಫ್ ಭಾರತದ ಮೊದಲ ವಿದ್ಯಾರ್ಥಿ ಸಂಘಟನೆ. ಇದರ ಹುಟ್ಟಿಗೆ ಸ್ಫೂರ್ತಿಯಾಗಿದ್ದು ಭಗತ್ ಸಿಂಗ್. ಇದರ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಜವಾಹರಲಾಲ್ ನೆಹರೂ. ಇದರ ಜೊತೆಗೆ ಗುರುತಿಸಿಕೊಂಡಿದ್ದವರು ಸುಭಾಷ್ ಬೋಸ್. ಈ ಸಂಘಟನೆಯ ಸದಸ್ಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದ್ದು ಬಹಳಷ್ಟು ಜನ ಜೈಲುಪಾಲಾದರು, ಕೆಲವರು ಹುತಾತ್ಮರೂ ಆದರು. ಎಡಪಂಥೀಯ ಪಕ್ಷಗಳ ದಿಗ್ಗಜರಾದ ಜ್ಯೋತಿಬಸು ಮತ್ತು ಎ.ಬಿ.ಬರ್ಧನ್ ತರಹದ ನಾಯಕರೂ ಆರಂಭದಲ್ಲಿ ರಾಜಕೀಯವಾಗಿ ಪಳಗಿದ್ದು ಇದೇ ಎಐಎಸ್‌ಎಫ್‌ನಲ್ಲಿ. ಈಗಲೂ ಈ ಸಂಘಟನೆಯ ಸದಸ್ಯರು ದೇಶದ ಅಭಿವೃದ್ಧಿಗಾಗಿ, ಕೋಮು ಸೌಹಾರ್ದಕ್ಕಾಗಿ, ಜಾತಿವಿನಾಶಕ್ಕಾಗಿ ಹೋರಾಡುತ್ತಿರುವ ಬಿಸಿರಕ್ತದ ಯುವಕರು. ಸ್ವಾತಂತ್ರ್ಯಕ್ಕಾಗಲಿ, ಅಭಿವೃದ್ಧಿದಾಗಲಿ, ಕೋಮು ಸೌಹಾರ್ದಕ್ಕಾಗಲಿ, ಜಾತಿವಿನಾಶಕ್ಕಾಗಲಿ ಎಂದೂ ದುಡಿಯದ ಚೆಡ್ಡಿಗಳು ಈಗ ಈ ಸಂಘಟನೆಯನ್ನು ದೇಶದ್ರೋಹಿಗಳ ಸಂಘಟನೆ ಎನ್ನುತ್ತಿರುವುದು ಅವರ ನೀಚತನವನ್ನು ತೋರುತ್ತದೆ.

ಹೋಗಲಿ, ದೇಶಕ್ಕೆ ಆರೆಸ್ಸೆಸ್ ಕೊಡುಗೆ ಏನು ಎಂದು ನೋಡಿದರೆ ಗಾಬರಿ ಆಗುತ್ತದೆ. ಸಾಕ್ಷ್ಯಚಿತ್ರಗಳ ಖ್ಯಾತ ನಿರ್ದೇಶಕ ಆನಂದ್ ಪಟವರ್ಧನ್ ಅವರು ಹೇಳಿರುವಂತೆ "ಯಾವಾಗ ಆರೆಸ್ಸೆಸ್ 'ಎಂದಿಗೂ ಹಿಂದೂ ಮತ್ತು ಮುಸಲ್ಮಾನರು ಒಟ್ಟಿಗೆ ಇರಲು ಸಾಧ್ಯವಿಲ್ಲ, ಆದ್ದರಿಂದ ಎರಡು ದೇಶಗಳು ಬೇಕು' ಎಂದರೋ ಆಗಲೇ ಮುಸಲ್ಮಾನರು ಭಯಗೊಂಡು ಪ್ರತ್ಯೇಕ ದೇಶ ಬೇಕೆಂದು ದುಂಬಾಲು ಬಿದ್ದದ್ದು, ದೇಶ ವಿಭಜನೆಯಲ್ಲಿ ಮುಸ್ಲಿಮ್ ಲೀಗ್ ಪಾತ್ರ ಎಷ್ಟಿತ್ತೋ ಅದಕ್ಕಿಂತಲೂ ಹೆಚ್ಚಿನ ಪಾತ್ರ ವಹಿಸಿದ್ದು ಆರೆಸ್ಸೆಸ್. ದೇಶ ವಿಭಜನೆಯಾದಾಗ ನಡೆದ ಕೋಮು ಗಲಭೆಗಳಲ್ಲೂ ಮುಸ್ಲಿಮ್ ಲೀಗ್‌ನಷ್ಟೇ ಪ್ರಾಮುಖ್ಯತೆ ಇದ್ದದ್ದು ಆರೆಸ್ಸೆಸ್‌ಗೆ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಹೆಚ್ಚಿನ ಭಾರತೀಯರು ಸಂಭ್ರಮದಿಂದ ತ್ರಿವರ್ಣ ಧ್ವಜವನ್ನು ಹಾರಿಸಿದರೆ, ಅದನ್ನು ತಿರಸ್ಕರಿಸಿ ಭಗವದ್ಧ್ವಜವನ್ನು ಹಾರಿಸಿದರು. ಆನಂತರ ಮಹಾತ್ಮ ಗಾಂಧಿಯ ಸಾವಿಗೂ ಕಾರಣವಾದರು. ಇನ್ನು ಸಂವಿಧಾನದ ರಚನೆಗೂ ಅಡ್ಡಿಯಾದ ಹಿಂದೂತ್ವವಾದಿಗಳು ಅದರ ಬದಲು ಮನುಸ್ಮೃತಿ ಬೇಕೆಂದು ಬೊಬ್ಬೆ ಹಾಕಿದರು. ಹಿಂದೂ ಮಹಿಳೆಯರಿಗೆ ಹಿಂದೂ ಪುರುಷರಷ್ಟೇ ಸ್ಥಾನಮಾನ ಕೊಡಬೇಕೆಂಬ ಅಂಬೇಡ್ಕರ್ ಅವರ ಆಸೆಗೆ ತಣ್ಣೀರೆರಚಿ ಹಿಂದೂ ಕೋಡ್ ಬಿಲ್ ಅಸ್ತಿತ್ವಕ್ಕೆ ಬಾರದಂತೆ ತಡೆದರು. 1956ರಲ್ಲಿ ಅಂಬೇಡ್ಕರ್ ಮತ್ತು ಅವರ ಅನುಯಾಯಿಗಳು ಜಾತಿ ಆಧಾರಿತ ಹಿಂದೂ ಧರ್ಮವನ್ನು ತೊರೆದು ಜಾತಿ ತಾರತಮ್ಯವಿಲ್ಲದ ಬೌದ್ಧ ಧರ್ಮವನ್ನು ಸ್ವೀಕರಿಸಿದಾಗ ಅವರನ್ನೆಲ್ಲ ವಿರೋಧಿಸಿದರು. ಕಾಶ್ಮೀರದಲ್ಲಿ ಆರ್ಟಿಕಲ್ 370ಯನ್ನು ವಿರೋಧಿಸುವ ಮೂಲಕ ಅಲ್ಲಿ ಉಗ್ರಗಾಮಿಗಳು ಹೆಚ್ಚಾಗಲು ನೆರವಾದರು. ಚುನಾವಣೆಯಲ್ಲಿ ಗೆಲ್ಲಲು ರಾಜಸ್ಥಾನದಲ್ಲಿ ಸತಿಪದ್ಧತಿಯನ್ನು ವೈಭವೀಕರಿಸಿದರು. ದಲಿತರಿಗೆ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ವಿರೋಧಿಸಿದರು. 1992ರಲ್ಲಿ ಬಾಬ್ರಿ ಮಸೀದಿಯನ್ನು ಕೆಡವುವ ಮೂಲಕ ಹಿಂದೂ ಮತ್ತು ಮುಸಲ್ಮಾನರ ನಡುವೆ ಇದ್ದ ಕಂದರವನ್ನು ಹೆಚ್ಚಿಸಿದರು. ಆದಿವಾಸಿಗಳ ಶಿಕ್ಷಣ ಮತ್ತು ಆರೋಗ್ಯ ಸುಧಾರಣೆಗೆ ಶ್ರಮಿಸುತ್ತಿದ್ದ ಕ್ರಿಶ್ಚಿಯನ್ನರನ್ನು ಗುರಿಯಾಗಿಸಿ ಕೊಂದು ಹಾಕಿದರು. 1998ರಲ್ಲಿ ಅಣುಬಾಂಬ್ ಸ್ಫೋಟಿಸಿ ಅದಕ್ಕೆ ಒಂದು ದೇಗುಲವನ್ನೂ ಸ್ಥಾಪಿಸಲು ಯತ್ನಿಸಿದರು. ದೇಶದಾದ್ಯಂತ ಕೋಮು ಗಲಭೆಗಳನ್ನು ಸೃಷ್ಟಿಸಿ 2002ರಲ್ಲಿ ಗುಜರಾತಿನಲ್ಲಿ ಮುಸಲ್ಮಾನರ ಮಾರಣಹೋಮ ನಡೆಸಿದರು. ತೀಸ್ತಾ ಸೆಟ್ಲವಾಡ್ ತರಹದ ಹೋರಾಟಗಾರರಿಗೆ ಇನ್ನಿಲ್ಲದಂತೆ ಕಾಟ ಕೊಟ್ಟರು. ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಜಫರ್‌ನಗರ್ ಮತ್ತು ಇತರೆಡೆ ಕೋಮು ಗಲಭೆಗಳಿಗೆ ಕಾರಣಕರ್ತರಾದರು. ಗೋವಾ, ಥಾನೆ, ಮಾಲೆಗಾವ್, ಸಂಜೋತಾ ಎಕ್ಸ್‌ಪ್ರೆಸ್, ಅಜ್ಮೀರ್, ಹೈದರಾಬಾದ್ ಸೇರಿದಂತೆ ಹಲವಾರು ಕಡೆ ಬಾಂಬ್‌ಗಳನ್ನು ಸ್ಫೋಟಿಸಿ ಆ ಅಪರಾಧದ ಕಳಂಕವನ್ನು ಮುಸಲ್ಮಾನರಿಗೆ ಅಂಟಿಸಲು ಯತ್ನಿಸುತ್ತಿದ್ದ ಅವರ ಮುಖವಾಡವನ್ನು ದಕ್ಷ ಪೊಲೀಸ್ ಅಧಿಕಾರಿ ಹೇಮಂತ್ ಕರ್ಕರೆ ಬಯಲಿಗೆಳೆದದ್ದೂ ಆಯಿತು. ಕಳೆದ ಹಲವು ವರ್ಷಗಳಲ್ಲಿ ಮೂವರು ಪ್ರಖ್ಯಾತ ವಿಚಾರವಾದಿಗಳನ್ನು ಮತ್ತು ಇನ್ನೂ ಅದೆಷ್ಟೋ ಜನರ ಸಾವಿಗೆ ಕಾರಣರಾದರು. ಲೆಕ್ಕವಿಲ್ಲದಷ್ಟು ಜನರಿಗೆ ಪ್ರಾಣ ಬೆದರಿಕೆ ಹಾಕಿದರು. ಇವತ್ತು ಎಲ್ಲೆಡೆ ತಲೆ ಎತ್ತುತ್ತಿರುವ ಅವರ ವಿವಿಧ ಗುಂಪುಗಳು ಜನರಿಗೆ ಶಸ್ತ್ರಾಸ್ತ್ರ ತರಬೇತಿಯನ್ನು ಕೊಟ್ಟು ದನದ ಮಾಂಸದ ನೆಪದಲ್ಲೋ, ಲವ್ ಜಿಹಾದ್ ನೆಪದಲ್ಲೋ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಲು ಪ್ರಚೋದಿಸುತ್ತಿವೆ."

ಇದು ಆರೆಸ್ಸೆಸ್ ಮತ್ತು ಅವರ ವಿವಿಧ ಸಂಘಗಳು ಭಾರತಕ್ಕೆ ಕೊಟ್ಟಿರುವ ಕೊಡುಗೆಗಳು. ಈಗ ಇಂತಹ ದೇಶದ್ರೋಹಿಗಳು ಬೇರೆಯವರಿಗೆ ದೇಶಭಕ್ತಿಯನ್ನು ಹೇಳಿಕೊಡುತ್ತೇವೆ ಎನ್ನುತ್ತಿದ್ದಾರೆ.

ಚೆಡ್ಡಿಗಳ ನಾಯಕ ಗೋಳ್ವಾಲ್ಕರ್ "ಎಂದಿಗೂ ಹಿಂದೂಗಳ ಶತ್ರುಗಳು ಮುಸಲ್ಮಾನರು, ಕ್ರಿಶ್ಚಿಯನ್ನರು ಮತ್ತು ಕಮ್ಯೂನಿಸ್ಟರು" ಎಂದು ಪಟ್ಟಿ ಮಾಡಿದ್ದ. ಆದರೆ ಆತ ಆ ಪಟ್ಟಿಗೆ ಒಂದು ಹೆಸರನ್ನು ಸೇರಿಸಲು ಮರೆತಿದ್ದ. ಅದು ಸಂವಿಧಾನದ ಶಿಲ್ಪಿ ಮತ್ತು ಎಲ್ಲಾ ಶೂದ್ರರ, ಹಿಂದುಳಿದವರ, ದಲಿತರ ಆತ್ಮರಕ್ಷಕನಂತೆ ನಿಂತ ಬಿ.ಆರ್.ಅಂಬೇಡ್ಕರ್ ಅವರ ಹೆಸರು! ಜಾತಿವಿನಾಶಕ್ಕಾಗಿ ಹೋರಾಡಿದ್ದ ಅಂಬೇಡ್ಕರ್ ಅವರು "ಜಾತ್ಯತೀತ ಭಾರತ ಎಂದಿಗೂ ಹಿಂದೂ ರಾಷ್ಟ್ರವಾಗುವುದಿಲ್ಲ" ಎಂದು ಹೇಳಿದ್ದರಲ್ಲದೆ ಆರೆಸ್ಸೆಸ್‌ಗಳ ನೀಚ ಬುದ್ಧಿಯನ್ನು, ಅಪಾಯಕಾರಿ ಸಿದ್ಧಾಂತವನ್ನು ಮತ್ತು ಅಸಲಿ ಅಜೆಂಡಾವನ್ನು ಕಳಚಿಟ್ಟಿದ್ದರು.


ಅಂಬೇಡ್ಕರ್ ಅವರು ಶೂದ್ರರಿಗೆ ಮತ್ತು ದಲಿತರಿಗೆ ಒದಗಿಸಿದ ಮೀಸಲಾತಿಯ ಲಾಭ ಇವತ್ತಿಗೂ ಹೆಚ್ಚಿನ ಜನರಿಗೆ ಲಭಿಸಿಲ್ಲ ಎಂಬುದು ಎಷ್ಟು ನಿಜವೋ ಅದರಿಂದಾಗಿಯೇ ವಿದ್ಯೆ ಪಡೆದ ಹಲವು ಯುವಕರಿಗೆ ಅಂಬೇಡ್ಕರ್ ಚಿಂತನೆಗಳು ಸ್ಫೂರ್ತಿ ನೀಡಿವೆ, ಹೋರಾಟಕ್ಕೆ ಸಜ್ಜಾಗಿಸಿವೆ ಎಂಬುದೂ ಅಷ್ಟೇ ನಿಜ. ಅದು ಚೆಡ್ಡಿಗಳಿಗೂ ಅರ್ಥವಾಗಿರುವುದರಿಂದಲೇ ಅವರು ಇಂತಹ ವಿದ್ಯಾರ್ಥಿಗಳ ಮೇಲೆ ಯುದ್ಧ ಸಾರಿದ್ದಾರೆ. ಆದರೆ ಆ ವಿದ್ಯಾರ್ಥಿಗಳು ಸೇರಿಗೆ ಸವ್ವಾಸೇರು ಎಂಬಂತೆ ವಾಪಸ್ ಹೊಡೆತ ಕೊಡುತ್ತಿದ್ದಾರೆ.

ಮೊದಲು ಐಐಟಿ ಚೆನ್ನೈನಲ್ಲಿರುವ ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್ ವಿರುದ್ಧ ಚೆಡ್ಡಿಗಳು ಮಸಲತ್ತು ನಡೆಸಿದರು. ಆದರೆ ಅಂಬೇಡ್ಕರ್ ಅನುಯಾಯಿಗಳು ಅದೆಷ್ಟು ತರ್ಕಬದ್ಧವಾಗಿ ವಿರೋಧ ವ್ಯಕ್ತಪಡಿಸಿದರೆಂದರೆ ಚೆಡ್ಡಿಗಳು ಬಾಲ ಮುದುರಿಕೊಂಡು ಸುಮ್ಮನಾಗಬೇಕಾಯಿತು. ಆಮೇಲೆ ಹೈದರಾಬಾದಿನ ಮುಕ್ತ ವಿವಿಯಲ್ಲಿನ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆ ವಿರುದ್ಧ ಕತ್ತಿ ಮಸೆದರು. ಅದು ರೋಹಿತ್ ವೇಮುಲ ಎಂಬ ದಲಿತ ವಿದ್ಯಾರ್ಥಿಯ ಪ್ರಾಣವನ್ನೇ ತೆಗೆದುಕೊಂಡಿತಾದರೂ ದೇಶದಾದ್ಯಂತ ಚೆಡ್ಡಿಗಳ ಮಸಲತ್ತನ್ನು ಜಗಜ್ಜಾಹೀರುಗೊಳಿಸಿತು. ಈಗ ಅದೇ ಚೆಡ್ಡಿಗಳು ಜೆಎನ್‌ಯು ವಿದ್ಯಾರ್ಥಿ ಸಂಘದ ನಾಯಕ ಮತ್ತು ಅಂಬೇಡ್ಕರ್ ಅನುಯಾಯಿ ಕನ್ನಯ್ಯನ ವಿರುದ್ಧ ಸಮರ ಸಾರಿದ್ದಾರೆ. ಕನ್ನಯ್ಯ ಬಿಹಾರದ ಭೂಮಿಹಾರ್ ಜಾತಿಗೆ ಸೇರಿದವನು. ಭೂಮಿಹಾರ್‌ಗಳು ಒಂದು ರೀತಿಯಲ್ಲಿ ಇಲ್ಲಿನ ಲಿಂಗಾಯತರಂತೆ ಭೂಮಾಲೀಕರು. ಆದರೆ ಕನ್ನಯ್ಯ ಕುಟುಂಬಕ್ಕೆ ಯಾವುದೇ ಆಸ್ತಿಪಾಸ್ತಿಗಳು ಇರುವಂತಿಲ್ಲ, ಆ ಕಾರಣಕ್ಕೆ ಕನ್ನಯ್ಯನ ತಾಯಿ ಅಂಗನವಾಡಿಯಲ್ಲಿ ಸಹಾಯಕಿಯಾಗಿ ಮಾಸಿಕ ಮೂರು ಸಾವಿರ ಪಡೆಯುತ್ತಿದ್ದಾರೆ. ಅಂತಹ ಹಿನ್ನೆಲೆಯ ಕನ್ನಯ್ಯ ಬಡವರ ಪರವಾಗಿ, ದಮನಿತರ ಪರವಾಗಿ, ರೈತರ ಪರವಾಗಿ ದನಿಯೆತ್ತುವ ಯುವಕ. ಜೊತೆಗೆ ಚೆಡ್ಡಿಗಳ ವಿರುದ್ಧ ಆಕ್ರೋಶ ಹೊಂದಿರುವಾತ ಕೂಡ. ಈ ಕಾರಣಕ್ಕೆ ಅವನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ ಆತ ಜೈಲು ಸೇರುವಂತೆ ಚೆಡ್ಡಿಗಳು ಷಡ್ಯಂತ್ರ ಮಾಡಿದ್ದಾರೆ.

ಚೆನ್ನೈ, ಹೈದರಾಬಾದ್, ದೆಹಲಿ ಮಾತ್ರವಲ್ಲ ಇವತ್ತು ಭಾರತದ ವಿವಿಧ ಕಡೆ ನೂರಾರು ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ಯುವಕರೇ ದೊಡ್ಡ ಸಂಖ್ಯೆಯಲ್ಲಿ ಮತ್ತು ದೊಡ್ಡ ದನಿಯಲ್ಲಿ ಚೆಡ್ಡಿಗಳಿಗೆ ಸವಾಲು ಒಡ್ಡಿದ್ದಾರೆ. ಇವತ್ತು ದೆಹಲಿಯಲ್ಲಿ ವಕೀಲರು ಮಾಡಿದ ದಾಳಿ ನನ್ನಲ್ಲಿ ಜಿಗುಪ್ಸೆಯನ್ನು ಮೂಡಿಸುತ್ತಿರುವಾಗಲೇ, ಎಲ್ಲೆಡೆ ಪ್ರತಿಭಟಿಸುತ್ತಿರುವ, ಜೈ ಭೀಮ್ ಎಂದು ಘೋಷಿಸುತ್ತಿರುವ ಹಿಂದೂ ಕೋಮುವಾದಿಗಳನ್ನು ಖಂಡಿಸುತ್ತಿರುವ ಯುವಕಯುವತಿಯರು ಅದಕ್ಕಿಂತ ಹೆಚ್ಚಿನ ಆನಂದವನ್ನು, ಭವಿಷ್ಯದ ಬಗೆಗಿನ ವಿಶ್ವಾಸವನ್ನು ನನ್ನಲ್ಲಿ ಮೂಡಿಸುತ್ತಿದ್ದಾರೆ.

ಪ್ರೀತಿಯ ಯುವ ಜನತೆಯೇ, ನಿಮ್ಮೆಲ್ಲರಿಗೂ ನಮ್ಮಿಂದ ಒಂದು ದೊಡ್ಡ 'ಜೈ ಭೀಮ್!' ■


ಕರಾವಳಿ: ಕಾಂಗ್ರೆಸ್‌ಗೆ ಬಲ, ಬಿಜೆಪಿಗೆ ತಳಮಳ


ಆಸ್ಕರ್ ಫರ್ನಾಂಡಿಸ್

ಕರಾವಳಿಯ ಪಂಚಾಯ್ತಿ ಫೈಟಿಂಗ್ ಕ್ಲೈಮ್ಯಾಕ್ಸ್ ತಲುಪುತ್ತಿದೆ. ಸಂಘಪರಿವಾರದ ಪ್ರಯೋಗಾಲಯ ಎಂದೇ ಪರಿಗಣಿತವಾಗಿರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಬಿಜೆಪಿಗೆ 'ಧರ್ಮ ಕೆಮಿಸ್ಟರಿ'ಯೇ ಕೈಕೊಡುತ್ತಿದೆ. ಪಂಚಾಯ್ತಿ ಸಮರ ಶುರುವಾದಾಗ ಕಾಂಗ್ರೆಸ್-ಬಿಜೆಪಿ ಸಮಬಲದಲ್ಲಿದ್ದಂತೆ ಕಾಣಿಸುತ್ತಿತ್ತು, ದಿನಗಳೆದಂತೆ ಕರ್ಮಗೇಡಿ ಕಾಂಗ್ರೆಸಿಗರ ತಂಡ ಬಲಗೊಳ್ಳುತ್ತಿದ್ದರೆ, ಧರ್ಮಗೇಡಿ ಬಿಜೆಪಿಗರ ಪಡೆ ವಿಲವಿಲ ಒದ್ದಾಡುತ್ತಿದೆ.

ಅವಿಭಜಿತ ದಕ್ಷಿಣ ಕನ್ನಡದ ಕಾಂಗ್ರೆಸ್ ಹಾಗು ಬಿಜೆಪಿಯಲ್ಲೀಗ ತದ್ವಿರುದ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಎರಡೂ ಪಾರ್ಟಿಯ ನಿಷ್ಠಾವಂತ ಕಾರ್ಯಕರ್ತರಲ್ಲೇ ವಿಸ್ಮಯ ಮೂಡಿಸಿರುವ ವಿಚಿತ್ರ ವಾಸ್ತವವಿದು! ಸದಾ ಕಚ್ಚಾಡುತ್ತಿದ್ದ ಕಾಂಗ್ರೆಸಿಗರಲ್ಲಿ ಈ ಬಾರಿ ಅಪರೂಪದ ಒಗ್ಗಟ್ಟು ಮೂಡಿದೆ. ಚೆಡ್ಡಿ ಚಮತ್ಕಾರಿಕೆಯಲ್ಲಿ ಅಖಂಡವಾಗಿದ್ದ ಬಿಜೆಪಿಯಲ್ಲಿ ಬಂಡಾಯ-ಭಿನ್ನಮತ-ಗುಂಪುಗಾರಿಕೆ ಭುಗಿಲೆದ್ದಿದೆ. ಕರಾವಳಿ ಕಾಂಗ್ರೆಸ್‌ನ ಕೈಕಮಾಂಡ್ ಆಸ್ಕರ್ ಫರ್ನಾಂಡಿಸ್‌ರ ಹೆಡ್‌ಮಾಸ್ತರಿಕೆ ಸಫಲವಾಗಿದ್ದರೆ, ಚೆಡ್ಡಿ ಡಾನ್ ಕಲ್ಲಡ್ಕ ಭಟ್ಟನ ರಿಂಗ್ ಮಾಸ್ಟರಿಕೆ ವಿಫಲವಾಗಿದೆ. ಕಾಂಗ್ರೆಸ್‌ನಲ್ಲಿ ಮುದಿ ತಲೆಗಳಾದ ಪೂಜಾರಿ, ಮೊಯ್ಲಿ ಕಿತಾಪತಿ ಕಮ್ಮಿಯಾಗಿದ್ದರೆ, ಬಿಜೆಪಿಯಲ್ಲಿ ಕಲ್ಲಡ್ಕನ ಮೇಲೆ ಬಿಜೆಪಿ ಭೂಪರು ಒಬ್ಬೊಬ್ಬರಾಗಿ ಮುಗಿಬೀಳುತ್ತಿದ್ದಾರೆ.


ಕಾಂಗ್ರೆಸ್‌ನ ಅಷ್ಟೂ ಮಂತ್ರಿ-ಎಮ್ಮೆಲ್ಲೆ-ಎಮ್ಮೆಲ್ಸಿಗಳು ತಂತಮ್ಮ ಕ್ಷೇತ್ರದ ಜಿಪಂ-ತಾಪಂ ಸೀಟುಗಳನ್ನು ಸುಲಭವಾಗಿ ಹಂಚಿ ಅಖಾಡಕ್ಕೆ ಹುರಿಯಾಳುಗಳ ಇಳಿಸಿದ್ದಾರೆ. ಆದರೆ ಬಿಜೆಪಿಯ ಸಂಸದರಾದ ನಳಿನ್ ಕುಮಾರ್ ಕಟೀಲ್, ಶೋಭಾ ಕರಂದ್ಲಾಜೆ, ಕೇಂದ್ರ ಮಂತ್ರಿ ಸದಾನಂದಗೌಡ, ಚೆಡ್ಡಿ ಬಾಸ್ ಕಲ್ಲಡ್ಕ ಪ್ರಭಾಕರ ಭಟ್ಟ ಮತ್ತು ಮಾಜಿ ಶಾಸಕರು ಜಿದ್ದಿಗೆ ಬಿದ್ದು ಭಾನ್ಗಡಿ ಮಾಡಿಕೊಂಡಿದ್ದಾರೆ. ಹಿಂದೆಲ್ಲಾ ಎಲೆಕ್ಷನ್ ಬಂತೆಂದರೆ ಸಾಕು, ಕಲ್ಲಡ್ಕ ಮೈಕೊಡವಿ ಎದ್ದು ನಿಲ್ಲುತ್ತಿದ್ದ! ಚುನಾವಣೆಗೆ ಎರಡ್ಮೂರು ತಿಂಗಳು ಇರುವಾಗಲೇ ಹಿಂದೂ ಸಮಾಜೋತ್ಸವ ಹೆಸರಲ್ಲಿ ಪ್ರಚಾರ ಆರಂಭ ಮಾಡುತ್ತಿದ್ದ. ಧನದಾಹದ, ಹಿಂದೂತ್ವ ಬಿಜೆಪಿ ಜನಪ್ರತಿನಿಧಿಗಳನ್ನು ಗುಲಾಮರಂತೆ ನಡೆಸಿಕೊಳ್ಳುವ ರೀತಿ ಮತ್ತು ರೇಪಿಸ್ಟ್ ರಾಘುಸ್ವಾಮಿ ಪರ ವಕಾಲತ್ತಿನಿಂದಾಗಿ ಸಂಘಪರಿವಾರದಲ್ಲೇ ನೆಲೆ-ಬೆಲೆ ಕಳೆದುಕೊಳ್ಳುತ್ತಿರುವ


ಹಾಲಾಡಿ ಶ್ರೀನಿವಾಸ್ ಶೆಟ್ಟಿ


ಕಲ್ಲಡ್ಕನಿಗೂ ರಣೋತ್ಸಾಹ ಇಲ್ಲದಾಗಿದೆ. ಸಂಸದ ನಳಿನ್, ಸೋಬಕ್ಕ, ಸದ್ದಣ್ಣ... ವಗೈರೆಗಳೆಲ್ಲ ಕಲ್ಲಡ್ಕನ ಕೇರ್ ಮಾಡದ ಮಟ್ಟಕ್ಕೆ ಬೆಳೆದು ನಿಂತು ಠೇಂಕರಿಸುತ್ತಿದ್ದಾರೆ! ಹೀಗಾಗಿ ಅವಿಭಜಿತ ದಕ್ಷಿಣ ಕನ್ನಡದಲ್ಲಿ ಬಿಜೆಪಿಗೆ ಮೇಟಿ ಕಂಬವೇ ಇಲ್ಲದಂಥ ದುಃಸ್ಥಿತಿ ಬಂದಿದೆ!


ಕರಾವಳಿಯಲ್ಲಿ ಕೇಸರಿ ಕಲ್ಲರ್ ಕರಗಲು ಮತ್ತೂ ಒಂದು ಪ್ರಮುಖ ಕಾರಣವಿದೆ. ಅದೆಂದರೆ, ಜನರಿಗೂ ಬಿಜೆಪಿ ಪರಿವಾರ ನೆತ್ತರು ದಾಹದ ಹುಸಿ ಹಿಂದೂತ್ವದ ಹಕೀಕತ್ತು ಗೊತ್ತಾಗಿಹೋಗಿದೆ. ಇದು ಕಾಂಗ್ರೆಸ್‌ಗೆ ವರವಾಗಿ ಪರಿಣಮಿಸಿದೆ. ಜತೆಗೆ ಆ ಪಾರ್ಟಿ ಈಗ ರಾಜ್ಯಾಡಳಿತದ ಪಾರುಪತ್ಯದಲ್ಲಿದೆ. ಎರಡೂ ಜಿಲ್ಲೆಯ ಒಟ್ಟು 13 ಶಾಸಕರಲ್ಲಿ ಬರೋಬ್ಬರಿ 10 ಮಂದಿ ಕಾಂಗ್ರೆಸ್‌ನವರು. ಇಬ್ಬರು ಚೆಡ್ಡಿ ಶಾಸಕರು, ಇನ್ನಿಬ್ಬರು ಬಡಿವಾರದ ಸಂಸದರು ಜತೆಗೆ ಗಲಭೆಕೋರ ಎಮ್ಮೆಲ್ಸಿ ಗಣೇಶ್ ಕಾರ್ಣಿಕ್, ಕೋಟ ಪೂರಿಗಳಷ್ಟೇ ಬಿಜೆಪಿ ಆಸ್ತಿ! ಬಿಜೆಪಿ ಅಧಿಕಾರದಲ್ಲಿದ್ದಾಗ ಕಲ್ಲಡ್ಕ ಮತ್ತು ಮಂತ್ರಿ ಶಾಸಕರು ಹಪಹಪಿಸಿದ್ದು ಕಂಡು ಹೇಸಿದ ನಿಷ್ಠಾವಂತ ಕಾರ್ಯಕರ್ತರು ಆ ಪಕ್ಷದಿಂದ ದೂರಾಗಿದ್ದಾರೆ. ಕೇಂದ್ರ ಮಂತ್ರಿ ಸದ್ದಣ್ಣನ ಸದ್ದೇ ಇಲ್ಲದಾಗಿದೆ!


ಬಿಜೆಪಿ ಪಾಡಿಗೆ ಸಮಾನಾಂತರವಾಗಿ ಕಾಂಗ್ರೆಸ್ ಸ್ಥಿತಿ-ಗತಿ ಸುಧಾರಿಸಿದೆ. ಆಸ್ಕರ್-ಮೊಯ್ಲಿಯಂಥ ಘಟಾನುಘಟಿಗಳು ಅಖಾಡಕ್ಕೆ ಇಳಿದಿದ್ದಾರೆ. ಮಂತ್ರಿಗಳಾದ ರಮಾನಾಥ್ ರೈ, ಖಾದರ್, ಅಭಯಚಂದ್ರ, ಸೊರಕೆ ಪ್ರತಿಷ್ಠೆ ಪಣಕ್ಕಿಟ್ಟು ಸೆಣಸಾಡುತ್ತಿದ್ದಾರೆ. ಕಾಂಗ್ರೆಸ್‌ಗೆ ಈ ಸಲ ಸಿಪಿಐಎಂ, ಜೆಡಿಎಸ್ ಕಾಟ ಇಲ್ಲ, ಜಾತ್ಯತೀತ ಮತ ಒಡೆಯುತ್ತಿದ್ದ ಈ ಪಕ್ಷಗಳಿಂದ ಬಿಜೆಪಿ ಪ್ಲಸ್ ಆಗುತ್ತಿತ್ತು, ಎಸ್‌ಡಿಪಿಐ ಮುಸ್ಲಿಮ್ ಬಾಹುಳ್ಯದ ಬಂಟ್ವಾಳ ತಾಲೂಕಿನ ಸಜಿಪಮುನ್ನೂರು; ಪುದು ಮತ್ತು ಪುತ್ತೂರಿನ ಪಾಣಾಜೆ ಕ್ಷೇತ್ರದಲ್ಲಿ ಅಭ್ಯರ್ಥಿಗಳನ್ನು ಹಾಕಿದೆ. ಉಳಿದೆಡೆ ಕಾಂಗ್ರೆಸ್ ಜತೆ 'ರಾಜಿ' ಮಾಡಿಕೊಂಡಿದೆ. ಇಂಥ ಹಲವು ಅನುಕೂಲಕರ ಪರಿಸ್ಥಿತಿ ಕಾಂಗ್ರೆಸ್‌ಗೆ ಇದೆ. ಎಲ್ಲಕ್ಕಿಂತ ಹೆಚ್ಚು ಬಿಜೆಪಿ ಸ್ವಯಂಕೃತಾಪರಾಧದಿಂದ ಬಲಹೀನವಾಗಿದೆ. 36 ಕ್ಷೇತ್ರಗಳ ದಕ್ಷಿಣ ಕನ್ನಡ ಜಿಪಂ ಮತ್ತು 26 ಕ್ಷೇತ್ರಗಳ ಉಡುಪಿ ಜಿಪಂನ ಅಧಿಕಾರ ಕಾಂಗ್ರೆಸ್ ವಶವಾಗುವ ಸೂಚನೆ ಗೋಚರಿಸುತ್ತಿದೆ. ಬಹುತೇಕ ತಾಪಂಗಳಲ್ಲೂ ಕಾಂಗ್ರೆಸ್ ಕೈಯೇ ಮೇಲಾಗಲಿದೆ.



ನಳಿನ್‌ಕುಮಾರ್ ಕಟೀಲ್


ಶೋಭಾ ಕರಂದ್ಲಾಜೆ


ರಮಾನಾಥ ರೈ


ವಿನಯಕುಮಾರ್ ಸೊರಕೆ


ಅಭಯಚಂದ್ರ ಜೈನ್



ಯು.ಟಿ. ಖಾದರ್

ದಕ್ಷಿಣ ಕನ್ನಡದಲ್ಲೇ ಹೈವೋಲ್ಟೇಜ್ ಯುದ್ಧಾಂಗಣ ವೆಂದರೆ ಬಂಟ್ವಾಳದ ಸಜಿಪಮುನ್ನೂರು ಕ್ಷೇತ್ರ! ಬಂಟ್ವಾಳ ಎಂದರೆ ಜಿಲ್ಲಾ ಉಸ್ತುವಾರಿ 'ಮಹಾರಾಜ' ರಮಾನಾಥ ರೈಗಳ ಪ್ರತಿಷ್ಠೆಯ ಕಣ. ಸಜಿಪಮುನ್ನೂರು ಅಖಾಡದಲ್ಲಿ ಮಂತ್ರಿ ರೈಗಳ ಬಲಗೈ ಬಂಟ ಚಂದ್ರಪ್ರಕಾಶಶೆಟ್ಟಿ ಯಾನೆ ತುಂಬೆ ಪ್ರಕಾಶ್ ಕಾಂಗ್ರೆಸ್ ಕಲಿ. ಆತನ ಎದುರು ಬಿಜೆಪಿಯಿಂದ ಸ್ಪರ್ಧಿಸಿರುವಾತ ಮಾಜಿ ಶಾಸಕ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಪದ್ಮನಾಭ ಕೊಟ್ಟಾರಿ. ಇಲ್ಲಿ ಕತ್ತುಕತ್ತಿನ ಸ್ಪರ್ಧೆ ಏರ್ಪಟ್ಟಿದ್ದು ಎರಡೂ ಕಡೆಯವರು ಗೆಲ್ಲಲು ಮಾಡಬಾರದ್ದೆಲ್ಲ ಮಾಡುತ್ತಿದ್ದಾರೆ.

ತುಂಬೆ ಪ್ರಕಾಶ್ ಮಾಜಿ ಅಂಡರ್‌ವರ್ಲ್ಡ್ ರೌಡಿ. ಉದ್ಯಮಿಯಾಗಿ ಪರಿವರ್ತನೆಯಾಗಿರುವ ಆತನಿಗೆ ಇವತ್ತಿಗೂ ಭೂಗತರ ಸಂಪರ್ಕ ಇದೆ. ಜತೆಗೆ ಮಂತ್ರಿ ರೈ ಸಹವಾಸ. ಹಣ-ತೋಳ್ಬಲ ಜೋರಾಗಿಯೇ ಇದೆ. ಕಳೆದ ಬಾರಿಯ ಜಿಪಂನಲ್ಲಿ ಗೋಳ್ತಮಜಲು ಕ್ಷೇತ್ರದ ಸದಸ್ಯನಾಗಿದ್ದ ಈತ ಮೀಸಲಾತಿ ಕಾರಣಕ್ಕೆ ಕ್ಷೇತ್ರ ಬದಲಿಸಿದ್ದಾನೆ. ಬಿಜೆಪಿಯ ಪದ್ಮನಾಭ ಕೊಟ್ಟಾರಿ ಗೋಳ್ತಮಜಲುನಲ್ಲಿ ದರ್ಜೆಯಾಗಿದ್ದಾತ. ಸಂಘ ಪರಿವಾರ ಸಂಪರ್ಕದಿಂದ ಮುಂಚೂಣಿಗೆ ಬಂದ ಈತ ಹಿಂದೊಮ್ಮೆ ದ.ಕ. ಜಿಪಂಗೆ ಆರಿಸಿಬಂದ ಏಕೈಕ ಹುರಿಯಾಳೆಂಬ 'ಖ್ಯಾತಿ' ಪಡೆದಿದ್ದರು. ವಿಟ್ಲ ಕ್ಷೇತ್ರದಲ್ಲಿ ಅಚಾನಕ್ ಒಮ್ಮೆ ಶಾಸಕನೂ ಆಗಿಹೋಗಿದ್ದ ಪದ್ಮನಾಭ ಕೊಟ್ಟಾರಿ ಚೆಡ್ಡಿ ದೊರೆ ಕಲ್ಲಡ್ಕನ ನಿಷ್ಠಾವಂತ ಅನುಯಾಯಿ. ಮಂತ್ರಿ ರೈ-ಡಾನ್ ಕಲ್ಲಡ್ಕರ ತಾಕತ್ತು ತೋರಿಸುವ ಕ್ಷೇತ್ರವಿದು. ಹೀಗೆ ಭಯಂಕರ ಜಿದ್ದಾಜಿದ್ದಿ ಇದ್ದರೂ ಕಾಂಗ್ರೆಸ್ ಒಂದು ಗುಂಜಿ ಮುಂದಿದೆ. ರೈ 'ತೂಕ'ವೇ ಹಾಗಿದೆ!

ಬಂಟ್ವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊಲ್ನಾಡು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಎಂ.ಎಸ್. ಮಹಮ್ಮದ್ ಒಮ್ಮೆ ಜಿಪಂ ಗೂಟದ ಕಾರಿನ ರುಚಿ ಕಂಡಾತ. ಕುರ್ನಾಡು ಕ್ಷೇತ್ರದ ಮಮತಾ ಗಟ್ಟಿ ಜಿಪಂ ಅಧ್ಯಕ್ಷೆಯೂ ಆಗಿದ್ದಾಕೆ. ಇವರಿಬ್ಬರೂ ಕಾಂಗ್ರೆಸ್ ಪಾಯಿಂಟ್ ಹೆಚ್ಚಿಸಲಿದ್ದಾರೆ. ಜಿಪಂನ ಮಾಜಿ ಉಪಾಧ್ಯಕ್ಷ ತುಂಗಪ್ಪ ಬಂಗೇರ ಸಂಗಬೆಟ್ಟುನಲ್ಲಿ ಗೆದ್ದು ಬಿಜೆಪಿ ಪಾಯಿಂಟ್ ಏರಿಸುವ ಲೆಕ್ಕಾಚಾರ ಚೆಡ್ಡಿಗಳು ಹಾಕಿದ್ದಾರೆ. ಆದರೂ ಈ ಬಾರಿ ಬಂಗೇರಾ ಗೆಲುವು ಅಷ್ಟು ಸುಲಭವೇನಲ್ಲ. ಪುದು ಕ್ಷೇತ್ರದಲ್ಲಿ ಆರೋಗ್ಯ ಮಂತ್ರಿ ಖದರ್‌ನಿಂದ ಕಾಂಗ್ರೆಸ್‌ನ ಉಮ್ಮರ್ ಫಾರೂಕ್ ಗೆಲ್ಲಲಿದ್ದಾರೆ.


ಪುತ್ತೂರು ಶಾಸಕಿ ಶಕುಂತಲಾ ಶೆಟ್ಟಿ ಕ್ಷೇತ್ರ. ಇಲ್ಲಿ ಬಿಜೆಪಿ ಕಾಂಗ್ರೆಸ್ ಸಮ ಬಲದಲ್ಲಿದೆ. ಮಾಣಿ ಕ್ಷೇತ್ರ ಪ್ರತಿಷ್ಠೆಯ ಕಣ. ಇಲ್ಲಿ ಕ್ಯಾಂಪ್ಕೋ ಅಧ್ಯಕ್ಷ-ಅನಾಹುತಕಾರಿ ಚೆಡ್ಡಿ ಕೊಂಕೋಡಿ ಪದ್ಮನಾಭರ ತಮ್ಮನ ಹೆಂಡತಿ ಶೈಲಜಾ ಭಟ್ ಬಿಜೆಪಿ ಹುರಿಯಾಳು. ಸಂಘಪರಿವಾರದ ಕ್ಯಾಂಡಿಡೇಟ್ ಇದು. ಹಿಂದೊಮ್ಮೆ ಜಿಪಂ ಅಧ್ಯಕ್ಷೆಯೂ ಆಗಿದ್ದಾಕೆ. ಆಶಾ ತಿಮ್ಮಪ್ಪ ಗೌಡ ಎಂಬ ಹಿಂದುಳಿದ ವರ್ಗದ ಹೆಂಗಸಿಗೆ ಸಿಗಬೇಕಾಗಿದ್ದ ಅಧ್ಯಕ್ಷಗಿರಿ ಮೊದಲೇ ಹೊಡೆದುಕೊಂಡಿದ್ದ ಶೈಲಜಾ ಮತ್ತೆ ರಣರಂಗಕ್ಕೆ ಧುಮುಕಿದ್ದಾರೆ. ಆನಂತರ ಆಶಾ ಗೌಡರಿಗೂ ಜಿಪಂ ಅಧ್ಯಕ್ಷತೆ ಕೊಡಲಾಯ್ತಾದರೂ ಶೈಲಜಾರ ಬ್ರಾಹ್ಮಣ ಪರಿವಾರವೇ ಬಿಜೆಪಿಯಲ್ಲಿ ಶಕ್ತಿಶಾಲಿ ಎಂಬುದಕ್ಕಿದು ಸಾಕ್ಷಿ. ಈ ಸಲ ಶೈಲಜಾರನ್ನು ಮನೆಗೆ ಕಳಿಸಲು ಶಾಸಕಿ ಶಕು ಅಕ್ಕ ಸ್ಟ್ರೇಟಜಿ ಹೆಣೆದಿದ್ದಾರೆ. ಮಾಜಿ ತಾಪಂ ಸದಸ್ಯ ಮಾಧವ ಮಾವೆ ಹೆಂಡತಿ ಮಂಜುಳಾ ಕಾಂಗ್ರೆಸ್ ಕ್ಯಾಂಡಿಡೇಟ್.


ಜಯಪ್ರಕಾಶ್ ಹೆಗಡೆ


ಪಕ್ಕದ ಸುಳ್ಯದಲ್ಲೂ ಬಿಜೆಪಿ-ಕಾಂಗ್ರೆಸ್ ಸಮತೂಕದಲ್ಲಿದೆ. ಪುರೋಹಿತಶಾಹಿ ಗುಲಾಮನಾಗಿರುವ ಬಿಜೆಪಿ ಶಾಸಕ ಅಂಗಾರಾಗೆ ಯಾರನ್ನೇ ಗೆಲ್ಲಿಸುವ ಅಥವಾ ಸೋಲಿಸುವ ತಾಕತ್ತಿಲ್ಲ. ದುಡ್ಡು ಮಾಡುವುದೇ ಬಿಜೆಪಿ ಶಾಸಕ[...] ತನ್ನ ಕರ್ತವ್ಯ ಎಂದು ಭಾವಿಸಿರುವ ಈತ ಸುಳ್ಯದ ಗ[...] ಗದ್ದಲದಲ್ಲಿ ಇದ್ದೂ ಇಲ್ಲದಂತಾಗಿದ್ದಾನೆ. ಸುಳ್ಯದ 'ಬೆ[...] ಕುತೂಹಲದ ಕಣ. ಕಾಂಗ್ರೆಸ್‌ನ ರಾಜೀವಿ ರೈ ಮ[...] ಬಿಜೆಪಿಯ ಎಸ್.ಎನ್.ಮನ್ಮಥ ನಡುವೆ ಕಾದಾಟ ಜೋ[...] ನಡೆದಿದೆ. ರಾಜೀವಿ ಹಿಂದೆ ಜಿಪಂ ಸದಸ್ಯರಾಗಿದ್ದ ಆಡ[...] ಅನುಭವ, ಜನಸಂಪರ್ಕದ ಹೆಂಗಸು. ಮನ್ಮಥ ಶಾ[...] ಅಂಗಾರನನ್ನೇ ಕುಣಿಸುವಷ್ಟೆ ಗೌಡಿಕೆ-ಗತ್ತಿನವ. ಬಿ[...] ಪರ್ವದಲ್ಲಿ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ[...] ಆಗಿದ್ದಾತ. ಯಾರೇ ಗೆದ್ದರೂ ಅದು ಫೋಟೋ ಫಿನಿಶಿಂ[...] ಗುತ್ತಿಗಾರು ಕ್ಷೇತ್ರದಲ್ಲಿ ಬಿಜೆಪಿ ಜಿಪಂ ಮಾಜಿ ಅ[...] ಆಶಾ ತಿಮ್ಮಪ್ಪ ಗೌಡರನ್ನು ಯುದ್ಧಕ್ಕೆ ಕಳಿಸಿದೆ; ಕಾಂಗ್ರೆ[...] ವಿಮಲಾ ರಂಗಯ್ಯ ಪ್ರಬಲ ಸ್ಪರ್ಧೆ ಒಡ್ಡಿದ್ದಾರೆ.


ಬೆಳ್ತಂಗಡಿ ತಾಲ್ಲೂಕಲ್ಲಿ ಬಿಜೆಪಿ ಒಡೆದ ಮನೆಯಾಗಿ[...] ಸಂಘ ಪರಿವಾರದ ಸರದಾರ ಪ್ರತಾಪಸಿಂಹ ನಾಯ[...] ಎಂಬ ಕೊಂಕಣಿ ಕುಳದ ದಾದಾಗಿರಿಯಿಂದ ಬಿ[...] ಸಮುದಾಯದ ಮೊದ್ಮಣಿ-ಮಾಜಿ ಶಾಸಕ ಪ್ರಭಾ[...] ಬಂಗೇರಾ ದಿಕ್ಕೆಟ್ಟು ಹೋಗಿದ್ದಾರೆ. ಟಿಕೆಟ್ ಹಂಚಿಕೆಯ[...] ಬಂಗೇರಾರನ್ನು ಧಿಕ್ಕರಿಸಿದ್ದರಿಂದ ಬೆಳ್ತಂಗಡಿ ಬಿಜೆಪಿಯ[...] ಬಂಡಾಯದ ಬೊಬ್ಬೆ ಎದ್ದಿದೆ. ಕುವೆಟ್ಟು ಕ್ಷೇತ್ರದಲ್ಲಿ ಬಿಜ[...] ಬಂಡಾಯಗಾರ್ತಿ ತುಳಸಿ ಸ್ಪರ್ಧೆ ಮಾಡುತ್ತಿದ್ದಾ[...] ಬಿಜೆಪಿಯನ್ನು ಸೋಲಿಸಲು ಇದಿಷ್ಟೇ ಸಾಕು. ಬೆಳ್ತಂಗಡಿಯ[...] ಕಾಂಗ್ರೆಸ್‌ನ ಶಾಸಕ ವಸಂತ ಬಂಗೇರಾ, ಹರೀಶ್ ಪೂಜಾ[...] ಭಿನ್ನಾಭಿಪ್ರಾಯ ಮರೆತು ಒಂದಾಗಿದ್ದಾರೆ. ಶಾಸಕ ಬಂಗೇರ[...] ಪ್ರಭಾವದ ಎದುರು ಬಿಜೆಪಿ ಬಡಿವಾರ ನಡೆಯುತ್ತಿ[...] ಧರ್ಮಸ್ಥಳ ಕ್ಷೇತ್ರದಲ್ಲಿ ಜಿಪಂ ಮಾಜಿ ಅಧ್ಯಕ್ಷ ಕೊರಗ[...] ನಾಯ್ಕ್ ಬಿಜೆಪಿಗೆ ಈ ಬಾರಿ ಪ್ಲಸ್ ಆಗುವುದು ಕ[...] ಈತನ ಎದುರು ನಿಂತಿರುವ ಮಲೆಕುಡಿಯ ಸಮುದಾಯ[...] ರಮೇಶ್ ಕಾಂಗ್ರೆಸ್‌ಗೆ ಕ್ಷೇತ್ರ ಗೆದ್ದುಕೊಡು[...] ಸಾಧ್ಯತೆಯೇ ಹೆಚ್ಚು. ನಾರಾವಿಯ[...] ಜನಾನುರಾಗಿ ಧರಣೇಂದ್ರಕುಮಾ[...] ಗೆಲ್ಲುವುದು ಕಾಂಗ್ರೆಸ್ ಸದಸ್ಯರ ಸಂ[...] ಹೆಚ್ಚಿಸಲಿದೆ. ಬೆಳ್ತಂಗಡಿಯಲ್ಲಿ ಕಾಂಗ್ರೆ[...] ತುಂಬ ಮುಂದಿದೆ. ಬೆಳ್ತಂಗಡಿ ಯಂತೆಯೆ[...] ಉಳ್ಳಾಲ ಭಾಗದಲ್ಲೂ ಮಂತ್ರಿ ಖಾದ[...] ಕಾಂಗ್ರೆಸ್‌ನ ಹೆಚ್ಚಿನ ಹುರಿಯಾಳುಗಳ[...] ಗೆಲ್ಲಿಸಲಿದ್ದಾರೆ.


ಮೂಡಬಿದಿರೆ ಕ್ರೀಡಾ ಮಂ[...] ಅಭಯಜೈನ್‌ರ ತವರೂರು. ಇಲ್ಲಿ ಬಿಜೆ[...] ಸದಾ ವೀಕ್. ಬಿಜೆಪಿ ಒಮ್ಮೆಯೂ ಗೆಲ್ಲದ ಅವಿಭಜಿ[...] ದಕ್ಷಿಣ ಕನ್ನಡ ಅಸೆಂಬ್ಲಿ ಕ್ಷೇತ್ರವಿದು. ಜಾನುವಾರು ಸಾಗಾಣ[...] ನೆಪದಲ್ಲಿ ಬಿಜೆಪಿ ಬೆಳೆಸಲು ಭಜರಂಗಿಗಳು ಪ್ರಶ್ನಿಸಿದಂತೆ[...] ಇಲ್ಲಿ ಕಾಂಗ್ರೆಸ್‌ಗೆ ಸಹಾಯವಾಗಿದೆ. ಜಿಪಂನ ಮಾ[...] ಅಧ್ಯಕ್ಷ ಸುಚರಿತ ಶೆಟ್ಟಿ ಪುತ್ತಿಗೆ ಕ್ಷೇತ್ರದ ಬಿಜೆಪಿ ಕ್ಯಾಂಡಿಡೇಟ[...] ಮಾಜಿ ದಳವಾಯಿಯಾದ ಈತನಿಗೆ ಟಿಕೆಟ್ ಕೊಡು[...] ಬಗ್ಗೆ ಬಿಜೆಪಿಯಲ್ಲಿ ಆಕ್ಷೇಪಗಳಿತ್ತು. ಆದರೂ ಆತನ[...] ಚಾನ್ಸ್ ಸಿಕ್ಕಿದೆ. ಬಿಜೆಪಿಯಲ್ಲಿ ಭಿನ್ನಮತ ಎದ್ದಿದೆ. ಹಾಗೆಯ[...] ನೆಲ್ಯಾಡಿಯಲ್ಲಿ ಬಂಡಾಯ ಚೆಡ್ಡಿ ಕ್ಯಾಂಡಿಡೇಟ್ ಇದ[...] ಇದೆಲ್ಲ ಕಾಂಗ್ರೆಸ್‌ಗೆ ಲಾಭ ಮಾಡಲಿದೆ. ಸುರತ್ಕಲ್ ಅಸೆಂ[...] ಕ್ಷೇತ್ರದಲ್ಲಿ ಇರುವುದು ಬರೀ ಎರಡ[...] ಜಿಪಂ ಸ್ಥಾನ. ಇಲ್ಲಿ ಎಸ್‌ಡಿಪಿ[...] ಹಣಾಹಣಿಗೆ ಸಜ್ಜಾಗಿದೆ. ಇದು ಕಾಂಗ್ರೆ[...] ಶಾಸಕ ಮೊಯ್ದೀನ್ ಬಾವಾ[...] ನಿದ್ದೆಗೆಡಿಸಿದರೆ, ಬಿಜೆಪಿ ಬ್ಲೂಬಾಯ[...] ಕೃಷ್ಣ ಪಾಲೆಮಾರ್‌ಗೆ ಖುಷಿ ಮೂಡಿಸಿ[...] ಆದರೂ ಟೈಟ್ ಫೈಟ್‌ನಲ್ಲಿ ಗೆಲ್ಲು[...] ಅವಕಾಶ ಬಿಜೆಪಿ-ಕಾಂಗ್ರೆಸ್[...] ಸಮಾನವಾಗಿದೆ.



ಕಲ್ಲಡ್ಕ ಪ್ರಭಾಕರ ಭಟ್ಟ


ಎಂ.ಎಸ್. ಮೊಹಮ್ಮದ್


ಪದ್ಮನಾಭ ಕೊಠಾರಿ



ಪ್ರಮೋದ್ ಕುಮಾರ್ ರೈ



ಬಾಲಕೃಷ್ಣ



ತುಂಗಪ್ಪ ಬಂಗೇರಾ


⏭ 06

ಮೈಸೂರು: ಒಗ್ಗಟ್ಟಿನ ಕಾಂಗ್ರೆಸ್ ಎದುರು ಬಿಕ್ಕಟ್ಟಿನ ಜೆಡಿಎಸ್


ಸಿದ್ದರಾಮಯ್ಯ


ಶ್ರೀನಿವಾಸ್ ಪ್ರಸಾದ್


ಸಾ.ರಾ. ಮಹೇಶ್


ಮಹದೇವಪ್ಪ

ಈಗ ನಡೆಯುತ್ತಿರುವ ಜಿಲ್ಲಾ ಪಂಚಾಯತ್ ಮತ್ತು ತಾಲೂಕ್ ಪಂಚಾಯತ್ ಚುನಾವಣೆಗಳಲ್ಲಿ ಮೈಸೂರಿಗೆ ವಿಶೇಷ ಸ್ಥಾನವಿದೆ. ಯಾಕಂದ್ರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆ ಇದು. ಈಗಾಗಲೇ ಮೂರು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ವ್ಯತಿರಿಕ್ತ ಫಲಿತಾಂಶ ಕಂಡಿರುವ ಕಾಂಗ್ರೆಸ್‌ಗೆ, ಮುಖ್ಯವಾಗಿ ಸಿದ್ದರಾಮಯ್ಯನವರಿಗೆ, ಜಿ.ಪಂ. ಚುನಾವಣಾ ಫಲಿತಾಂಶವೇ ಬಲ ತುಂಬಬೇಕಿದೆ. ಇಲ್ಲವಾದಲ್ಲಿ ವಿರೋಧ ಪಕ್ಷಗಳು ಒತ್ತಟ್ಟಿಗಿರಲಿ ಸ್ವತಃ ಸ್ವಪಕ್ಷೀಯ ವಿರೋಧಿಗಳೇ ಅಡ್ಡಗಾಲು ಹಾಕುವುದರಲ್ಲಿ ಸಂಶಯವಿಲ್ಲ. ಅದರಲ್ಲೂ ಸಿದ್ದರಾಮಯ್ಯನ ತವರು ಜಿಲ್ಲೆಯಲ್ಲೇ ಕಿಂಚಿತ್ತು ಯಡವಟ್ಟಾದರೂ ಸಂಕಷ್ಟ ಮತ್ತಷ್ಟು ಗಾಢವಾಗಲಿದೆ. ಇಂತಹದ್ದೊಂದು ಲೆಕ್ಕಾಚಾರ ಇಟ್ಟುಕೊಂಡೇ ಜೆಡಿಎಸ್ ಜಿಲ್ಲೆಯಲ್ಲಿ ಪ್ರಬಲ ಪೈಪೋಟಿ ನೀಡಲು ಸಜ್ಜಾಗುತ್ತಿದೆ. ಆದರೆ ಸೋಲು-ಗೆಲುವಿನ ಸಮೀಕರಣಗಳನ್ನು ತೂಗಿ ನೋಡಿದರೆ ಮೈಸೂರಿನಲ್ಲಿ ಕಾಂಗ್ರೆಸ್ಸೇ ಸ್ಟ್ರಾಂಗಾಗಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷಗಳು ಸಮೀಪಿಸುತ್ತಿದ್ದು, ಅರ್ಧ ಹಾದಿಯ ಈ ಪಯಣದಲ್ಲಿ ಕಾಂಗ್ರೆಸ್‌ಗೆ ತನ್ನ ವರ್ಚಸ್ಸನ್ನು ಓರೆಗಚ್ಚುವ ತವಕವಿದ್ದರೆ ಅಧಿಕಾರದ ಆಚೆ ನಿಂತ ಪಕ್ಷಗಳು ತಮ್ಮ ಬಲವನ್ನು ಪ್ರದರ್ಶನಕ್ಕೆ ಒಡ್ಡಿಕೊಂಡು ಭವಿಷ್ಯದ ದಿನಗಳ ರಾಜಕೀಯಕ್ಕೆ ವೇದಿಕೆ ಸಿದ್ಧ ಮಾಡಿಕೊಳ್ಳುವ ತರಾತುರಿಯಲ್ಲಿವೆ. ಮೈಸೂರಿನ ಮಟ್ಟಿಗೆ ಹೇಳುವುದಾದರೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ನಡುವೆಯೇ ನೇರ ಹಣಾಹಣಿ. ಬಿಜೆಪಿ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಿದೆ.

ಮೈಸೂರಿನ ಒಟ್ಟು 11 ವಿಧಾನಸಭಾ ಕ್ಷೇತ್ರಗಳಲ್ಲಿ ಮೂರರಲ್ಲಿ ಮಾತ್ರ ಜೆಡಿಎಸ್ ಎಂಎಲ್‌ಎಗಳು ಪ್ರತಿಷ್ಠಾಪನೆಗೊಂಡಿದ್ದರೆ ಉಳಿದ ಎಂಟು ಕ್ಷೇತ್ರಗಳು ಕಾಂಗ್ರೆಸ್ ಶಾಸಕರ ತೆಕ್ಕೆಯಲ್ಲಿವೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತ್ರವಲ್ಲದೆ ಶ್ರೀನಿವಾಸ ಪ್ರಸಾದ್ ಮತ್ತು ಎಚ್.ಸಿ. ಮಹದೇವಪ್ಪನಂತಹ ಪ್ರಬಲ ಖಾತೆಯ ಸಚಿವರೂ ಇದೇ ಜಿಲ್ಲೆಯವರು. ಅನಾರೋಗ್ಯದ ಕಾರಣಕ್ಕೆ ಹಿರಿಯ ಕಾಂಗ್ರೆಸ್ಸಿಗ ವಿಶ್ವನಾಥ್ ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ ಎನ್ನುವುದನ್ನು ಬಿಟ್ಟರೂ ಅವರ ವರ್ಚಸ್ಸು ಕಾಂಗ್ರೆಸ್ಸಿಗೆ ಮತದಾರರನ್ನು ಸೆಳೆಯಬಲ್ಲದು. ಹುಣಸೂರು ಎಂಎಲ್‌ಎ ಮಂಜುನಾಥ್, ಪಿರಿಯಾಪಟ್ಟಣದ ಕೆ. ವೆಂಕಟೇಶ್, ಕೆ.ಆರ್. ವಿಧಾನಸಭಾ ಕ್ಷೇತ್ರದ ಎಂ.ಕೆ. ಸೋಮಶೇಖರ್, ಎನ್.ಆರ್.ಪುರ ವಿಧಾನಸಭಾ ಕ್ಷೇತ್ರದ ತನ್ವೀರ್ ಸೇಠ್, ಚಾಮರಾಜ ಕ್ಷೇತ್ರದ ವಾಸು ಕಾಂಗ್ರೆಗೆ ಬಲ ತುಂಬುತ್ತಿದ್ದಾರೆ. ಇವರ ಜೊತೆಗೆ ತಳಮಟ್ಟದ ನಾಯಕತ್ವ ಹೊಂದಿರುವ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಕೆ. ಮರಿಗೌಡ, ಧರ್ಮೇಂದ್ರ, ಕೂರ್ಗಳ್ಳಿ ಮಹದೇವು, ಪುಷ್ಪ ಅಮರನಾಥ್, ಎನ್.ಸಿ. ಬಸವರಾಜ್, ಕೆ.ಸಿ. ಬಲರಾಮ್‌ರಂತವರೂ ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರೋದು ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟ್.

ಆದರೆ ಮೈಸೂರಿನ ಜೆಡಿಎಸ್ ಒಡೆದ ಮನೆಯಂತಾಗಿರುವುದು ಪಕ್ಷದ ಬೆಳವಣಿಗೆಯ ದೃಷ್ಟಿಯಿಂದ ಹಿನ್ನಡೆಯೇ ಸರಿ. ಟಿಕೆಟ್ ವೈಮನಸ್ಸಿನ ಕಾರಣಕ್ಕೆ ತಮ್ಮದೇ ಪಾರ್ಟಿಯವರು ಎಚ್.ಡಿ.ಕೋಟೆಯ ದಳದ ಕಚೇರಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದನ್ನು ಲಘುವಾಗಿ ತೆಗೆದುಕೊಳ್ಳುವಂತಿಲ್ಲ. ಪಕ್ಷದ ಹಿರಿಯ ನಾಯಕರಾದ ದೇವೇಗೌಡ, ಕುಮಾರಸ್ವಾಮಿ, ರೇವಣ್ಣ ಅವರ ಹಿಡಿತವನ್ನ ವಿರೋಧಿಸಿ ಸ್ಥಳೀಯ ಶಾಸಕರು ತಮ್ಮದೇ ಪರಮಾಧಿಕಾರವನ್ನ ಚಲಾಯಿಸಲು ಹೋದ ಸಂದರ್ಭದಲ್ಲೇ ಇಂತಹ ಬೀದಿಕಾಳಗ ನಡೆದಿದೆ. ಜಿ.ಟಿ. ದೇವೇಗೌಡ ಮತ್ತು ಚಿಕ್ಕಮಾದು ನಡುವಿನ ಕದನ ಈಗಲೂ ಬೂದಿಮುಚ್ಚಿದ ಕೆಂಡದಂತಿದೆ. ಈ ನಡುವೆ ಸಾ.ರಾ. ಮಹೇಶ್ ತಮ್ಮ ಕ್ಷೇತ್ರದಲ್ಲಿ ಟಿಕೆಟ್ ಹಂಚಿಕೆ ವಿಷಯದಲ್ಲಿ ನಾಯಕರೊಂದಿಗೆ ಮುನಿಸಾಸ್ಪದಗೊಂಡು ರಾಜೀನಾಮೆ ನೀಡುವ ಮಟ್ಟಕ್ಕೆ ಹೋಗಿದ್ದರು. ಜಿ.ಟಿ. ದೇವೇಗೌಡ ಮತ್ತು ಸಾ.ರಾ. ಮಹೇಶ್ ನಡುವೆ ಪಕ್ಷದಲ್ಲಿ ಹಿಡಿತ ಸಾಧಿಸುವ ವಿಷಯದಲ್ಲಿ ನಡೆಯುತ್ತಿರುವ ಶೀತಲ ಸಮರ ಹಾಗೂ ಪಕ್ಷದ ವರಿಷ್ಠರೆನಿಸಿಕೊಂಡವರ್‍ಯಾರು ಮೈಸೂರಿನ ಕಡೆ ತಿರುಗಿ ನೋಡದಿರುವುದು ಜೆಡಿಎಸ್ ಪಾಲಿಗೆ ದುಬಾರಿಯಾಗಲಿದೆ.

ಇನ್ನು ಬಿಜೆಪಿ ಪಾಲಿಗೆ ಯಡಿಯೂರಪ್ಪನ ಮುನಿಸೇ ಪ್ರತಿಕೂಲ ಪರಿಣಾಮ ಬೀರಲಿದೆ. 2008ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಎಂಟು ವಿಧಾನಸಭಾ ಸ್ಥಾನಗಳಲ್ಲಿ ಜಯಗಳಿಸಿದ್ದ ಬಿಜೆಪಿಗೆ ಈಗ ಒಬ್ಬನೂ ಶಾಸಕನಿಲ್ಲ. ಅಭ್ಯರ್ಥಿಗಳು ಅವರವರ ಸ್ವಸಾಮರ್ಥ್ಯದ ಮೇಲೆ ಚುನಾವಣೆಯನ್ನು ಎದುರಿಸಬೇಕಾಗಿದೆ. ಸ್ಥಳೀಯರಾದ ರಾಮದಾಸ್, ಮಧುಸೂದನ್, ವಿಜಯಶಂಕರ್ ಸಕ್ರಿಯವಾಗಿ ತೊಡಗಿಸಿಕೊಂಡಿಲ್ಲ. ಹಾಲಿ ಸಂಸದನಾಗಿ ಪ್ರತಾಪಸಿಂಹ ಪೀಠಸ್ಥನಾಗಿದ್ದರು ಆತ ಕೊಡಗು ಜಿಲ್ಲೆಗೆ ಮಾತ್ರ ಸೀಮಿತಗೊಂಡಿದ್ದಾನೆ. ಜಿಲ್ಲೆಯ ಮೇಲೆ ಆತನ ಯಾವ ಪ್ರಭಾವವೂ ನಡೆಯದು; ನಡೆಸುವ ಉಸಾಬರಿಯೂ ಆತನಿಗೆ ಇದ್ದಂತಿಲ್ಲ.

ಮೈಸೂರಿನಲ್ಲಿ ಕೈ ಮುಂದೆ

ಮೈಸೂರು ಜಿಲ್ಲಾ ಪಂಚಾಯತಿ ಏಳು ತಾಲೂಕುಗಳನ್ನೊಳಗೊಂಡಂತೆ 49 ಕ್ಷೇತ್ರಗಳಲ್ಲಿ ಹರಡಿಕೊಂಡಿದೆ. ಇಲವಾಲ, ಹಿನಕಲ್, ಸಿದ್ದಲಿಂಗಪುರ, ಬೀರಿಹುಂಡಿ, ವರುಣ, ಜಯಪುರ, ಯಡಕೊಳ, ಹೂಟಗಳ್ಳಿ, ಶ್ರೀರಾಂಪುರ, ಹಾರೋಹಳ್ಳಿ ಕ್ಷೇತ್ರಗಳನ್ನೊಳಗೊಂಡಿರುವ ಮೈಸೂರು ಜಿಪಂ ಕ್ಷೇತ್ರವು ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರಗಳಲ್ಲಿ ಹಂಚಿಹೋಗಿದೆ. ಇದು ಸಿದ್ದರಾಮಯ್ಯ, ಜಿ.ಟಿ. ದೇವೇಗೌಡ ಹಾಗೂ ಕಾ.ಪು. ಸಿದ್ದಲಿಂಗಸ್ವಾಮಿ ನಡುವಿನ ಪ್ರತಿಷ್ಠೆಯ ಕಣವಾಗಿದೆ. ಇಲ್ಲಿ ಲಿಂಗಾಯತ, ದಲಿತ, ಒಕ್ಕಲಿಗ, ಕುರುಬ, ನಾಯಕ ಪ್ರಮುಖ ಜನಾಂಗಗಳಾಗಿದ್ದು ಅಭ್ಯರ್ಥಿಯ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ.

ಇಲವಾಲ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಶಾಸಕ ಎಂ. ಸತ್ಯನಾರಾಯಣರ ಪುತ್ರ ಎಸ್. ಅರುಣ್ ಕುಮಾರ್ ಕಣದಲ್ಲಿದ್ದರೆ ಜೆಡಿಎಸ್‌ನಿಂದ ಶಿವಮೂರ್ತಿ ಸ್ಪರ್ಧಿಸಿದ್ದಾರೆ. ಮೇಲ್ನೋಟಕ್ಕೆ ಇಲವಾಲದಲ್ಲಿ ಜೆಡಿಎಸ್ ಪ್ರಾಬಲ್ಯವಿದ್ದು ಬಹುಪಾಲು ಗ್ರಾ.ಪಂ. ಕ್ಷೇತ್ರಗಳು ಆ ಪಕ್ಷದ ಅಧೀನದಲ್ಲಿವೆ. ಕಳೆದ ಬಾರಿ ಶಿವಮೂರ್ತಿಯ ಪತ್ನಿ ಭಾಗ್ಯ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಈ ಬಾರಿ ಶಿವಮೂರ್ತಿ ಖುದ್ದು ಅಖಾಡಕ್ಕಿಳಿದಿದ್ದಾರೆ.

ಹಿನಕಲ್ ಕ್ಷೇತ್ರದಿಂದ ಕೈ ಪಾರ್ಟಿ ರಾಕೇಶ್ ಪಾಪಣ್ಣನನ್ನು ಕಣಕ್ಕಿಳಿಸಿದೆ. ಈ ರಾಕೇಶ್, ಸಿದ್ದರಾಮಯ್ಯನ ಆಪ್ತ ಪಾಪಣ್ಣನ ಮಗ. ಯುವಪಡೆಯೊಂದಿಗೆ ಪ್ರಚಾರಕ್ಕಿಳಿದಿರುವ ರಾಕೇಶ್‌ಗೆ ಜೆಡಿಎಸ್‌ನ ಎಚ್.ಸಿ.ರಾಜು (ಟೈಲರ್) ನಿಂದ ತೀವ್ರ ಸ್ಪರ್ಧೆ ಎದುರಾಗಿದೆ. ಅಂದಹಾಗೆ, ಈ ರಾಜು ಮೊದಲು ಕಾಂಗ್ರೆಸ್‌ನಲ್ಲೇ ಇದ್ದವನು, ಈಗ ಜೆಡಿಎಸ್ ಸೇರಿಕೊಂಡು ಚುನಾವಣೆಗೆ ನಿಂತಿದ್ದಾನೆ.

ಹೂಟಗಳ್ಳಿ ಕ್ಷೇತ್ರವು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಹಣಾಹಣಿಯನ್ನು ಹುಟ್ಟುಹಾಕಿದ್ದು ಮಹಿಳಾಮಣಿಗಳ ಕಾದಾಟ ಕದನದ ರಂಗೇರಿಸಿದೆ. ಕಾಂಗ್ರೆಸ್‌ನಿಂದ ಮಂಗಳ ಗೌರಿ, ಜೆಡಿಎಸ್‌ನಿಂದ ಚಂದ್ರಿಕಾ ಸುರೇಶ್ ಜಿದ್ದಾಜಿದ್ದಿನ ಸೆಣೆಸಾಟದಲ್ಲಿದ್ದಾರೆ.

ಬೀರಿಹುಂಡಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಿದ್ದರಾಮಯ್ಯ ಅವರ ಆಪ್ತ ಹಾಗೂ ಹಿರಿಯ ಕೆಂಚಪ್ಪ ಸ್ಪರ್ಧಿಸಿದ್ದರೆ ಜೆಡಿಎಸ್ ಬೀರಿಹುಂಡಿ ಬಸವಣ್ಣನನ್ನು ಕಣಕ್ಕಿಳಿಸಿದೆ. ಕಳೆದ ಬಾರಿ ಬೀರಿಹುಂಡಿ ಬಸವಣ್ಣನ ಪತ್ನಿ ಗೀತ ಬಸವಣ್ಣ ಜಿ.ಪಂ. ಸದಸ್ಯರಾಗಿ ಇಲ್ಲಿಂದ ಆಯ್ಕೆಗೊಂಡಿದ್ದರು. ಬೀರಿಹುಂಡಿ ಬಸವಣ್ಣನು ಕೂಡಾ ಸಿದ್ದರಾಮಯ್ಯ ಅವರ ಜೊತೆಯೇ ಗುರುತಿಸಿಕೊಂಡವರು, ಆದರೆ ಮರಿಗೌಡ ಜೊತೆಗಿನ ವೈಮನಸ್ಸಿನ ಕಾರಣಕ್ಕಾಗಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿಕೊಂಡಿದ್ದಾರೆ.

ಸಿದ್ದಲಿಂಗಪುರ ಕ್ಷೇತ್ರದಿಂದ ಸಿದ್ದರಾಮಯ್ಯನ ಮತ್ತೊಬ್ಬ ಆಪ್ತ ಜವರೇಗೌಡ ಕಾಂಗ್ರೆಸ್ ಹುರಿಯಾಳಾಗಿದ್ದಾರೆ. 2006ರ ಜಿ.ಪಂ. ಚುನಾವಣೆಯಲ್ಲಿ ಅವರು ಇದೇ ಕ್ಷೇತ್ರದಿಂದ ಗೆದ್ದುಬಂದಿದ್ದರು. ಜೆಡಿಎಸ್‌ನಿಂದ ಸ್ಪರ್ಧಿಸಿರುವ ಎಸ್.ದಿನೇಶ್ ಕೂಡಾ ಕಳೆದ ಬಾರಿ ಕಣದಲ್ಲಿದ್ದವರೇ ಆಗಿದ್ದು ತೆಳು ಅಂತರದಿಂದ ಪರಾಭವಗೊಂಡಿದ್ದರು. ಅವರಿಬ್ಬರ ನಡುವಿನ ನೇರ ಪೈಪೋಟಿ ಸೋಲು-ಗೆಲುವಿನ ಸೆಣೆಸಾಟವನ್ನು ಫಿಫ್ಟಿ-ಫಿಫ್ಟಿ ಆಗಿಸಿದೆ.

ಕೆ.ಆರ್.ನಗರದ ಸಮಬಲ

ಕೆ.ಆರ್.ನಗರ ತಾಲೂಕು ಒಟ್ಟು ಆರು ಜಿಪಂ ಕ್ಷೇತ್ರಗಳನ್ನೊಳಗೊಂಡಿದ್ದು, ಅವೆಲ್ಲವೂ ಪ್ರತಿಷ್ಠೆಯ ಕಣಗಳಾಗಿವೆ. ಇಲ್ಲಿ ಜೆಡಿಎಸ್‌ನ ಸಾರಾ ಮಹೇಶ್ ಶಾಸಕನಾಗಿದ್ದರೂ ಕಾಂಗ್ರೆಸ್‌ನ ವಿಶ್ವನಾಥ್ ಮತ್ತು ದೊಡ್ಡಸ್ವಾಮಿಗೌಡ ಅವರಿಂದಾಗಿ ಎಲ್ಲಾ ಕ್ಷೇತ್ರಗಳು ತೀವ್ರ ಪೈಪೋಟಿ ಎದುರಿಸಲಿವೆ. ಮಿರ್ಲೆ ಜಿಪಂ ಕ್ಷೇತ್ರದಿಂದ ಖುದ್ದು ಸಾರಾ ಮಹೇಶನ ತಮ್ಮ ಸಾ.ರಾ.ನಂದೀಶನೇ ಜೆಡಿಎಸ್ ಅಭ್ಯರ್ಥಿಯಾಗಿದ್ದರೆ ಕಾಂಗ್ರೆಸ್‌ನಿಂದ ಬಾಬು ಅನುಮಾನ್ ಅಖಾಡಕ್ಕಿಳಿದಿದ್ದಾರೆ. ಬಾಬು ಕೂಡಾ ರಾಜಕೀಯ ಹಿನ್ನೆಲೆಯವರೆ. ಮಾಜಿ ಸಂಸದ ದಿ. ಪುಟ್ಟಸ್ವಾಮಿಗೌಡ ಅವರ ದೂರದ ಸಂಬಂಧಿ. ಅಲ್ಲದೇ ಅವರ ತಾಯಿ ನಿಕಟಪೂರ್ವ ಜಿಪಂ ಸದಸ್ಯೆಯೂ ಹೌದು. ಹಾಗಾಗಿ ಇಬ್ಬರ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.


ಸಾಲಿಗ್ರಾಮದಿಂದ ರಿಯಲ್ ಎಸ್ಟೇಟ್ ಉದ್ಯಮಿ ಡಿ. ರವಿಶಂಕರ್‌ರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಇವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸಾರಾ ಮಹೇಶ್ ವಿರುದ್ಧ ಸೋಲುಂಡಿದ್ದ ಹಿರಿಯ ಕಾಂಗ್ರೆಸ್ಸಿಗ ದೊಡ್ಡಸ್ವಾಮಿಗೌಡ ಅವರ ಪುತ್ರ. ಈ ಕ್ಷೇತ್ರದ ಜೆ.ಡಿ.ಎಸ್. ಅಭ್ಯರ್ಥಿ ಸಿ.ಜೆ.ದ್ವಾರಕೀಶ್, ಶಾಸಕ ಸಾ.ರಾ. ಮಹೇಶ್ ಅವರ ಕಟ್ಟಾ ಬೆಂಗಲಿಗ. ಜಿಪಂ ಪ್ರಭಾರ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವವೂ ಆತನಿಗಿದೆ. ಜೊತೆಗೆ ಈತನೂ ರಿಯಲ್ ಎಸ್ಟೇಟ್ ಉದ್ಯಮಿ. ಹಾಗಾಗಿ ನೆಕ್‌ಟುನೆಕ್ ಪೈಪೋಟಿಯನ್ನು ಕ್ಷೇತ್ರ ಎದುರು ನೋಡುತ್ತಿದೆ.


ಭೇರ್ಯ ಕ್ಷೇತ್ರದಿಂದ ಹಿರಿಯ ನಾಯಕ ಎಚ್. ವಿಶ್ವನಾಥ್ ಅವರ ಮಗ ಅಮಿತ್ ದೇವರಹಟ್ಟಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಎಂಡಿಸಿಸಿ ಬ್ಯಾಂಕ್ ನಿರ್ದೇಶಕರೂ ಆಗಿರುವ ಅಮಿತ್‌ಗೆ ತಂದೆಯ ವರ್ಚಸ್ಸೇ ಶ್ರೀರಕ್ಷೆ. ಜೆ.ಡಿ.ಎಸ್. ಅಭ್ಯರ್ಥಿಯಾಗಿರುವ ರಿಯಲ್ ಎಸ್ಟೇಟ್ ಉದ್ಯಮಿ ಸಿ.ಪಿ. ರಮೇಶ್ ಭಾರೀ ರೊಕ್ಕಸ್ಥ. ಈ ಹಿಂದೆ ತನ್ನ ಪತ್ನಿಯನ್ನು ಕಾಂಗ್ರೆಸ್ ಪಕ್ಷದಿಂದ ಜಿಪಂ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದ ರಮೇಶ್ ಈ ಬಾರಿ ತಾನೇ ಜೆಡಿಎಸ್ ಜಾಂಡಾದಡಿಯಲ್ಲಿ ಸ್ಪರ್ಧಿಸಿರೋದು ವಿಶೇಷ. ಒಟ್ಟಿನಲ್ಲಿ ಹಣ ಬಲದ ನಡುವಿನ ಕಾದಾಟ ಇಲ್ಲಿ ಜೋರಾಗಿದೆ.

ನರಸೀಪುರದಲ್ಲಿ ಬಿಜೆಪಿ -ಜೆಡಿಎಸ್ ಮೈತ್ರಿ?.

ಟಿ. ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಆರು ಜಿಪಂ ಕ್ಷೇತ್ರಗಳಿವೆ. ಇಲ್ಲಿಂದ ಶಾಸಕನಾಗಿ, ಪ್ರಭಾವಿ ಮಂತ್ರಿಯೂ ಆಗಿರುವ ಎಚ್.ಸಿ. ಮಹದೇವಪ್ಪರ ವರ್ಚಸ್ಸನ್ನೇ ಕಾಂಗ್ರೆಸ್ ಅಭ್ಯರ್ಥಿಗಳು ಅಪಾರವಾಗಿ ನಂಬಿಕೊಂಡಿದ್ದಾರೆ. ತಲಕಾಡು ಮೀಸಲು ಕ್ಷೇತ್ರವಾಗಿದ್ದು ಮಾಜಿ ಶಾಸಕ ಎಂ. ಚಿಕ್ಕಮಾದನಾಯ್ಕ ಅವರ ಕಿರಿಯ ಮಗ, ಮಾಜಿ ಜಿಪಂ ಸದಸ್ಯ ಕೆ.ಸಿ.ಲೋಕೇಶ್ ಬಿಜೆಪಿಯಿಂದ ಕಣಕ್ಕಿಳಿದಿದ್ದರೆ ಕಾಂಗ್ರೆಸ್ಸಿನಿಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಸ್ಪರ್ಧಿಸಿದ್ದಾರೆ.

▶▶| 06


ಚಿಕ್ಕಮಾದು


ಜಿ.ಟಿ. ದೇವೇಗೌಡ

ಕುಟುಂಬ ರಾಜಕಾರಣದ ಘಮಲು

ಈ ಬಾರಿಯ ಜಿ.ಪಂ ಚುನಾವಣೆಯಲ್ಲಿ ಕುಟುಂಬ ರಾಜಕಾರಣ ಅನ್ನೋದು ಮೈಸೂರಿನಲ್ಲಿ ಎಲ್ಲೆಮೀರಿ ಹೋಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶ್ರೀನಿವಾಸ ಪ್ರಸಾದ್ ಇಬ್ಬರನ್ನು ಹೊರತುಪಡಿಸಿದರೆ ಉಳಿದೆಲ್ಲಾ ಶಾಸಕರು ಮತ್ತು ಮಾಜಿ ಶಾಸಕರು ತಮ್ಮ ಪತ್ನಿಯನ್ನೋ, ಪುತ್ರರನ್ನೋ ಇಲ್ಲವೆ ಹತ್ತಿರದ ಸಂಬಂಧಿಗಳನ್ನೋ ಅಖಾಡಕ್ಕೆ ಧುಮುಕಿಸಿದ್ದಾರೆ.

ಮೊದಲು ಕಾಂಗ್ರೆಸ್ಸಿಗರ ಲಿಸ್ಟು ನೋಡುವುದಾದರೆ ಪಿರಿಯಾಪಟ್ಟಣ ಶಾಸಕ ಕೆ. ವೆಂಕಟೇಶ್ ತಮ್ಮ ಪುತ್ರ ನಿತಿನ್‌ನನ್ನು ಬೆಟ್ಟದಪುರ ಜಿಲ್ಲಾ ಪಂಚಾಯತಿಯಿಂದ, ಎಚ್.ವಿಶ್ವನಾಥ್ ತಮ್ಮ ಪುತ್ರ ಅಮಿತ್ ದೇವರಹಟ್ಟಿಯನ್ನು ಕೆ.ಆರ್. ನಗರದಿಂದ, ಹುಣಸೂರು ಶಾಸಕ ಎಚ್.ಪಿ.ಮಂಜುನಾಥ್ ತನ್ನ ನಾದಿನಿ ಡಾ. ಪುಷ್ಪಾ ಅಮರನಾಥ್‌ರನ್ನು ಬನ್ನಿಕುಪ್ಪೆಯಿಂದ, ಮಾಜಿ ಶಾಸಕ ಎಂ. ಸತ್ಯನಾರಾಯಣ ತನ್ನ ಪುತ್ರ ಎಸ್. ಅರುಣ್‌ಕುಮಾರ್‌ನನ್ನು ಇಲವಾಲದಿಂದ, ಲೋಕೋಪಯೋಗಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ತಮ್ಮ ಸಂಬಂಧಿ ಮಂಗಳರನ್ನು ಸೋಸಲೆ ಕ್ಷೇತ್ರದಿಂದ, ಹಾಲಿ ಜಿಲ್ಲಾ ಪಂಚಾಯತ್ ಸದಸ್ಯೆ ಸುಮಿತ್ರಾ ಗೋವಿಂದರಾಜು ತನ್ನ ಪುತ್ರ ಬಾಬು ಹನುಮಾನ್‌ನನ್ನು ಮಿರ್ಲೆಯಿಂದ, ಮಾಜಿ ಶಾಸಕ ಬಿ. ಚಲುವಯ್ಯ ತನ್ನ ಪುತ್ರ ಎಚ್.ಸಿ.ಲಕ್ಷ್ಮಣ್‌ನನ್ನು ಬೆಳತೂರು ಕ್ಷೇತ್ರದಿಂದ ಕಣಕ್ಕಿಳಿಸಿದ್ದಾರೆ.

ಕುಟುಂಬ ರಾಜಕಾರಣದ ಪೈಪೋಟಿಯಲ್ಲಿ ಜೆಡಿಎಸ್ ಹಿಂದೆ ಬಿದ್ದಿಲ್ಲ. ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರು ತಮ್ಮ ಪತ್ನಿ ಕೆ. ಲಲಿತರನ್ನು ಬಿಳಿಕೆರೆ ಕ್ಷೇತ್ರದಿಂದ, ಎಚ್.ಡಿ.ಕೋಟೆ ಕ್ಷೇತ್ರದ ಶಾಸಕ ಎಸ್. ಚಿಕ್ಕಮಾದು ತಮ್ಮ ಪುತ್ರ ಅನಿಲ್ ಕುಮಾರ್‌ರನ್ನು ಹನಗೋಡಿನಿಂದ, ಹಾಲಿ ಜಿಲ್ಲಾ ಪಂಚಾಯತ್ ಸದಸ್ಯೆ ಭಾಗ್ಯ ಅವರ ಪತಿ ದಳದ ಪ್ರಮುಖ ನಾಯಕ ಶಿವಮೂರ್ತಿ, ಹಾಲಿ ಸದಸ್ಯೆ ಎಂ.ಡಿ. ಗೀತ ಅವರ ಪತಿ ಬೀರಿಹುಂಡಿ ಬಸವಣ್ಣ, ಶಾಸಕ ಸಾ.ರಾ. ಮಹೇಶ್ ಸಹೋದರ ಸಾ.ರಾ. ನಂದೀಶ್ ಮಿರ್ಲೆಯಿಂದ, ಮಾಜಿ ಶಾಸಕ ಕೆ.ಎಸ್. ಕಾಳೆಮರಿಗೌಡ ಅವರ ಸಹೋದರನ ಪುತ್ರ ಕೆ.ಎಸ್. ಮಂಜುನಾಥ್, ಮಾಜಿ ಶಾಸಕ ಹೀರಣ್ಣ ಅವರ ಪುತ್ರ ಎಂ.ಪಿ. ನಾಗರಾಜ್ ಕೆ. ಬೆಳತ್ತೂರು ಕ್ಷೇತ್ರದಿಂದ ಕಣದಲ್ಲಿದ್ದಾರೆ.

ಕಾ.ಪು. ಸಿದ್ದಲಿಂಗ ಸ್ವಾಮಿ ಅವರ ಸಹೋದರ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಕಾ.ಪು. ಸಿದ್ದವೀರಪ್ಪ ಪತ್ನಿ ಲೀಲಾವತಿ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರ ಪತ್ನಿ ಮಹದೇವಮ್ಮ ಮುಳ್ಳೂರು ಕ್ಷೇತ್ರದಿಂದ, ಹಾಲಿ ಸದಸ್ಯ ಚಿಕ್ಕರಂಗನಾಯಕರ ಸಹೋದರಿ ಲಕ್ಷ್ಮಿಜಯಣ್ಣ ಕಳಲೆಯಿಂದ ಸ್ಪರ್ಧಿಸಿದ್ದಾರೆ.

05 ಒಗ್ಗಟ್ಟಿನ ಕಾಂಗ್ರೆಸ್...ಬಿಕ್ಕಟ್ಟಿನ ಜೆಡಿಎಸ್

ಸೋಮನಾಥಪುರವೂ ಮೀಸಲು ಕ್ಷೇತ್ರವಾಗಿದ್ದು ಕಾಂಗ್ರೆಸ್‌ನಿಂದ ಅಶ್ವಿನಿಕುಮಾರ್, ಜೆಡಿಎಸ್‌ನಿಂದ ಆರ್. ಗಿರಿಧರ್, ಬಿ.ಜೆ.ಪಿ.ಯಿಂದ ದಾಸಯ್ಯ ಸ್ಪರ್ಧಿಸುತ್ತಿದ್ದಾರೆ. ಆದರೆ ನೇರ ಹಣಾಹಣಿ ನಡೆಯುತ್ತಿರೋದು ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ನಡುವೆ. ಇನ್ನು ಅನುಸೂಚಿತ ಮಹಿಳೆಗೆ ಮೀಸಲಾಗಿರುವ ಹೊಸಲೆ ಜಿಪಂ ಕ್ಷೇತ್ರದಿಂದ ಲೋಕೋಪಯೋಗಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರ ಸೋದರ ಮಗಳು ಮಂಗಳಮ್ಮ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಬಿಜೆಪಿಯಿಂದ ಶಶಿಕಲಾ ನಾಗರಾಜ್, ಬಿ.ಎಸ್.ಪಿ.ಯಿಂದ ಸುಧಾ ಮಹದೇವಯ್ಯ ಸ್ಪರ್ಧಿಸಿದ್ದಾರಾದರೂ ಇಲ್ಲಿ ಕಾಂಗ್ರೆಸ್‌ನ ಮಂಗಳಮ್ಮನ ಗೆಲುವು ಬಹುತೇಕ ಖಚಿತವೆಂದೇ ಹೇಳಲಾಗುತ್ತಿದೆ.

ತುರುಗನೂರು ಜಿಪಂ ಕ್ಷೇತ್ರ ಕೂಡಾ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವಿನ ನೇರ ಹಣಾಹಣಿಯ ಕ್ಷೇತ್ರವೆನಿಸಿ ಕೊಂಡಿದೆ. ತಾ.ಪಂ ಮಾಜಿ ಅಧ್ಯಕ್ಷ ಎಂ. ಸುಧೀರ್ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದರೆ ದಳದಿಂದ ಬನ್ನೂರು ಮಾಜಿ ಶಾಸಕಿ ಹಾಗೂ ಜಿ.ಪಂ. ಅಧ್ಯಕ್ಷೆ ಜೆ. ಸುನಿತಾ ವೀರಪ್ಪಗೌಡ ಸ್ಪರ್ಧೆಯೊಡ್ಡುತ್ತಿದ್ದಾರೆ. ಬಿ.ಎಸ್.ಪಿ.ಯಿಂದ ಎಸ್.ಕೆ. ರಾಜುಗೌಡ ಕಣದಲ್ಲಿದ್ದಾರಾದರೂ ಗೆಲ್ಲುವ ಭರವಸೆ ತೀರಾ ಕಡಿಮೆ. ಮೂಗೂರು ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ತನ್ನ ಅಭ್ಯರ್ಥಿಯನ್ನೇ ಕಣಕ್ಕಿಳಿಸಿಲ್ಲ, ಹಾಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಪೈಪೋಟಿ ಏರ್ಪಟ್ಟಿದೆ. ಲಿಂಗಾಯತ ಮತಗಳು ಗಣನೀಯ ಸಂಖ್ಯೆಯಲ್ಲಿರುವ ಇಲ್ಲಿ ಕಾಂಗ್ರೆಸ್ ಸೋಲಿಸಲೆಂದೇ ಜೆಡಿಎಸ್-ಬಿಜೆಪಿ ಒಳಮೈತ್ರಿ ಮಾಡಿಕೊಂಡಿವೆಯೆಂಬ ಮಾತುಗಳು ಕೇಳಿಬರುತ್ತಿವೆ. ಯಾಕೆಂದರೆ ಬಿಜೆಪಿ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿರೋದು ಮೈಸೂರು-ಚಾಮರಾಜನಗರ ಜಿಲ್ಲೆಗಳ ವೀರಶೈವ ಮಹಾಸಭಾದ ಮಾಜಿ ಅಧ್ಯಕ್ಷ ನಟರಾಜು. ಇನ್ನುಳಿದಂತೆ ಕಾಂಗ್ರೆಸ್‌ನಿಂದ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಮಾದ್ರಳ್ಳಿ ಎಂ. ಶಿವಮೂರ್ತಿ ಮತ್ತು ಬಿ.ಎಸ್.ಪಿ. ಅಭ್ಯರ್ಥಿಯಾಗಿ ಶ್ರೀಕಾಂತ್ ಕಣದಲ್ಲಿದ್ದಾರೆ.

ಸಾಮಾನ್ಯ ಮಹಿಳೆಗೆ ಮೀಸಲಿಟ್ಟಿರುವ ಗರ್ಗೇಶ್ವರಿ ಜಿಪಂ ಕ್ಷೇತ್ರದಲ್ಲಿ ತಾಲೂಕು ಕುರುಬ ಸಂಘದ ಅಧ್ಯಕ್ಷ ಪ್ರಶಾಂತ್ ಬಾಬು ಅವರ ತಾಯಿ ಜಯಮ್ಮ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೆ ಬಿಜೆಪಿಯಿಂದ ಕೆ. ಯಮುನ, ಜೆ.ಡಿ.ಎಸ್.ನಿಂದ ಹೊಸಕೋಟೆ ಗ್ರಾಪಂ ಉಪಾಧ್ಯಕ್ಷ ಬಾಲಕೃಷ್ಣ ಅವರ ಪತ್ನಿ ಮೋಕ್ಷರಾಣಿ ಕಣದಲ್ಲಿದ್ದಾರೆ. ಇಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಕೆ.ಸಿ. ಬಲರಾಂ ಅವರ ಬೆಂಬಲದ ಜೊತೆಗೆ ಅಲ್ಪಸಂಖ್ಯಾತರ ಒಲವು ಸಂಪೂರ್ಣವಾಗಿ ಕಾಂಗ್ರೆಸ್‌ನತ್ತ ತಿರುಗಿರುವುದರಿಂದ ಕೈ ಅಭ್ಯರ್ಥಿ ಗೆಲ್ಲುವ ಸಾಧ್ಯತೆಯೇ ದಟ್ಟವಾಗಿದೆ.

ಹುಣಸೂರಿನ ಜೆಡಿಎಸ್ ಕಚ್ಚಾಟ

ಹುಣಸೂರು ತಾಲೂಕಿನಲ್ಲಿ ಆರು ಜಿಪಂ ಕ್ಷೇತ್ರಗಳಿದ್ದು ಕುಟುಂಬ ರಾಜಕಾರಣವೇ ಮೇಲುಗೈ ಸಾಧಿಸಿರುವುದರಿಂದ ಸಹಜವಾಗಿಯೇ ಪ್ರತಿಷ್ಠೆಯ ಕಣವಾಗಿ ಪರಿಣಮಿಸಿದೆ. ಜಿ.ಟಿ. ದೇವೇಗೌಡ ಹಾಗೂ ಚಿಕ್ಕಮಾದು ನಡುವಿನ ಕಚ್ಚಾಟ ತಾರಕಕ್ಕೇರಿದ್ದು ಚಿಕ್ಕಮಾದು ತಟಸ್ಥರಾಗುಳಿದಿರುವುದು ಜೆಡಿಎಸ್ ಪಾಲಿಗೆ ಅಪಾಯಕಾರಿ ಎಂದೇ ಹೇಳಲಾಗುತ್ತಿದೆ. ಇದು ಕಾಂಗ್ರೆಸ್‌ಗೆ ಅನುಕೂಲವಾಗುವ ಸಾಧ್ಯತೆಗಳಿವೆ. ಜೊತೆಗೆ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಶಾಸಕ ಮಂಜುನಾಥ್ ಕೂಡಾ ಕಾಂಗ್ರೆಸ್ ಪಾರ್ಟಿಯವರೇ ಆಗಿರುವುದು ಕೈಗೆ ಪ್ಲಸ್ ಪಾಯಿಂಟ್.

ಬನ್ನಿಕುಪ್ಪೆ ಕ್ಷೇತ್ರ ಎಸ್.ಸಿ. ಮಹಿಳೆಗೆ ಮೀಸಲಾಗಿದ್ದು ಮುಖ್ಯಮಂತ್ರಿಗಳ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ಶಾಸಕ ಮಂಜುನಾಥ್‌ರ ನಾದಿನಿ ಹಾಲಿ ಜಿಲ್ಲಾಪಂಚಾಯತ್ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಕಣದಲ್ಲಿದ್ದಾರೆ. ಚಂದ್ರಪ್ರಭಾ ಅರಸ್‌ರ ನಿಕಟವರ್ತಿ ಎಂದೇ ಗುರುತಿಸಿಕೊಂಡಿರುವ ಬಿಳಿಕೆರೆ ರಾಜು ಅವರ ಪತ್ನಿ ಭಾಗ್ಯರನ್ನು ಜೆಡಿಎಸ್ ಅಭ್ಯರ್ಥಿಯಾಗಿಸಿದ್ದರೆ ಮಾಜಿ ಜಿಪಂ ಸದಸ್ಯ ನಾಗರಾಜು ಮಲ್ಲಾಡಿ ಅವರ ಪುತ್ರಿ ಪ್ರಫುಲ್ಲ ಮಲ್ಲಾಡಿಯನ್ನು ಬಿಜೆಪಿ ಕಣಕ್ಕಿಳಿಸಿದೆ. ಕ್ಷೇತ್ರದ ಒಟ್ಟಾರೆ ಫಲಿತಾಂಶ ಕಾಂಗ್ರೆಸ್ ಪರವಾಗಿಯೇ ಕಾಣಿಸುತ್ತಿದೆ.

ಬಿಳಿಕೆರೆ ಕ್ಷೇತ್ರ ಸಾಮಾನ್ಯ ಮಹಿಳೆಗೆ ಮೀಸಲಿದ್ದು ಜೆಡಿಎಸ್‌ನಿಂದ ಜಿ.ಟಿ. ದೇವೇಗೌಡರ ಪತ್ನಿ ಲಲಿತಮ್ಮ ಸ್ಪರ್ಧಿಸಿದ್ದಾರೆ. ಇವರಿಗೆ ಪ್ರಬಲ ಪೈಪೋಟಿ ನೀಡಲೆಂದು ಕಾಂಗ್ರೆಸ್ ಗೌರಮ್ಮ ಸೋಮಶೇಖರ್‌ರನ್ನು ಕಣಕ್ಕಿಳಿಸಿದೆ. ಬಿಜೆಪಿಯಿಂದ ಸೌಭಾಗ್ಯ ಕಣದಲ್ಲಿದ್ದಾರಾದರು ಕಾಂಗ್ರೆಸ್ ಮತ್ತು ದಳದ ನಡುವೆ ನೇರ ಸ್ಪರ್ಧೆ. ಇದು ಆಡಳಿತ ಪಕ್ಷದ ಶಾಸಕ ಮಂಜುನಾಥ್ ಹಾಗೂ ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಶಾಸಕ ಜಿಟಿಡಿ ಅವರ ನಡುವಿನ ಪ್ರತಿಷ್ಠೆಯ ಕಣವಾಗಿದೆ.

ಹನಗೋಡು ಕ್ಷೇತ್ರ ಎಸ್‌ಟಿಗೆ ಮೀಸಲಿದ್ದು ಕಾಂಗ್ರೆಸ್‌ನಿಂದ ರಾಜಪ್ಪ, ಜೆಡಿಎಸ್.ನಿಂದ ಎಚ್.ಡಿ.ಕೋಟೆ ಶಾಸಕ ಚಿಕ್ಕಮಾದು ಅವರ ಪುತ್ರ ಅನಿಲ್ ಕುಮಾರ್ ಸ್ಪರ್ಧಿಸಿದ್ದಾರೆ. ಇನ್ನುಳಿದಂತೆ ಚಿಲ್ಕುಂದ, ಗಾವಡಗೆರೆ ಹಾಗೂ ಧರ್ಮಾಪುರ ಕ್ಷೇತ್ರಗಳಲ್ಲಿಯೂ ದಳ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದೆ.

ಎಚ್.ಡಿ.ಕೋಟೆ ಬಂಡಾಯವೇ 'ಹೊರೆ

ಎಚ್.ಡಿ.ಕೋಟೆ ತಾಲ್ಲೂಕು ಆರು ಜಿಪಂ ಕ್ಷೇತ್ರಗಳನ್ನೊಳಗೊಂಡಿದ್ದು ಅತ್ಯಂತ ಹಿಂದುಳಿದ ತಾಲೂಕು ಎನ್ನಿಸಿಕೊಂಡಿದೆ. ಇಲ್ಲಿ ಜೆಡಿಎಸ್‌ನ ಎಸ್.ಚಿಕ್ಕಮಾದು ಶಾಸಕರಾಗಿರುವುದರಿಂದ ದಳಕ್ಕೆ ಕೊಂಚ ಭರವಸೆಯ ಕ್ಷೇತ್ರವಾಗಿದೆ. ಕಾಂಗ್ರೆಸ್‌ನಿಂದ ಮಾಜಿ ಶಾಸಕ ಚಿಕ್ಕಣ್ಣ ಹಾಗೂ ದಳದಿಂದ ಶಿವಣ್ಣ ಬಿ.ಜೆ.ಪಿ.ಗೆ ವಲಸೆ ಹೋಗಿದ್ದರೂ ಬಿಜೆಪಿಗೆ ಅವಕಾಶ ಕಡಿಮೆ ಅಂತಲೇ ಹೇಳಬಹುದು. ಚಾಮರಾಜನಗರದ ಸಂಸದ ಆರ್. ಧ್ರುವನಾರಾಯಣ್‌ರ ಪ್ರಭಾವವೂ ಇಲ್ಲಿ ದಟ್ಟವಾಗಿದ್ದು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅದು ವರವಾಗಲಿದೆ. ಒಕ್ಕಲಿಗ ಮತ್ತು ಲಿಂಗಾಯತ ಮತಗಳು ನಿರ್ಣಾಯಕ ಶಕ್ತಿಗಳಾಗಿವೆ. ಇಲ್ಲಿ ಜೆ.ಡಿ.ಎ... ಪ್ರಬಲವಾಗಿದ್ದರೂ ಒಳಪಿತೂರಿಗಳಿಂದ ಪಕ್ಷದ ಹಿನ್ನ... ನಾಯಕರೇ ಕಾರಣರಾಗುತ್ತಿದ್ದಾರೆ. ಪಕ್ಷಕ್ಕೆ ಬಂಡಾ... ಅಭ್ಯರ್ಥಿಗಳೇ ತೊಡಕಾಗಿ ಪರಿಣಮಿಸಿದ್ದಾರೆ. ದ... ತಾಲೂಕು ಅಧ್ಯಕ್ಷ ಸಿ.ವಿ. ನಾಗರಾಜುಗೆ ಟಿಕೆಟ್ ನೀಡ... ಭರವಸೆಯೊಂದಿಗೆ ಬಿ ಫಾರಂ ಕೊಡಲಾಗಿತ್ತು. ಆ... ಕೊನೇ ಕ್ಷಣದಲ್ಲಿ ಎಚ್.ಡಿ.ರೇವಣ್ಣನ ಶಿಫಾರಸ್ಸಿನ ಮೇ... ಈರೇಗೌಡನನ್ನು ಪಕ್ಷದ ಅಭ್ಯರ್ಥಿ ಎಂದ... ಘೋಷಿಸಲಾಯಿತು. ಇದರಿಂದ ಸಿಟ್ಟಿಗೆದ್ದ ಸಿ... ನಾಗರಾಜು ಬಂಡಾಯ ಅಭ್ಯರ್ಥಿಯಾಗಿ ಕಣದ... ಉಳಿದಿದ್ದಾರೆ. ಇದರ ಪರಿಣಾಮ ಪಕ್ಷದ ಮೇ... ಆಗುವುದಂತೂ ನಿಶ್ಚಿತ. ಪಿರಿಯಾಪಟ್ಟಣ ವಿಧಾನಸ... ವ್ಯಾಪ್ತಿಯಲ್ಲಿ ಕಂಪಲಾಪುರ, ಹುಣಸವಾಡಿ, ಕೊ... ಬೆಟ್ಟದಪುರ, ರಾವಂದೂರು, ಹಲಗನಹಳ್ಳಿ ಜಿ.ಪಂ. ಕ್ಷೇತ್ರಗ... ಬರುತ್ತವೆ. ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ ಶಾಸಕ ವೆಂಕಟೇಶ್‌ರ ಬೆಂಬಲಿಗರದ್ದೇ ಮೇಲುಗೈ ಇದ್ದಾಗ್ಯೂ ದ... ಕೆ. ಮಹದೇವು ಅವರ ಪ್ರಾಬಲ್ಯವನ್ನು ನಿರ್ಲಕ್ಷಿಸಲಿಕ್ಕಾಗದ... ಕಳೆದ ಬಾರಿ 5 ಜಿ.ಪಂ. ಕ್ಷೇತ್ರಗಳಲ್ಲಿ 3 ಹಾಗೂ 2... ತಾಪಂ ಕ್ಷೇತ್ರಗಳಲ್ಲಿ 13 ಕ್ಷೇತ್ರಗಳನ್ನು ಜಾ.ದಳ ತೆಕ್ಕೆ... ತೆಗೆದುಕೊಂಡಿತ್ತು. ಇದನ್ನು ವೆಂಕಟೇಶ್ ಉಲ... ಮಾಡುತ್ತಾರಾ? ಕಾದು ನೋಡಬೇಕು.

ಶಾಸಕ ವೆಂಕಟೇಶ್‌ರ ಮಗ ವಿ. ನಿತೀನ್ ಬೆಟ್ಟದಪು... ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ... ಎದುರಾಳಿಯಾಗಿ ಜೆಡಿಎಸ್‌ನ ಮಾಜಿ ಶಾಸಕ ಕಾಳಮರಿಗೌ... ಅವರ ಪುತ್ರ ಮಂಜುನಾಥ್ ಹಾಗೂ ಬಿಜೆಪಿಯ ಎಂ.ಎ... ರಾಜೇಗೌಡ ಕಣದಲ್ಲಿದ್ದಾರೆ. ಇಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಸಮಬಲದ ಹೋರಾಟವಿದೆ. ಕಾಂಗ್ರೆ... ಪಕ್ಷದ ವೆಂಕಟೇಶರ ವರ್ಚಸ್ಸು ಮತ್ತು ಆಡಳಿತ ಪಕ್ಷ... ಪ್ರಭಾವ ಹಾಗೂ ಸಿದ್ದರಾಮಯ್ಯ ಅವರ ವೈಯಕ್ತಿಕ ಕಾಳ... ಕೂಡ ಕಾಂಗ್ರೆಸ್ಸಿಗೆ ಅನುಕೂಲವಾಗಲಿದೆ.

■ ಮೋಹನ್ ಮೈಸೂರು

04 ಕರಾವಳಿ: ಕಾಂಗ್ರೆಸ್‌ಗೆ ಬಲ, ಬಿಜೆಪಿಗೆ ತಳಮಳ!!

ಉಡುಪಿ ಜಿಲ್ಲೆಯ ಉತ್ತರ ತುದಿಯಲ್ಲಿರುವ ಬೈಂದೂರು ವಿಧಾನಸಭಾ ಕ್ಷೇತ್ರ ಹೊಟೇಲಿಯರ್ ಗೋಪಾಲ ಪೂಜಾರಿ ಆಳುತ್ತಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿದ್ದರೂ ಈತ ಹೆಸರಿಗಷ್ಟೇ. ನಿಜವಾದ ಜಿಲ್ಲಾ ಅಧ್ಯಕ್ಷ ಎಐಸಿಸಿ ಮಾಂಡಲೀಕ ಆಸ್ಕರಣ. ಹೀಗಾಗಿ ಪೂಜಾರಿ ದಿನದ ಇಪ್ಪತ್ನಾಲ್ಕೂ ತಾಸು ಬೈಂದೂರು ಏರಿಯಾದ ಏಳು ಜಿಪಂ ಕ್ಷೇತ್ರದಲ್ಲಿ ರಾಜಕಾರಣ ಮಾಡುತ್ತಾರೆ. ಆತ ಎರಡು ತಿಂಗಳ ಹಿಂದೆಯೇ ಜಿಪಂ-ತಾಪಂ ಕ್ಯಾಂಡಿಡೇಟ್‌ಗಳನ್ನು ಆಯ್ಕೆ ಮಾಡಿ ಯುದ್ಧರಂಗಕ್ಕೆ ಕಳಿಸಿದ್ದರು.


ಬಿಜೆಪಿಯ ಸುಕುಮಾರ ಶೆಟ್ಟಿ, ಆದ್ಯಂತಾಯ ವಗೈರೆ ಚೆಡ್ಡಿಗಳು ಅದೆಷ್ಟೇ ತಿಪ್ಪರಲಾಗ ಹಾಕಿದರೂ ಬೈಂದೂರಲ್ಲಿ ಗೋಪುನೇ ಸ್ಟ್ರಾಂಗು! ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ್‌ರ ಮನೆ ಹತ್ತಿರದ ಸಿದ್ದಾಪುರ, ಹಾಲಾಡಿ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಸ್ವಲ್ಪ ಕಷ್ಟವಾಗಬಹುದು. ಆದರೂ ಬೈಂದೂರು ಏರಿಯಾದಿಂದಲೇ ಹೆಚ್ಚು ಜಿಪಂ ಸದಸ್ಯರು ಕಾಂಗ್ರೆಸ್‌ನಿಂದ ಗೆಲ್ಲುವ ಚಾನ್ಸ್ ಇದೆ. ಕುತೂಹಲಕರ ಕಣವೆಂದರೆ, ಜಿಪಂ ಮಾಜಿ ಅಧ್ಯಕ್ಷ ರಾಜೂ ಪೂಜಾರಿ ಎಂಬ ಗಂಡಾಗುಂಡಿ ಆಸಾಮಿಯು ಬೈಂದೂರು, ಬಿಜೆಪಿಯಲ್ಲಿ ಜಿಪಂ ಉಪಾಧ್ಯಕ್ಷ ಅನುಭವಿಸಿ ಕಾಂಗ್ರೆಸ್‌ಗೆ ಬಂದಿರುವ ಗೌರಿ ದೇವಾಡಿಗರ ಕಂಬದ ಕೋಣೆ ಕ್ಷೇತ್ರ. ಎರಡೂ ಕಡೆ ಕಾಂಗ್ರೆಸ್ ಖಾತ್ರಿ ವಿನ್! ಗೇರುಬೀಜ ಉದ್ಯಮದ ಕಾರ್ಮಿಕರಿರುವ 'ವಂಡ್ಸೆ' ಕ್ಷೇತ್ರದಲ್ಲಿ ಸಿಪಿಐಎಂ ಸ್ಪರ್ಧಿಸಿರುವುದು ಕಾಂಗ್ರೆಸ್‌ಗೆ ಅಡ್ಡಾಲಾಗಿದೆ.

ಕುಂದಾಪುರದಲ್ಲಿ ಬಿಜೆಪಿಯ ನಿಷ್ಠಾವಂತರು ಪಕ್ಷೇತರ ಶಾಸಕ- ಬಿಜೆಪಿ ವಿರೋಧಿ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಎದುರು ಮಂಡಿಯೂರುವ ದೊಡ್ಡವರ ನೀತಿ ವಿರುದ್ಧ ಸಿಡಿದೆದ್ದಿದ್ದಾರೆ. ಸಂಸದೆ ಸೋಬಕ್ಕ ಹಾಲಾಡಿ ಮಾತಿಗೆ ಮಣೆಹಾಕಿ ಚೆಡ್ಡಿ ಚತುರರಿಗೆ ಅನ್ಯಾಯ ಮಾಡಿದ್ದಾರೆಂದು ಯುವ ಬಿಜೆಪಿ ಹುಡುಗರು ಹೊರಬಿದ್ದಿದ್ದಾರೆ. 'ರಹಸ್ಯ ಸಂಬಂಧ' ಹಾಲಾಡಿ ಜತೆ ಹೊಂದಿರುವ ಜಿಲ್ಲಾ ಬಿಜೆಪಿ ಅಧ್ಯಕ್ಷ ಕಿಂಗಳೆ ವಿಕ್ರಮಾರ್ಜುನ ಹೆಗ್ಡೆ ಪಕ್ಷಕ್ಕೆ ಹಾನಿ ಮಾಡುತ್ತಿದ್ದನೆಂದು ಕಲ್ಲಡ್ಕ ಕಮಾಂಡ್ ಬಳಗ ಬೊಬ್ಬೆ ಹೊಡೆಯುತ್ತಿದೆ. ಅಷ್ಟೇ ಅಲ್ಲ, ಉಡುಪಿಯ ಹೆಂಡತಿ ಹಂತಕ ವಿಪ್ರಾಗ್ರೇಸ ರಘುಪತಿ ಭಟ್ 'ಮಂದಾರ್ತಿ' ಕ್ಷೇತ್ರದಲ್ಲಿ ತನ್ನ ಹಿಂಬಾಲಕ ಪ್ರತಾಪ್ ಹೆಗ್ಡೆಗೇ ಹಠ ಹಿಡಿದು ಟಿಕೆಟ್ ಕೊಡಿಸಿದ್ದಾರೆ. ಅದು ಹಾಲಾಡಿಯ ಪಕ್ಷೇತರ ಪರಾಕ್ರಮಕ್ಕಾದ ಮುಖಭಂಗವೆಂದೇ ಬಿಜೆಪಿಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ.

ಕುಂದಾಪುರದ ಕಾಂಗ್ರೆಸ್ ಸೂತ್ರ ಈ ಬಾರಿ ಎಮ್ಮೆಲ್ಸಿ ಪ್ರತಾಪಚಂದ್ರ ಶೆಟ್ಟಿ ಹಿಡಿದುಕೊಂಡು ಕ್ಯಾಂಡಿಡೇಟ್ ಪಟ್ಟಿ ತಯಾರಿಸಿದ್ದಾರೆ. ನಿಷ್ಕ್ರಿಯ ಪಾರ್ಟಿಗೆ ಅಪ್ರಯೋಜಕನೆಂಬ ಕೂಗು ಕಮ್ಮಿ ಮಾಡಲು ಪ್ರತಾಪ್ ನಿದ್ದೆಯಿಂದೆದಿದ್ದರಾದರೂ ಹಾಲಾಡಿ ಎದುರು ಮುಗ್ಗರಿಸುವ ಸಾಧ್ಯತೆಯೇ ಜಾಸ್ತಿ. ಆದರೂ ಈ ಬಾರಿ ಬಿಜೆಪಿ ಬಂಡಾಯದಿಂದ ಕಾಂಗ್ರೆಸ್‌ಗೆ ಸ್ವಲ್ಪ ಲಾಭ ಆದರೂ ಆದೀತು. ಪ್ರತಾಪ್ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಒಂದೆರಡು ಕ್ಷೇತ್ರ ಗೆಲ್ಲೋದು ಕಷ್ಟವೇನಲ್ಲ. ಹಾಲಾಡಿ ಬಗ್ಗೆಯೂ ಜನರಿಗೆ ಮೊದಲಿದ್ದ ವಿಶ್ವಾಸ ಈಗಿಲ್ಲ.

ಉಡುಪಿ ರೋಲ್ಸ್ ರಾಯ್ಸ್ ಶಾಸಕ ಪ್ರಮೋದ್ ಮಧ್ವರಾಜ್‌ರ ಅಸೆಂಬ್ಲಿ ಕ್ಷೇತ್ರದಲ್ಲಿ ನಾಲ್ಕು ಜಿಪಂ ಕ್ಷೇತ್ರಗಳಿವೆ. ಆರಂಭದಲ್ಲಿ ಪ್ರಮೋದ್ ಮೇಲಿನ ಬೇಸರ ಮತ್ತು ಜಯಪ್ರಕಾಶ್ 'ಪರಿಣಾಮ'ದಿಂದ ಹಿಂದಿದ್ದ ಕಾಂಗ್ರೆಸ್ ಈಗ ಚೇತರಿಸಿಕೊಂಡಿದೆ. ಬ್ರಹ್ಮಾವರದಲ್ಲಿ ಜೆಪಿ ಪ್ರಭಾವವಿದೆ. ಹಾಗಂತಲೇ ಆತನ ಹಿಂಬಾಲಕಿಯಾಗಿದ್ದ ಮಲ್ಲಿಕಾ ಪೂಜಾರಿಯನ್ನು ಎಳೆದುತಂದು ಕಾಂಗ್ರೆಸ್ ಯುದ್ಧಕ್ಕೆ ಕಳಿಸಿದೆ. ಆಕೆ ಎದುರು ನಿಂತಿರುವ ಬಿಜೆಪಿಯ ಶೀಲಾಶೆಟ್ಟಿ ಬಿಜೆಪಿಯ ಎಮ್ಮೆಲ್ಲೆ ಟಿಕೆಟ್ ಕೇಳುವ ಲೆವೆಲ್‌ನವರು. ಬಿಲ್ಲವ v/s ಬಂಟ ಕಾಳಗದ ಈ ಕ್ಷೇತ್ರದಲ್ಲಿ ಶಂಕ... ಪೂಜಾರಿ ಹೆಸರು ಕೆಡಿಸಿಕೊಂಡಿದ್ದಾರೆ. ಬಿಜೆಪಿಗೆ ಕಿಮ್ಮತ್ತಿಲ್ಲ... ಜೆಪಿ ಪ್ರಭಾವ ಅಷ್ಟಿಲ್ಲ. ಇದು ಕಾಂಗ್ರೆಸ್‌ಗೆ ಲಾಭದಾಯಕ...

ಮಂತ್ರಿ ವಿನಯಕುಮಾರ್ ಸೊರಕೆಯ ಕಾಪು ಕ್ಷೇತ್ರದ... ಬಿಜೆಪಿ ವೀಕ್ ಆಗಿದೆ. ಆದರೆ ಸೊರಕೆ ಸಾಬರ ಬಗ್ಗೆ... ಹಗುರವಾಗಿ ಮಾತಾಡಿದ್ದು ಕಾಂಗ್ರೆಸ್‌ಗೆ ಕಂಟಕಕಾರಿ ಆಗಿದೆ...



ಕಾಪು ಕ್ಷೇತ್ರದ ಆಕೆಯನ್ನು ಬ್ರಹ್ಮಾವರಕ್ಕೆ ಎಳೆದುತಂದಿರುವ ಬಿಜೆಪಿಗೆ ಲಾಭವಾಗುವ ಯಾವ ಲೆಕ್ಕಾಚಾರವೂ ಇಲ್ಲ. ಜಾತಿ ಸಮೀಕರಣವೇ ಹಾಗಿದೆ.

ಕಲ್ಯಾಣಪುರದಲ್ಲಿ ಜಿಪಂ ಹುಲಿ ಜನಾರ್ದನ ತೋನ್ಸೆ ಮತ್ತೆ ಗೆಲ್ಲೋದು ಗ್ಯಾರಂಟಿ. ಜಿಪಂ ಅಧ್ಯಕ್ಷನಾಗುವ ಲೆಕ್ಕಾಚಾರದಲ್ಲಿ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಗೂಟದ ಕಾರು ತ್ಯಾಗ ಮಾಡಿರುವ ಈ ಬಿಲ್ಲವ ಭೂಪನ ಸೋಲಿಸಲು ಚೆಡ್ಡಿ ರಘುಪತಿ ಭಟ್ಟನ ಬಳಗದಿಂದ ಸಾಧ್ಯವೇ ಇಲ್ಲ. ಪೆರ್ಡೂರು ಕ್ಷೇತ್ರದಲ್ಲಿ ಜಿಪಂ ಮಾಜಿ ಅಧ್ಯಕ್ಷ ಶಂಕರ ಪೂಜಾರಿ ಬಿಜೆಪಿ ಹುರಿಯಾಳು. ನಿವೃತ್ತ ಬ್ಯಾಂಕ್ ಉದ್ಯೋಗಿ ಸುಧಾಕರ ಶೆಟ್ಟಿ ಕಾಂಗ್ರೆಸ್ ಕ್ಯಾಂಡಿಡೇಟು. ಸೊರಕೆ ನಮಾಜು ಟೋಪಿ ಹಾಕಿಕೊಂಡು ಕ್ಷಮೆ ಕೇಳಿ ಸಮಜಾಯಿಷಿ ಕೊಟ್ಟಿರುವುದು ಒಂಚೂರು ಕಾಂಗ್ರೆಸ್ ಪರಿಸ್ಥಿತಿ ಸುಧಾರಿಸಿದೆ. 'ಕುರ್ಕಾಲು'ನಲ್ಲಿ ಜಿಪಂ ಮಾಜಿ ಅಧ್ಯಕ್ಷೆ ವಯೋವೃದ್ಧ ಬಿಲ್ಲವ ನಾಯಕಿ ಸರಸು ಬಂಗೇರ ಗೆಲ್ಲುತ್ತಾರೆ. ಕೋಟಿ ಚನ್ನಯ್ಯ ಸಿನಿಮಾ ಮಾಡಿದ್ದ ಬಿಲ್ಲವ ಲೀಡರ್ ಮುದ್ದು ಸುವರ್ಣರ ಸೊಸೆ-ಹಾಲಿ ಜಿಪಂ ಸದಸ್ಯರ ಗೀತಾಂಜಲಿ ಸುವರ್ಣರಿಂದ ಬಿಜೆಪಿಗೆ ಲಾಭವಾಗದು. ಶಿರ್ವದಲ್ಲಿ ಕಾಂಗ್ರೆಸ್‌ಗೆ ಛಾನ್ಸ್ ಜಾಸ್ತಿ. ಪಡುಬಿದ್ರಿಯಲ್ಲಿ ಬಿಜೆಪಿ ಗೆಲ್ಲುವ ಕನಸು ಕಾಣುತ್ತಿದೆ. ಆದರೆ ಅದರ ಕ್ಯಾಂಡಿಡೇಟ್ ವೀಕ್ ಎಂದು ಚೆಡ್ಡಿ ಕಾರ್ಯಕರ್ತರೇ ಹೇಳುತ್ತಾರೆ. ಬಿಜೆಪಿ ಗೆದ್ದರೆ ಎಲ್ಲೂರಲ್ಲಷ್ಟೇ. ಹಿರಿಯಡ್ಕದಲ್ಲಿ ಕಾಂಗ್ರೆಸ್‌ಗೆ ಕಷ್ಟ.


ಕಾರ್ಕಳದಲ್ಲಿ ಭಜರಂಗಿ ಶಾಸಕ ಸುನಿಲ್‌ಕುಮಾರ್‌ನ ಪುಂಡಾಟ-ಭಂಡಾಟದ ಅಟ್ಟಹಾಸದೆದುರು ಸಜ್ಜನ-ಜನಪರ ಮಾಜಿ ಶಾಸಕ ಗೋಪಾಲ ಭಂಡಾರಿ ಸಪ್ಪಗಾಗಿದ್ದಾರೆ. ಆದರೂ ಇಲ್ಲಿ ಬಿಜೆಪಿ-ಕಾಂಗ್ರೆಸ್‌ಗೆ ಗೆಲ್ಲುವ ಅವಕಾಶ ಸಮಾನವಾಗಿದೆ. ಬೈಲೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಗ್ಗೆ ಎದ್ದಿರುವ ಅಸಮಾಧಾನ ಸುನಿಲ್‌ಗೆ ತಲೆನೋವು ತಂದಿದೆ. ವಿಕ್ರಮ ಹೆಗಡೆಯಂಥ ಜನ ಸಂಪರ್ಕದ ಲೀಡರ್ ತಿರುಗಿಬಿದ್ದಿದ್ದಾರೆ. ಇದು ಕಾಂಗ್ರೆಸ್‌ನ ನೀರೆ ಕೃಷ್ಣಶೆಟ್ಟಿ ಗೆಲುವಿಗೆ ಸಹಕಾರಿ ಎಂದೇ ವಿಶ್ಲೇಷಿಸಲಾಗುತ್ತಿದೆ.

ಹಿಂದುತ್ವದ ಹಾವಳಿ-ಹಾರಾಟದಿಂದ ಕರಾವಳಿಯಲ್ಲಿ ಬಿಜೆಪಿ ಬಸವಳಿದಿದೆ; ಉಡುಪಿ ಮತ್ತು ದಕ್ಷಿಣ ಕನ್ನಡ ಎರಡೂ ಜಿಲ್ಲೆಯ ಪಂಚಾಯ್ತಿ ಹೊಸ್ತಿಲಲ್ಲಿ ಕಾಂಗ್ರೆಸ್ ನಿಂತಿದೆ!



■ ನಹುಷ

ಬಿಜೆಪಿಯ ಹುಸಿ ರಾಷ್ಟ್ರವಾದದ ವಾಸ್ತವವನ್ನು ಬಯಲಿಗೆಳೆದ ಜೆಎನ್‌ಯು ವಿವಾದ



ಬಿಜೆಪಿಯ ಕೊನೆಯ ಆಸರೆಯೆಂದರೆ ದೇಶಭಕ್ತಿ. ಗೆಲ್ಲುವುದು ತುಂಬಾ ಕಷ್ಟ ಎಂಬ ಚುನಾವಣೆಯೊಂದು ಯಾವಾಗ ಬೇಕಾದರೂ ಎದುರಾಗಲಿ, ಆಗ ಬಿಜೆಪಿ ತಪ್ಪದೆ ತನ್ನ ಶೈತ್ಯಾಗಾರದಿಂದ ಹಿಂದುತ್ವ ಮತ್ತು ರಾಷ್ಟ್ರೀಯವಾದವನ್ನು ಹೊರತರುತ್ತದೆ; ಅದಕ್ಕೆ ಹೊಸ ಬಡಿವಾರದ ಮಾತುಗಳ ಬಟ್ಟೆಯನ್ನು ತೊಡಿಸುತ್ತದೆ. ತನ್ನ ಕಾರ್ಯಕರ್ತರ ಕೈಯಲ್ಲಿ ಅದೇ ಸವಕಲು ಸ್ಲೋಗನ್‌ಗಳ ಅಸ್ತ್ರಗಳನ್ನು ಕೊಟ್ಟು ಬಿಜೆಪಿಯ ಪರ ಯುದ್ಧ ಮಾಡಲು ಕಳುಹಿಸಿಕೊಡುತ್ತದೆ.

ರಾಷ್ಟ್ರವಾದ ಮತ್ತು ಹಿಂದುತ್ವದ ಊರುಗೋಲುಗಳು ಬಿಜೆಪಿಗೆ ಅನಿವಾರ್ಯವಾಗಿರುವುದರಿಂದ, ಬೇರೆ ಯಾರಾದರೊಬ್ಬ ರಾಜಕಾರಣಿ ಅಥವಾ ಒಂದು ರಾಜಕೀಯ ಪಕ್ಷ ಹೆಚ್ಚು ಉತ್ತಮ ಮತ್ತು ಸ್ವೀಕಾರಾರ್ಹ ಭಾರತೀಯ ರಾಷ್ಟ್ರವಾದದ ಮಾದರಿಯನ್ನು ಜನರ ಮುಂದಿಡಬಹುದು ಎಂಬ ಆತಂಕ ಸದಾ ಅದನ್ನು ಕಾಡುತ್ತಿರುತ್ತದೆ.

ಆದ್ದರಿಂದ ಭವಿಷ್ಯದಲ್ಲಿ ಬರಬಹುದಾದ ಯಾವುದೇ ಸವಾಲನ್ನು ಚಿಗುರಿನಲ್ಲಿಯೇ ಚಿವುಟಿ ಹಾಕಲು ಅದು ತುದಿಗಾಲಲ್ಲಿ ನಿಂತಿರುತ್ತದೆ. ತನ್ನ ಪ್ರತಿಯೋರ್ವ ಎದುರಾಳಿಯನ್ನೂ 'ರಾಷ್ಟ್ರೀಯ ಭದ್ರತೆಗೆ ಒಂದು ಬೆದರಿಕೆ, ಅವರು ಪಾಕಿಸ್ತಾನದ ಬೆಂಬಲಿಗರು, ಕಾಶ್ಮೀರದ ಬಗ್ಗೆ ಸಹಾನುಭೂತಿ ಹೊಂದಿರುವವರು ಮತ್ತು ಭಯೋತ್ಪಾದಕರು ಹಾಗೂ ನಕ್ಸಲೀಯರ ಬಗ್ಗೆ ಮೃದುಧೋರಣೆ ಹೊಂದಿರುವವರು' ಎಂದು ಚಿತ್ರಿಸುವುದು ಬಿಜೆಪಿ ಕಾರ್ಯತಂತ್ರದ ಅತ್ಯಗತ್ಯ ಅಂಗಭಾಗ.

ಆದ್ದರಿಂದ ಅರವಿಂದ ಕೇಜ್ರಿವಾಲ್ ನಕ್ಸಲನೆನಿಸಿಕೊಳ್ಳುತ್ತಾನೆ, ಬಿಹಾರದಲ್ಲಿ ನಿತೀಶ್ ಕುಮಾರ್‌ರ ವಿಜಯವು ಪಾಕಿಸ್ತಾನದಲ್ಲಿ ಸಂಭ್ರಮಾಚರಣೆಗೆ ಕಾರಣವಾಗಬಹುದೆನಿಸಿಕೊಳ್ಳುತ್ತದೆ, ರಾಹುಲ್ ಗಾಂಧಿ ಭಾರತ ವಿರೋಧಿಗಳ ಬಗ್ಗೆ ಸಹಾನುಭೂತಿ ಹೊಂದಿರುವವರಾಗುತ್ತಾರೆ ಮತ್ತು ಭಗತ್ ಸಿಂಗ್ ಹಾಗೂ ಸುಭಾಸ್ ಬೋಸ್‌ರಂತಹ ಐಕಾನುಗಳಿಗೆ ಪ್ರೇರಣೆ ನೀಡಿದ ಇಡೀ ಎಡ ಸಿದ್ಧಾಂತವನ್ನು ರಾಷ್ಟ್ರಕ್ಕೆ ಒಂದು ಬೆದರಿಕೆ ಎಂದು ಬ್ರಾಂಡ್ ಮಾಡಲಾಗುತ್ತದೆ.

ಆದರೆ, ಇತರರನ್ನು ರಾಷ್ಟ್ರವಿರೋಧಿ ಎಂದು ಬ್ರಾಂಡ್ ಮಾಡಲು ಬಿಜೆಪಿ ಬಳಸುವ ನೆಲೆಗಳನ್ನು ಕುರಿತ ಅದರ ದಾಖಲೆ ಮಾತ್ರ ಹಾಸ್ಯಾಸ್ಪದವಾಗಿದೆ. ಅದರ ಬ್ರಾಂಡಿನ ರಾಷ್ಟ್ರವಾದ ಎಂದರೆ ಸಾಮಾನ್ಯವಾಗಿ ಘೋಷಣೆ ಕೂಗುವುದು ಮತ್ತು ಕ್ಷುಲ್ಲಕ ರಾಜಕಾರಣ ಮಾಡುವುದು; ಬರೇ ಗದ್ದಲ ಒಳಗೆಲ್ಲ ಟೊಳ್ಳು. ಅದೊಂದು ಬರೇ ನಾಟಕ.

ನಿದರ್ಶನಕ್ಕೆ ಹೇಳುವುದಾದರೆ, ಅಫಜಲ್‌ಗುರು ಬಗ್ಗೆ ಸಹಾನುಭೂತಿ ಹೊಂದಿರುವವರನ್ನು ಬೆಂಬಲಿಸುವುದು ದೇಶದ್ರೋಹವಾದರೆ, ಅಫಜಲ್ ಗುರುವನ್ನು ನೇಣಿಗೆ ಹಾಕಿದ್ದನ್ನು 'ನ್ಯಾಯದ ಅಣಕ' ಎಂದು ಹೇಳುವ ಮೆಹಬೂಬಾ ಮುಫ್ತಿಯೊಂದಿಗಿನ ತನ್ನ ಮೈತ್ರಿಯನ್ನು ಪುನಶ್ಚೇತನಗೊಳಿಸಲು ಯತ್ನಿಸುವ ಬಿಜೆಪಿಯ ನಡೆಯನ್ನು ಏನೆಂದು ಕರೆಯಬೇಕು?

ವಿಶ್ವವಿದ್ಯಾಲಯವೊಂದರ ಕ್ಯಾಂಪಸ್‌ನಲ್ಲಿ ಸ್ವಾತಂತ್ರ್ಯ ಪರ ಘೋಷಣೆ ಕೂಗಿದ ವಿದ್ಯಾರ್ಥಿಗಳನ್ನು ಅಟ್ಟಾಡಿಸುವ ಬಿಜೆಪಿ, ತನ್ನದೇ ಆಡಳಿತದ ಕಾಶ್ಮೀರದಲ್ಲಿ ಇದನ್ನೇ ಉಗ್ರವಾದಿಗಳು ಮತ್ತು ಮೃದು ಪ್ರತ್ಯೇಕತಾವಾದಿಗಳು ಹೆಚ್ಚುಕಡಿಮೆ ನಿತ್ಯವೂ ಮಾಡುತ್ತಿರುವಾಗ ಅದರ ಬಗ್ಗೆ ಜಾಣಕುರುಡುತನ ತೋರುವಾಗ, ತನಗೆ ಸೂಕ್ತವೆನಿಸುವಂತಹ ದೇಶದ್ರೋಹ ಮತ್ತು ದೇಶಭಕ್ತಿಯ ವ್ಯಾಖ್ಯೆಯನ್ನು ಅದು ಹೇಗೆ ವಿವರಿಸುತ್ತದೆ? ರಾಷ್ಟ್ರವಿರೋಧಕ್ಕಾಗಿ ವಿದ್ಯಾರ್ಥಿ ನಾಯಕನೊಬ್ಬನನ್ನು ಬಂಧಿಸುವುದು ನ್ಯಾಯಸಮ್ಮತವೇ ಆದರೆ, ಮುಖ್ಯಮಂತ್ರಿಯೊಬ್ಬರ ಅಂತ್ಯಸಂಸ್ಕಾರವೇಳೆಯಲ್ಲಿ 'ಅಫಜಲ್ ಗುರು ಚಿರಾಯುವಾಗಲಿ' ಎಂಬ ಘೋಷಣೆ ಕೂಗಿದಾಗ ಮತ್ತು ಕಾಶ್ಮೀರದಲ್ಲಿ ಇಸ್ಲಾಮಿಕ್ ಸ್ಟೇಟ್ ಬಾವುಟಗಳನ್ನು ಹಾರಿಸಿದಾಗ ಅಲ್ಲಿನ ಉಪಮುಖ್ಯಮಂತ್ರಿ ರಾಜೀನಾಮೆ ನೀಡಬೇಕಾಗಿತ್ತು ಎಂದು ನಿರೀಕ್ಷಿಸುವುದರಲ್ಲಿ ಅರ್ಥವಿದ್ದೇ ಇದೆಯಲ್ಲವೇ?

'ದೇಶಭಕ್ತ' ಬಲಪಂಥೀಯರ ಕಣ್ಣಿನಲ್ಲಿ 'ರಾಷ್ಟ್ರವಾದಿ' ಎನಿಸಿಕೊಳ್ಳುವುದು ಯಾವತ್ತೂ ಆರಾಧ್ಯ. ರಾಷ್ಟ್ರವಾದದ ಅದರ ನಿರಂತರ ಬದಲಾಗುತ್ತಿರುವ ವ್ಯಾಖ್ಯೆಗೆ ಸರಿಹೊಂದಲು ನಾಶ್ಯ ಬಣ್ಣ ಬದಲಿಸುವ ಗೋಸುಂಬೆಯ ಸಾಮರ್ಥ್ಯ ಹೊಂದಿರಬೇಕಾಗುತ್ತದೆ. ಬಿಜೆಪಿ ಏನನ್ನು ಮಾಡುತ್ತಿದೆಯೋ ಅದು ದೇಶಭಕ್ತಿಯಾದರೆ, ಬಿಜೆಪಿ ದೇಶಭಕ್ತರು ಏನು ಹೇಳುತ್ತಾರೋ ಅದು ದೇಶಭಕ್ತಿಯಾದರೆ ಆಗ ಚುನಾವಣೆಯ ಫಲಿತಾಂಶಗಳೊಂದಿಗೆ ಆ ದೇಶಭಕ್ತಿಯ ಪರಿಕಲ್ಪನೆ ಕೂಡಾ ಗಣನೀಯವಾಗಿ ಬದಲಾಗುತ್ತಲೇ ಇರುತ್ತದೆ.

ಒಂದೆಡೆಯಲ್ಲಿ ಅದು ಪಾಕಿಸ್ತಾನದೊಂದಿಗೆ 'ಚಿಕನ್ ಬಿರಿಯಾನಿ ರಾಯಭಾರ' ಎಂದು ಪ್ರಧಾನಿಯನ್ನು ಅಪಹಾಸ್ಯ ಮಾಡುತ್ತದೆ. ಆದರೆ ಅಧಿಕಾರದಲ್ಲಿರುವಾಗ ನವಾಜ್ ಶರೀಫರೊಂದಿಗೆ ತಾನು ಮಾಡಿದ ಭೋಜನವನ್ನು ಹೆಮ್ಮೆಯಿಂದ ಎದೆಯುಬ್ಬಿಸಿ ಹೇಳಿಕೊಳ್ಳುತ್ತದೆ. ಹೀಗೆ ಪಾಕಿಸ್ತಾನದೊಂದಿಗಿನ ಮಾತುಕತೆಯನ್ನು ಬೆಂಬಲಿಸಿದರೆ ಅಥವಾ ವಿರೋಧಿಸಿದರೆ ನೀವು ರಾಷ್ಟ್ರವಿರೋಧಿಯೋ ಎನ್ನುವುದು ನಿಮಗೆ ಯಾವತ್ತೂ ತಿಳಿಯುವುದೇ ಇಲ್ಲ!

ಭಾರತೀಯರನ್ನು ಗುಂಡಿಕ್ಕಿ ಕೊಂದ ಆರೋಪ ಎದುರಿಸುತ್ತಿರುವ ಇಟಲಿಯ ನಾವಿಕರೊಂದಿಗೆ ಮಾಡಿಕೊಂಡ ಯಾವುದೇ ರಾಜಿಯ ವಿರುದ್ಧ ಅದು ಉಗ್ರವಾಗಿ ಪ್ರತಿಭಟಿಸುತ್ತದೆ. ಆದರೆ ಅಧಿಕಾರದಲ್ಲಿದ್ದಾಗ ಅದು ಮುಂಬೈ ಭಯೋತ್ಪಾದಕ ದಾಳಿ ಆರೋಪಿ ಡೇವಿಡ್ ಹೆಡ್ಲಿಗೆ ಕ್ಷಮಾದಾನ ನೀಡುತ್ತದೆ. ಭಾರತ ಒಂದು ಮೃದು ರಾಷ್ಟ್ರವಾಗಿರುವುದರ ವಿರುದ್ಧ ಉಗ್ರವಾಗಿ ಪ್ರತಿಭಟಿಸುತ್ತದೆ. ಆದರೆ ಅಧಿಕಾರದಲ್ಲಿದ್ದಾಗ ಅದು ಒತ್ತಡಕ್ಕೆ ಮಣಿದು ಮಸೂದ್ ಅಜರ್‌ನಂತಹ ಅಪಾಯಕಾರಿ ಭಯೋತ್ಪಾದಕನನ್ನು ಬಿಡುಗಡೆಗೊಳಿಸುತ್ತದೆ.

ಸತ್ಯ ಏನೆಂದರೆ, ಬಿಜೆಪಿಯ ದೇಶಭಕ್ತಿ ಮತ್ತು ರಾಷ್ಟ್ರವಾದದ ಪ್ರತಿಯೊಂದು ಕಾಲಕಾಲಿಕ ಉನ್ಮಾದದ ಹಿಂದೆ ಮುಂಬರಲಿರುವ ಚುನಾವಣೆಯೊಂದು ಇರುತ್ತದೆ. ಕೋಮು ನೆಲೆಯಲ್ಲಿ ಮತದಾರರನ್ನು ಧ್ರುವೀಕರಿಸುವ ಚುನಾವಣಾ ತುರ್ತಿನಿಂದಾಗಿ ಈ ಜ್ವರ ಕಾಣಿಸಿಕೊಳ್ಳುವಂತೆ ಮಾಡಲಾಗುತ್ತದೆ.

ಎದುರಾಳಿಗಳಿಗೆ ಕೆಟ್ಟ ಹೆಸರು ಕೊಡುವ ಮತ್ತು ಚುನಾವಣೆಯ ಮೇಲೆ ಪ್ರಭಾವ ಬೀರುವುದಕ್ಕಾಗಿ ಹಿಂದುತ್ವ ಮತ್ತು ರಾಷ್ಟ್ರವಾದದ ಗಿಲೊಟಿನ್‌ನಲ್ಲಿ ತಲೆಕತ್ತರಿಸುವ ಕ್ಲಾಸಿಕ್ ಬಿಜೆಪಿ ಕುತಂತ್ರದ ಉದಾಹರಣೆಗಳೆಂದರೆ ಜೆಎನ್‌ಯುನಲ್ಲಿ ಮೂಗು ತೂರಿಸಿದ್ದು ಮತ್ತು ಡೇವಿಡ್ ಹ್ಯಾಡ್ಲಿಯ ಸಾಕ್ಷ್ಯಹೇಳಿಕೆಯ ಬಳಿಕ ವಿಜಯದ ಸಂಕೇತ ತೋರಿಸಿದ್ದು.

ಐದು ರಾಜ್ಯಗಳ ಚುನಾವಣೆಗಳು ಇನ್ನೇನು ಬರಲಿವೆ. ಕೇರಳ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂಗಳಲ್ಲಿ ಬಿಜೆಪಿಯು ಎಡಪಕ್ಷಗಳನ್ನು, ಕಾಂಗ್ರೆಸ್ ಮತ್ತು ತೃಣಮೂಲ ಹೀಗೆ ಯಾವುದಾದರೊಂದು ಪಕ್ಷವನ್ನು ಎದುರಿಸಬೇಕು. ಕಾಕತಾಳೀಯ ಎಂಬಂತೆ ಈ ಎಲ್ಲ ರಾಜ್ಯಗಳಲ್ಲಿಯೂ ಗಣನೀಯ ಪ್ರಮಾಣದ ಮುಸ್ಲಿಂ ಜನಸಂಖ್ಯೆಯಿದೆ ಮತ್ತು ಇತರ ಧಾರ್ಮಿಕ ಸಮುದಾಯಗಳಿವೆ.

2011ರ ಜನಗಣತಿಯ ಪ್ರಕಾರ ರಾಷ್ಟ್ರ ಮಟ್ಟದಲ್ಲಿ 14.23% ಮುಸ್ಲಿಮರಿದ್ದರೆ, ಅಸ್ಸಾಂ ನಲ್ಲಿ 34.22% ಮತ್ತು ಪಶ್ಚಿಮ ಬಂಗಾಳದಲ್ಲಿ 27.01% ಇದ್ದಾರೆ. ಕೇರಳದಲ್ಲಿ 26.56% ಮುಸ್ಲಿಮರಿದ್ದಾರೆ, 18.38% ಕ್ರಿಶ್ಚಿಯನ್ನರಿದ್ದಾರೆ; ಅವರು ಒಟ್ಟು ಸೇರಿದರೆ ಹಿಂದೂಗಳ ಸಂಖ್ಯೆಯಾದ 54.73% ಕ್ಕೆ ಹತ್ತಿರವಾಗುತ್ತಾರೆ.

ಆದ್ದರಿಂದ ಬಿಜೆಪಿ ತನ್ನ ಬ್ರಹ್ಮಾಸ್ತ್ರಗಳನ್ನು ಪ್ರಯೋಗಿಸಿದೆ. ಎದುರಾಳಿಗಳನ್ನು ಹಿಂದೂ ವಿರೋಧಿಗಳು ಎಂದು ಬ್ರಾಂಡ್ ಮಾಡುವತ್ತ ಮತ್ತು ರಾಷ್ಟ್ರವಿರೋಧಿ ಶಕ್ತಿಗಳು, ಭಯೋತ್ಪಾದಕರು ಮತ್ತು ಅಲ್ಪಸಂಖ್ಯಾತರ ಬೆಂಬಲಿಗರು ಎಂದು ಅವರ ಹೆಸರು ಹಾಳುಮಾಡುವತ್ತ ತನ್ನ ಎಲ್ಲ ಶಕ್ತಿಯನ್ನು ಕೇಂದ್ರೀಕರಿಸುತ್ತಿದೆ.

'ನಿಮಗಿಂತ ನಾವು ಹೆಚ್ಚು ದೇಶಭಕ್ತರು' ಎಂಬ ಬಿಜೆಪಿ ಆಟವನ್ನು ಎರಡು ಅಂಶಗಳನ್ನು ಆಧರಿಸಿ ಗಮನಿಸಬಹುದು. ಮೊದಲು ಭಯೋತ್ಪಾದಕರ ಬಗೆಗಿನ ಗಾಳಿಸುದ್ದಿ ಸೇರಿದಂತೆ ಕ್ಷುಲ್ಲಕ ಪುರಾವೆಗಳ ಆಧಾರದಲ್ಲಿ ಒಂದು ದೈತ್ಯನನ್ನು ಸೃಷ್ಟಿಸುವುದು ಮತ್ತು ಅಪಪ್ರಚಾರ ನಡೆಸುವುದು. ಅನಂತರ ರಾಷ್ಟ್ರವಾದದ ವಿರೋಧದ ಅನುಕೂಲಕರ ಚಾವಟಿಯೊಂದಿಗೆ, ಪ್ರಶ್ನಾರ್ಹ ತೇಜೋವಧೆಯ ವಿರುದ್ಧ ಪ್ರತಿಭಟಿಸುವವರ ಮೇಲೆ ಧಾಳಿ ಮಾಡುವುದು.

ಇಶ್ರತ್ ಜಹಾನ್ ಆಯಿತು, ಬೀಫ್ ಆಯಿತು, ದಾದ್ರಿ ಆಯಿತು, ಮತ್ತೀಗ ಜೆಎನ್‌ಯು.

ಜೆಎನ್‌ಯುನ ಘಟನಾ ಸರಣಿಯನ್ನು ಗಮನಿಸಿ. ಅಫಜಲ್ ಗುರು ಸಾವಿನ ಮೂರನೇ ವರ್ಷಾಚರಣೆಯಂದು ಆಯೋಜಿಸಲಾದ ಕಾರ್ಯಕ್ರಮದಲ್ಲಿ ಭಾರತ ವಿರೋಧಿ ಘೋಷಣೆಗಳನ್ನು ಕೂಗಲಾಯಿತು. ಯಾರು ಕೂಗಿದರು ಅಥವಾ ಅಫಜಲ್ ಪರ ಸಭೆಯಲ್ಲಿ ಯಾರು ಗದ್ದಲ ಮಾಡಿದರು ಎಂಬುದು ಯಾರಿಗೂ ಗೊತ್ತಿಲ್ಲ, ಪರಸ್ಪರ ವಿರುದ್ಧ ಅಭಿಪ್ರಾಯ ನೀಡುವ ವೀಡಿಯೋಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಡಲಾಗಿದ್ದು, ಅವು ಮೂಲಭೂತವಾದಿ ಎಡ ಮತ್ತು ಎಬಿವಿಪಿ ಸಂಘಟನೆಗಳತ್ತ ಬೆರಳು ತೋರಿಸುತ್ತಿವೆ. ಆದರೆ, ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ನಯ್ಯ ಕುಮಾರ್‌ನನ್ನು ಬಂಧಿಸಿ ಆತನ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಲಾಗಿದೆ. ಈ ಆರೋಪಗಳನ್ನು ನ್ಯಾಯಾಲಯ ಎತ್ತಿ ಎಸೆಯುವ ಎಲ್ಲ ಸಾಧ್ಯತೆಯೂ ಇದೆ; ಆ ಮಾತು ಬೇರೆ.

ಕನ್ನಯ್ಯ ಯಾಕೆ ಜೈಲಿನಲ್ಲಿದ್ದಾನೆ ಎಂಬುದು ಯಾರಿಗೂ ಗೊತ್ತಿಲ್ಲ. ಆತ ಪ್ರತಿಭಟನಾ ಸಭೆಯಲ್ಲಿ ಘೋಷಣೆ ಕೂಗಿದನೇ? ಆತ ಪಾಕಿಸ್ತಾನವನ್ನು ಹೊಗಳಿದನೇ? ಅಥವಾ ಭಾರತವು ನಾಶವಾಗುವ ತನಕವೂ ಅದರ ವಿರುದ್ಧ ಯುದ್ಧಕ್ಕೆ ಕರೆಕೊಟ್ಟನೇ? ವಿವಿ ಚುನಾವಣೆಯಲ್ಲಿ ಭಾರೀ ಅಂತರದಲ್ಲಿ ಎಬಿವಿಪಿ ಅಭ್ಯರ್ಥಿಯನ್ನು ಸೋಲಿಸಿದ್ದು ಅಥವಾ ಆರ್‌ಎಸ್‌ಎಸ್ ವಿರುದ್ಧ ಹರಿಹಾಯ್ದದ್ದು ಬಿಟ್ಟರೆ ಆತನ ನಿಜವಾದ ತಪ್ಪು ಏನು?

ಆತನ ಭಾಷಣ ಕೇಳಿದರೆ ನಿಮಗಿದು ತಿಳಿಯಬಹುದು. ಕನ್ನಯ್ಯನ ಬಂಧನದ ಹಿಂದೆ ಇರುವ ಒಂದೇ ಒಂದು ಸಂಭಾವ್ಯ ಕಾರಣ ಎಂದರೆ– ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತನ್ನು (ಎಬಿವಿಪಿ) ಮತ್ತು ಅದರ ಸೈದ್ಧಾಂತಿಕ ಗುರುಗಳನ್ನು ಮೆಚ್ಚಿಸುವುದು; ಈ ಕಾರಣಕ್ಕಾಗಿ ಆತನನ್ನು ಶಿಕ್ಷಿಸಲಾಗಿದೆ. ಆದರೂ ಈ ಅತಾರ್ಕಿಕ, ಅತಿಯೆನಿಸುವ ಬಲಪ್ರಯೋಗವನ್ನು ಪ್ರತಿಭಟಿಸುವವರನ್ನು ರಾಷ್ಟ್ರವಿರೋಧಿಗಳು ಎಂದು ಹಣೆಪಟ್ಟಿ ಅಂಟಿಸಲಾಗುತ್ತಿದೆ.

ಭಾಜಪದ ಹೊರಗಿನ ಪ್ರತಿಯೊಬ್ಬ ರಾಜಕಾರಣಿ, ಜೆಎನ್‌ಯುನ ವಿದ್ಯಾರ್ಥಿ ಮತ್ತು ಕಮ್ಯುನಿಸ್ಟ್ ಕಾರ್ಯಕರ್ತನನ್ನು ರಾಷ್ಟ್ರವಿರೋಧಿ ಎಂದು ಕರೆಯುವುದು ನಗೆ ತರುವ ವಿಚಾರ. ಅದು ಪ್ರಜಾತಂತ್ರದ ಪರಿಕಲ್ಪನೆಗೇ ಮಾತ್ರವಲ್ಲ, ಸಂವಿಧಾನದಲ್ಲಿ ಖಾತ್ರಿಪಡಿಸಲಾಗಿರುವ ಹಕ್ಕುಗಳಿಗೇ ವಿರುದ್ಧವಾದುದು.

ಎಕನಾಮಿಕ್ ಟೈಮ್ಸ್‌ನಲ್ಲಿ ಟಿ.ಕೆ.ಅರುಣ್ ವಾದಿಸುವ ಹಾಗೆ, ಪ್ರತಿಷ್ಠಿತರ ಸೀಮೆಯಾಚೆಗೆ ಸಮಾಜದ ವಿಸ್ತೃತ ವರ್ಗವನ್ನು ಅಪ್ಪಿಕೊಳ್ಳಲು, ಒಳಗೊಳಿಸಿಕೊಳ್ಳುವಿಕೆಯನ್ನು ಮತ್ತು ಸಬಲೀಕರಣವನ್ನು ವಿಸ್ತರಿಸುವ ಮೂಲಕ ಭಾರತದ ಪ್ರಜಾತಂತ್ರವನ್ನು ಬಲಪಡಿಸುವುದು ನಿಜವಾದ ರಾಷ್ಟ್ರವಾದ. ತಮ್ಮ ಕನಿಷ್ಠ ಹಕ್ಕುಗಳಿಗಾಗಿ ಹೋರಾಡುವ ಆದಿವಾಸಿಗಳನ್ನು, ಹಾಗೆಯೇ ಆದಿವಾಸಿ ಮಹಿಳೆಯರ ಮೇಲಣ ದೌರ್ಜನ್ಯದ ವಿರುದ್ಧ ಪೊಲೀಸರಿಗೆ ದೂರು ನೀಡುವವರನ್ನು ರಾಷ್ಟ್ರವಿರೋಧಿಗಳು ಎಂದು ಬ್ರಾಂಡ್ ಮಾಡುವುದು ರಾಷ್ಟ್ರವಾದವಲ್ಲ, ಕ್ಯಾಂಪಸ್ ರಾಜಕೀಯದ ಬಿಸಿಯಲ್ಲಿ ಪ್ರಜಾಸತ್ತಾತ್ಮಕ ಸ್ಥಾನಗಳತ್ತ ದಾರಿ ಮಾಡಿಕೊಂಡು ಹೋಗಲೆತ್ನಿಸುವ ಯುವ ವಿದ್ಯಾರ್ಥಿಸಮುದಾಯಕ್ಕೆ ರಾಷ್ಟ್ರವಿರೋಧಿ ಎಂದು ಹಣೆಪಟ್ಟಿ ಅಂಟಿಸುವುದು ರಾಷ್ಟ್ರವಾದವಲ್ಲ.

ವಾಸ್ತವದಲ್ಲಿ ಭಾರತ ರಾಷ್ಟ್ರವನ್ನು ಒಂದು ಹಿಂದೂ ಪ್ರತಿಷ್ಠಿತ ರೂಪಕ್ಕೆ ತಗ್ಗಿಸುವ ಮೂಲಕ ಅಂತಹ ದೇಶಭಕ್ತರು ಭಾರತಕ್ಕೆ ಮತ್ತು ಜಾಗತಿಕ ಸ್ತರದಲ್ಲಿ ಅದರ ಉನ್ನತಿಗೆ ಗಂಭೀರ ಹಾನಿ ಮಾಡುತ್ತಿದ್ದಾರೆ. ಕಾಶ್ಮೀರಿ ವಿದ್ಯಾರ್ಥಿಗಳು ಭಾರತದ ಕಾಶ್ಮೀರೇತರ ಭಾಗದಲ್ಲಿನ ಕ್ಯಾಂಪಸ್‌ಗಳಲ್ಲಿ ಅಧ್ಯಯನ ಮಾಡುವುದನ್ನು ಆಯ್ಕೆಮಾಡಿಕೊಳ್ಳುವುದಕ್ಕಿಂತಲೂ ಈ ಹುಸಿ ರಾಷ್ಟ್ರವಾದದ ಮತಾಂಧರಿಂದ ಭಾರತಕ್ಕೆ ರಕ್ಷಣೆ ಬೇಕಾಗಿದೆ.

ಆದರೆ ಬಿಜೆಪಿ ಅದನ್ನು ಪಡೆಯುವ ಸಾಧ್ಯತೆ ಕಡಿಮೆ. ಇನ್ನೇನು ಉತ್ತರಪ್ರದೇಶದ ಚುನಾವಣೆ ಬರಲಿದೆ. ಮತ್ತೊಂದು ಸುತ್ತಿನ ಪರಸ್ಪರ ಬೈದಾಟ ಮತ್ತು ಬ್ರಾಂಡ್ ಮಾಡುವ ಕೆಲಸ ಶುರುವಾಗಲಿದೆ ಎಂಬುದಂತೂ ಖಚಿತ.

ಸದ್ಯದಲ್ಲಿಯೇ ರಾಮಮಂದಿರ ನೆಚ್ಚಿನ ವಿಷಯವಾಗಲಿದೆ. ಅಲ್ಲದೆ, ದೇಶವಿರೋಧಿಗಳು ಯಾರು ಎಂಬ ಹೊಸ ವ್ಯಾಖ್ಯೆಯೂ ಬರಲಿದೆ.

ಬೀಫ್ ತಿಂದುದಕ್ಕೆ, ನ್ಯಾಯಬಾಹಿರ ನೇಣುಶಿಕ್ಷೆಗಳನ್ನು ಬೆಂಬಲಿಸದ್ದಕ್ಕೆ, ಆಮೀರನ ಸಿನಿಮಾ ವೀಕ್ಷಿಸಿದ್ದಕ್ಕೆ ಅಥವಾ ಕಾಶ್ಮೀರಿಗಳದ್ದೂ ಸೇರಿದಂತೆ ಪ್ರತಿಯೊಬ್ಬ ಭಾರತೀಯನ ವಾಕ್ ಸ್ವಾತಂತ್ರ್ಯ ಮತ್ತು ಸಮಾನತೆಯ ಹಕ್ಕನ್ನು ಬೆಂಬಲಿಸಿದ್ದಕ್ಕೆ ನಿಮ್ಮನ್ನು ದೇಶವಿರೋಧಿ ಎಂದು ಕರೆಯುವುದಿಲ್ಲ.


ದೇಶಭಕ್ತಿಯ ಮುಂದಿನ ಬಿಗ್‌ಬಾಸ್ ಋತು ಶುರುವಾದಾಗ, 'ನಾವು ದೇವಸ್ಥಾನ ಕಟ್ಟುತ್ತಿದ್ದೇವೆ, ತ್ರಿಶೂಲ ತಿರುಗಿಸುತ್ತಿದ್ದೇವೆ, ಘೋಷಣೆ ಕೂಗುತ್ತಿದ್ದೇವೆ, ಅಲ್ಪಸಂಖ್ಯಾತರನ್ನು ನಿಂದಿಸುತ್ತಿದ್ದೇವೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗದವರು ಹೊಸ ದೇಶವಿರೋಧಿಗಳಾಗುತ್ತಾರೆ.

ಮಂದಿರ 'ಅಲ್ಲಿಯೇ' (ಮಂದಿರ ವಹೀಂ) ಕಟ್ಟುವ ಪ್ರತಿಜ್ಞೆ ಯಾರು ಮಾಡುತ್ತಾರೋ ಅವರು ಮತ್ತೆ ಎಂದಿನಂತೆ ರಾಷ್ಟ್ರವಾದಿಗಳೆನಿಸಿಕೊಳ್ಳುತ್ತಾರೆ.

■ ಸಂದೀಪನ್ ಶರ್ಮಾ (ಕೃಪೆ: 'ಫಸ್ಟ್‌ಪೋಸ್ಟ್')

ಕನ್ನಡಕ್ಕೆ: ಶ್ರೀನಿವಾಸ ಕಾರ್ಕಳ







ಮಂಡ್ಯ: ಜೆಡಿಎಸ್ ಕೋಟೆಯಲ್ಲಿ ಕಾಂಗ್ರೆಸ್‌ನ ಜಿದ್ದಾಜಿದ್ದಿ

ಫೆಬ್ರವರಿ 20ರ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣೆಗೆ ಮಂಡ್ಯ ಅಕ್ಷರಶಃ ರಂಗೇರಿದೆ. ಮತ್ತೆ ಅಧಿಕಾರ ಹಿಡಿಯುವ ಮೂಲಕ ಮಂಡ್ಯ ಜೆಡಿಎಸ್‌ನ ಭದ್ರಕೋಟೆ ಎಂಬುದನ್ನು ಸಾಬೀತುಪಡಿಸುತ್ತೇವೆ ಎಂದು ಜೆಡಿಎಸ್ ನಾಯಕರು ತೊಡೆ ತಟ್ಟಿದ್ದರೆ, ಜೆಡಿಎಸ್ ಭದ್ರಕೋಟೆಯನ್ನು ಛಿದ್ರ ಮಾಡಿ ಕಾಂಗ್ರೆಸ್ ಬಾವುಟ ಹಾರಿಸಿಯೇ ಸಿದ್ಧ ಅಂತ ಕಾಂಗ್ರೆಸ್ಸಿಗರು ರಣಕಹಳೆ ಮೊಳಗಿಸಿದ್ದಾರೆ.

ಇದುವರೆಗೂ 40 ಸದಸ್ಯ ಬಲವಿದ್ದ ಮಂಡ್ಯ ಜಿಲ್ಲಾ ಪಂಚಾಯತಿಗೆ ಈ ಬಾರಿ ಹೊಸದಾಗಿ ಲಕ್ಷ್ಮೀಸಾಗರ ಎಂಬ ಕ್ಷೇತ್ರ ಉದಯಿಸಿ 41 ಕ್ಷೇತ್ರವಾಗಿದೆ. ಕಳೆದ ಬಾರಿ ಮಂಡ್ಯ ಜಿ.ಪಂ.ನಲ್ಲಿ ಜೆಡಿಎಸ್ ಪಕ್ಷವೇ ಅಧಿಕಾರ ಹಿಡಿದಿತ್ತು. ಶತಾಯಗತಾಯ ಈ ಬಾರಿ ಜಿ.ಪಂ.ನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲೇಬೇಕು ಎಂದು ಸಿಎಂ ಸಿದ್ದರಾಮಯ್ಯ ಫರ್ಮಾನು ಹೊರಡಿಸಿರುವುದರಿಂದ, ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಮುಖಂಡರು ಮೈಚಳಿ ಬಿಟ್ಟು ಪ್ರಚಾರದಲ್ಲಿ ತೊಡಗಿದ್ದಾರೆ. ಇದುವರೆಗಿನ ವಾತಾವರಣ ನೋಡಿದರೆ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದ ಅಭ್ಯರ್ಥಿಗಳೇ ಕಾಂಗ್ರೆಸ್ ಅಭ್ಯರ್ಥಿಗಳಿಗಿಂತ ಒಂದು ಕೈ ಮುಂದಿದ್ದಾರೆ. ಕಾಂಗ್ರೆಸ್‌ನಲ್ಲಿ ಬಣ ರಾಜಕಾರಣದ್ದೇ ಕಾರುಬಾರು. ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಎಲ್.ಆರ್.ಶಿವರಾಮೇಗೌಡ ಜೆಡಿಎಸ್‌ನ ಅಪ್ಪಾಜಿಗೌಡನ ಎದುರು ಮಕಾಡೆ ಮಲಗಿದ್ದೇ ಇದಕ್ಕೆ ಸಾಕ್ಷಿ. ಅದೇ ತರಹ ಜಿ.ಪಂ. ಮತ್ತು ತಾ.ಪಂ. ಅಖಾಡದಲ್ಲಿರುವ ಕಾಂಗ್ರೆಸ್ ಅಭ್ಯರ್ಥಿಗಳ ಸೋಲಿಗೆ ಸ್ವಾರ್ಥ ಕಾಂಗ್ರೆಸ್ ನಾಯಕರೇ ಮುಳುವಾದರೆ ಅಚ್ಚರಿ ಪಡಬೇಕಿಲ್ಲ. ಜಿಲ್ಲಾ ಉಸ್ತುವಾರಿ ಕಮ್ ವಸತಿ ಸಚಿವರಾಗಿರುವ ಅಂಬರೀಶ್ ಸೋಮಾರಿತನಕ್ಕೆ ಮಂಡ್ಯದ ಮತದಾರರು ಬೇಸತ್ತಿದ್ದಾರೆ. ಅಂಬರೀಶ್ ಕಾರಣದಿಂದ ಈ ಬಾರಿಯೂ ಜೆಡಿಸ್ ಅಧಿಕಾರ ಹಿಡಿಯುವ ಸಾಧ್ಯತೆಗಳೇ ಹೆಚ್ಚಾಗಿ ಕಾಣುತ್ತಿದೆ.

ಮಂಡ್ಯ ತಾಲೂಕು

ಮಂಡ್ಯ ತಾಲೂಕಿನಲ್ಲಿ 7 ಜಿ.ಪಂ. ಕ್ಷೇತ್ರಗಳಿವೆ. ಸಚಿವ ಅಂಬರೀಶ್ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೂ ಜೆಡಿಎಸ್ ಅಭ್ಯರ್ಥಿಗಳೇ ಹೆಚ್ಚಿನ ಸ್ಥಾನ ಪಡೆಯುವ ಹುಮ್ಮಸ್ಸಿನಲ್ಲಿದ್ದಾರೆ. ಬೂದನೂರು ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಯೋಗೇಶ್ ಹಾಗೂ ಕಾಂಗ್ರೆಸ್‌ನ ಶಿವಕುಮಾರ್ ಅಲಿಯಾಸ್ ಉಮ್ಮಡಹಳ್ಳಿ ಶಿವಪ್ಪ ನಡುವೆ ಬಿಗ್‌ಫೈಟ್ ನಡೆಯುತ್ತಿದೆ. ಬೆಂಗಳೂರಿನ ಉದ್ಯಮಿಯಾಗಿರುವ ಯೋಗೇಶ್‌ಗೆ 'ಮಾಜಿ ಶಾಸಕ ಎಂ.ಶ್ರೀನಿವಾಸ್‌ರ ಅಳಿಯ' ಎನ್ನುವ ಒಕ್ಕಣೆಯೇ ಬಹುದೊಡ್ಡ ಶ್ರೀರಕ್ಷೆ. ಜೊತೆಗೆ ಎಚ್.ಡಿ.ಕುಮಾರಸ್ವಾಮಿ ಕೂಡಾ ಪ್ರಚಾರ ನಡೆಸಿ ಹೋಗಿದ್ದಾರೆ. ಕಾಂಗ್ರೆಸ್‌ನ ಶಿವಕುಮಾರ್ ಸಖತ್ ಫೈಟ್ ನೀಡುತ್ತಿದ್ದಾನಾದರು ಅಂಬಿ ಭಂಟ ಅಮರಾವತಿ ಚಂದ್ರಶೇಖರ್‌ನ ಸರ್ವಾಧಿಕಾರಿ ಧೋರಣೆಯಿಂದ ಬೇಸತ್ತಿರುವ ಸ್ಥಳೀಯ ಕಾಂಗ್ರೆಸ್ಸಿಗರು ತಟಸ್ಥರಾಗುವ ಸೂಚನೆ ರವಾನಿಸಿದ್ದಾರೆ. ಆದಾಗ್ಯೂ ಉಮ್ಮಡಹಳ್ಳಿ ಶಿವಕುಮಾರ್ ತನಗಿರುವ ಕಾಂಟಾಕ್ಸ್ ಬಳಸಿ ಕ್ಷೇತ್ರದಲ್ಲಿ ಭರ್ಜರಿ ಹವಾ ಎಬ್ಬಿಸುವ ಮೂಲಕ ಯೋಗೇಶ್‌ಗೆ ಬೆವರು ಹರಿಸುತ್ತಿದ್ದಾನೆ. ದಳದ ಬಂಡಾಯ ಅಭ್ಯರ್ಥಿಯಾಗಿ ಗೌಡಗೆರೆ ಪುಟ್ಟಸ್ವಾಮಿ ಕಣದಲ್ಲಿರೋದು ಯೋಗೇಶ್ ಪಾಲಿಗೆ ಮುಳ್ಳಾಗಬಹುದು.

ಬಸರಾಳು ಜಿ.ಪಂ. ಕ್ಷೇತ್ರದಲ್ಲಿ ಬಂಡಾಯ ಜಾ.ದಳ ಅಭ್ಯರ್ಥಿ ಸಜ್ಜನ ಚಂದಗಾಲು ಶಿವಣ್ಣನ ಹೆಸರು ಹೆಚ್ಚಾಗಿ ಸದ್ದು ಮಾಡುತ್ತಿದೆ. ಜೆಡಿಎಸ್‌ನ ಅಧಿಕೃತ ಅಭ್ಯರ್ಥಿ ಕಂಬದಹಳ್ಳಿ ಪುಟ್ಟಸ್ವಾಮಿ, ಶಾಸಕ ಚಲುವರಾಯಸ್ವಾಮಿಯ ಆಪ್ತ, ಕಳೆದ ಚುನಾವಣೆಯಲ್ಲಿ ಕೇವಲ 5 ಮತಗಳಿಂದ ಸೋತಿರುವ ಅನುಕಂಪ ಎದ್ದರೆ ಆತ ಗೆಲ್ಲಬಹುದು. ಆದರೆ ಅಂಥಾ ವಾತಾವರಣ ಕಾಣುತ್ತಿಲ್ಲ, ಜೆಡಿಎಸ್ ಟಿಕೆಟ್ ಕೇಳಿದ್ದ ಚಂದಗಾಲು ಶಿವಣ್ಣ ಮಾಜಿ ಶಾಸಕ ಕೆರಗೋಡು ತಮ್ಮಣ್ಣನ ಸಹೋದರ. ಜೆಡಿಎಸ್ ಟಿಕೆಟ್ ಕೈತಪ್ಪಿದ್ದರಿಂದ ಬಂಡಾಯವಾಗಿ ಸ್ಪರ್ಧಿಸಿರುವ ಚಂದಗಾಲು ಶಿವಣ್ಣನಿಗೆ ಗ್ರಾ.ಪಂ. ಅಧ್ಯಕ್ಷ ಮುದ್ದನಘಟ್ಟ ಮಹಾಲಿಂಗಪ್ಪ ಹಾಗೂ ತಾ.ಪಂ. ಮಾಜಿ ಸದಸ್ಯ ತಿಮ್ಮೇಗೌಡ ಬೆಂಬಲ ನೀಡಿರುವುದರಿಂದ ಶಿವಣ್ಣನಿಗೆ ವಿಜಯಮಾಲೆ ಬೀಳಬಹುದು.

ಕೆರಗೋಡು ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ರಾಣಿ ಸಿದ್ದರಾಜು ಹಾಗೂ ಕಾಂಗ್ರೆಸ್‌ನ ಸುಗಂಧ ಗುರುಪ್ರಸಾದ್ ನಡುವೆ ನೇರ ಹಣಾಹಣಿ ನಡೆಯುತ್ತಿದೆ. ಜೆಡಿಎಸ್ ಪ್ರಾಬಲ್ಯದ ಈ ಕ್ಷೇತ್ರದಲ್ಲಿ ದಸಂಸ ಹೋರಾಟಗಾರ ಗುರುಪ್ರಸಾದ್‌ರ ಪತ್ನಿ ಸುಗಂಧ ಗೆಲ್ಲುವ ಅಭ್ಯರ್ಥಿ ಎಂದೇ ಅಳೆಯಲಾಗುತ್ತಿದೆ. ಕಳೆದ ಹಲವು ದಶಕಗಳಿಂದ ಹೋರಾಟಗಾರನಾಗಿ ಹೆಸರು ಮಾಡಿರುವ ಗುರುಪ್ರಸಾದ್ ನಾಮಬಲ ಅವರಿಗೆ ಪ್ಲಸ್ ಪಾಯಿಂಟ್. ಆದಾಗ್ಯೂ ಫಲಿತಾಂಶ 50-50 ಎನ್ನುವಂತಿದೆ.

ದುದ್ದ ಜಿ.ಪಂ. ಕ್ಷೇತ್ರದಲ್ಲಿ ಜೆಡಿಸ್‌ನಿಂದ ಸುಧಾ ಜಯಶಂಕರ್ ಹಾಗೂ ಕಾಂಗ್ರೆಸ್‌ನಿಂದ ರೈತನಾಯಕ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಬೆಂಬಲಿಗ ಶ್ಯಾಮ್‌ಸುಂದರ್ ತಾಯಿ ಎಚ್.ಕೆ.ಲಲಿತಮ್ಮ ಸ್ಪರ್ಧಿಸಿದ್ದಾರೆ. ಜೆಡಿಎಸ್ ಪ್ರಾಬಲ್ಯದ ಈ ಕ್ಷೇತ್ರದಲ್ಲಿ ಕಳೆದ ಬಾರಿ 5 ರೂ. ವೈದ್ಯ ಎಂದೇ ಖ್ಯಾತರಾದ ಡಾ.ಶಂಕರಲಿಂಗೇಗೌಡ ಗೆದ್ದಿದ್ದರು. ಈ ಬಾರಿಯೂ ಸಖತ್ ಫೈಟ್ ನಡೆದಿದ್ದು ಅಂತಿಮವಾಗಿ ಜೆಡಿಎಸ್ ಅಭ್ಯರ್ಥಿಯೇ ಗೆಲುವು ಸಾಧಿಸುವ ಲಕ್ಷಣಗಳು ಕಾಣಿಸುತ್ತಿವೆ.

ಹೊಳಲು ಜಿ.ಪಂ. ಕ್ಷೇತ್ರ ಸಾಕಷ್ಟು ಸದ್ದು ಮಾಡುತ್ತಿದೆ. ಏಕೆಂದರೆ ಮುಡಾಗೆ 5 ಕೋಟಿ ರೂ. ವಂಚಿಸಿದ ಪ್ರಕರಣದ ಆರೋಪಿ ಅಂಬರೀಶ್ ಬೆಂಬಲಿಗ ಕೆಬ್ಬಳ್ಳಿ ಆನಂದ ತನ್ನ ಪತ್ನಿ ರಾಣಿಗೆ ಟಿಕೆಟ್ ಕೇಳಿದ್ದ. ಆದರೆ ಕಾಂಗ್ರೆಸ್ ಟಿಕೆಟ್ ಎಪಿಎಂಸಿ ಮಾಜಿ ಅಧ್ಯಕ್ಷ ಮಾದೇಗೌಡರ ಪತ್ನಿ ಸಾಕಮ್ಮನವರ ಪಾಲಾಗಿದ್ದರಿಂದ ಕನಲಿ ಕೆಂಡವಾದ ಆನಂದ್ ಹೆಂಡತಿ ರಾಣಿಯನ್ನು ಬಂಡಾಯ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದಾನೆ. ತನ್ನಲ್ಲಿರುವ ಹಣಬಲದಿಂದ ಚುನಾವಣೆ ಗೆಲ್ಲಲು ಹೊರಟಿರುವ ಕೆಬ್ಬಳ್ಳಿ ಆನಂದನಿಗೆ ಒಕ್ಕಲಿಗರ ಸಂಘದ ನಿರ್ದೇಶಕ ಎಚ್.ಎಲ್.ಶಿವಣ್ಣನ ಸೊಸೆ ಜೆಡಿಸ್ ಅಭ್ಯರ್ಥಿ ಅನುಪಮ ಕುಮಾರಿ ಸಖತ್ ಫೈಟ್ ನೀಡುತ್ತಿದ್ದಾರೆ.

ಕೊತ್ತತ್ತಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಾಂಟ್ರಾಕ್ಟರ್ ವೈ.ಕೆ.ಕುಮಾರ್ ಆರ್ಭಟ ಹೆಚ್ಚಾಗಿದೆ. ಹಾಗೆಯೇ ಕಾಂಗ್ರೆಸ್ ಅಭ್ಯರ್ಥಿ ಯಲಿಯೂರು ರಾಮಲಿಂಗಯ್ಯ ಕೂಡ ಪ್ರಥಮ ದರ್ಜೆ ಗುತ್ತಿಗೆದಾರ. ಈ ಹಿಂದೆ ಸೋತಿರುವ ರಾಮಲಿಂಗಯ್ಯನ ಪರ ಈ ಬಾರಿಯೂ ಕ್ಷೇತ್ರದಲ್ಲಿ ಅನುಕಂಪ ಕಾಣುತ್ತಿಲ್ಲ. ಇಲ್ಲೂ



ಕೂಡ ಜೆಡಿಎಸ್‌ಗೆ ಗೆಲುವಿನ ಅವಕಾಶ ಹೆಚ್ಚು.

ತಗ್ಗಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಸಿ.ಎಂ. ಸಿದ್ದರಾಮಯ್ಯ ಕುಲಬಾಂಧವ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಕೆ.ಎಸ್.ನಾಗರಾಜು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು ಜೆಡಿಎಸ್ ಅಭ್ಯರ್ಥಿ ಡಿ.ಮಂಜುನಾಥಗಿಂತ ಸಾಕಷ್ಟು ಮುಂದಿದ್ದಾರೆ. ಇಲ್ಲಿ ಕಾಂಗ್ರೆಸ್‌ನ ಕೆ.ಎಸ್.ನಾಗರಾಜು ವಿಜಯಿಯಾಗುವ ಛಾನ್ಸ್ ಹೆಚ್ಚು.

ಶ್ರೀರಂಗಪಟ್ಟಣ ತಾಲೂಕು

ಶ್ರೀರಂಗಪಟ್ಟಣ ತಾಲೂಕಿನಲ್ಲಿ 4 ಜಿ.ಪಂ. ಕ್ಷೇತ್ರಗಳಿದ್ದು ಜೆಡಿಎಸ್ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಹಾಗೂ ಕಾಂಗ್ರೆಸ್ ನಾಯಕ ರವೀಂದ್ರ ಶ್ರೀಕಂಠಯ್ಯ ನಡುವೆ ಪ್ರಾಬಲ್ಯಕ್ಕಾಗಿ ಜಂಗೀಕುಸ್ತಿಯೇ ನಡೆಯುತ್ತಿವೆ.

ಕೆ.ಶೆಟ್ಟಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಹುರಿಯಾಳು ಗುತ್ತಿಗೆದಾರ ಎಂ.ಸಿ. ಮರಿಯಪ್ಪ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಬಡ್ಡಿ ವ್ಯಾಪಾರಿ ಕೆ.ಸಿ.ಸೋಮಶೇಖರ್ ನಡುವೆ ನೇರ ಹಣಾಹಣಿ ನಡೆಯುತ್ತಿದೆ. ಇದೇ ಕ್ಷೇತ್ರದಿಂದ ಅಂಬಿ ಬೆಂಬಲಿಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗರಾಜು ತನ್ನ ಮಗ ದರ್ಶನ್‌ಗೆ ಟಿಕೆಟ್ ಕೇಳಿದ್ದರು. ಆದರೆ ರವೀಂದ್ರ ಶ್ರೀಕಂಠಯ್ಯ ತನ್ನ ಬೆಂಬಲಿಗ ಕೆ.ಸಿ. ಸೋಮಶೇಖರ್ ಅಭ್ಯರ್ಥಿಯಾಗಿಸುವಲ್ಲಿ ಯಶಸ್ವಿಯಾಗಿದ್ದರು. ಟಿಕೆಟ್ ಕೇಳಿದ್ದ ದರ್ಶನ್ ಹಾಗೂ ಭಾಸ್ಕರ್ ಕಾಂಗ್ರೆಸ್‌ಗೆ ಉಲ್ಟಾ ಹೊಡೆದರೆ ಜೆಡಿಎಸ್ ಅಭ್ಯರ್ಥಿ ಮರಿಯಪ್ಪನವರಿಗೆ ಅವಕಾಶ ಸಿಗಲಿದೆ.

ಶ್ರೀರಂಗಪಟ್ಟಣ ಕಸಬಾ ಜಿ.ಪಂ. ಕ್ಷೇತ್ರದಲ್ಲಿ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ರಜನಿ ಸುರೇಶ್ ಜೆಡಿಎಸ್ ಅಭ್ಯರ್ಥಿ. ಕಾಂಗ್ರೆಸ್‌ನಿಂದ ಕಾವ್ಯ ಆಯ್ಕೆ ಬಯಸಿದ್ದಾರೆ. ರೈತಸಂಘದ ಮತಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಕಾಂಗ್ರೆಸ್ ಹಾಗೂ ರೈತಸಂಘ ಮೈತ್ರಿ ಆಗಿರುವುದರಿಂದ ಇದರ ಲಾಭ ಕಾಂಗ್ರೆಸ್ ಅಭ್ಯರ್ಥಿಗೆ ಸಂಪೂರ್ಣವಾಗಿ ಸಿಕ್ಕರೆ ಕಾಂಗ್ರೆಸ್‌ಗೆ ಲಾಭ. ಆದರೆ ರಜನಿ ಸುರೇಶ ಕೂಡ ಸಖತ್ ಫೈಟ್ ನೀಡುತ್ತಿದ್ದಾರೆ.

ಬೆಳಗೊಳ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನ ಪದ್ಮಾನಾರಾಯಣ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಸವಿತಾ ಲೋಕೇಶ ನಡುವೆ ಸಮಬಲದ ಹೋರಾಟ ನಡೆಯುತ್ತಿದೆ. ರವೀಂದ್ರ ಶ್ರೀಕಂಠಯ್ಯನ ಪ್ರಾಬಲ್ಯ ಈ ಭಾಗದಲ್ಲಿ ಹೆಚ್ಚಾಗಿರುವುದು ಹಾಗೂ ರೈತಸಂಘದ ಪ್ರಭಾವ ಸೇರಿದರೆ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸವಿತಾ ಗೆಲ್ಲುವ ಸಾಧ್ಯತೆ ಅಧಿಕ.

ಅರಕೆರೆ ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯ ಹೆಚ್ಚು. ಜೆಡಿಎಸ್ ಅಭ್ಯರ್ಥಿ ಪ್ರಭಾವತಿ ಪ್ರಕಾಶ ಹಾಗೂ ಕಾಂಗ್ರೆಸ್‌ನ ಸವಿತಾ ಇಬ್ಬರು ಈ ಕ್ಷೇತ್ರದ ಗಾಮನಹಳ್ಳಿ ಗ್ರಾಮದವರು. ಇಬ್ಬರ ನಡುವೆ ಸಾಕಷ್ಟು ಫೈಟ್ ನಡೆಯುತ್ತಿದ್ದು, ಈ ಕ್ಷೇತ್ರದಲ್ಲಿ ರವೀಂದ್ರ ಶ್ರೀಕಂಠಯ್ಯನವರ ಕುಟುಂಬದ ಹಿಡಿತ ಜೋರಾಗಿದ್ದು ಕಾಂಗ್ರೆಸ್ ಅಭ್ಯರ್ಥಿಗೆ ವರದಾನವಾಗಲಿದೆ.

ಪಾಂಡವಪುರ ತಾಲೂಕು

ಪಾಂಡವಪುರ ತಾಲೂಕಿನಲ್ಲಿ 5 ಜಿ.ಪಂ. ಕ್ಷೇತ್ರಗಳಿವೆ. ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಕಾಂಗ್ರೆಸ್ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು 3 ಜಿ.ಪಂ. ಕ್ಷೇತ್ರಗಳಲ್ಲಿ ಸರ್ವೋದಯ ಕರ್ನಾಟಕ ಪಕ್ಷದಿಂದ ಅಭ್ಯರ್ಥಿಗಳನ್ನು ನಿಲ್ಲಿಸಿದ್ದಾರೆ. ಸಂಸದ ಸಿ.ಎಸ್.ಪುಟ್ಟರಾಜುಗೂ ಈ ಕ್ಷೇತ್ರದ ಮೇಲೆ ಹೆಚ್ಚಿನ ಹಿಡಿತವಿದೆ.

ಚಿನಕುರುಳಿ ಜಿ.ಪಂ. ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿರುವ ಅಶೋಕ್, ಸಂಸದ ಪುಟ್ಟರಾಜು ಅಣ್ಣನ ಮಗ. ಗುತ್ತಿಗೆದಾರನಾಗಿರುವ ಅಶೋಕ ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಕೃಷ್ಣೇಗೌಡ ಕೂಡ ಸಾಕಷ್ಟು ರೊಕ್ಕದ ಕುಳ. ಈ ಕ್ಷೇತ್ರದಲ್ಲಿ ನೆಕ್ ಟು ನೆಕ್ ಫೈಟ್ ನಡೆಯುತ್ತಿದ್ದು ಜೆಡಿಎಸ್ ಅಭ್ಯರ್ಥಿ ಅಶೋಕ್ ಸ್ವಲ್ಪ ಮುಂದಿದ್ದಾರೆ.

ಚಿಕ್ಕಾಡೆ ಜಿ.ಪಂ. ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ತಿಮ್ಮೇಗೌಡರಿಗೆ ಸರ್ವೋದಯ ಕರ್ನಾಟಕ ಪಕ್ಷದ ಪಿ.ನಾಗರಾಜು ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಕಾಂಗ್ರೆಸ್ ಹಾಗೂ ರೈತಸಂಘದ ಮತ ಸಂಪೂರ್ಣವಾಗಿ ಸೇರಿದರೆ ಸರ್ವೋದಯ ಕರ್ನಾಟಕ ಪಕ್ಷದ ನಾಗರಾಜುಗೆ ಅವಕಾಶ ದೊರಕಬಹುದು. ಆದರೆ ಸಂಸದ ಪುಟ್ಟರಾಜುಗೂ ಈ ಕ್ಷೇತ್ರದಲ್ಲಿ ಸಾಕಷ್ಟು ಹಿಡಿತವಿರುವುದರಿಂದ ತಿಮ್ಮೇಗೌಡರೇ ವಿಜಯಿಯಾಗುವ ಅವಕಾಶವಿದೆ.

ಜಕ್ಕನಹಳ್ಳಿ ಜಿ.ಪಂ. ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕಾಡೇನಹಳ್ಳಿ ರಾಮಚಂದ್ರು ಎದುರು ಕಾಂಗ್ರೆಸ್‌ನಿಂದ ಮಾಜಿ ಶಾಸಕ ಹಲಗೇಗೌಡರ ಪುತ್ರ ಎಚ್.ತ್ಯಾಗರಾಜು ಸ್ಪರ್ಧಿಸಿದ್ದಾರೆ. ಹಾಪ್‌ಕಾಮ್ಸ್ ನೌಕರನಾಗಿದ್ದ ಕಾಡೇನಹಳ್ಳಿ ರಾಮಚಂದ್ರು ಗುತ್ತಿಗೆದಾರನಾಗಿ ಕೋಟಿಗಟ್ಟಲೆ ಆಸ್ತಿ ಮಾಡಿದ್ದಾನೆ. ಪಕ್ಷನಿಷ್ಠೆ ಇಲ್ಲದ ಈತ ಕಳೆದ ಮನ್‌ಮುಲ್ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಶಾದನಹಳ್ಳಿ ಚಲುವರಾಜು ವಿರುದ್ಧ ಕೆಲಸ ಮಾಡಿದ್ದ. ಇಂತಹವನಿಗೆ ಜೆಡಿಎಸ್ ಟಿಕೆಟ್ ಕೊಟ್ಟಿರುವುದು ಜೆಡಿಎಸ್ ಕಾರ್ಯಕರ್ತರ ಹಾಗೂ ಮುಖಂಡರ ಅಸಮಾಧಾನಕ್ಕೆ ಕಾರಣವಾಗಿದೆ. ಮಾಜಿ ಶಾಸಕ ಹಲಗೇಗೌಡರ ಬಗ್ಗೆ ಕ್ಷೇತ್ರದ ಜನರಲ್ಲಿರುವ ಒಲವು ಹಾಗೂ ಸಹೋದರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಒಮ್ಮೆ ಇದೇ ಕ್ಷೇತ್ರದಿಂದ ಆಯ್ಕೆಯಾಗಿ ಹಿಡಿತ ಹೊಂದಿರುವುದು ತ್ಯಾಗರಾಜ್‌ಗೆ ಪ್ಲಸ್‌ಪಾಯಿಂಟ್.

ಲಕ್ಷ್ಮೀಸಾಗರ ಜಿ.ಪಂ. ಕ್ಷೇತ್ರದಿಂದ ಜೆಡಿಎಸ್ ಪಕ್ಷದ ಅಭ್ಯರ್ಥಿ ಶಾಂತಲಾ ಕೃಷ್ಣೇಗೌಡ ಹಾಗೂ ಸರ್ವೋದಯ ಕರ್ನಾಟಕ ಪಕ್ಷದ ಮಹದೇವಮ್ಮ ನಡುವೆ ನೇರ ಕದನ ನಡೆಯುತ್ತಿದೆ. ಜೆಡಿಎಸ್ ಅಭ್ಯರ್ಥಿ ಮುಂದಿದ್ದಾರೆ.

ಕ್ಯಾತನಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಅನುಸೂಯ ದೇವರಾಜ್ ಜೆಡಿಎಸ್ ಅಭ್ಯರ್ಥಿಯಾಗಿದ್ದು, ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಯಾಗಿ ಪ್ರಗತಿ ಸ್ಪರ್ಧಿಸಿದ್ದಾರೆ. ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ತವರೂರಾಗಿರುವ ಕ್ಯಾತನಹಳ್ಳಿ ಕ್ಷೇತ್ರದಿಂದ ಕಳೆದ ಬಾರಿ ಸರ್ವೋದಯ ಕರ್ನಾಟಕ ಪಕ್ಷದ ಕೆಂಪೂಗೌಡ ಗೆದ್ದಿದ್ದರು. ಈ ಬಾರಿಯೂ ಈ ಕ್ಷೇತ್ರ ಸರ್ವೋದಯ ಕರ್ನಾಟಕ ಪಕ್ಷದ ಪಾಲಾಗಲಿದೆ.

ಮಳವಳ್ಳಿ ತಾಲೂಕು


ಮಳವಳ್ಳಿ ತಾಲೂಕಿನಲ್ಲಿ 7 ಜಿ.ಪಂ. ಕ್ಷೇತ್ರಗಳಿದ್ದು, ಶಾಸಕ ಪಿ.ಎಂ.ನರೇಂದ್ರಸ್ವಾಮಿ ಪ್ರಾಬಲ್ಯಕ್ಕೆ 4 ಕ್ಷೇತ್ರಗಳು ಕಾಂಗ್ರೆಸ್‌ಗೆ ಒಲಿಯಲಿವೆ ಎಂಬ ಮುನ್ಸೂಚನೆ ಈಗಾ[…] ಗೋಚರಿಸಿದೆ.

ಚೊಟ್ಟನಹಳ್ಳಿ ಜಿ.ಪಂ. ಕ್ಷೇತ್ರ ಸಿ.ಆರ್.ಸುಷ್ಮಾ ಕಾಂ[…] ಅಭ್ಯರ್ಥಿಯಾಗಿದ್ದು ಜೆಡಿಎಸ್‌ನಿಂದ ಭಾಗ್ಯ ಶಂಕರೇಗ[…] ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಪ್ರ[…] ಪೈಪೋಟಿ ನಡೆಯುತ್ತಿದ್ದು ಶಾಸಕ ನರೇಂದ್ರಸ್ವ[…] ಮಾಡಿರುವ ಅಭಿವೃದ್ಧಿ ಕಾರ್ಯಗಳು ಅಂತಿಮ[…] ಕಾಂಗ್ರೆಸ್‌ನ ಸಿ.ಆರ್.ಸುಷ್ಮಾ ಕೈಹಿಡಿಯಲಿದೆ.

ಹುಸ್ಕೂರು ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯ[…] ವೆಂಕಟೇಗೌಡ, ಶುದ್ಧಹಸ್ತದ ಉತ್ತಮ ವ್ಯಕ್ತಿ. ಜೆಡಿಎ[…] ಅಭ್ಯರ್ಥಿ ಕಂಸಾಗರ ರವಿ ರಿಯಲ್ ಎಸ್ಟೇಟ್ ಕ[…] ಹಣಬಲಕ್ಕೆ ಮಾನ್ಯತೆ ದೊರೆತರೆ ಜೆಡಿಎಸ್‌ನ[…] ಗೆಲ್ಲಬಹುದು. ಜೆಡಿಎಸ್ ಹಾಗೂ ಕಾಂಗ್ರೆಸ್ ನಡು[…] ಸರಿಸಮದ ಹೋರಾಟ ನಡೆಯುತ್ತಿದೆ.

ಒಕ್ಕಲಿಗರ ಪಾರುಪತ್ಯವಿರುವ ಹಲಗೂರು ಜಿ.[…] ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಜಯರಾಂ ಹಾ[…] ಕಾಂಗ್ರೆಸ್‌ನಿಂದ ಚಂದ್ರಕುಮಾರ್ ಸ್ಪರ್ಧಿಸಿದ್ದು ನೇರ ಹಣಾ[…] ನಡೆದಿದೆ. ಜೆಡಿಎಸ್ ಭದ್ರಕೋಟೆ ಯಾಗಿರುವ ಹಲಗೂ[…] ಕ್ಷೇತ್ರವನ್ನು ಬೇಧಿಸಲು ಕಾಂಗ್ರೆಸ್ ಅಭ್ಯರ್ಥಿ ಚಂದ್ರಕುಮಾ[…] ಬಹಳ ಕಷ್ಟವಿದೆ.

ತಳಗವಾದಿ ಜಿ.ಪಂ. ಕ್ಷೇತ್ರದಿಂದ ಜೆಡಿಎಸ್‌ನಿ[…] ಸೊಸೈಟಿ ಹನುಮಂತ, ಕಾಂಗ್ರೆಸ್‌ನಿಂದ ಶೋರು[…] ಹನುಮಂತ, ಬಿಜೆಪಿಯಿಂದ ಬಡ್ಡಿ ಹನುಮಂತ ಸ್ಪರ್ಧಿಸಿದ[…] ಜೆಡಿಎಸ್ ಹಾಲಿ ಸದಸ್ಯೆ ಸುಜಾತ ಪತಿ ನಾಗೇಂದ್ರ ಟಿಕೆ[…] ಆಕಾಂಕ್ಷಿಯಾಗಿದ್ದ. ಆದರೆ ಸೊಸೈಟಿ ಹನುಮಂತು ಟಿಕೆ[…] ಪಡೆದಿರುವುದರಿಂದ ನಾಗೇಂದ್ರ ಏನು ಮಾಡುವರು[…] ಎಂಬುದರ ಮೇಲೆ ಜೆಡಿಎಸ್ ಅಭ್ಯರ್ಥಿ ಭವಿ[…] ನಿರ್ಧಾರವಾಗಿದೆ. ಅಲ್ಲದೆ ಇದುವರೆಗೆ ಜೆಡಿಎಸ್‌ಗೆ ಸಹಕ[…] ನೀಡುತ್ತಿದ್ದ ಸಿಪಿಐ (ಎಂ) ಪಕ್ಷ ಕೂಡ ಈ ಬಾರಿ […] ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು ಅವರು ಪಡೆಯುವ ಮತ[…] ಜೆಡಿಎಸ್‌ಗೆ ಮುಳುವಾಗಿ ಕಾಂಗ್ರೆಸ್ ಅಭ್ಯರ್ಥಿ ಶೋರು[…] ಹನುಮಂತುಗೆ ಸಹಾ[…] ಮಾಡಲಿದೆ.



ಕಿರುಗಾವಲು ಜಿ.ಪ[…] ಕ್ಷೇತ್ರದಲ್ಲಿ ಜೆಡಿಎಸ್‌ನಿ[…] ಅನಿತಾ ವೇಣುಗೋಪಾ[…] ಸ್ಪರ್ಧಿಸಿದ್ದಾರೆ. ಕಾಂಗ್ರೆ[…] ಕಿರುಗಾವಲು ಮಾಜಿ ಶಾ[…] ದಿವಂಗತ ಕೆ.ಎಂ.ಪುಟ್[…] ಮಗಳು ಪಿ.ಸುಜಾತರನ[…] ಕಣಕ್ಕಿಳಿಸಿದೆ. ಮುಸ್ಲಿಂ ಹಾಗ[…] ದಲಿತ ಮತಗಳೇ ನಿರ್ಣಾಯಕವಾಗಿರುವ ಈ ಕ್ಷೇತ್ರದ[…] ಕಾಂಗ್ರೆಸ್ ಅಭ್ಯರ್ಥಿ ಸುಜಾತರಿಗೆ ವರವಾಗುವ ಲಕ್ಷಣಗ[…] ಹೆಚ್ಚಾಗಿವೆ.

ಬೆಳಕವಾಡಿ ಜಿ.ಪಂ. ಕ್ಷೇತ್ರದಿಂದ ಉಮಾ ಶ್ರೀನಿವಾ[…] ಜೆಡಿಎಸ್ ಅಭ್ಯರ್ಥಿಯಾಗಿದ್ದು ಮಂಡ್ಯ ತಾಲ್ಲೂಕು ತಗ್ಗಹ[…] ಜಿ.ಪಂ. ಹಾಲಿ ಸದಸ್ಯೆ ಜಯಕಾಂತ ಅಂಕರಾಜು ಇಲ್ಲಿ[…] ಬಂದು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ. ವಿಧಾನಸ[…] ಉಪಸಭಾಪತಿ ಮರಿತಿಬ್ಬೇಗೌಡ ಹಾಗೂ ಮಾಜಿ ಶಾಸ[…] ಅನ್ನದಾನಿ ಈ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡ[…] ಪ್ರಚಾರ ನಡೆಸಿದ್ದಾರೆ. ಶಾಸಕ ಪಿ.ಎಂ.ನರೇಂದ್ರಸ್ವಾಮಿ ಕೂ[…] ಈ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವುದರಿಂ[…] ಸಮಬಲದ ಹೋರಾಟ ನಡೆಯುತ್ತಿದೆ.

ದೊಡ್ಡಭೂವಳ್ಳಿ ಕ್ಷೇತ್ರದಲ್ಲಿ ಜಿ.ಪಂ. ಮಾಜಿ ಅಧ್ಯ[…] ಸುಧಾ ಚಂದ್ರಶೇಖರ್ ಜೆಡಿಎಸ್ ಅಭ್ಯರ್ಥಿಯಾಗಿದ್ದಾ[…] ಕಾಂಗ್ರೆಸ್ ಸುಜಾತರನ್ನು ಕಣಕ್ಕಿಳಿಸಿದೆ. ಸುಧಾ ಚಂದ್ರಶೇಖರ[…] ಈ ಹಿಂದೆ ಗೆದ್ದು ಜಿ.ಪಂ. ಅಧ್ಯಕ್ಷರಾಗಿದ್ದರೂ ಜನರೊಂದಿ[…] ಬೆರೆತವರಲ್ಲ, ಸಾಕಷ್ಟು ಹೈಫೈ ಲೇಡಿಯಾದ ಸುಧ[…] ಚಂದ್ರಶೇಖರ್‌ಗೆ ಹೋಲಿಸಿದರೆ ಇವರ ವಿರುದ್ಧ ಒಂದ[…] ಬಾರಿ ಸೋತಿರುವ ಸುಜಾತರೇ ಬೆಸ್ಟ್ ಎಂಬುದು ಕ್ಷೇತ್ರದ[…] ಮತದಾರರ ಅಭಿಪ್ರಾಯ. ಜೆಡಿಎಸ್ ಟಿಕೆಟ್ ವಂಚಿತ[…] ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಶಕುಂತಲಾ ಮಲ್ಲಿಕ್‌ರನ[…] ಶಾಸಕ ನರೇಂದ್ರಸ್ವಾಮಿ ತಮ್ಮ ಪಕ್ಷಕ್ಕೆ ಸೇರ್ಪಡ[…] ಮಾಡಿಕೊಂಡಿರುವುದು ಕಾಂಗ್ರೆಸ್‌ನ ಸುಜಾತರಿಗ[…] ಪ್ಲಸ್‌ಪಾಯಿಂಟ್. ಬಿ.ಜಿ.ಪುರ ಹೋಬಳಿಗೆ 583 ಕೋಟಿ[…] ರೂ. ವೆಚ್ಚದಲ್ಲಿ ಹನಿ ನೀರಾವರಿ ಯೋಜನ[…] ಮಂಜೂರಾಗಿರುವುದು, ಸುಜಾತ ಹಾಗೂ ಆಕೆಯ ಪತಿ[…] ಚಂದ್ರಪ್ಪ ಇಬ್ಬರೂ ಈ ಹಿಂದಿನ ಚುನಾವಣೆಯಲ್[…] ಸೋತಿರುವ ಅನುಕಂಪ ಕೈ ಹಿಡಿದರೆ ಸುಜಾತ[…] ಗೆಲ್ಲಬಹುದು.

ಕೆ.ಆರ್.ಪೇಟೆ ತಾಲೂಕು

ಕೆ.ಆರ್.ಪೇಟೆ ತಾಲೂಕಿನಲ್ಲಿ 6 ಜಿ.ಪಂ. ಕ್ಷೇತ್ರಗಳಿವೆ[…] ಶಾಸಕ ಕೆ.ಸಿ.ನಾರಾಯಣಗೌಡ ಹಾಗೂ ಮಾಜಿ ಶಾಸಕ[…] ಕೆ.ಬಿ.ಚಂದ್ರಶೇಖರ್ ತಮ್ಮ ಪಕ್ಷದ ಅಭ್ಯರ್ಥಿಗಳ ಗೆಲುವಿಗ[…] ಟೊಂಕಕಟ್ಟಿ ನಿಂತಿದ್ದಾರೆ.

ಕಿಕೇರಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಧನಂಜಯ[…] ಹಾಗೂ ಕಾಂಗ್ರೆಸ್‌ನಿಂದ ಎಲ್.ದೇವರಾಜು ಸ್ಪರ್ಧಿಸಿದ್ದಾರೆ[…]

ಕ್ಷೇತ್ರದ ಮೇಲೆ ಹಾಲಿ ಸದಸ್ಯ ಚಿಕ್ಕೇರಿ ಪ್ರಭಾಕರ್ ಂಬಲ ಹಿಡಿತವಿರುವುದರಿಂದ ಜೆಡಿಎಸ್‌ನ ಧನಂಜಯ ವ ಅವಕಾಶ ಹೆಚ್ಚು.

ಅಕ್ಕಿ ಹೆಬ್ಬಾಳು ಜಿ.ಪಂ. ಕ್ಷೇತ್ರದಿಂದ ಜೆಡಿಎಸ್ ರ್ಥಿಯಾಗಿರುವ ಬಿ.ಎಲ್.ದೇವರಾಜು ಮೈಸೂರು ಪ್, ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ . ಸರಳ, ಸಜ್ಜನರಾಗಿರುವ ದೇವರಾಜು ವ್ಯಕ್ತಿತ್ವವೇ ರ ಗೆಲುವಿಗೆ ಸಹಕಾರಿಯಾಗಲಿದೆ. ಕಾಂಗ್ರೆಸ್‌ನಿಂದ ೕಗೌಡ ಅಭ್ಯರ್ಥಿಯಾಗಿದ್ದಾರೆ.

ಹಿರೀಕಳಲೆ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ದಾಸ್ ಹಾಗೂ ಕಾಂಗ್ರೆಸ್‌ನಿಂದ ಸಣ್ಣಯ್ಯ ಸ್ಪರ್ಧಿಸಿದ್ದಾರೆ. ವರ್ಷದ ಹಿಂದಿನಿಂದಲೂ ಟಿಕೆಟ್ ವಂಚಿತನಾಗಿದ್ದ ದಾಸ್ ಪರ ಕ್ಷೇತ್ರದಲ್ಲಿ ಅನುಕಂಪದ ಅಲೆಯಿದೆ. ದಾಸ್‌ಗೆ ವೋಟು ಮತ್ತು ನೋಟು ನೀಡುತ್ತಿರುವ ಅವರನ್ನು ಗೆಲ್ಲಿಸಲು ನಿರ್ಣಯಿಸಿದ್ದಾರೆ.

ಬೂಕನಕೆರೆ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಮಿತ್ರಿ ಹಾಗೂ ಕಾಂಗ್ರೆಸ್‌ನಿಂದ ರತ್ನಮ್ಮ ಸ್ಪರ್ಧಿಸಿದ್ದಾರೆ. ಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸಹೋದರ .ಮಹೇಶ್, ಹಾಲಿ ಜಿ.ಪಂ. ಸದಸ್ಯೆ ಸರ್ವಮಂಗಳ ದಲ್ಲಿ ಠಿಕಾಣಿ ಹೂಡಿದ್ದು ಕಾಂಗ್ರೆಸ್‌ನ ರತ್ನಮ್ಮನವರಿಗೆ ಕೂಲಕರವಾದ ವಾತಾವರಣ ನಿರ್ಮಾಣವಾಗಿದೆ.

ಸಂತೇಬಾಚಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಜಿ ಜಿ.ಪಂ. ಅಧ್ಯಕ್ಷೆ ಪ್ರೇಮಾಕುಮಾರಿ ಸ್ಪರ್ಧಿಸಿದ್ದಾರೆ. ಗ್ರೆಸ್‌ನಿಂದ ಕುಸುಮಾ ಸ್ಪರ್ಧಿಸಿದ್ದಾರೆ. ಈ ಕ್ಷೇತ್ರದಲ್ಲಿ ಬಲದ ಹೋರಾಟದ ನಡೆಯುತ್ತಿದೆ.

ಶೀಳನೆರೆ ಜಿ.ಪಂ. ಕ್ಷೇತ್ರದಲ್ಲಿ ಜಿ.ಪಂ. ಮಾಜಿ ಉಪಾಧ್ಯಕ್ಷ, ನ್‌ಮುಲ್ ನಿರ್ದೇಶಕ ಶೀಳನೆರೆ ಎಸ್.ಅಂಬರೀಶ್ ಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ಜೆಡಿಎಸ್‌ನಿಂದ ಉದ್ಯಮಿ ಜುನಾಥ್ ಸ್ಪರ್ಧಿಸಿದ್ದು, ನೆಕ್ ಟು ನೆಕ್ ಫೈಟ್ ದಿದೆ. ಜೆಡಿಎಸ್ ಭದ್ರಕೋಟೆಯಾಗಿರುವ ಶೀಳನೆರೆ ತ್ರದಿಂದ ಈ ಹಿಂದೆ ಎಸ್.ಅಂಬರೀಶ್ ಜೆಡಿಎಸ್ ್ಯರ್ಥಿಯಾಗಿ ಗೆದ್ದಿದ್ದರು. ಬದಲಾದ ರಾಜಕೀಯ ವೇಶದಲ್ಲಿ ಮಾಜಿ ಸ್ಪೀಕರ್ ಕೃಷ್ಣರ ಬೆಂಬಲಿಗ ಅಂಬರೀಶ್ ಗ್ರೆಸ್‌ನಿಂದ ಅಭ್ಯರ್ಥಿಯಾಗಿದ್ದಾರೆ. ಇಲ್ಲಿ ಮಾಜಿ ಶಾಸಕ ಬಿ.ಚಂದ್ರಶೇಖರ್ ಸಹೋದರ ಕೆ.ಬಿ.ರವಿ ಾಂಕ್ಷಿಯಾಗಿದ್ದರು. ಆದರೆ ಜೆಡಿಎಸ್ ಪ್ರಾಬಲ್ಯವಿರುವ ರಣಕ್ಕಾಗಿ ರವಿ ಬದಲು ಶೀಳನೆರೆ ಅಂಬರೀಶ್ ್ಯರ್ಥಿಯಾಗಿದ್ದಾರೆ.

ಮದ್ದೂರು ತಾಲೂಕು

ಮದ್ದೂರು ತಾಲೂಕಿನಲ್ಲಿ 7 ಜಿ.ಪಂ. ಕ್ಷೇತ್ರಗಳಿವೆ. ಸಕ ಡಿ.ಸಿ.ತಮ್ಮಣ್ಣ ಅತಿ ಹೆಚ್ಚಿನ ಕ್ಷೇತ್ರಗಳನ್ನು ಲ್ಲಿಸಿಕೊಳ್ಳುವ ಭಾಗವಾಗಿ ಕ್ಷೇತ್ರದಲ್ಲಿ ಸಾಕಷ್ಟು ಬೆವರು ರಿಸುತ್ತಿದ್ದಾರೆ.

ಭಾರತೀನಗರ ಜಿ.ಪಂ. ಕ್ಷೇತ್ರ ಅತ್ಯಂತ ಪ್ರತಿಷ್ಠೆಯ ತ್ರವಾಗಿ ಹೊರಹೊಮ್ಮಿದೆ. ಜೆಡಿಎಸ್ ಅಭ್ಯರ್ಥಿಯಾಗಿ ಸಕ ಡಿ.ಸಿ.ತಮ್ಮಣ್ಣ ಪುತ್ರ ಸಂತೋಷ್ ತಮ್ಮಣ್ಣ ಣದಲ್ಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಮಧು ಾದೇಗೌಡರ ಬೆಂಬಲಿಗ ಅಣ್ಣೂರು ರಾಜೀವ್ ಣದಲ್ಲಿದ್ದಾರೆ. ಭಾರತೀ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಾಗಿದ್ದ ಅಣ್ಣೂರು ಸಿದ್ದೇಗೌಡರ ಪುತ್ರನಾದ ರಾಜೀವ್ ಕಷ್ಟು ಜನಪ್ರಿಯರಾಗಿದ್ದಾರೆ. ಕ್ಷೇತ್ರದ ಸಾಮಾನ್ಯ ನರೊಂದಿಗೆ ಬೆರೆಯದ ಅಪವಾದ ಮಧು ಮಾದೇಗೌಡರ ೕಲಿದ್ದು ಇದು ರಾಜೀವ್‌ಗೆ ತೊಡಕಾಗಬಹುದು. ಹಣ ಲ ಹಾಗೂ ಅಧಿಕಾರಬಲದ ಮೇಲೆ ಕ್ಷೇತ್ರದಲ್ಲೇ ಠಿಕಾಣಿ ೂಡಿರುವ ಸಂತೋಷ್ ಹಾಗೂ ಕುಟುಂಬ ಸದಸ್ಯರು ನಾವಣೆಯಲ್ಲಿ ಹಲವು ತಂತ್ರಗಾರಿಕೆ ಬಳಸಿ ಜಯಗಳಿಸುವ ನ್ನಾರದಲ್ಲಿ ತೊಡಗಿದ್ದಾರೆ. ಇದಕ್ಕೆ ಜೆಡಿಎಸ್ ವರಿಷ್ಠ ಮಾರಸ್ವಾಮಿ ಹಾಗೂ ಮಾಜಿ ಶಾಸಕ ಬಿ.ರಾಮಕೃಷ್ಣ ರವಾಗಿದ್ದಾರೆ.

ಚಿಕ್ಕಅರಸಿನಕೆರೆ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಕನ್ನ ಹನುಮಂತು ಹಾಗೂ ಕಾಂಗ್ರೆಸ್‌ನಿಂದ ಗೌರಮ್ಮ ರ್ಧಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ರ್ಧಿಸಿದ್ದ ಈಕೆಯ ಪತಿ ಹನುಮಂತೇಗೌಡ ಸೋತಿದ್ದರು. ಸಿ.ತಮ್ಮಣ್ಣನವರ ಪ್ರತಿಷ್ಠೆ ಹಾಗೂ ಹನುಮಂತೇಗೌಡ ೕಲಿನ ಅನುಕಂಪ ಮತದಾರರ ಮನಗೆದ್ದರೆ ಜೆಡಿಎಸ್‌ನ ಕನ್ನ ದಡ ಸೇರಬಹುದು.

ಬೆಸಗರಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ರಿಹೆಗ್ಗಡೆ ಹಾಗೂ ಕಾಂಗ್ರೆಸ್‌ನಿಂದ ತಾ.ಪಂ. ಹಾಲಿ ದಸ್ಯೆ ಲಕ್ಷ್ಮಿ ಚೆನ್ನರಾಜು ನಡುವೆ ಸಮಬಲದ ಹೋರಾಟ ಡೆಯುತ್ತಿದೆ. ತಾ.ಪಂ. ಅಧ್ಯಕ್ಷೆಯಾಗಿ ಕ್ಷೇತ್ರದ ಮಹಿಳಾ ತದಾರರ ಮನಗೆದ್ದಿರುವ ಲಕ್ಷ್ಮಿ ಹಣಬಲದ ಮರಿಹೆಗ್ಗಡೆಗೆ ಟಫ್ ಫೈಟ್ ನೀಡುತ್ತಿದ್ದಾರೆ.

ಕೆಸ್ತೂರು ಜಿ.ಪಂ. ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಡಿಎಸ್ ನಡುವೆ ಒಳಒಪ್ಪಂದ ನಡೆದಿದೆ ಎಂಬ ಆರೋಪ ಲವಾಗಿ ಕೇಳಿಬರುತ್ತಿದೆ. ಇಲ್ಲಿ ಕಾಂಗ್ರೆಸ್‌ನಿಂದ ಮದ್ದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣರ ಪ್ರಫುಲ್ಲಾ ಮಹೇಶ್ ಸ್ಪರ್ಧಿಸಿದ್ದಾರೆ. ಜೆಡಿಎಸ್‌ನಿಂದ ಚಿತ ಮನುಕುಮಾರ್ ಹಾಗೂ ಬಿಜೆಪಿಯಿಂದ ಚೈತ್ರ ಕ್ಷ್ಮಣ್‌ಕುಮಾರ್ ಸ್ಪರ್ಧಿಸಿದ್ದಾರೆ. ಕ್ರಿಮಿನಲ್ ಹಿನ್ನೆಲೆಯ ಹೋದರರಾದ ರಾಮ-ಲಕ್ಷ್ಮಣ ಕೆಸ್ತೂರು ಜಿ.ಪಂ.ನಿಂದ ಡಿಎಸ್ ಟಿಕೆಟ್ ನೀಡಬೇಕೆಂದು ಶಾಸಕ ಡಿ.ಸಿ.ತಮ್ಮಣ್ಣನವರನ್ನು ಕೇಳಿದ್ದರು. ಆದರೆ ಜೆಡಿಎಸ್ ಟಿಕೆಟ್ ಕೈತಪ್ಪಿದ್ದರಿಂದ ಲಕ್ಷ್ಮಣನ ಪತ್ನಿ ಚೈತ್ರರನ್ನು ಬಿಜೆಪಿಯಿಂದ ನಿಲ್ಲಿಸಿದ್ದು ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿಗಳಿಗೆ ತಲೆನೋವಾಗಿದೆ. ಕ್ಷೇತ್ರದಲ್ಲಿ ಕದಲೂರು ರಾಮಕೃಷ್ಣ ಹಾಗೂ ಅವರ ಪುತ್ರ ತಾ.ಪಂ. ಮಾಜಿ ಸದಸ್ಯ ಮಹೇಶ್‌ಗೆ ಉತ್ತಮ ಹೆಸರಿದೆ. ಆದರೂ ಇಲ್ಲಿ ಬಿಜೆಪಿಯ ಚೈತ್ರ ಲಕ್ಷ್ಮಣ್ ತನ್ನಲ್ಲಿರುವ ಹಣಬಲದ ಮೂಲಕ ಕಾಂಗ್ರೆಸ್‌ನ ಪ್ರಫುಲ್ಲಾ ಮಹೇಶ್‌ಗೆ ಸೆಡ್ಡು ಹೊಡೆದಿದ್ದು, ಅಂತಿಮವಾಗಿ ಕಾಂಗ್ರೆಸ್ ಈ ಕ್ಷೇತ್ರದಲ್ಲಿ ಜಯಸಾಧಿಸಬಹುದು.

ಚಾಮನಹಳ್ಳಿ ಜಿ.ಪಂ. ಕ್ಷೇತ್ರದಿಂದ ಕೋಟ್ಯಾಧಿಪತಿ ಸ್ವಾಮಿ ಪತ್ನಿ ನಾಗರತ್ನ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್‌ನಿಂದ ಮಮತಾ ಸ್ಪರ್ಧಿಸಿದ್ದಾರೆ. 70 ಕೋಟಿ ರೂ. ಅಧಿಕೃತ ಆಸ್ತಿ ಘೋಷಿಸಿಕೊಂಡಿರುವ ನಾಗರತ್ನ ಸ್ವಾಮಿಯ ಹಣದ ಆರ್ಭಟ ಹೆಚ್ಚಾದರೆ ಗೆಲುವು ಅವರಿಗೆ ದಕ್ಕಲಿದೆ.

ಸೋಮಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಬೋರಯ್ಯ ಹಾಗೂ ಕಾಂಗ್ರೆಸ್‌ನಿಂದ ದೊರೆಸ್ವಾಮಿ ಸ್ಪರ್ಧಿಸಿದ್ದಾರೆ. ಮಾಜಿ ಸಿಎಂ ಎಸ್.ಎಂ.ಕೃಷ್ಣ ಕುಟುಂಬದ ಆಶೀರ್ವಾದ ಪಡೆದಿರುವ ದೊರೆಸ್ವಾಮಿ ಅದನ್ನೇ ನಂಬಿಕೊಂಡಿದ್ದಾರೆ. ಎಂಇಐ ಅಧ್ಯಕ್ಷ ಗುರುಚರಣ್ ಹಾಗೂ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು ಬೆಂಬಲ ದೊರೆಸ್ವಾಮಿಯವರಿಗಿದ್ದರೆ, ಮಾಜಿ ಎಂಎಲ್‌ಸಿ ಬಿ.ರಾಮಕೃಷ್ಣರ ಆಶೀರ್ವಾದ ಬೋರಯ್ಯನವರಿಗಿದೆ. ಸಮಬಲದ ಹೋರಾಟ ನಡೆಯುತ್ತಿದ್ದು ಯಾರೇ ಗೆದ್ದರೂ ಗೆಲುವಿನ ಅಂತರ ಬಹಳ ಕಡಿಮೆ.

ಕೊಪ್ಪ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಶ್ರೀಮತಿ ಹಾಗೂ ಕಾಂಗ್ರೆಸ್‌ನಿಂದ ಜಾನಕಮ್ಮ ಸ್ಪರ್ಧಿಸಿದ್ದಾರೆ. ಶಾಸಕ ಚಲುವರಾಯಸ್ವಾಮಿ ಪ್ರತಿನಿಧಿಸುವ ನಾಗಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಕೊಪ್ಪ ಜಿ.ಪಂ. ಕ್ಷೇತ್ರದಲ್ಲಿ ಈ ಬಾರಿ ಜೆಡಿಎಸ್ ಅಭ್ಯರ್ಥಿ ಶ್ರೀಮತಿಗೆ ಉತ್ತಮ ವಾತಾವರಣ ಕಂಡುಬರುತ್ತಿದೆ.

ನಾಗಮಂಗಲ ತಾಲೂಕು

ನಾಗಮಂಗಲ ತಾಲೂಕಿನಲ್ಲಿ 5 ಜಿ.ಪಂ. ಕ್ಷೇತ್ರಗಳಿದ್ದು ಶಾಸಕ ಎನ್.ಚಲುವರಾಯಸ್ವಾಮಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ್ದಾರೆ. ಮಾಜಿ ಶಾಸಕ ಸುರೇಶ್‌ಗೌಡ ಕೂಡ ತಮ್ಮ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಸುತ್ತುತ್ತಿದ್ದಾರೆ.

ಬೆಳ್ಳೂರು ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಮುತ್ತಣ್ಣ ಹಾಗೂ ಕಾಂಗ್ರೆಸ್‌ನಿಂದ ಮಹೇಶ್ ಸ್ಪರ್ಧಿಸಿದ್ದಾರೆ. ಶಾಸಕ ಚಲುವರಾಯಸ್ವಾಮಿ ಪ್ರಭಾವ ಈ ಭಾಗದಲ್ಲಿ ದಟ್ಟವಾಗಿದ್ದು ಜೆಡಿಎಸ್ ಅಭ್ಯರ್ಥಿ ಮುತ್ತಣ್ಣರ ಗೆಲುವಿಗೆ ಕಾರಣವಾಗುವ ಸಾಧ್ಯತೆ ಹೆಚ್ಚು.

ದೇವಲಾಪುರ ಜಿ.ಪಂ. ಕ್ಷೇತ್ರ ಕೋಟಿ ಕುಳಗಳ ಸ್ಪರ್ಧೆಯಿಂದ ರಂಗೇರಿದೆ. ಜೆಡಿಎಸ್ ಅಭ್ಯರ್ಥಿಯಾಗಿ ಬೆಂಗಳೂರು ಎಪಿಎಂಸಿ ಅಧ್ಯಕ್ಷ ಶಂಕರ್ ಪತ್ನಿ ರುಕ್ಮಿಣಿ ಕಣಕ್ಕಿಳಿದಿದ್ದಾರೆ, ಕಾಂಗ್ರೆಸ್ ಅಭ್ಯರ್ಥಿಯಾಗಿ ಬೆಂಗಳೂರಿನಲ್ಲಿರುವ ಎಲೆಕ್ಟ್ರಿಕಲ್ ಗುತ್ತಿಗೆದಾರ ಶಿವಣ್ಣನ ಪತ್ನಿ ಸಾವಿತ್ರಿ ಸ್ಪರ್ಧಿಸಿದ್ದಾರೆ. ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ರುಕ್ಮಿಣಿ ಶಂಕರ್ ಮುಂದಿದ್ದಾರೆ.

ಚೀಣ್ಯ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸುಶೀಲಮ್ಮ ಹಾಗೂ ಕಾಂಗ್ರೆಸ್‌ನಿಂದ ತೇಜಸ್ವಿನಿ ಸ್ಪರ್ಧಿಸಿದ್ದಾರೆ. ಜೆಡಿಎಸ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ನಡುವೆ ಸಮಬಲದ ಹೋರಾಟ ನಡೆಯುತ್ತಿದ್ದು ಯಾರೇ ಗೆದ್ದರೂ ಮತಗಳ ಅಂತರ ಕಡಿಮೆ.

ಮಾಯಿಗೋನಹಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸುನಂದಮ್ಮ ಹಾಗೂ ಕಾಂಗ್ರೆಸ್‌ನಿಂದ ಪಾರ್ವತಿ ಯೋಗೇಶ್ ಸ್ಪರ್ಧಿಸಿದ್ದಾರೆ. ಜೆಡಿಎಸ್ ಅಭ್ಯರ್ಥಿ ಪರ ಹೆಚ್ಚಿನ ಒಲವು ಕಂಡುಬಂದಿದೆ.

ಬಿಂಡಿಗನವಿಲೆ ಜಿ.ಪಂ. ಕ್ಷೇತ್ರದಲ್ಲಿ ಹೈವೋಲ್ಟೇಜ್ ಫೈಟ್ ನಡೆಯುತ್ತಿದೆ. ಕಾಂಗ್ರೆಸ್‌ನಿಂದ ಟಿಕೆಟ್ ಪಡೆದಿರುವ ನಾರಾಯಣಮೂರ್ತಿ ಹಾಲಿ ಒಕ್ಕಲಿಗ ಸಂಘದ ನಿರ್ದೇಶಕ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸುರೇಶ್ ಗೌಡರಿಗೆ ದೋಖಾ ಮಾಡಿದ ಆಪಾದನೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೈತಪ್ಪುತ್ತದೆಂಬ ಭೀತಿ ಇತ್ತು. ಆದರೆ ಸಿಎಂ ಸಿದ್ದರಾಮಯ್ಯನವರ ಮುಂದೆ ದುಂಬಾಲು ಬಿದ್ದು ಕೊನೆಗೂ ಕಾಂಗ್ರೆಸ್ ಟಿಕೆಟ್ ಪಡೆದಿರುವ ನಾರಾಯಣಮೂರ್ತಿ ದಿನಕಳೆದಂತೆ ಕ್ಷೇತ್ರದಲ್ಲಿ ಗಟ್ಟಿಯಾಗಿದ್ದಾನೆ. ತನ್ನ ವಿರುದ್ಧ ಬಂಡಾಯವೆದ್ದಿದ್ದ ದೊರೆಸ್ವಾಮಿ (ಗಿರೀಗೌಡ) ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣದಲ್ಲಿದ್ದ. ಎರಡು ದಿನಗಳ ಹಿಂದೆ ಆತನನ್ನು ಕಣದಿಂದ ನಿವೃತ್ತಿಗೊಳಿಸಿರುವುದು ಪ್ಲಸ್ ಪಾಯಿಂಟು. ಜೆಡಿಎಸ್‌ನಿಂದ ಸ್ಪರ್ಧಿಸಿರುವ ಶಿವಪ್ರಕಾಶ್ ಪ್ರಥಮ ದರ್ಜೆ ಗುತ್ತಿಗೆದಾರ. ನಾರಾಯಣಮೂರ್ತಿ ಎದುರು ಸಮಬಲದ ಹೋರಾಟ ನೀಡುತ್ತಿರುವ ಶಿವಪ್ರಕಾಶ್ ನಡುವಿನ ಕದನದಲ್ಲಿ ಯಾರು ಗೆಲ್ಲುತ್ತಾರೆಂದು ಸುಲಭವಾಗಿ ಹೇಳಲಾಗಲ್ಲ.

ಒಟ್ಟಾರೆ ಮಂಡ್ಯ ಜಿಲ್ಲಾ ಪಂಚಾಯತಿಯ 41 ಸ್ಥಾನಗಳಲ್ಲಿ 20ಕ್ಕೂ ಹೆಚ್ಚಿನ ಸ್ಥಾನಗಳಲ್ಲಿ ಜೆಡಿಎಸ್ ಗೆದ್ದು ಅಧಿಕಾರ ಹಿಡಿಯುವ ಲಕ್ಷಣಗಳು ಕಂಡುಬಂದಿದ್ದು, ಫೆಬ್ರವರಿ 23ರ ಫಲಿತಾಂಶದ ದಿನದವರೆಗೂ ಕಾಯಲೇಬೇಕಿದೆ.

■ ವರದಿಗಾರ

ದುಬಾರಿ ಬೆಲೆ ಗಡಿಯಾರ ಕಟ್ಟುವುದು ಚಿಲ್ಲರೆ ಶೋಕಿ!

ಥೂತ್ತೇರಿ

ಯಾಹೂ

ಕರ್ನಾಟಕದಲ್ಲಿ ನಡೆದ ಒಂದು ಸೆಮಿ ಗೌರ್ನಮೆಂಟ್ ಚುನಾವಣೆ ಸಮಯದಲ್ಲಿ ಜಿಲ್ಲಾ ಪಂಚಾಯ್ತಿಗೆ ಯೋಗ್ಯರನ್ನು ಆರಿಸುವ ಚರ್ಚೆಬಿಟ್ಟು ಸಿದ್ದು ಗಡಿಯಾರದ ಚರ್ಚೆ ಗಡಿಮೀರಿ ದೆಹಲಿಗೂ ತಲುಪುವಂತೆ ನಡೆಯಿತಲ್ಲಾ, ಜೆಡಿಎಸ್ ಗುಡಿಸಲಲ್ಲಿ ಸಂಗ್ರಹಗೊಂಡಿರುವ ಮಾಹಿತಿ ಪ್ರಕಾರ, ಸಿದ್ದು ಕನ್ನಡಕ ಮತ್ತು ಗಡಿಯಾರದ ಪ್ರಶ್ನೆಯಷ್ಟೇ ಅಲ್ಲ, ಬೆಲೆಕಟ್ಟಲಾಗದ ಬೆಲೆಯ ಕಾಚಾ, ಬನೀನು ಮತ್ತು ಟವೆಲ್ ಬಳಸುವ ಸಿದ್ದು ಸೋಗಲಾಡಿ ಸಮಾಜವಾದಿಯಷ್ಟೇ ಅಲ್ಲ, ಆತ ಕಂಬಳಿ ವಿರೋಧಿ ಎಂಬುದೂ ಚರ್ಚಿತವಾಯ್ತಂತೆ, ಅದಷ್ಟೇ ಅಲ್ಲ, ಸಿದ್ದು ಬಳಸುವ ಟೂತ್‌ಬ್ರಷ್ ಸಾಯುವವರೆಗೂ ಬಳಸಿದರೂ ಸವೆಯುವುದಿಲ್ಲವಂತೆ. ಹೀಗೆ ಒಂದೊಂದೇ ಸಿದ್ದು ಸಾಮ್ರಾಜ್ಯದ ವಸ್ತುವಿನ ಪತ್ತೆ ಮತ್ತು ವಿವರಗಳು ಚರ್ಚೆಯಾಗುತ್ತಿರುವಾಗಲೇ ಉಪಚುನಾವಣೆ ರಿಸಲ್ಟ್ ಬಂದವಲ್ಲಾ, ಮೂರು ಕ್ಷೇತ್ರದ ಫಲಿತಾಂಶವೂ ಪ್ರಕಟಗೊಂಡು ಜೆಡಿಎಸ್ ಮೂರೂ ಕಡೆ ಠೇವಣಿ ಕಳೆದುಕೊಂಡರೂ ಕರ್ನಾಟಕದ ಬಗ್ಗೆ ಚಿಂತಿಸದ ಕುಮಾರಣ್ಣನ ಪಡೆ ಕ್ಷುದ್ರ ಸಂಗತಿಗಳ ಕಡೆ ಗಮನ ಹರಿಸುತ್ತಿದೆಯಲ್ಲಾ, ಈ ಮಧ್ಯೆ ಸಿದ್ದು ಪರ ನಿಂತ ಸೂಕ್ಷ್ಮ ಜೀವಿಗಳು "ಈ ಸಿದ್ದುಗ್ಯಾಕೆ ಇಂತಹ ತಿರುಬೋಕಿ ಶೋಕಿಗಳು? ನಿಜಕ್ಕೂ ಈತನ ಮನಸ್ಸಿನಾಳದಲ್ಲಿ ಈ ತರದ ಚಿಲ್ಲರೆ ಅಪೇಕ್ಷೆಗಳಿದ್ದರೆ ಖಂಡನೆಗೆ ಯೋಗ್ಯ. ಏಕೆಂದರೆ ಶ್ರೀಮತಿ ಇಂದಿರಾ ಗಾಂಧಿ



ಭಾರತದ ಪ್ರಧಾನಿಯಾಗಿದ್ದರೂ ಕಟ್ಟಿದ್ದು ನಮ್ಮ ಎಚ್‌ಎಂಟಿ ಕಾರ್ಖಾನೆಯ ಸೋನಾ ಗಡಿಯಾರ. ಅದರ ಬೆಲೆ ಐನೂರಿರಬಹುದು" ಎಂದು ಮಾತನಾಡಲಿಲ್ಲವಂತಲ್ಲಾ ಥೂತ್ತೇರಿ!

* * * *

"ಎಲ್ಲಾ ಸರಿ, ಮುಂದಿನ ನಮ್ಮ ಕತೆ ಏನು? ಚುನಾವಣೆಗೆ ನಿಂತು ಠೇವಣಿ ಕಳೆದುಕೊಳ್ಳುವುದಲ್ಲದೆ ಅತ್ತ ಕಾಂಗ್ರೆಸನ್ನು ಸೋಲಿಸುತ್ತಾ ನಡೆದರೆ ನಮ್ಮ ಸ್ಥಿತಿ ಏನು?" ಎಂದು ಜೆಡಿಎಸ್‌ನ ಪುಡಿನಾಯಕರು ಚರ್ಚೆ ಮಾಡುತ್ತಿದ್ದಾರಂತಲ್ಲಾ, "ಠೇವಣಿ ಕಳೆದುಕೊಳ್ಳಲೆಂದೇ ಕನಿಷ್ಠ 25 ಕೋಟಿ ರೂಪಾಯಿ ಖರ್ಚು ಮಾಡುವುದಾದರೆ ಆ ಹಣವನ್ನು ಸಂಪಾದಿಸುವುದು ಹೇಗೆ? ಯಾಕೋ ಮುಂದಿನ ರಾಜಕಾರಣದ ಭವಿಷ್ಯ ತುಂಬ ಅಂಧಕಾರದಲ್ಲಿರುವುದರಿಂದ ಅತ್ತ ಬಿಜೆಪಿ ಇತ್ತ ಕಾಂಗ್ರೆಸ್ ನಾವು ಸಾಗುವುದೇ ವಾಸಿ" ಎಂದು ಜೆಡಿಎಸ್‌ನ ಪುರಿಯಾಳುಗಳೆ ಚಿಂತಿಸುತ್ತಿದ್ದಾರಂತಲ್ಲಾ ಥೂತ್ತೇರಿ!!

* * * *

ನಿರೀಕ್ಷೆಯಂತೆ ಬಿಜೆಪಿಗೆ ಎರಡು ಸ್ಥಾನ ಲಭಿಸಿವೆ. ಆದರೆ ದೇವದುರ್ಗದಲ್ಲಿ ಗೆಲ್ಲಬಹುದಾಗಿದ್ದ ಕಾಂಗ್ರೆಸ್ ನಿಜಕ್ಕೂ ಮಣ್ಣು ಮುಕ್ಕಿದೆ. ಏಕೆಂದರೆ ಜಾರಕಿಹೊಳಿ ಮುನಿಸು ದೇವದುರ್ಗಕ್ಕೂ ತಲುಪಿದೆ. ಪಿಡಬ್ಲ್ಯೂ ಮಿನಿಸ್ಟರ್‌ರು ಮಹದೇವಪ್ಪ ಇನ್ನೂ ಕಾಂಗ್ರೆಸ್ಸಿಗನಾಗಿ ವರ್ತಿಸಲಾಗಿಲ್ಲ, ಎಲ್ಲಕ್ಕಿಂತ ಮುಖ್ಯವಾಗಿ ಒಮ್ಮೆ ಬಿಜೆಪಿಗೆ ಓಟು ಮಾಡಿದ ಮನಸ್ಸನ್ನು ಉದರದ ಪಟ್ಟಿನಿಂದ ಹಿಡಿದುಬಿಡುವ ಚಿಡ್ಡಿ ಕಾರ್ಯಕರ್ತರಂತವರು ಕಾಂಗ್ರೆಸ್ನಲ್ಲಿ ಹುಡುಕಿದರೂ ಸಿಗುವುದಿಲ್ಲ, ಪ್ರತಿ ಕ್ಯಾಂಡಿಡೇಟಿಗೂ ಅವನದ್ದೇ ಆದ ಬೂತಿರುವುದು ಬಿಜೆಪಿಯಲ್ಲಿ ಮಾತ್ರ. ಭಾರತದ ಪ್ರಧಾನಿಯಿಂದ ಹಿಡಿದು ಪಂಚಾಯ್ತಿ ಕ್ಯಾಂಡಿಡೇಟ್‌ವರೆಗೆ ಬೂತು ಮಟ್ಟದ ಕಾರ್ಯಕರ್ತನಿಗಿರುವುದು ಬಿಜೆಪಿಯಲ್ಲಿ ಮಾತ್ರ. ಅಂತಹ ಸಂಕಲ್ಪವಿಲ್ಲದ ಬಟಾವಡೆ ಕಾರ್ಯಕರ್ತರೊಂದಿಗೆ ಕಾಂಗ್ರೆ ಭವಿಷ್ಯದಲ್ಲಿ ಎಷ್ಟೇ ತಿಪ್ಪರಲಾಗ ಹಾಕಿದರೂ ಹೆಬ್ಬಾಳದ ಚುನಾವಣಾ ರಿಸಲ್ಟುಗಳು ಮರುಕಳಿಸುತ್ತಲೇ ಹೋಗುತ್ತವೆ. ಆದ್ದರಿಂದ ಕೆಲ ಬಿಜೆಪಿಗಳಿಗೆ ಯಡಿಯೂರಪ್ಪನೂ ಅನಿವಾರ್ಯವಾಗಿಲ್ಲವಂತಲ್ಲಾ, ಇದನ್ನು ಗ್ರಹಿಸಿದ ಯಡಿಯೂರಪ್ಪ ಡಲ್ಲಾಗಿರುವುದನ್ನು ತೋರಿಸಿಕೊಳ್ಳದೆ ಎಷ್ಟೇ ಅದುಮಿಟ್ಟರೂ ಅದು ಮುಖದಲ್ಲಿ ವ್ಯಕ್ತವಾಗಿದೆಯಂತಲ್ಲಾ ಥೂತ್ತೇರಿ!!

* * * *

ಜಿಲ್ಲಾ ಪಂಚಾಯ್ತಿ ಚುನಾವಣೆಯ ವೈಖರಿ ಎಮ್ಮೆಲ್ಲೆ ಚುನಾವಣಾ ವೈಖರಿಯನ್ನು ಮೀರಿಸಿದೆ. ಗ್ರಾಮಾಂತರ ಪ್ರದೇಶದ ಕಾರ್ಯಕರ್ತರಿಗೆ 19ನೇ ತಾರೀಖಿನವರೆಗೂ ರಾಜಾತಿಥ್ಯ, ಮನೆಯ ಮುಂದಕ್ಕೆ ಆಟೋ ಬರುತ್ತವೆ. ಕಾರು ಬರುತ್ತವೆ. ಕರೆದುಕೊಂಡು ಹೋಗಿ ಓಟು ಕೇಳಿಸಿ ಕಂಠಪೂರ್ತಿಯಾದ ನಂತರ ತಂದು ಮನೆಗೆ ಬಿಡುತ್ತವೆ. ಇಂತಹದೊಂದು ರಾಜವೈಭೋಗ ಕೊನೆಯಾಗುತ್ತಿರುವುದರ ಬಗ್ಗೆ ಆತಂಕಗೊಂಡ ಬಟಾವಡೆ ಕಾರ್ಯಕರ್ತರು ಶಾನೆ ಮಂಕಾಗಿದ್ದಾರೆ. ಆದರೇನು ಅಧಿಕಾರ ವಿಕೇಂದ್ರೀಕರಣದ ಫಲವಾಗಿ ಬರುತ್ತಿರುವ ಚುನಾವಣೆಯಿಂದ ಇಡೀ ವ್ಯವಸ್ಥೆಯೇ ಎಕ್ಕುಟ್ಟಿ ಹೋಗಿದೆಯಂತಲ್ಲಾ. ಈ ನಡುವೆ ಬರಲಿರುವ 28 ನೇ ತಾರೀಖಿನಂದು ನಡೆಯುವ ಸಾಹಿತ್ಯ ಪರಿಷತ್ ಚುನಾವಣೆ ಯಾವ ಕಡೆಯಿಂದ ನೋಡಿದರೂ ಸಾಹಿತ್ಯೋಪಜೀವಿಗಳ ಚುನಾವಣೆಯಂತೆ ಕಾಣುತ್ತಿಲ್ಲವಲ್ಲ. ಅದೂ ಕೂಡ ಜಿಲ್ಲಾ ಪಂಚಾಯ್ತಿ ಮಟ್ಟದ ಚುನಾವಣೆಯಂತೆ ಕಂಡು, ಅಭ್ಯರ್ಥಿಗಳ ಪರ ಇದ್ದವರೆಲ್ಲಾ ಈಗಾಗಲೇ ಎಣ್ಣೆ ಪಾರ್ಟಿ ಮಾಡುತ್ತ ತಿಂಗಳೇ ಕಳೆದುಹೋಗಿದೆಯಂತಲ್ಲಾ. ಈ ಜಿಲ್ಲಾ ಸಾಹಿತ್ಯ ಪರಿಷತ್ ಚುನಾವಣೆಯೂ ಬಿಜೆಪಿ-ಜೆಡಿಎಸ್ ಸಿದ್ಧಾಂತಗಳಂತೆ ಲಿಂಗಾಯತ-ಒಕ್ಕಲಿಗ ಎಂದು ಜಾತಿಗೆರೆ ಎಳೆದುಕೊಂಡು ಸಮರ ಘೋಷಿಸಿಕೊಂಡಿರುವಾಗಲೇ ಎರಡೂ ಅಲ್ಲದ ಜಾತ್ಯತೀತ ಮನಸ್ಸುಗಳು ಗೆಲ್ಲಿಸಲು ಕ್ಯಾಂಡಿಡೇಟೇ ಇಲ್ಲವಂತಲ್ಲಾ, ಥೂತ್ತೇರಿ!!!

* * * *

ಇತ್ತ ಮಂಡ್ಯದ ರಾಜಕಾರಣ ಶಾನೆ ಮಜವಾಗಿದೆಯಲ್ಲಾ, ನಟಿ ರಮ್ಯಾ ಮಂಡ್ಯ ಜಿಲ್ಲೆಯಲ್ಲಿ ಸಂಚರಿಸಿ ಕಾಂಗ್ರೆಸ್ ಪರ ಮತ ಯಾಚಿಸಿ ಸಂಚಲನವುಂಟುಮಾಡಿದ ಸುದ್ದಿಯಿಂದ ಶ್ಯಾನೆ ಆತಂಕಗೊಂಡ ಕುಮಾರಣ್ಣನವರು, "ಈ ಸಿನಿಮಾ ನಟಿ ಕಾಲ್ಗುಣದಿಂದಲೇ ರೈತರ ಆತ್ಮಹತ್ಯೆ ಜಾಸ್ತಿಯಾಗಿವೆ" ಎಂದರಂತಲ್ಲಾ, ಅದಕ್ಕೆ ರಮ್ಯಾ "ತಮ್ಮ ಪತ್ನಿಯೂ ಸಿನಿಮಾ ನಟಿ ಎಂಬುದನ್ನು ಮರೆಯಬೇಡಿ" ಎಂದಿದ್ದಾರಂತಲ್ಲಾ. ಮಂಡ್ಯ ಹೈದರ ಪ್ರಕಾರ ರಮ್ಯಾಳ ಮಾತಿನ ಒಳಗೆ ರಾಧಿಕಾಳ ಕಾಲ್ಗುಣದಿಂದ ಕುಮಾರಣ್ಣ ರಾಜಕೀಯವಾಗಿ ಕುಸಿಯುತ್ತಲೇ ಹೋದರಂತಲ್ಲಾ. ರಮ್ಯಾ ಮಿಂಚಿನ ವೇಗದಲ್ಲಿ ಸಂಚರಿಸುವುದನ್ನು ನೋಡಿದ ಅಂಬಿ ಅಭಿಮಾನಿ ಬಳಗ ಶ್ಯಾನೆ ಅಸಹನೆಯಿಂದ ಅಂಬಣ್ಣನಿಗೆ "ನೋಡಣ್ಣಾ ರಮ್ಯಾ ಎಲ್ಲಿ ಹೋದರೂ ನಿಮ್ಮ ಹೆಸರನ್ನು ಹೇಳ್ತಾಯಿಲ್ಲ" ಎಂದು ಇನ್ನೂ ಹೇಳಿಲ್ಲವಂತಲ್ಲಾ. ಅಷ್ಟಕ್ಕೂ ರಮ್ಯಾ ವಿರುದ್ಧ ಐದು ನಿಮಿಷಕ್ಕೊಮ್ಮೆ ಚಾಡಿ ಹೇಳಲು ಶಿವರಾಮೇಗೌಡನೇ ಸ್ಪಾಟಿನಲ್ಲಿಲ್ಲವಂತೆ. ಸೋತವರೆಲ್ಲಾ ಸೌತ್ ಆಫ್ರಿಕಾ ಟೂರು ಮಾಡುವಂತೆ ಶಿವರಾಮೇಗೌಡನೂ ಸೌತ್ ಆಫ್ರಿಕಾಗೆ ಹೋಗಿ ಅಲ್ಲಿಂದಲೇ ಮತದಾರ ಬಂಧುಗಳಿಗೆ ಮನವಿ ಮಾಡಿದರಂತಲ್ಲಾ. "ನಾನಿಲ್ಲ ಎಂದು ಬೇಸರ ಮಾಡಿಕೊಳ್ಳಬೇಡಿ. ನಾನಿಲ್ಲದಿದ್ದರೂ ನಾನು ತಿರುಗಾಡಿದ ನೆಲ, ಜಲ, ಗಾಳಿ ಅಲ್ಲಿದೆ. ಅದರ ಸೇವನೆ ಮಾಡಿ. ನನಗೆ ಮಾಡಿದಂತಹ ಉಪಕಾರವನ್ನೇ ನಮ್ಮ ಪಕ್ಷದ ಕ್ಯಾಂಡಿಡೇಟಗಳಿಗೂ ಮಾಡಿ. ನಾನು ಬಂದನಂತರ ನಿಮ್ಮನ್ನು ನೋಡಿಕೊಳ್ಳುತ್ತೇನೆ" ಎಂದಿಲ್ಲವಂತಲ್ಲಾ, ಥೂತ್ತೇರಿ!! ■

ದೇವದುರ್ಗದಲ್ಲಿ ಕಾಂಗ್ರೆಸ್ ಸೋಲಿಗೆ ರಾಜಶೇಖರನೇ ಕಾರಣ

ತಂದೆಯ ಸಾವಿನ ಅನುಕಂಪದಲೆ, ಆಡಳಿತಾರೂಢ ಪಕ್ಷದ ಅಧಿಕಾರದ ಬೆಂಬಲ, ನೀರಿನಂತೆ ಹಣ ಸುರಿಸಿದ ಕುಳಗಳು, ಉನ್ನತ ನಾಯಕರು ಹಿಂಡುಹಿಂಡಾಗಿ ಪ್ರಚಾರ ಮಾಡಿದ್ದು - ಇಷ್ಟೆಲ್ಲಾ ಇದ್ದಾಗ ಪಕ್ಷದ ಹೆಸರಿನಲ್ಲಿ ಒಂದು ನರಿಯನ್ನು ನಿಲ್ಲಿಸಿದ್ದರೂ ಗೆದ್ದುಬಿಡುತ್ತಿತ್ತು. ಅಂಥಾದ್ದರಲ್ಲಿ ರಾಜಶೇಖರ ನಾಯಕ ಹೀನಾಯವಾಗಿ ಸೋಲುತ್ತಾನೆಂದರೆ ಏನರ್ಥ?

■ ಕೆ.ಎನ್. ವಿನೋದ್


ರಾಜಶೇಖರ ನಾಯಕ್


ಗೆಲುವಿನ ಸಂಭ್ರಮದಲ್ಲಿ ಶಿವನಗೌಡ ನಾಯಕ

ಭಾರೀ ಕುತೂಹಲ ಮೂಡಿಸಿದ್ದ ರಾಯಚೂರು ಜಿಲ್ಲೆಯ ದೇವದುರ್ಗ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಫಲಿತಾಂಶ ನಿರೀಕ್ಷೆಯಂತೆಯೇ ಹೊರಬಿದ್ದಿದೆ. ಬಿಜೆಪಿಯ ಕೆ. ಶಿವನಗೌಡ ನಾಯಕ ಬರೊಬ್ಬರಿ 72,647 ಮತಗಳನ್ನು ಪಡೆಯುವ ಮೂಲಕ ತನ್ನ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎ. ರಾಜಶೇಖರ ನಾಯಕನನ್ನು 16,871 ಮತಗಳ ಭಾರಿ ಅಂತರದಲ್ಲಿ ಸೋಲಿಸಿ ವಿಜಯ ಸಾಧಿಸಿದ್ದಾರೆ. ಎಷ್ಟು ತಿಣುಕಾಡಿದರೂ ರಾಜಶೇಖರ ನಾಯಕನಿಗೆ ಸಿಕ್ಕಿದ್ದು 55,776 ಮತಗಳಷ್ಟೇ. ಇನ್ನು ಜೆಡಿಎಸ್‌ನ ಕರೆಮ್ಮ ಜಿ ನಾಯಕ 9,156 ಮತಗಳನ್ನು ಹಾಗೂ ಕಣದಲ್ಲಿದ್ದ ಶಿವರಾಜ ದೊರೆ ಎಂಬ ಸ್ವತಂತ್ರ ಅಭ್ಯರ್ಥಿ 1,837 ಮತಗಳನ್ನು ಪಡೆದು ಠೇವಣಿ ಕಳೆದುಕೊಂಡಿದ್ದಾರೆ. ಕ್ಷೇತ್ರದಲ್ಲಿ ಒಟ್ಟು 2,10,366 ಮತಗಳಿದ್ದು ಅವುಗಳಲ್ಲಿ ಫೆಬ್ರವರಿ 13ರಂದು ನಡೆದ ಉಪಚುನಾವಣೆಯಲ್ಲಿ 1,39,416 ಮತಗಳು ಚಲಾವಣೆಯಾಗಿದ್ದವು (ಶೇಕಡ 67).

ಮೊನ್ನೆ ಮಂಗಳವಾರ ರಾಯಚೂರು ನಗರದ ಇನ್ಫಾಂಟ್ ಜೀಸಸ್ ಪ್ರೌಢಶಾಲೆಯಲ್ಲಿ ಮತ ಎಣಿಕೆ ಆರಂಭವಾಗುವ ಮೊದಲೇ ಹೊರಗೆ ಶಿವನಗೌಡ ನಾಯಕನ ಬೆಂಬಲಿಗರು ತಮ್ಮ ನಾಯಕನೇ ಗೆಲ್ಲುತ್ತಾನೆಂಬ ಖಚಿತ ಭರವಸೆಯೊಂದಿಗೆ ಬಹಳ ಉತ್ಸಾಹದಲ್ಲಿದ್ದರು. ಅವರ ಎಣಿಕೆ ಸುಳ್ಳಾಗಲಿಲ್ಲ. ಮತ ಎಣಿಕೆ ಪ್ರಾರಂಭವಾಗಿ ಒಂದೆರಡು ಸುತ್ತು ಮುಗಿಯುತ್ತಿದ್ದಂತೆಯೇ ನಿರೀಕ್ಷೆಯಂತೆ ಶಿವನಗೌಡ ಮುನ್ನಡೆ ಸಾಧಿಸಲಾರಂಭಿಸಿ ಕೊನೆಯ ಸುತ್ತಿನ ತನಕವೂ ಅದನ್ನು ಕಾಯ್ದುಕೊಂಡು ಅಂತಿಮವಾಗಿ ವಿಜಯದ ನಗೆ ಬೀರಿಯೇ ಬಿಟ್ಟ.

ಒಟ್ಟು ಹದಿನೆಂಟು ಸುತ್ತುಗಳ ಮತ ಎಣಿಕೆಯಲ್ಲಿ ಇನ್ನೂ ಎರಡು ಸುತ್ತುಗಳು ಬಾಕಿ ಇರುವಾಗಲೇ ಮತ ಎಣಿಕೆಯ ಕೇಂದ್ರದಿಂದ ಹೊರಬಂದ ಕಾಂಗ್ರೆಸ್ಸಿನ ರಾಜಶೇಖರ ನಾಯಕ ಪತ್ರಕರ್ತರೊಂದಿಗೆ ಮಾತಾಡುತ್ತ ಎರಡು ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಿ ಅವೇ ತನ್ನ ಸೋಲಿಗೆ ಕಾರಣ ಎಂದ. ಮೊದಲನೆಯದು, ತನ್ನ ಕ್ಷೇತ್ರದಲ್ಲಿ ಕಾಂಗ್ರೆಸ್ ವಿರುದ್ಧ ಆಡಳಿತ ವಿರೋಧಿ ಅಲೆ ಇರುವುದು ಹಾಗೂ ತಮ್ಮ ತಂದೆ ಎ. ವೆಂಕಟೇಶ ನಾಯಕರು ದೇವದುರ್ಗ ಕ್ಷೇತ್ರದಲ್ಲಿ ಅಕ್ರಮ ಮರಳು ಸಾಗಾಣಿಕೆಯಂತಹ ದಂಧೆಗಳಿಗೆ ಕಡಿವಾಣ ಹಾಕಿದ್ದು - ಇವೆರಡೂ ತನ್ನ ಸೋಲಿಗೆ ಪ್ರಧಾನ ಕಾರಣವಾದವು ಎಂದು ಹೇಳಿ ಮುಖ ತಿರುಗಿಸಿಕೊಂಡು ಹೊರಟುಹೋದ. ಈ ಮಾತನ್ನು ಕೇಳಿದ ಪತ್ರಕರ್ತರಿಗೆಲ್ಲಾ ಒಂದು ಗಾದೆಮಾತು ನೆನಪಾಗಿರಲಿಕ್ಕೆ ಸಾಕು: ಕುಣಿಯಲಾಗದವನು ನೆಲ ಡೊಂಕಾಗಿದೆ ಅಂದನಂತೆ!

ಕಾಂಗ್ರೆಸ್ ಬೆಂಬಲಕ್ಕೆ ನೂರು ಅಂಶಗಳು

ದೇವದುರ್ಗದಲ್ಲಿ ಕಾಂಗ್ರೆಸ್ ಯಾಕೆ ಮಣ್ಣುಮುಕ್ಕಿತು ಎಂಬುದನ್ನು ಅರಿಯುವ ಮೊದಲು ಆ ಪಕ್ಷದ ಅಭ್ಯರ್ಥಿಗಿದ್ದ ಸಕಾರಾತ್ಮಕ ಅಂಶಗಳತ್ತ ಒಮ್ಮೆ ಕಣ್ಣು ಹಾಯಿಸೋಣ.

ಫೆಬ್ರವರಿ 13ರಂದು ನಡೆದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಕ್ಷೇತ್ರ ಅಂತ ಇದ್ದದ್ದು ದೇವದುರ್ಗ ಒಂದೇ. ಉಳಿದಂತೆ ಬೆಂಗಳೂರಿನ ಹೆಬ್ಬಾಳ ಹಾಗೂ ಬೀದರ್ ಕ್ಷೇತ್ರಗಳು ಬಿಜೆಪಿಯ ವಶದಲ್ಲಿದ್ದವು. ದೇವದುರ್ಗ ಕ್ಷೇತ್ರದ ಶಾಸಕರಾಗಿದ್ದ ಹಿರಿಯ ಕಾಂಗ್ರೆಸ್ ರಾಜಕಾರಣಿ ಎ. ವೆಂಕಟೇಶ ನಾಯಕರು ಕಳೆದ ವರ್ಷ ಆಂಧ್ರಪ್ರದೇಶದಲ್ಲಿ ಸಂಭವಿಸಿದ ರೈಲು ಅಪಘಾತದಲ್ಲಿ ದುರ್ಮರಣ ಹೊಂದಿದ ಮೇಲೆ ಈ ಕ್ಷೇತ್ರ ಖಾಲಿಯಾಗಿತ್ತು. ವೆಂಕಟೇಶ ನಾಯಕರು ಸಜ್ಜನರೂ ಆಗಿದ್ದರು, ಅನುಭವಿ ರಾಜಕಾರಣಿಯೂ ಆಗಿದ್ದರು. ರಾಯಚೂರು ಲೋಕಸಭಾ ಕ್ಷೇತ್ರವನ್ನು ನಾಲ್ಕು ಬಾರಿ, ಅಂದರೆ ಬರೊಬ್ಬರಿ ಇಪ್ಪತ್ತು ವರ್ಷಗಳ ಕಾಲ ಸಂಸತ್ತಿನಲ್ಲಿ ಪ್ರತಿನಿಧಿಸಿದ್ದರು. 2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಒಲ್ಲೆಯೆಂದರೂ ಕಾಂಗ್ರೆಸ್ ಅವರಿಗೆ ಟಿಕೆಟ್ ನೀಡಿ ದೇವದುರ್ಗದಿಂದ ಕಣಕ್ಕಿಳಿಸಿತ್ತು. ಬಿಜೆಪಿಯಿಂದ ಸ್ಪರ್ಧಿಸಿದ್ದ ತನ್ನ ಮೊಮ್ಮಗ ಇದೇ ಕೆ. ಶಿವನಗೌಡ ನಾಯಕನೊಂದಿಗೆ ಗುದ್ದಾಡಿ ಸೋಲಿಸಿ ವಿಧಾನಸಭೆ ಪ್ರವೇಶಿಸಿದ್ದರು. ಉಡಾಳ ಮೊಮ್ಮಗ ಕೆ. ಶಿವನಗೌಡ ನಾಯಕ ಎಷ್ಟೇ ಪ್ರಯತ್ನಪಟ್ಟು ಮಾಡಬಾರದ್ದನ್ನೆಲ್ಲಾ ಮಾಡಿದರೂ ಆ ಚುನಾವಣೆಯಲ್ಲಿ ಅಜ್ಜನನ್ನು ಸೋಲಿಸಲಾಗಲಿಲ್ಲ. ಆ ಇಳಿವಯಸ್ಸಿನಲ್ಲೂ ವೆಂಕಟೇಶ ನಾಯಕರು ಮೊಮ್ಮಗನನ್ನು ಮಂಡಿಯೂರಿ ಮಣಿಸಿದ್ದರು. ಅದಕ್ಕೆ ಕಾರಣ ಇಡೀ ಕ್ಷೇತ್ರದಾದ್ಯಂತ ವೆಂಕಟೇಶ ನಾಯಕರಿಗಿದ್ದ ಜನಬೆಂಬಲ.

ಅಂತಹ ವೆಂಕಟೇಶ ನಾಯಕರು ರೈಲು ಅಪಘಾತದಲ್ಲಿ ಅಕಾಲಿಕವಾಗಿ ನಿಧನರಾದಾಗ ಸಹಜವಾಗಿಯೇ ಅವರ ಪರವಾದ ಅನುಕಂಪದ ಅಲೆ ಇಡೀ ಕ್ಷೇತ್ರದಾದ್ಯಂತ ಸುಳಿಯುತ್ತಿತ್ತು. ಅವರ ಸ್ಥಾನದಲ್ಲಿ ಅವರ ಯಾವ ಸಂಬಂಧಿಯನ್ನು ನಿಲ್ಲಿಸಿದರೂ ಗೆದ್ದೇ ಗೆಲ್ಲುತ್ತಾರೆ ಎಂಬ ವಿಶ್ವಾಸ ಕಾಂಗ್ರೆಸ್ ಪಕ್ಷದಲ್ಲಿತ್ತು. ಹಾಗಾಗಿ ಅವರ ಕಿರಿಯ ಮಗ ರಾಜಶೇಖರ ನಾಯಕನಿಗೆ ಟಿಕೆಟ್ ಕೊಟ್ಟು ಕಣಕ್ಕಿಳಿಸಿದರು. ಇಡೀ ಕ್ಷೇತ್ರದಾದ್ಯಂತ ಅಂತರಗಂಗೆಯಂತೆ ಸುಳಿಯುತ್ತಿದ್ದ ವೆಂಕಟೇಶ ನಾಯಕರ ಸಾವಿನ ಅನುಕಂಪದಲೆ ಕಾಂಗ್ರೆಸ್ಸಿಗೆ ಮೊದಲ ವರದಾನವಾಗಿತ್ತು. ತನ್ನ ಗಂಡ ಇಪ್ಪತ್ತು ವರ್ಷಗಳ ಕಾಲ ರಾಯಚೂರನ್ನು ಲೋಕಸಭೆಯಲ್ಲಿ ಪ್ರತಿನಿಧಿಸಿದ್ದರೂ, ಒಂದು ಅವಧಿಗೆ ದೇವದುರ್ಗವನ್ನು ಕರ್ನಾಟಕ ವಿಧಾನಸಭೆಯಲ್ಲಿ ಪ್ರತಿನಿಧಿಸಿದ್ದರೂ, ತನ್ನ ಮಗ ಈಗ ಲೋಕಸಭೆಯಲ್ಲಿ ರಾಯಚೂರನ್ನು ಪ್ರತಿನಿಧಿಸಿದ್ದರೂ, ಕಳೆದ ಮೂವತ್ತು ವರ್ಷಗಳಲ್ಲಿ ಗಂಡ ಮಕ್ಕಳು ಅನೇಕ ಚುನಾವಣೆಗಳನ್ನು ಎದುರಿಸಿದರೂ ಒಮ್ಮೆಯೂ ಬೀದಿಗಿಳಿದು ಮತ ಕೇಳದ ವೆಂಕಟೇಶ ನಾಯಕರ ಹೆಂಡತಿ ಈ ಬಾರಿ ಮಗ ರಾಜಶೇಖರ ನಾಯಕನ ಪರವಾಗಿ ಬೀದಿಗಿಳಿದು ಕೈಮುಗಿದು ಮತಯಾಚಿಸಿದರು. ವೆಂಕಟೇಶ ನಾಯಕರ ಸಾವಿನ ಅನುಕಂಪದಲೆಯನ್ನು ಅವರ ಹೆಂಡತಿ ಇನ್ನೂ ಜೀವಂತವಾಗಿರಿಸಿದ್ದರು.

ಇನ್ನು ಎರಡನೆಯ ಅಂಶ ಎಂದರೆ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿದ್ದದ್ದು ಕಾಂಗ್ರೆಸ್ ಅಭ್ಯರ್ಥಿಗಿದ್ದ ಎರಡನೆಯ ಅನುಕೂಲ. ಯಾವುದೇ ಉಪಚುನಾವಣೆಯಲ್ಲಿ ಸಾಮಾನ್ಯವಾಗಿ ಅಧಿಕಾರದಲ್ಲಿದ್ದ ಪಕ್ಷದ ಅಭ್ಯರ್ಥಿಗಳೇ ಗೆಲುವು ಸಾಧಿಸುತ್ತಾರೆ. ಆಡಳಿತ ಪಕ್ಷದ ಕೈಯಲ್ಲಿ ಅಧಿಕಾರವಿರುತ್ತದೆ, ಇಡೀ ಪ್ರಭುತ್ವ ಯಂತ್ರಾಂಗವಿರುತ್ತದೆ. ಅಧಿಕಾರಿಗಳು ಚುನಾವಣೆಯ ಸಮಯದಲ್ಲಿ ಚುನಾವಣಾ ಆಯೋಗದ ಕೈಕೆಳಗೆ ಕೆಲಸ ಮಾಡಿದರೂ ಚುನಾವಣೆಯ ನಂತರ ಅದೇ ಸರ್ಕಾರದ ಕೈಕೆಳಗೆ ಕೆಲಸ ನಿರ್ವಹಿಸಬೇಕಾಗುತ್ತದೆ. ಹೀಗಾಗಿ, ಆಡಳಿತಾರೂಢ ಪಕ್ಷದ ಅಭ್ಯರ್ಥಿಯ ಪರವಾಗಿ ಕೆಲಸ ಮಾಡದಿದ್ದರೂ ಅವರ ಬಗ್ಗೆ ಸ್ವಲ್ಪ ರಿಯಾಯಿತಿಯನ್ನಾದರೂ ತೋರಿಸುತ್ತಾರೆ. ಈ ಎಲ್ಲಾ ಅಂಶಗಳು ಈ ಉಪಚುನಾವಣೆಗೂ ಅನ್ವಯಿಸುತ್ತವೆ.


ಇನ್ನು ಮೂರನೆಯದಾಗಿ ಕುರುಡು ಕಾಂಚಾಣದ ಮಹಿಮೆ. ಕಾಂಗ್ರೆಸ್ ಅಭ್ಯರ್ಥಿ ರಾಜಶೇಖರ ನಾಯಕನನ್ನು ಗೆಲ್ಲಿಸುವುದಕ್ಕೋಸ್ಕರ ಅಬಕಾರಿ ಸಚಿವ ಸತೀಶ್ ಜಾರಕಿಹೊಳಿ ಕನಿಷ್ಠವೆಂದರೂ ಮೂವತ್ತು ಕೋಟಿ ದುಡ್ಡು ಸುರಿದಿದ್ದಾರೆ. ಜೊತೆಗೆ ಲೋಕೋಪಯೋಗಿ ಸಚಿವ ಎಚ್.ಸಿ. ಮಹಾದೇವಪ್ಪನೂ ಸರಿಸುಮಾರಾಗಿಯೇ ಹಣ ಚೆಲ್ಲಿದ್ದಾರೆ. ಇವರಿಬ್ಬರು ಒಟ್ಟಾಗಿ ಸುರಿದ ಹಣದ ಕಾಲುಭಾಗವನ್ನೂ ಬಿಜೆಪಿಯ ಅಭ್ಯರ್ಥಿ ಶಿವನಗೌಡ ನಾಯಕ ಖರ್ಚು ಮಾಡಿಲ್ಲ. ಹೀಗೆ ಹಣದ ಬೆಂಬಲ ರಾಜಶೇಖರ ನಾಯಕನಿಗೆ ದೊಡ್ಡ ಮಟ್ಟದಲ್ಲಿತ್ತು.

ನಾಲ್ಕನೆಯದಾಗಿ ಘಟಾನುಘಟಿಗಳ ಪ್ರಚಾರ. ಕಾಂಗ್ರೆಸ್ ಅಭ್ಯರ್ಥಿಯ ಪರವಾಗಿ ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಮೂರು ಬಾರಿ ಬಂದು ಪ್ರಚಾರಾಂದೋಲನದಲ್ಲಿ ಭಾಗವಹಿಸಿದ್ದಾರೆ. ಅದಲ್ಲದೇ ರಾಜ್ಯ ಸರ್ಕಾರದ ಮಂತ್ರಿಗಳಾದ ಸತೀಶ್ ಜಾರಕಿಹೊಳಿ, ಎಚ್.ಸಿ. ಮಹಾದೇವಪ್ಪ ಆಂಜನೇಯ, ಶರಣಪ್ರಕಾಶ ಪಾಟೀಲ ಮುಂತಾದವರು ಇಲ್ಲಿಯೇ ಠಿಕಾಣಿ ಹೂಡಿ ದುಡಿದಿದ್ದಾರೆ. ಜೊತೆಗೆ ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಹಾಗೂ ಹಿರಿಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ಕೂಡ ಎರಡು ಬಾರಿ ಬಂದು ಪ್ರಚಾರ ಮಾಡಿದ್ದಾರೆ.

ತಂದೆಯ ಸಾವಿನ ಅನುಕಂಪದಲೆ, ಆಡಳಿತಾರೂಢ ಪಕ್ಷದ ಅಧಿಕಾರದ ಬೆಂಬಲ, ನೀರಿನಂತೆ ಹಣ ಸುರಿಸಿದ ಕುಳಗಳು, ಉನ್ನತ ನಾಯಕರು









ಅರಕೆರೆ ಕುಟುಂಬದ ರಾಜಕೀಯ ಅಂತ್ಯ?

ದೇವದುರ್ಗ ಉಪಚುನಾವಣೆಯ ಫಲಿತಾಂಶ ಹಲವು ದೃಷ್ಟಿಯಿಂದ ಮಹತ್ವಪೂರ್ಣದ್ದಾಗಿದೆ. ಅದರಲ್ಲಿ ಬಹಳ ಮುಖ್ಯವಾದದ್ದು ಎಂದರೆ ದೇವದುರ್ಗ ತಾಲ್ಲೂಕಿನ ಅರಕೆರೆ ಗ್ರಾಮದ ವೆಂಕಟೇಶ ನಾಯಕರ ಕುಟುಂಬದ ಮುಂದಿನ ರಾಜಕೀಯ ಭವಿಷ್ಯಕ್ಕೆ ಸಂಬಂಧಿಸಿದ್ದು. ಈಗಾಗಲೇ ವಿವರಿಸಿರುವಂತೆ ವೆಂಕಟೇಶ ನಾಯಕರು ಕಳೆದ ಮೂವತ್ತು, ಮೂವತ್ತೈದು ವರ್ಷಗಳಿಂದ ರಾಜಕಾರಣದಲ್ಲಿದ್ದವರು. ತಳಮಟ್ಟದಿಂದ ಹಿಡಿದು ಉನ್ನತ ಸ್ಥಾನದವರೆಗೆ ಹಂತಹಂತವಾಗಿ ಬೆಳೆದುಬಂದವರು. ಇಪ್ಪತ್ತು ವರ್ಷಗಳ ಕಾಲ ರಾಯಚೂರನ್ನು ಲೋಕಸಭೆಯಲ್ಲಿ ಪ್ರತಿನಿಧಿಸಿದ್ದವರು. ಒಮ್ಮೆ ದೇವದುರ್ಗವನ್ನು ವಿಧಾನಸಭೆಯಲ್ಲಿ ಪ್ರತಿನಿಧಿಸಿದ್ದವರು. ಹೀಗಾಗಿ, ಅವರಿಗೆ ಜಿಲ್ಲೆಯ ರಾಜಕೀಯದಲ್ಲಿ ವಿಶೇಷ ಸ್ಥಾನಮಾನವಿತ್ತು. ಅದರಲ್ಲೂ ವಿಶೇಷವಾಗಿ ಜಿಲ್ಲೆಯ ಕಾಂಗ್ರೆಸ್‌ನಲ್ಲಿ ವಿಶೇಷ ಮನ್ನಣೆಯಿತ್ತು. ಈ ಕಾರಣದಿಂದಾಗಿಯೇ ಅವರ ಮಗ ಭಗವಂತರಾಯ ನಾಯಕ ಕೂಡ ರಾಜಕೀಯಕ್ಕೆ ಬರಲು ಸಾಧ್ಯವಾಯಿತು. 2014ರ ಲೋಕಸಭಾ ಚುನಾವಣೆಯಲ್ಲಿ ಭಗವಂತರಾಯ ನಿಂತು ತನ್ನ ಅಳಿಯನಾದ ಇದೇ ಶಿವನಗೌಡ ನಾಯಕನ ವಿರುದ್ಧ ಸೆಣಸಿ ಗೆದ್ದಿದ್ದರು. ಹೀಗೆ, ಮಗ ಮತ್ತು ಅಪ್ಪ ಎಂಪಿ, ಎಮ್ಮೆಲ್ಲೆಗಳಾಗಿದ್ದುಕೊಂಡು ಜಿಲ್ಲೆಯ ರಾಜಕಾರಣವನ್ನೂ ನಿಯಂತ್ರಿಸುತ್ತಿದ್ದರು. ಜಿಲ್ಲೆಯ ಕಾಂಗ್ರೆಸ್ ಪಕ್ಷ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಎನ್.ಎಸ್. ಬೋಸರಾಜು ಹಾಗೂ ಜಿಲ್ಲಾಧ್ಯಕ್ಷ ಎ. ವಸಂತಕುಮಾರ್ ನಡುವೆ ಧ್ರುವೀಕರಣಗೊಂಡು ನಲುಗುತ್ತಿರುವಾಗಲೂ ವೆಂಕಟೇಶ ನಾಯಕರು ಎರಡೂ ಬಣಗಳಿಂದ ಸಮಾನಾಂತರ ಕಾಯ್ದುಕೊಂಡಿತ್ತು. ಈ ಕಾರಣದಿಂದಲೇ ಆ ಕುಟುಂಬವು ಜಿಲ್ಲಾ ಕಾಂಗ್ರೆಸ್‌ನಲ್ಲಿ ಪ್ರಭಾವಿಯಾಗಿತ್ತು.

ಆದರೆ, ವೆಂಕಟೇಶ ನಾಯಕರ ನಿಧನದಿಂದ ಈಗ ಆ ಕುಟುಂಬದ ರಾಜಕೀಯ ಭವಿಷ್ಯವೇ ಡೋಲಾಯಮಾನವಾಗಿದೆ. ಅದಕ್ಕೆ ಈ ಉಪಚುನಾವಣೆಯಲ್ಲಿನ ಸೋಲೇ ಒರೆಗಲ್ಲು. ಈ ಸೋಲನ್ನು ಆ ಕುಟುಂಬದ ರಾಜಕೀಯ ಅವಸಾನದ ಮೊದಲ ಹೆಜ್ಜೆ ಎಂದು ವಿಶ್ಲೇಷಿಸಲಾಗುತ್ತಿದೆ. ಅದರಲ್ಲೂ ಭಗವಂತರಾಯರನ್ನು ಬಿಟ್ಟರೆ ಆ ಕುಟುಂಬದಲ್ಲಿ ಮತ್ತ್ಯಾರೂ ನಾಯಕರಿಲ್ಲ. ರಾಜಶೇಖರ ನಾಯಕ ಇರುವುದು ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿ.

ಆ ಕುಟುಂಬವನ್ನು ರಾಜಕೀಯವಾಗಿ ಮುಗಿಸಲು ಕಾಂಗ್ರೆಸ್‌ನ ಎರಡೂ ಬಣಗಳು ಹವಣಿಸುತ್ತಿರುವುದು ಹೊಸ ವಿಷಯವಲ್ಲ. ಆದರೆ, ಅದು ವೆಂಕಟೇಶ ನಾಯಕರು ಜೀವಂತವಾಗಿರುವಾಗ ಸಾಧ್ಯವಾಗಿರಲಿಲ್ಲ. ಈಗ ಅವರ ನಿಧನದ ನಂತರ ಆ ಷಡ್ಯಂತ್ರಕ್ಕೆ ಚಾಲನೆ ಬರಲಿದೆ. ಈ ಉಪಚುನಾವಣೆಯಲ್ಲಿ ಹಣ, ಅಧಿಕಾರ, ವರ್ಚಸ್ಸು, ಅನುಕಂಪ ಎಲ್ಲಾ ಇದ್ದರೂ ರಾಜಶೇಖರ ನಾಯಕ ಸೋತಿರುವುದರಿಂದ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಯಾವ ಕಾರಣಕ್ಕೂ ಆತನಿಗೆ ಟಿಕೆಟ್ ಕೊಡುವುದಿಲ್ಲ. ಬೇರೆ ಯಾವುದಾದರೂ ಅಭ್ಯರ್ಥಿಯನ್ನು ಹುಡುಕಬೇಕಾಗುತ್ತದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಾಲಿ ಸಂಸದ ಎಂಬ ಕಾರಣಕ್ಕೆ ಭಗವಂತರಾಯರಿಗೆ ಟಿಕೆಟ್ ಕೊಡಬಹುದು. ಆದರೆ, ಕಾಂಗ್ರೆಸ್ಸಿನ ಎರಡೂ ಬಣಗಳು ಸೇರಿ ಆತನನ್ನು ಸೋಲಿಸಿ ಮನೆಗೆ ಕಳಿಸುವುದು ಗ್ಯಾರಂಟಿ. ಅಲ್ಲಿಗೆ ಅರಕೆರಾ ಕುಟುಂಬ ರಾಜಕೀಯವಾಗಿ ನಿರ್ನಾಮವಾದಂತೆ.

ಇನ್ನು ಹೊರಗಿನಿಂದ ಆ ಕುಟುಂಬದ ರಾಜಕೀಯ ಭವಿಷ್ಯವನ್ನು ಹೊಸಕಿಹಾಕುವುದಕ್ಕೆ ಬಿಜೆಪಿಯ ಶಿವನಗೌಡ ನಾಯಕ ಹೇಗೂ ಇದ್ದಾನೆ. ಆ ಕುಟುಂಬವನ್ನು ಹೆಡೆಮುರಿ ಕಟ್ಟುವುದಕ್ಕೆ ಸಿಗುವ ಯಾವ ಅವಕಾಶವನ್ನೂ ಆತ ಇಲ್ಲಿಯ ತನಕ ಬಿಟ್ಟಿಲ್ಲ. ಕೆಲವು ವರ್ಷಗಳ ಹಿಂದಿನ ತನಕವೂ ಅದೇ ಕುಟುಂಬದ ಭಾಗವಾಗಿದ್ದ ಶಿವನಗೌಡ 2008ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಜಿಗಿದು ತನ್ನ ಅಜ್ಜ ಎ.ವೆಂಕಟೇಶ ನಾಯಕರ ವಿರುದ್ಧವೇ ತೊಡೆತಟ್ಟಿ ಗೆದ್ದಿದ್ದ. ನಂತರ ಆಪರೇಷನ್ ಕಮಲದಲ್ಲಿ ತನ್ನನ್ನು ಮಾರಿಕೊಂಡು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಿಜೆಪಿಗೆ ಸೇರಿದ. ನಂತರ ನಡೆದ ಉಪಚುನಾವಣೆಯಲ್ಲಿ ಹಣದ ಹೊಳೆಯನ್ನು ಹರಿಸಿ ಕಾಂಗ್ರೆಸ್ಸಿನಿಂದ ನಿಂತಿದ್ದ ತನ್ನ ಮಾವ ಭಗವಂತರಾಯ ನಾಯಕನನ್ನೂ ಸೋಲಿಸಿ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾದ. ಆನಂತರ 2013ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ತನ್ನ ಅಜ್ಜ ವೆಂಕಟೇಶ ನಾಯಕರ ಎದುರು ಹಾಗೂ 2014ರ ಲೋಕಸಭಾ ಚುನಾವಣೆಯಲ್ಲಿ ತನ್ನ ಮಾವ ಭಗವಂತರಾಯ ನಾಯಕರ ಎದುರು ಮಣ್ಣು ಮುಕ್ಕಿದ್ದ. ಹಾಗಾಗಿ, ಆ ಕುಟುಂಬದ ವಿರುದ್ಧ ಸೇಡು ತೀರಿಸಿಕೊಳ್ಳುವುದಕ್ಕೆ ಹಾತೊರೆಯುತ್ತಿದ್ದ. ಅದೇ ಸಮಯದಲ್ಲಿ ವೆಂಕಟೇಶ ನಾಯಕರ ನಿಧನದಿಂದ ಸೃಷ್ಟಿಯಾದ ಹಾಗೂ ರಾಜಶೇಖರ ನಾಯಕನ ಸ್ಪರ್ಧೆಯಿಂದ ಸೃಷ್ಟಿಯಾದ ಅನುಕೂಲಕರ ವಾತಾವರಣವನ್ನು ಚೆನ್ನಾಗಿಯೇ ಬಳಸಿಕೊಂಡ ಶಿವನಗೌಡ ಅರಕೆರಾ ಕುಟುಂಬಕ್ಕೆ ಸರಿಯಾಗಿ ಏಟು ಕೊಟ್ಟಿದ್ದಾನೆ.

ಹೀಗೆ, ಒಂದೆಡೆ ಕಾಂಗ್ರೆಸ್ ಒಳಗಿನ ಷಡ್ಯಂತ್ರ ಹಾಗೂ ಹೊರಗಡೆ ಬಿಜೆಪಿಯ ಶಿವನಗೌಡನ ದಾಳಿ - ಇವೆರಡರಿಂದ ಅರಕೆರಾ ನಾಯಕರ ಕುಟುಂಬ ರಾಜಕೀಯವಾಗಿ ಅವಸಾನವಾಗುವುದು ಖಚಿತವಾಗಿ ಕಾಣುತ್ತಿದೆ.

...ಸುಂಡಾಗಿ ಪ್ರಚಾರ ಮಾಡಿದ್ದು - ಇಷ್ಟೆಲ್ಲಾ ಇದ್ದಾಗ ...ಹೆಸರಿನಲ್ಲಿ ಒಂದು ನಾಯಿಯನ್ನೋ, ನರಿಯನ್ನೋ ...ದರೂ ಗೆದ್ದುಬಿಡುತ್ತಿತ್ತು. ಅಂಥಾದ್ದರಲ್ಲಿ ಕಣ್ಣು, ಮೂಗು, ...: ಕಟ್ಟುಮಸ್ತಾದ ದೇಹ ಎಲ್ಲವನ್ನೂ ...ಂಡಿರುವ ರಾಜಶೇಖರ ನಾಯಕ ಹೀನಾಯವಾಗಿ ...ತ್ತಾನೆಂದರೆ ಏನರ್ಥ?


...ಶೇಖರ ನಾಯಕನ ವಿರೋಧಿ ಅಲೆ!

...ಷ್ಟೆಲ್ಲಾ ಇದ್ದರೂ ರಾಜಶೇಖರ ನಾಯಕ ...ಸುತ್ತಾನೆಂದರೆ ಅದಕ್ಕೆ ಪ್ರಮುಖ ಕಾರಣ ಆತ ...ರೆದುರು ಬಡಬಡಿಸಿ ಹೇಳಿದಂತೆ ಕಾಂಗ್ರೆಸ್ ...ದ ವಿರುದ್ಧ ಇರುವ ಆಡಳಿತವಿರೋಧಿ ಅಲೆ ...ಏಕೆಂದರೆ, ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ...ರಕ್ಕೆ ಬಂದಮೇಲೆ ದೇವದುರ್ಗದ ಜನರಿಗೆ ಏನೂ ...ು ಮಾಡಿಲ್ಲ, ಏನಾದರೂ ಮಾಡಿದ್ದರೆ ಒಳ್ಳೆಯದನ್ನೇ ...ದೆ. ಸರ್ಕಾರ ಈ ಭಾಗದ ನೀರಾವರಿ ಯೋಜನೆ ...ಗಿ ಪ್ರತೀವರ್ಷ ಹತ್ತು ಸಾವಿರ ಕೋಟಿ ರೂಪಾಯಿ ...ಸುತ್ತಿದೆ. ಅನ್ನಭಾಗ್ಯ, ಕ್ಷೀರಭಾಗ್ಯಗಳಂತಹ ...ನೆಗಳು ಇಡೀ ರಾಜ್ಯದ ಬಡವರಿಗೆ ಅನುಕೂಲವಾಗಿ ...ತೆಯೇ ಏಶಿಯಾದ ಅತ್ಯಂತ ಹಿಂದುಳಿದ ತಾಲೂಕು ... ಕುಖ್ಯಾತಿಗೆ ಪಾತ್ರವಾಗಿರುವ ದೇವದುರ್ಗದ ...ರಿಗೂ ಅನುಕೂಲವಾಗಿದೆ. ಹಾಗಾಗಿ, ಸಿದ್ದರಾಮಯ್ಯ ...ನ್ನಾಗಲೀ ಅಥವಾ ಕಾಂಗ್ರೆಸ್ ಪಕ್ಷವನ್ನಾಗಲೀ ...ುವಂತಹ ಅವಶ್ಯಕತೆ ದೇವದುರ್ಗದ ಜನರಿಗೆ ಇಲ್ಲ. ...ದಲ್ಲಿ ಚುನಾವಣೆಯ ಸಮಯದಲ್ಲಿ ದೇವದುರ್ಗದಲ್ಲಿ ...ತ್ತಿದ್ದುದು ಆಡಳಿತ ವಿರೋಧಿ ಅಲೆಯಲ್ಲ; ಬದಲಿಗೆ ...ಶೇಖರ ನಾಯಕನ ವಿರುದ್ಧದ ಅಲೆ!!

...ಚುನಾವಣೆಯ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಯಾವ ...ಣೆಯ ಹವಾ ಹೇಗಿದೆ ಎಂಬುದನ್ನು ಅರಿಯುವುದಕ್ಕೆ ... ಇಡೀ ಕ್ಷೇತ್ರದಾದ್ಯಂತ ಸುತ್ತಾಡಿದಾಗಲೇ ರಾಜಶೇಖರ ...ಕನ ವಿರುದ್ಧದ ಅಲೆಗಳು ಗಾಢವಾಗಿ ಬೀಸುತ್ತಿರುವುದು ...ಬಂತು. ಬಿಜೆಪಿಯಿಂದ ಸ್ಪರ್ಧಿಸಿದ್ದ ಕೆ. ಶಿವನಗೌಡ ...ಕನ ಬಗ್ಗೆಯಂತೂ ದೇವದುರ್ಗ ಮಾತ್ರವಲ್ಲ, ಇಡೀ ...ಚೂರು ಜನರಿಗೆ ಒಳ್ಳೆಯ ಅಭಿಪ್ರಾಯವಿಲ್ಲ. ಆತನ ...ಳತನ, ಒರಟುತನ, ಸರ್ವಾಧಿಕಾರಿ ಧೋರಣೆ, ...ಸು ಬಾಯಿ, ರೌಡಿಸಂ, ದರ್ಪ, ದೌರ್ಜನ್ಯಗಳು ...ರ್ಗ ಮತ್ತು ರಾಯಚೂರು ಜಿಲ್ಲೆಯಾಚೆಗೂ ಗೊತ್ತು. ...ರಣಕ್ಕಾಗಿಯೇ ಆತನನ್ನು 2013ರ ವಿಧಾನಸಭಾ ...ವಣೆಯಲ್ಲಿ ದೇವದುರ್ಗದ ಜನ ಸೋಲಿಸಿ ಆತನ ...ಹಾಗೂ ಸಜ್ಜನ ರಾಜಕಾರಣಿ ಕಾಂಗ್ರೆಸ್ಸಿನ ಎ. ವೆಂಕಟೇಶ ...ಕರನ್ನು ಗೆಲ್ಲಿಸಿದ್ದರು. ಮತ್ತೆ 2014ರಲ್ಲಿ ಆತ ...ಸಭಾ ಚುನಾವಣೆಯಲ್ಲಿ ರಾಯಚೂರು ಕ್ಷೇತ್ರದಿಂದ ...ದ. ಇಡೀ ದೇಶದಾದ್ಯಂತ ಬೀಸುತ್ತಿದ್ದ ಮೋದಿ ...ರಾಯಚೂರನ್ನೂ ಆಕ್ರಮಿಸಿದ್ದರೂ ಜನ ಅದರ ...ದಕ್ಕೊಳಗಾಗದೇ ಬಿಜೆಪಿಯಿಂದ ಸ್ಪರ್ಧಿಸಿದ್ದ ಶಿವನಗೌಡ ...ಕನಿಗೆ ಮಣ್ಣು ತಿನ್ನಿಸಿದ್ದರು. ಅವನ ವಿರುದ್ಧ ಕಾಂಗ್ರೆಸ್ ...ಂದ ನಿಂತಿದ್ದ ಅವನ ಮಾವ ಹಾಗೂ ವೆಂಕಟೇಶ ...ಕನ ಮಗನಾದ ಭಗವಂತರಾಯ ನಾಯಕನನ್ನು ...ದ್ದರು. ಶಿವನಗೌಡ ನಾಯಕನ ಬಗ್ಗೆ ಇಷ್ಟೆಲ್ಲಾ ಹೇವರಿಕೆ ...ದ ದೇವದುರ್ಗದ ಜನ ಈ ಬಾರಿ ಆತನನ್ನೇ ...ಲ್ಲಿಸಿದರು ಎಂಬುದು ಸಹಜವಾಗಿ ಕಾಡುವ ಪ್ರಶ್ನೆ. ...ನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಕ್ಷೇತ್ರದ ...ದಾರರನ್ನು ವಿಚಾರಿಸಿದಾಗ ಹೊರಬಿದ್ದ ಅಚ್ಚರಿಯ ... ಎಂದರೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ವೆಂಕಟೇಶ ...ಕರ ಕಿರಿಯ ಮಗ ರಾಜಶೇಖರ ನಾಯಕ ಶಿವನಗೌಡ ...ಕನಿಗಿಂತ ಕೆಟ್ಟ ಮನುಷ್ಯ ಎಂಬುದು! ಶಿವನಗೌಡನನ್ನು ...ಗೇ ಸಹಿಸಿಕೊಳ್ಳಬಹುದು, ಆದರೆ ರಾಜಶೇಖರ ...ಕನನ್ನು ಸಹಿಸಿಕೊಳ್ಳುವುದನ್ನು ಕಲ್ಪಿಸಿಕೊಳ್ಳುವುದಕ್ಕೂ ...ದ ಜನ ಸಿದ್ಧರಿರಲಿಲ್ಲ. ರಾಜಶೇಖರ ನಾಯಕನ ಬಗ್ಗೆ ...ದಲ್ಲಿ ಎಂತಹ ಅಭಿಪ್ರಾಯವಿದೆ ಎನ್ನುವುದಕ್ಕೆ ಒಬ್ಬ ...ದಾತ ಹೇಳಿದ ಮಾತು ಇನ್ನೂ ಕಿವಿಯಲ್ಲಿ ...ರ್ಗುಡುತ್ತಿದೆ: "ಇನ್ನೋವಾ ಕಾರಿನಲ್ಲಿ ರಾಜಶೇಖರ ...ಕ ತನ್ನ ಡ್ರೈವರ್ ಇಬ್ಬರೇ ಹೋಗುತ್ತಿರುವಾಗ ...ಯುಪಿದ್ದವರು ದಾರಿಯಲ್ಲಿ ಸಿಕ್ಕರೆ ಹತ್ತಿಸಿಕೊಳ್ಳದೇ ...ಖಿ ತಿರಾಗಿಸಿಕೊಂಡು ಜಂಯತ್ ಅಂತ ...ಗಿಬಿಡುತ್ತಾರೆ. ಯಾಕೆ ಗೊತ್ತಾ? ಮುಂದೆ ಅವರಿಗೆ ... ಕುಡಿಸಬೇಕಾಗುತ್ತದೆ, ಹತ್ತು ರೂಪಾಯಿ ...ಗಿಬಿಡುತ್ತದೆ ಅಂತ..." ಇದು ಒಬ್ಬ ನಾಯಕನ ...ಹಾ? ಇಂತಹ ಮನುಷ್ಯನನ್ನು ಹುಡುಕಿ ಹುಡುಕಿ ...ಸ್ ಟಿಕೆಟ್ ಕೊಟ್ಟಾಗಲೇ ಆತನ ಸೋಲು ...ತವಾಗಿತ್ತು. ಹೀಗಾಗಿ, ರಾಜಶೇಖರ ನಾಯಕನನ್ನು ...ಲಿಸುವುದಕ್ಕಾಗಿಯೇ ಜನ ಶಿವನಗೌಡ ನಾಯಕನಿಗೆ ...ಹಾಕಿದರೆ ಹೊರತು ಶಿವನಗೌಡನ ಮೇಲಿನ ...ಯಿಂದಲ್ಲ ಎಂಬುದು ಸ್ಪಷ್ಟ.

...ವೆಂಕಟೇಶ ನಾಯಕರ ಸಾವಿನಿಂದ ತೆರವಾದ ಕ್ಷೇತ್ರ ... ಕಾರಣಕ್ಕೆ, ಅದೇ ಕುಟುಂಬದವರಿಗೆ ಟಿಕೆಟ್ ...ಬೇಕು ಎಂದು ಹೈಕಮಾಂಡ್ ತೀರ್ಮಾನಿಸಿದ್ದು ...ಸ್ ಮಾಡಿದ ಅತಿದೊಡ್ಡ ತಪ್ಪು. ■

ಹೆಬ್ಬಾಳ: ಫರೀದ್ ಮೊಮ್ಮಗ ಹರಕೆಯ ಕುರಿಯಾಗಿದ್ದೇಕೆ?



ಉಪಚುನಾವಣೆ ನಡೆದ ಮೂರು ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಬೀದರ್‌ನಲ್ಲೂ ಗೆಲ್ಲದೆ ಹೋಗಿದ್ದರೆ ಏನಾಗುತ್ತಿತ್ತು?

ಹೆಚ್ಚೆಂದರೆ ಕುಮಾರಸ್ವಾಮಿ ಮುಖ್ಯಮಂತ್ರಿ ಸಿದ್ದು ರಾಜೀನಾಮೆಗೆ ಒತ್ತಾಯಿಸುತ್ತಿದ್ದರಲ್ಲವೆ? ಅಥವಾ ಬಿಜೆಪಿ ನಾಯಕರು ಸರ್ಕಾರಕ್ಕೆ ನೈತಿಕತೆ ಇಲ್ಲವೆಂದು ಮುಖ್ಯಮಂತ್ರಿಗಳು 'ಪದತ್ಯಾಗ' ಮಾಡಬೇಕೆನ್ನುತ್ತಿದ್ದರೆ? ಒಂದಷ್ಟು ನ್ಯೂಸ್ ಚಾನಲ್ಲುಗಳ ಪ್ಯಾನೆಲ್ ಡಿಸ್ಕಷನ್ನುಗಳಲ್ಲಿ ಕೆಲ ಪತ್ರಿಕೆಗಳ ಸಂಪಾದಕೀಯಗಳಲ್ಲಿ ಇರುತ್ತಿದ್ದ ಪ್ರಸ್ತಾಪ ಇದೆ ತಾನೆ?

ಮುಖ್ಯಮಂತ್ರಿಗಳಿಗೆ ನೈತಿಕ ಹಕ್ಕಿಲ್ಲ!

ಬೀದರ್, ದೇವದುರ್ಗಗಳ ಹಕೀಕತ್ತೇನೇ ಇರಲಿ. ವಿಧಾನಸೌಧದ ಸಿಎಂ ಕಚೇರಿಗೆ ಕೂಗಳತೆಯ ಹೆಬ್ಬಾಳಕ್ಕೆ ಬಂದರೆ ನಿಜಕ್ಕೂ ಅಧಿಕಾರಸ್ಥ ಪಕ್ಷವೊಂದಕ್ಕೆ ಇದು ತಲೆತಗ್ಗಿಸಬೇಕಾದ ಸಂಗತಿಯೆನ್ನುವುದರಲ್ಲಿ ಎರಡು ಮಾತಿಲ್ಲ. ಬಹುಶಃ ಸಿಎಂ ಸಿದ್ದು ಕೂಡ ಅದನ್ನು ಒಪ್ಪಬಹುದೇನೊ. ಏಕೆಂದರೆ ಸರ್ಕಾರದ ಏನೇ ಆಗುಹೋಗುಗಳಿಗೂ ತಲೆಕೊಡಬೇಕಾದದ್ದು ಮುಖ್ಯಮಂತ್ರಿಯಲ್ಲದೆ ಮತ್ತಾರು?

ಹೆಬ್ಬಾಳ ಕೇವಲ ಮುಖ್ಯಮಂತ್ರಿಯ ಮಟ್ಟಿಗಷ್ಟೇ ಅಲ್ಲ, ಅಧಿಕಾರಸ್ಥ ಕಾಂಗ್ರೆಸ್ ಸರ್ಕಾರದ ಪ್ರತಿಷ್ಠೆಗೂ ಸವಾಲಾಗಿ ನಿಂತ ರಣಾಂಗಣ. ಈ ಹಿಂದೆ ಭಾರೀ ಅಂತರದಲ್ಲಿ ಸೋತಿದ್ದ ಸರ್ಕಾರಿ ಪಕ್ಷದ ಅಭ್ಯರ್ಥಿಯ ಕ್ಷೇತ್ರವಾಗಿದ್ದಾಗ್ಯೂ ಉಪಚುನಾವಣೆ ಎದುರಾದಾಗಲೆಲ್ಲ ಸರ್ಕಾರ ತನ್ನೆಲ್ಲಾ ತಾಕತ್ತು ಬಳಸಿ ಗೆದ್ದ ಉದಾಹರಣೆಗಳು ಅದೆಷ್ಟಿಲ್ಲ, ದೇವೇಗೌಡ, ಹೆಗಡೆ, ಬಂಗಾರಪ್ಪ ಕೃಷ್ಣ ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿ ಇದ್ದಾಗೆಲ್ಲ ಅಧಿಕಾರಸ್ಥರೇ ಉಪಚುನಾವಣೆಗಳನ್ನೆಲ್ಲ ದಕ್ಕಿಸಿಕೊಂಡ ಹತ್ತಾರು ನಿದರ್ಶನಗಳಿರುವಾಗ ಮುಖ್ಯಮಂತ್ರಿ ಸಿದ್ದುಗೇಕೆ ಹೆಬ್ಬಾಳ ಈ ಪಾಟಿ ತಲೆನೋವಾಯಿತು?

ಡಿಕೆಶಿ ಸಾರಥ್ಯ?

ಅಷ್ಟಕ್ಕೂ ಕಳೆದ ಪಾಲಿಕೆ ಚುನಾವಣೆಯ ಫಲಿತಾಂಶವನ್ನೇ ಲೆಕ್ಕವಿಟ್ಟರೂ ಬಿಜೆಪಿಗಿಂತಲೂ ಕಾಂಗ್ರೆಸ್ಸೇ ಮುಂದಿತ್ತಲ್ಲವೇ? ಜೆಡಿಎಸ್‌ನ ಇಬ್ಬರು ಕೌನ್ಸಿಲರ್‌ಗಳು, ಕಾಂಗ್ರೆಸ್‌ನಿಂದ ಇಬ್ಬರು ಮತ್ತು ಬಿಜೆಪಿಯಿಂದ ನಾಲ್ವರು ಪಾಲಿಕೆ ಸದಸ್ಯರಿದ್ದಾಗಲೂ ಒಟ್ಟಾರೆ ಪಕ್ಷವಾರು ಮತಗಳ ಲೆಕ್ಕದಲ್ಲೂ ಕಾಂಗ್ರೆಸ್ಸೇ ಮುಂದಿತ್ತಲ್ಲವೆ? ಬಿಜೆಪಿ ಅಭ್ಯರ್ಥಿ ನಾರಾಯಣಸ್ವಾಮಿ ಸ್ಥಳೀಕನಲ್ಲ, ಕ್ಷೇತ್ರಕ್ಕೆ ಹೊಸಬ. ಹೆಬ್ಬಾಳದ ವ್ಯಾಪ್ತಿಯ ಎಲ್ಲಾ ಪೊಲೀಸ್ ಠಾಣೆಗಳಲ್ಲೂ ಸರ್ಕಾರಿ ನಿಷ್ಠ ಪೊಲೀಸ್ ಅಧಿಕಾರಿಗಳೇ ಇದ್ದರಲ್ಲ, ಪಾಲಿಕೆಯ ಅಧಿಕಾರ, ಪೊಲೀಸ್, ಸರ್ಕಾರಿ ಯಂತ್ರಾಂಗ, ಇಂಟಲಿಜೆನ್ಸ್ ವ್ಯವಸ್ಥೆ ಎಲ್ಲವೂ ಸಕ್ರಿಯವಾಗಿದ್ದೂ ಮುಖ್ಯಮಂತ್ರಿ ಗೃಹ ಕಚೇರಿಯ ಮಗ್ಗುಲಿನ ಕ್ಷೇತ್ರವೊಂದನ್ನು ಗೆಲ್ಲುವುದು ಅಷ್ಟೊಂದು ಕಷ್ಟವೆ?

ಹೋಗಲಿ, ಹೆಬ್ಬಾಳದ ರಣರಂಗದ ಸಾರಥ್ಯ ವಹಿಸಿದ್ದಾದರೂ ಯಾರು? ಯುದ್ಧತಂತ್ರ ನಿಪುಣ ಡಿಕೆಶಿ! ಖುದ್ದು ಗೃಹಮಂತ್ರಿ ಪರಮೇಶ್ವರ್, ಬೆಂಗಳೂರು ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಮತ್ತೊಬ್ಬ ಮಂತ್ರಿ ರೋಷನ್ ಬೇಗ್; ಹೀಗೆ ಒಬ್ಬರಲ್ಲ ಇಬ್ಬರಲ್ಲ ಸಚಿವ ಸಂಪುಟದ ಐವರು ಮಂತ್ರಿಗಳು, ಕೇಂದ್ರ ನೇತಾರರಾದ ಖರ್ಗೆ, ಎಸ್ಸೆಂ ಕೃಷ್ಣಾದಿಯಾಗಿ ಬೆಂಗಳೂರಿನ ಅರ್ಧ ಡಜನ್ ಕಾಂಗ್ರೆಸ್ ಶಾಸಕರು, ಒಂದು ಡಜನ್ ಕಾಂಗ್ರೆಸ್ ಮುಖಂಡರು ಮತ್ತು ಬರೋಬ್ಬರಿ ಎರಡು ಡಜನ್ ಪಾಲಿಕೆ ಸದಸ್ಯರೆಲ್ಲ ಸೇರಿಕೊಂಡು ಹೆಬ್ಬಾಳದಲ್ಲಿ ಬಿಜೆಪಿಯನ್ನು ಸೋಲಿಸಲಾಗಲಿಲ್ಲ ಎಂದರೆ ಏನರ್ಥ? ಸರ್ಕಾರವೊಂದಕ್ಕೆ ತನ್ನ ಮಡಿಲಲ್ಲೇ ಇರುವ ಕ್ಷೇತ್ರವೊಂದನ್ನು ಗೆಲ್ಲುವುದು ಅಷ್ಟೊಂದು ಕಷ್ಟವೆ? ಹಾಗಾದರೆ, ಬಿಜೆಪಿಯ ಗೆಲುವಿಗೆ ಕಾರಣವಾದ ಪವಾಡವಾದರೂ ಏನು?

ಒಂದೇ ಮಾತಲ್ಲಿ ಹೇಳಬೇಕೆಂದರೆ ಅದು ಚುನಾವಣೆಯೊಂದರ communalisationನ ಪ್ರತಿಫಲ ಮತ್ತು ದೇವೇಗೌಡರು ಮಾಡಿದ ಪಟ್ಟಾವಮಾನದ ಪರಿಣಾಮ. ಕಳೆದ ಚುನಾವಣೆಯಲ್ಲಿ ಇದೇ ರೆಹಮಾನ್ ಷರೀಫ್ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಆತನ ಕಟ್ಟಾ ನಾಯ್ಡು ಮನೆಯ ಲೆಕ್ಕದ ಆಳಿನಂತಿದ್ದ ಜಗದೀಶ್ ಕುಮಾರ್ ಯಾರು ಎತ್ತ ಎಂಬುದೇ ಹೆಬ್ಬಾಳದ ಜನಕ್ಕೆ ಗೊತ್ತಿರಲಿಲ್ಲ, ಬಿಜೆಪಿ ಪರವಾಗಿ ಚುನಾವಣೆ ನಡೆಸಿದ್ದು ಕಟ್ಟಾ ನಾಯ್ಡುವೇ ಆದರೂ ಕಾಂಗ್ರೆಸ್ಸಿಗೆ ಗೆಲ್ಲುವ ಎಲ್ಲಾ ಅವಕಾಶಗಳೂ ಇದ್ದವು. ಏಕೆಂದರೆ ಆ ಹೊತ್ತಿಗೆ ಬಿಜೆಪಿಯ ಓಟು ಬ್ಯಾಂಕ್ ಒಡೆಯಲೆಂದೇ ಯಡಿಯೂರಪ್ಪನವರ ಕೆಜೆಪಿಯಿತ್ತು, ಆಗ ಕೆಜೆಪಿ ಅಭ್ಯರ್ಥಿಯಾಗಿದ್ದದ್ದು ಕಟ್ಟಾ ನಾಯ್ಡುವಿನ ಕಟ್ಟಾ ಎದುರಾಳಿಯಾಗಿದ್ದ ಮಾಜಿ ಬಿಜೆಪಿ ನಾಯಕ ಮುನಿಕೃಷ್ಣ ಬರೋಬ್ಬರಿ ಆರು ಸಾವಿರದಷ್ಟು ಬಿಜೆಪಿ ಮತಗಳನ್ನು ಮುನಿಕೃಷ್ಣ ಕಿತ್ತುಕೊಂಡರು. ಇದರ ಹೊರತಾಗ್ಯೂ ಬಿಜೆಪಿಗೆ ಮತ್ತೊಂದು ಅಡ್ಡಿಯೆಂಬಂತೆ ಕಣಕ್ಕಿಳಿದದ್ದು ಲೋಕಸತ್ತಾ ಅದರ ಅಭ್ಯರ್ಥಿಯಾಗಿದ್ದ ಶ್ರೀಧರ್ ಪೆಬ್ಬಿಶೆಟ್ಟಿ ಕೂಡ ಆರು ಸಾವಿರದಷ್ಟು ಬಿಜೆಪಿ ಮತಗಳನ್ನು ಕಿತ್ತುಕೊಂಡರು. ಅಲ್ಲಿಗೆ ಹನ್ನೆರಡು ಸಾವಿರದಷ್ಟು ಬಿಜೆಪಿಯ ಮತಗಳಿಗೆ ಈ ಇಬ್ಬರೇ ಖಾಸಿಗ್ಗೆದಂತಾಗಿತ್ತು.

ಜಾತಿ ಧ್ರುವೀಕರಣ!

ಇದರ ಹೊರತಾಗ್ಯೂ ಕಾಂಗ್ರೆಸ್ ಪಾಲಿಗೆ ವರದಾನವೆಂಬಂತೆ ಪರಿಣಮಿಸಿದ್ದು ಅಬ್ದುಲ್ ಅಜೀಂ. ದೇವೇಗೌಡರ ಅಧಿಕೃತ ವಕ್ತಾರನೆಂಬಂತೆ ಭಾರೀ ನಿರೀಕ್ಷೆ ಹೊತ್ತೇ ಜೆಡಿಎಸ್ ಅಭ್ಯರ್ಥಿಯಾಗಿ ಷರೀಫರ ಮೊಮ್ಮಗನ ವಿರುದ್ಧ ಹೆಬ್ಬಾಳದ ಅಖಾಡಕ್ಕಿಳಿದ ಅಜೀಂ 25 ಸಾವಿರದಷ್ಟು ಮತಗಳೇನೋ ಗಿಟ್ಟಿಸಿಕೊಂಡರು. ಬಹುತೇಕರು ಅದನ್ನು ಮುಸ್ಲಿಂ ಮತಗಳೆಂದೇ ಭಾವಿಸಿದ್ದರು: ಆದರದು ಗೌಡರ ಮತಗಳೆಂಬುದು ಈಗ ನಿಕ್ಕಿಯಾಗುತ್ತಿದೆ. ಮುಸ್ಲಿಂ ಮತಗಳೇ ಆಗಿದ್ದರೆ ಈಗ ಜೆಡಿಎಸ್ ಅಭ್ಯರ್ಥಿಯಾಗಿರುವ ಇಸ್ಮಾಯಿಲ್ ಷರೀಫ್‌ನಿಗೂ ಅಷ್ಟೇ ಮತಗಳು ಬರಬೇಕಿತ್ತಲ್ಲವೇ?

ಅಬ್ದುಲ್ ಅಜೀಂ ಕಿತ್ತಿದ್ದ 25 ಸಾವಿರದಷ್ಟು ಮತಗಳು, ಕೆಜೆಪಿಯ ಮುನಿಕೃಷ್ಣರ ಆರು ಸಾವಿರ ಮತ್ತು ಲೋಕಸತ್ತಾದ ಶ್ರೀಧರ್ ಕಿತ್ತಿದ್ದ ಮತ್ತೆ ಆರು ಸಾವಿರ ಮತಗಳೆಲ್ಲ ಈ ಬಾರಿ ಬಿಜೆಪಿ ಪಾಲಾಗದೇ ಹೋಗಿದ್ದರೆ ರೆಹಮಾನ್ ಷರೀಫ್ ಸಲೀಸಾಗಿ ಗೆದ್ದು ಬಿಡಬೇಕಿತ್ತು, ಏಕೆಂದರೆ ಕಳೆದ ಬಾರಿ ಕಟ್ಟಾ ಭಂಟ ಜಗದೀಶ್‌ಕುಮಾರ್ ಗೆದ್ದಿದ್ದು ಕೇವಲ 4600 ಮತಗಳ ಅಂತರದಿಂದ. ಆಗ ಕಾಂಗ್ರೆಸ್ಸಿನ ರೆಹಮಾನ್ ಷರೀಫ್ ಗಿಟ್ಟಿಸಿದ್ದು ಸುಮಾರು 33 ಸಾವಿರದಷ್ಟು ಮತಗಳನ್ನು. ಅಂದರೆ ಆಗ ಬಿಜೆಪಿಗೆ ಬಂದದ್ದು 38 ಸಾವಿರದಷ್ಟು ಮಾತ್ರ. ಈ ಬಾರಿ ರೆಹಮಾನ್ ಷರೀಫ್ ಕಳೆದ ಬಾರಿಗಿಂತ 8 ಸಾವಿರದಷ್ಟು ಅಧಿಕ ಮತಗಳನ್ನು ಪಡೆದೂ ಸೋಲುತ್ತಾರೆಂದರೆ ಏನರ್ಥ? ಬಿಜೆಪಿಗೆ ಹೆಚ್ಚುವರಿಯಾಗಿ ಬರೋಬ್ಬರಿ 20 ಸಾವಿರದಷ್ಟು ಮತಗಳಾದರೂ ಯಾವ ಮಾಯೆಯಿಂದ ಬಂತು?

ಇದನ್ನೇ ಜಾತಿ ಒಳಗುಟ್ಟು ಅಥವಾ ಒಳಪೆಟ್ಟು ಅನ್ನುವುದು. ಕಳೆದ ಬಾರಿ ಬಿಜೆಪಿ ಅಭ್ಯರ್ಥಿಯಾಗಿದ್ದ ಜಗದೀಶ್‌ಕುಮಾರ್ ಜಾತಿಯಿಂದ ಬ್ರಾಹ್ಮಣ. ಈ ಬಾರಿ ಕಣಕ್ಕಿಳಿದ ನಾರಾಯಣಸ್ವಾಮಿ ಜಾತಿಯಿಂದ ಒಕ್ಕಲಿಗ. ಏನೇ ಪಕ್ಷ ನಿಷ್ಠೆ ಸರ್ಕಾರದ ಪ್ರತಿಷ್ಠೆ ಎಂದರೂ ಒಕ್ಕಲಿಗರು ಜಾತಿಯ ಹೊರತಾಗಿ ಓಟು ಹಾಕಲು ಸಾಧ್ಯವೇ ಇಲ್ಲದಂಥ ವಾತಾವರಣವೊಂದನ್ನು ಹುಟ್ಟುಹಾಕಿದ್ದು ಕೇವಲ ಬಿಜೆಪಿಯಷ್ಟೇ ಅಲ್ಲ, ಅದಕ್ಕೆ ಜೆಡಿಎಸ್ ಕೂಡ ಸಾಕಷ್ಟು ಕೊಡುಗೆ ನೀಡಿತು. ದೂರದ ಬೀದರ್ ಮತ್ತು ದೇವದುರ್ಗಗಳ ಹೊರತಾಗ್ಯೂ ಸಿಎಂ ಸಿದ್ದು ಪ್ರತಿಷ್ಠೆಯ ಪ್ರಶ್ನೆಯಾಗಿ ಪರಿಗಣಿಸಿದ್ದು ಹೆಬ್ಬಾಳವನ್ನೇ. ಒಂದಲ್ಲ ಮೂರು ಬಾರಿ ಹೆಬ್ಬಾಳಕ್ಕೆ ಬಂದರು: ಗೆಲ್ಲಲು ಬೇಕಾದ ಸಂಪನ್ಮೂಲವನ್ನೆಲ್ಲವನ್ನೂ ಒದಗಿಸಿಕೊಟ್ಟರು. ಅಷ್ಟೇ ಮುಖ್ಯವಾಗಿ ಡಿಕೆಶಿ ನಿಂತ ಮೇಲೆ ಗೆಲುವು ಶತಸಿದ್ಧ ಎಂಬ ಭರವಸೆ ಸಿಎಂಗಿತ್ತು, ಅದಕ್ಕೆಂದೇ ತನ್ನ ನೆಚ್ಚಿನ ಭಂಟ ಭೈರತಿ ಸುರೇಶನನ್ನು ಜೊತೆ ಹಾಕಿಕೊಂಡೇ ಹೆಬ್ಬಾಳವನ್ನು ಸುತ್ತಿದರು. ಸ್ಥಳೀಯ ನಾಯಕರು ವಿಶೇಷವಾಗಿ ತನ್ನದೇ ಕುರುಬ ಜನಾಂಗದ ನಾಯಕರನ್ನೆಲ್ಲ ಕರೆದು 'ಇದು ನನ್ನ ಅಳಿವುಉಳಿವಿನ ಪ್ರಶ್ನೆ' ಎಂದೇ ಗೋಗರೆದದ್ದೂ ಆಗಿತ್ತು.

ಜಮೀರ್ ಅತಿರೇಕ

ಮುಖ್ಯಮಂತ್ರಿಗಳ ಈ ಲೆಕ್ಕಾಚಾರದ ಪ್ರಕಾರವೇ ರೆಹಮಾನ್ ಷರೀಫ್ ಕಮ್ಮಿಯೆಂದರೂ ಐದು ಸಾವಿರ ಮತಗಳ ಅಂತರದಿಂದ ಗೆಲ್ಲಲೇಬೇಕಿತ್ತು. ಕಳೆದ ಬಾರಿಯಂತೆ ಈ ಬಾರಿಯೂ ಜೆಡಿಎಸ್ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು ವಿಶೇಷವಾಗಿ ಜೆಡಿಎಸ್ ಅಂತಃಪುರದಲ್ಲೇ ಅಸಹನೆಯ ದಾವಾನಲವೊಂದಕ್ಕೆ ಕಾರಣವಾಗಿದ್ದು ಅದು ಫಲಿತಾಂಶದ ದಿಕ್ಕನ್ನೇ ಬದಲಿಸಲಿದೆಯೆಂಬ ನಿರೀಕ್ಷೆ ತಾನೇ ಯಾರಿಗಿತ್ತು?

ಇದಕ್ಕೆ ಕಾರಣವಾಗಿದ್ದು ಜೆಡಿಎಸ್ ನಾಯಕ ಜಮೀರ್ ಅಹ್ಮದ್. ಚುನಾವಣೆಗಿನ್ನು ಮೂರು ದಿನ ಬಾಕಿಯಿರುವಂತೆ ಜಮೀರ್ ವಿಚಿತ್ರ ಹೇಳಿಕೆಯೊಂದನ್ನು ಕೊಟ್ಟರು. ಅದು ತನ್ನದೇ ಪಕ್ಷದ ಅಧಿಪತಿ ದೇವೇಗೌಡರ ವಿರುದ್ಧ 'ದೇವೇಗೌಡರು ಯಾವತ್ತೂ ಅಲ್ಪಸಂಖ್ಯಾತ ನಾಯಕರ ವಿರುದ್ಧವೇ ಮುಸ್ಲಿಂ ಅಭ್ಯರ್ಥಿಯನ್ನು ಹಾಕುವುದರ ಕಾರಣವೇನು? ಬಿಜೆಪಿ ಜೊತೆ ಶಾಮೀಲಾಗಿ ಮುಸ್ಲಿಂ ಅಭ್ಯರ್ಥಿಗಳನ್ನು ಆ ಕಾಲದಿಂದಲೂ ದೇವೇಗೌಡರು ಸೋಲಿಸುತ್ತಲೇ ಬಂದಿದ್ದಾರೆ...!'

ಜೆಡಿಎಸ್‌ನ ಸೋಕಾಲ್ಡ್ ಮುಸ್ಲಿಂ ನಾಯಕನೆಂದೇ ಚಾಲ್ತಿಯಲ್ಲಿರುವ ಜಮೀರ್ ನೀಡಿದ ಈ ಹೇಳಿಕೆ ಪತ್ರಿಕೆ, ಮೀಡಿಯಾಗಳಲ್ಲಿ ಆ ಪಾಟಿ ಪ್ರಾಮುಖ್ಯತೆ ಪಡೆಯದೇ ಹೋದರೂ ಹೆಬ್ಬಾಳದ ಬಿಜೆಪಿಗಳಿಗಿಷ್ಟೇ ಸಾಕಾಗಿತ್ತು. ಜಮೀರ್ ನೀಡಿದ ಈ ಹೇಳಿಕೆಯ ಪತ್ರಿಕಾ ಕಟಿಂಗ್‌ಗಳನ್ನು ಲಕ್ಷದ ಲೆಕ್ಕದಲ್ಲಿ ಜೆರಾಕ್ಸ್ ಮಾಡಿಸಿ ವಿಶೇಷವಾಗಿ ಒಕ್ಕಲಿಗರ ಮನೆಗಳನ್ನೇ ಆಯ್ದು ಹಂಚತೊಡಗಿದರು. ರೆಹಮಾನ್ ಷರೀಫ್ ಮುಸ್ಲಿಂ ಎಂಬುದನ್ನು ಜಮೀರ್ ಕೂಡ ಮುಸ್ಲಿಂ ಪಕ್ಷಪಾತಿ ಎಂಬುದನ್ನು ಮಿಂಚಿನ ವೇಗದಲ್ಲಿ ಹುಯಿಲೆಬ್ಬಿಸಿಬಿಟ್ಟರು. ಇಡೀ ಹೆಬ್ಬಾಳದಲ್ಲಿ ಎಂಥಾ ಮತಾಂಧ ವಾತಾವರಣವಿತ್ತೆಂದರೆ ರೆಹಮಾನ್ ಷರೀಫ್ ಮತ್ತು ಜಾಫರ್ ಷರೀಫ್ ಹೊಕ್ಕ ಯಾವುದೇ ದೇವಸ್ಥಾನ ಹಿಂದೂಗಳ ಮನೆ ಯಾವುದನ್ನೂ ಬಿಡದೇ ಬಿಜೆಪಿಗಳು ಆಕ್ರಮಿಸಿಕೊಂಡು ಅಪಪ್ರಚಾರವೆಸಗಲಾರಂಭಿಸಿದರು.

ಹೆಬ್ಬಾಳದ ಮುಸ್ಲಿಂ ಮತಗಳೇನೋ ಪ್ರಾಮಾಣಿಕವಾಗಿ ಕಾಂಗ್ರೆಸ್ಸಿಗೆ ಬಿದ್ದವಾದರೂ ಮುಸ್ಲಿಮೇತರ ಮತಗಳ ಲಕ್ಷಣವೇ


ರೆಹಮಾನ್ ಷರೀಫ್

ಬೇರೆಯಾಯಿತು. ಕಾಂಗ್ರೆಸ್‌ನಲ್ಲಿದ್ದ ಮುಸ್ಲಿಮೇತರ ಲೀಡರ್‌ಗಳೂ ಕೊನೆಕೊನೆಗೆ ಕೈಎತ್ತಲಾರಂಭಿಸಿದ್ದರು. ಏಕೆಂದರೆ ಬಿಜೆಪಿ ಅಭ್ಯರ್ಥಿ ನಾರಾಯಣಸ್ವಾಮಿ ಜಾತಿಯಿಂದ ಒಕ್ಕಲಿಗ. ವಿಶೇಷವಾಗಿ ಆರ್. ಅಶೋಕ್ ಒಕ್ಕಲಿಗರ ಓಟ್‌ಬ್ಯಾಂಕ್‌ಗೆ ಕೈಹಾಕಿದ್ದನ್ನು ಸಿದ್ದು ಅಷ್ಟೊಂದು ಗಂಭೀರವಾಗಿ ಪರಿಗಣಿಸಲಿಲ್ಲ, ಹಿಂದೂ-ಮುಸ್ಲಿಂ ಎಂದು ನಿಚ್ಚಳವಾಗಿಯೇ ಒಡಕು ಮೂಡಿಸುವಲ್ಲಿ ಬಿಜೆಪಿಗಳು ದಿನೇದಿನೇ ಯಶಸ್ವಾಗುತ್ತಿದ್ದದ್ದನ್ನೂ ಕಾಂಗ್ರೆಸ್ ಗಮನಿಸಲಿಲ್ಲ, ಮನೋರಾಯನ ಪಾಳ್ಯ ವಾರ್ಡ್‌ನ ಕಾಂಗ್ರೆಸ್ ಕೌನ್ಸಿಲರ್ ವಾಜಿದ್ ಮುಸ್ಲಿಮನಾದರೂ ಒಳಗೊಳಗೇ ಬಿಜೆಪಿ ಪರವಾಗಿ ವಾಲಿದ್ದನ್ನು ಸ್ಪಷ್ಟವಾಗಿಯೇ ಕಾಂಗ್ರೆಸ್ ನಾಯಕರು ಗಮನಿಸಿದ್ದಾದರೂ ಮುಸ್ಲಿಮರೇ ಬಹುಸಂಖ್ಯಾತರಾದ್ದರಿಂದ ಆತ ಏನೇ ಸರ್ಕಸ್ ಮಾಡಿದರೂ ಮುಸ್ಲಿಮರ್ಯಾರೂ ಬಿಜೆಪಿಗೆ ಓಟು ಹಾಕಲಾರರೆಂದೇ ಷರೀಫ್ ಸಾಹೇಬರ ನಿರೀಕ್ಷೆಯಾಗಿತ್ತು. ಅದು ನಿಜವಾಯಿತಾದರೂ ಖರ್ಚಿಗೆಂದು ಕೊಟ್ಟ ದುಡ್ಡನ್ನೆಲ್ಲ ವಾಜಿದ್ ಮುಲಾಜಿಲ್ಲದೆ ಜೇಬಿಗಿಳಿಸಿಕೊಂಡ.

ಭೈರತಿಯ ದೋಖಾ

ಇದು ತನ್ನದೇ ಕ್ಷೇತ್ರದ ಮುಸ್ಲಿಂ ಕೌನ್ಸಿಲರ್ ಓರ್ವನಿಂದ ಷರೀಫ್ ನುಂಗಬೇಕಾದ್ದ ಕರ್ಮ. ಮನೋರಾಯನಪಾಳ್ಯ ವಾರ್ಡ್ ಒಂದೇ ಕಾಂಗ್ರೆಸ್ಸಿಗೆ ಏಳು ಸಾವಿರದಷ್ಟು ಲೀಡ್ ಕೊಟ್ಟಿತ್ತಾದರೂ ಅದು ಮುಸ್ಲಿಮರು ಷರೀಫರ ಪರ ತೋರಿದ್ದ ಅಚಲನಿಷ್ಠೆಯ ಫಲವಾಗಿತ್ತು. ಹೆಬ್ಬಾಳದ ಕೌನ್ಸಿಲರ್ ಆನಂದ್‌ಕುಮಾರ್ ಕಾಂಗ್ರೆಸ್ಸಿನಿಂದಲೇ ಗೆದ್ದಿರುವಾತ. ಭೈರತಿ ಸುರೇಶ್ ಕಟ್ಟಾ ಬೆಂಬಲಿಗ. ಈತನಿಗಿಂತಲೂ ಛತ್ರಿ ಎಂಬ ಖ್ಯಾತಿಯಿರುವುದು ಹೆಬ್ಬಾಳದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಾಜಿಗೆ. ಸದ್ದಿಲ್ಲದೆ ಇವರಿಬ್ಬರೂ ಭೈರತಿ ಸುರೇಶ್ ಕಾಸಿಗೆ ಕೈಚಾಚಿಕೊಂಡೇ ಬಂದವರು. ಒಮ್ಮೆ ಹೆಬ್ಬಾಳಕ್ಕೆ ರೆಹಮಾನ್ ಷರೀಫ್ ಗೆದ್ದರೆಂದರೆ ಮತ್ತೆಂದೂ ಭೈರತಿಯಿಂದ ದುಡ್ಡು ಹುಟ್ಟಲಾರದೆಂಬ ಲೋಭಕ್ಕೆ ಬಿದ್ದೇ ಇವರಿಬ್ಬರೂ ಒಳಗಿಂದೊಳಗೇ ಬಿಜೆಪಿಯ ನಾರಾಯಣಸ್ವಾಮಿಯ ರೊಕ್ಕಕ್ಕೆ ಬಲಿಯಾಗಿದ್ದು ಇಡೀ ಹೆಬ್ಬಾಳದುದ್ದಕ್ಕೂ ಪ್ರಕಾರೆದ್ದಿತ್ತಾದರೂ ಚುನಾವಣೆಯ ಸಾರಥ್ಯ ವಹಿಸಿದ್ದ ಡಿಕೆಶಿಗೆ ಮಾತ್ರ ಗೊತ್ತಾಗಲೇ ಇಲ್ಲ!


ಇದು ಕೇವಲ ಹೆಬ್ಬಾಳದ ಒಂದು ವಾರ್ಡಿನ ಕತೆಯಲ್ಲ, ಮುನಿರೆಡ್ಡಿಪಾಳ್ಯ ಅಂದರೆ ಜೆ.ಸಿ. ನಗರ ವಾರ್ಡಿನಿಂದ ಕಳೆದ ಬಾರಿ ಪಾಲಿಕೆಗೆ ನಿಂತು ಸೋತವನು ಗೋವಿಂದರಾಜು. ಜಾತಿಯಿಂದ ಒಕ್ಕಲಿಗ. ಈತನಿಗೆ ಗಾಡ್‌ಫಾದರ್‌ನಂತೆ ಕಾಲಾನುಕಾಲಕ್ಕೆ ದುಡ್ಡು ಕಾಸು ಫೀಡ್ ಮಾಡಿಕೊಂಡು ಬಂದವನು ಪಟೇಲ್ ಸೀನಪ್ಪ ಪಟೇಲ್ಸ್ ಇನ್ ಎಂಬ ಐಷಾರಾಮಿ ರೆಸಾರ್ಟ್‌ಗೆ ಮಾಲೀಕನೂ ಆದ ಪಟೇಲ್ ಸೀನಪ್ಪ ಜಾತಿಯಿಂದ ಒಕ್ಕಲಿಗ ಮತ್ತು ಬಿಜೆಪಿ ಅಭ್ಯರ್ಥಿ ನಾರಾಯಣಸ್ವಾಮಿಗೆ ಈತ ಸಂಬಂಧಿ ಕೂಡ. ಹೆಸರಿಗಷ್ಟೇ ಕಾಂಗ್ರೆಸ್ಸಾದರೂ ಪಟೇಲ್ ಸೀನಪ್ಪನ ಋಣಸಂಬಂಧಗಳಿರುವುದು ಬಿಜೆಪಿ ಅಭ್ಯರ್ಥಿ ನಾರಾಯಣ ಸ್ವಾಮಿ ಜೊತೆಗೆ. ಹಗಲು ಹೊತ್ತು ಕಾಂಗ್ರೆಸ್ ಬಾವುಟ ಹಿಡಿಯುತ್ತಿದ್ದ ಗೋವಿಂದರಾಜು ಮತ್ತು ಪಟೇಲ್ ಸೀನಪ್ಪ ರಾತ್ರಿ ಹೊತ್ತು ಬಿಜೆಪಿ ಭಟ್ಟಂಗಿಗಳಾಗಿ ಓಡಾಡಿದ್ದು ಇಂಟಲಿಜೆನ್ಸ್ ಮೂಲಕವಾದರೂ ಕಾಂಗ್ರೆಸ್ ನಾಯಕರಿಗೆ ಗೊತ್ತಾಗಬೇಕಿತ್ತಲ್ಲವೆ?

ಏನೇ ಪಕ್ಷನಿಷ್ಠೆ ಸರ್ಕಾರದ ಹಂಗಿದ್ದರೂ ಜಾತಿ ಹೇಗೆ ಅದೆಲ್ಲವನ್ನೂ ಮೀರಿ ಕಾರ್ಯ ನಿರ್ವಹಿಸುತ್ತದೆ ಎಂಬುದಕ್ಕೆ ಇದು ಉದಾಹರಣೆಯಷ್ಟೆ. ಬಹುಶಃ ಭೈರತಿ ಸುರೇಶ್‌ಗೆ ಕಾಂಗ್ರೆಸ್ ಟಿಕೆಟ್ಟೆಂದು ಸಿಎಂ ಸಿದ್ದು ಹಠಕ್ಕೆ ಬಿದ್ದಿದ್ದು ಈ ಕಾರಣಕ್ಕೇ ಇರಬೇಕು. ರಣತಂತ್ರದ ವಿಷಯದಲ್ಲಿ ಸಿದ್ದು ಲೆಕ್ಕಾಚಾರವೇ ಸರಿಯಿತ್ತೆಂಬುದು ಈಗ ಸಾಬೀತಾಗಿದೆ. ಹಿಂದೂ-ಮುಸ್ಲಿಂ ಮನಸ್ಥಿತಿಗಳ ನಡುವೆ ಕಂದರ ತೋಡಿದ ಬಿಜೆಪಿ ತಾನೇ ಹಚ್ಚಿದ ಬೆಂಕಿಯಲ್ಲಿ ಚಳಿ ಕಾಯಿಸಿಕೊಂಡಿದೆ. ಅಷ್ಟಕ್ಕೂ ಹೆಬ್ಬಾಳವೇನೂ ಕಾಂಗ್ರೆಸ್ಸಿನ ಕ್ಷೇತ್ರವಾಗಿರಲಿಲ್ಲ, ಹೆಬ್ಬಾಳದ ಸೋಲು ಅನಿರೀಕ್ಷಿತವೂ ಅಲ್ಲ ಅಚ್ಚರಿಗೂ ಕಾರಣವಿಲ್ಲ ಆದರೆ ಜೆಡಿಎಸ್ ಪಾಲಿನ ಮತಗಳಿತ್ತಲ್ಲ, ಅದು ಬಿಜೆಪಿ ಪಾಲಾಗಿರುವುದು ವಿಚಿತ್ರ.

ಸೋಲಿಗೇನೋ ಮುಖ್ಯಮಂತ್ರಿ ತಲೆಕೊಡಬೇಕು ನಿಜ. ಆದರೆ ತಲೆತಗ್ಗಿಸಬೇಕಾದದ್ದು ಜೆಡಿಎಸ್ ತಾನೆ? ದೇವದುರ್ಗ ಕೈತಪ್ಪಿದಾದರೂ ಬಿಜೆಪಿ ತೆಕ್ಕೆಯಲ್ಲಿದ್ದ ಬೀದರ್ ಕಾಂಗ್ರೆಸ್ಸಿಗೆ ದಕ್ಕಿತಲ್ಲ, ತಮ್ಮ ದಬ್ಬದ ಹೆಬ್ಬಾಳ ಕೈಬಿಟ್ಟಿದ್ದಕ್ಕೇನೋ ನಿರಾಶರಾದರೂ ಅನಿರೀಕ್ಷಿತವಾಗಿ ಬೀದರ್ ದಕ್ಕಿದೆಯಲ್ಲ, ಲಾಭವಾಗದಿದ್ದರೇನಂತೆ ನಷ್ಟವಂತೂ ಆಗಿಲ್ಲವಲ್ಲ!

■ ಡಾ. ಸೋಮನಾಥ್

ಕನ್ನಯ್ಯನದ್ದು ಅಸಲಿ ದೇಶಪ್ರೇಮ



ಜವಾಹರಲಾಲ್ ನೆಹರೂ ಯೂನಿವರ್ಸಿಟಿಯ ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷ ಕನ್ಹಯ್ಯಾ ಕುಮಾರ್ ಅವರ ಬಂಧನವು ಮೋದಿ ನೇತೃತ್ವದ ಬಲಪಂಥೀಯ ಸರ್ಕಾರದ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣದ ಕಾರ್ಯಸೂಚಿಗೆ ನಿದರ್ಶನವಾಗಿ ನಿಂತಿದೆ. ಆದರೆ ಕನ್ಹಯ್ಯಾ ಅಂದು ನಿಜಕ್ಕೂ ಹೇಳಿದ್ದೇನು? ಚೆಡ್ಡಿಗಳ ಪ್ರಕಾರ ಜೆಎನ್‌ಯು ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ಸಂಘಟನೆಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂಬ ದೇಶದ್ರೋಹಿ ಘೋಷಣೆಯನ್ನು ಕನ್ಹಯ್ಯ ಸೇರಿದಂತೆ ಇತರೆ ವಿದ್ಯಾರ್ಥಿಗಳು ಕೂಗಿದರು ಎಂಬುದಾಗಿದೆ. ಆದರೆ ವಾಸ್ತವವಾಗಿ ಅಂದು ಕನ್ಹಯ್ಯ ಮಾಡಿದ ಭಾಷಣದಲ್ಲಿ ಅಂತಹ ಯಾವ ಅಂಶಗಳೂ ಇಲ್ಲ. ಬದಲಾಗಿ ಈ ಪಿಎಚ್‌ಡಿ ವಿದ್ಯಾರ್ಥಿ ಆಡಿದ ಮಾತುಗಳಲ್ಲಿ ಈ ದೇಶದ ಬಗ್ಗೆ ಕಾಳಜಿ, ಸಂವಿಧಾನದ ಬಗ್ಗೆ ಭರವಸೆ ಮತ್ತು ಇಲ್ಲಿನ ಬಡವರ, ರೈತರ, ಕೂಲಿ ಕಾರ್ಮಿಕರ ಕುರಿತು ಅಂತಃಕರಣವೇ ಎದ್ದು ಕಾಣುತ್ತದೆ. ಜೊತೆಗೆ ಚೆಡ್ಡಿಗಳ ವಿರುದ್ಧದ ಸಕಾರಣವಾದ ಕೋಪವೂ ಇದೆ. ಸುಮಾರು 23 ನಿಮಿಷಗಳ ಕನ್ಹಯ್ಯನ ಹಿಂದಿ ಭಾಷಣ ಈಗ ಸಾಮಾಜಿಕ ಜಾಲತಾಣಗಳಲ್ಲಿ ಪಾದರಸದಂತೆ ಹರಿದಾಡುತ್ತಿದ್ದು ಬಹಳಷ್ಟು ಜನರ ಮೆಚ್ಚುಗೆಯನ್ನು ಗಳಿಸಿದೆ. ನಮ್ಮ ಓದುಗರಿಗಾಗಿ ಅದರ ಕನ್ನಡ ಅನುವಾದವನ್ನು ಇಲ್ಲಿ ನೀಡಿದ್ದೇವೆ.

ಮಿತ್ರರೆ,

ಅವರು ತ್ರಿವರ್ಣಧ್ವಜವನ್ನು ಸುಟ್ಟವರು; ಅವರು ಬ್ರಿಟಿಷರ ಮುಂದೆ ಶರಣಾಗತಿಯಾದ ಸಾವರ್ಕರ್ ಅನುಯಾಯಿಗಳು; ಹರಿಯಾಣದ ಒಂದು ವಿಮಾನ ನಿಲ್ದಾಣಕ್ಕೆ ಭಗತ್ ಸಿಂಗ್ ಅವರ ಹೆಸರನ್ನು ಇಡಲಾಗಿತ್ತು, ಆದರೆ ಅಲ್ಲಿನ ಕಟ್ಟರ್ ಸರ್ಕಾರ ಆ ಹೆಸರನ್ನು ಅಳಿಸಿಹಾಕಿ, ಒಬ್ಬ ಸಂಘಿಯ ಹೆಸರನ್ನು ಮರುನಾಮಕರಣ ಮಾಡಿದೆ.

ನಾನು ಹೇಳಬಯಸುತ್ತಿರುವುದು ಇಷ್ಟೇ, ಇಂತಹ ಆರೆಸ್ಸೆಸಿಗರಿಂದ ನಾವು ದೇಶಪ್ರೇಮದ ಸರ್ಟಿಫಿಕೇಟ್ ಪಡೆಯಬೇಕಿಲ್ಲ; ಆರೆಸ್ಸೆಸ್‌ನಿಂದ ರಾಷ್ಟ್ರೀಯತೆ ಸರ್ಟಿಫಿಕೇಟ್ ಖಾತರಿಪಡಿಸಿಕೊಳ್ಳುವ ಅಗತ್ಯವಿಲ್ಲ, ಇದು ನಮ್ಮ ದೇಶ. ನಾವಿದನ್ನು ಪ್ರೀತಿಸುತ್ತೇವೆ. ಈ ದೇಶದ ಶೇ.80ರಷ್ಟು ಬಡಜನತೆಗಾಗಿ ನಾವು ಹೋರಾಡುತ್ತಿದ್ದೇವೆ. ನಮ್ಮ ಪಾಲಿಗೆ ಇದೇ ದೇಶಸೇವೆ!

ನಮಗೆ ಬಾಬಾ ಸಾಹೇಬ್(ಅಂಬೇಡ್ಕರ್)ರ ತತ್ವಾದರ್ಶಗಳಲ್ಲಿ ಸಂಪೂರ್ಣ ನಂಬಿಕೆಯಿದೆ; ಇಂಡಿಯಾದ ಕಾನೂನಿನ ಮೇಲೆ ಭರವಸೆ ಇದೆ. ಯಾರೇ ಆಗಲಿ, ಅದು ಸಂಘಗಳೇ ಆಗಿರಬಹುದು, ಈ ನೆಲದ ಕಾನೂನನ್ನು ಬದಲಿಸಲು ಯತ್ನಿಸಿದರೆ ನಾವು ಸಹಿಸುವುದಿಲ್ಲ ಅನ್ನೋದನ್ನು ನಾವಿಲ್ಲಿ ಒತ್ತಿ ಹೇಳಬೇಕಿದೆ.

ನಮಗೆ ಈ ನೆಲದ ಸಂವಿಧಾನದ ಮೇಲೆ ವಿಶ್ವಾಸವಿದೆ. ಆದರೆ 'ಝಂಡೇವಾಲ' (ದೆಹಲಿಯಲ್ಲಿ ಆರೆಸ್ಸೆಸ್ ಕೇಂದ್ರಕಚೇರಿ ಇರುವ ಜಾಗ) ಮತ್ತು ನಾಗ್ಪುರದಲ್ಲಿ ಬೋಧಿಸುವ ಸಂವಿಧಾನವನ್ನು ನಾವು ಒಪ್ಪುವುದಿಲ್ಲ, ನಮಗೆ ಮನುಸ್ಮೃತಿ ಮೇಲೆ ನಂಬಿಕೆಯಿಲ್ಲ; ಈ ದೇಶದ ಜಾತಿವ್ಯವಸ್ಥೆಯ ಮೇಲೆ ವಿಶ್ವಾಸವಿಡುವುದಿಲ್ಲ.

ನಮ್ಮ ಸಂವಿಧಾನದ ಮೂಲಕ ಬಾಬಾ ಸಾಹೇಬರು ಈ ವ್ಯವಸ್ಥೆಯ ಸುಧಾರಣೆಯ ಬಗ್ಗೆ ಹೇಳಿದ್ದಾರೆ. ಅದೇ ಬಾಬಾಸಾಹೇಬ್ ಅಂಬೇಡ್ಕರರು ಮರಣದಂಡನೆಯನ್ನು ರದ್ದುಗೊಳಿಸುವುದರ ಬಗ್ಗೆ ಮಾತನಾಡಿದ್ದರು. ಅದೇ ಅಂಬೇಡ್ಕರರು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆಯೂ ಚರ್ಚಿಸಿದ್ದರು. ನಾವೀಗ ನಮ್ಮ ಸಂವಿಧಾನವನ್ನು ಎತ್ತಿಹಿಡಿಯಬೇಕಿದೆ; ನಮ್ಮ ಹಕ್ಕುಗಳನ್ನು ಎತ್ತಿಹಿಡಿಯಬೇಕಿದೆ.

ಆದರೆ, ಎಬಿವಿಪಿ ತನ್ನ ಮೀಡಿಯಾ ಕೂಟಗಳೊಂದಿಗೆ ಸೇರಿಕೊಂಡು ಲಯಬದ್ಧ ಅಭಿಯಾನವನ್ನು ನಡೆಸುತ್ತಿರೋದು ನಾಚಿಕೆಗೇಡಿನ ಮತ್ತು ಖೇದದ ಸಂಗತಿಯಾಗಿದೆ.

ನಾವು ಫೆಲೋಶಿಪ್‌ಗಾಗಿ ಹೋರಾಡುತ್ತಿದ್ದೇವೆ ಅಂತ ನಿನ್ನೆಯಷ್ಟೆ ಎಬಿವಿಪಿಯ ಜಂಟಿ ಕಾರ್ಯದರ್ಶಿ ಹೇಳಿಕೊಂಡಿದ್ದಾನೆ. ಇದು ನಿಜಕ್ಕೂ ಹಾಸ್ಯಾಸ್ಪದ! ಅವರ ಸರ್ಕಾರ, ಮೇಡಮ್ ಮನುಸ್ಮೃತಿ ಇರಾನಿಯವರು, ಫೆಲೋಶಿಪ್ ಅನ್ನು ರದ್ದುಗೊಳಿಸುತ್ತಾರೆ ಮತ್ತು ಅವರು ನಮ್ಮ ಹೋರಾಟವನ್ನು ಫೆಲೋಶಿಪ್‌ಗಾಗಿ ನಡೆಸುತ್ತಿರುವ ಹೋರಾಟ ಅಂತ ದೂಷಿಸುತ್ತಾರೆ. ಅವರ ಸರ್ಕಾರ ಉನ್ನತ ಶಿಕ್ಷಣದ ಅನುದಾನವನ್ನೇ ಶೇ. 17ರಷ್ಟು ಕಡಿತ ಮಾಡಿದೆ.

ನಮ್ಮ ಹಾಸ್ಟೆಲನ್ನು ಕಳೆದ ನಾಲ್ಕು ವರ್ಷದಲ್ಲಿ ನಿರ್ಮಿಸಿದ್ದಲ್ಲ, ಅಲ್ಲಿ ವೈ-ಫೈ ಇಲ್ಲ, ಬಿಎಚ್‌ಇಎಲ್ ನಮಗೆಂದು ಒಂದು ಬಸ್ ಕೊಟ್ಟಿದೆ; ಆದರೆ ಅದಕ್ಕೆ ಡೀಸೆಲ್ ತುಂಬಿಸುವುದಕ್ಕೂ ಆಡಳಿತ ಮಂಡಳಿಯವರ ಬಳಿ ಕಾಸಿಲ್ಲ! ಆದರೆ ಎಬಿವಿಪಿಯವರು ದೇವಾನಂದ್ ಸ್ಟೈಲಿನಲ್ಲಿ ನಿಂತು ನಾವು ಕಳೆದ ನಾಲ್ಕು ವರ್ಷದಲ್ಲಿ ಹಾಸ್ಟೆಲ್ ನಿರ್ಮಿಸಿದ್ದೇವೆ, ನಾವು ವೈ-ಫೈ ಕೊಟ್ಟಿದ್ದೇವೆ, ಅವರಿಗೆ ಫೆಲೋಶಿಪ್ ಸಿಗುತ್ತಿದೆ ಅಂತ ಅರಚಾಡುತ್ತಾರೆ.

ಈ ದೇಶದ ಮೂಲ ಸಮಸ್ಯೆಗಳ ಕುರಿತು ಬಹಿರಂಗ ಚರ್ಚೆಗೆ ಬಂದರೆ ಅವರ ಬಣ್ಣ ಬಯಲಾಗುತ್ತೆ, ಈ ದೇಶದ ಮೂಲ ಸಮಸ್ಯೆಗಳ ಬಗ್ಗೆ ಚರ್ಚಿಸುವ, ಸಂವಾದಿಸುವ ಜೆಎನ್‌ಯು ಯೂನಿವರ್ಸಿಟಿಗರು ನಾವು ಎಂದೇಳಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತದೆ. ಮಹಿಳೆಯರು, ದಲಿತರು, ಬುಡಕಟ್ಟುಗಳು ಮತ್ತು ಅಲ್ಪಸಂಖ್ಯಾತರ ಘನತೆಗೆ ಕುಂದುಂಟಾಗುವ ಸವಾಲುಗಳನ್ನು ನಾವು ತಡವಿಕೊಳ್ಳುತ್ತೇವೆ. ಅದಕ್ಕೋಸ್ಕರವೇ, ಅವರ ಸ್ವಾಮಿ (ಸುಬ್ರಮಣಿಯನ್ ಸ್ವಾಮಿ) ಹೇಳ್ತಾರೆ 'ಜೆಎನ್‌ಯುನಲ್ಲಿ ಇರೋರೆಲ್ಲ ಜಿಹಾದಿಗಳು ಮತ್ತು ನಾವು ಹಿಂಸೆಯನ್ನು ಹರಡುತ್ತೇವೆ' ಅಂತ.

ಜೆಎನ್‌ಯು ಪರವಾಗಿ ನಾನು ಆರೆಸ್ಸೆಸ್‌ನ ಸಿದ್ಧಾಂತಗಳನ್ನು ಪ್ರಶ್ನಿಸ ಬಯಸುತ್ತೇನೆ. ನಮ್ಮನ್ನು ಕರೆದು ಒಂದು ಬಹಿರಂಗ ಚರ್ಚೆಯನ್ನು ಆಯೋಜಿಸಲಿ. ನಾವು ಹಿಂಸೆಯ ಬಗ್ಗೆ ಚರ್ಚಿಸುತ್ತೇವೆ, ಎಬಿವಿಪಿಯ ಹುಚ್ಚು ಘೋಷಣೆಗಳ ಬಗ್ಗೆ ನಾವು ಪ್ರಶ್ನೆ ಎತ್ತುತ್ತೇವೆ. ಅವರ ಸ್ಲೋಗನ್‌ಗಳು ಹೇಳುತ್ತವೆ 'ರಕ್ತದಿಂದ ತಿಲಕವನ್ನೂ, ಬುಲೆಟ್‌ಗಳಿಂದ ಆರತಿಯನ್ನೂ ಮಾಡುತ್ತೇವೆ' ಅಂತ. ಅವರು ಯಾರ ರಕ್ತವನ್ನು ಚೆಲ್ಲಾಡಲು ಬಯಸುತ್ತಿದ್ದಾರೆ? ಅವರು ಬ್ರಿಟಿಷರೊಂದಿಗೆ ಶಾಮೀಲಾಗಿ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಗುಂಡುಗಳನ್ನು ನುಗ್ಗಿಸಿದಂತವರು. ಬಡವರು ತುತ್ತು ಅನ್ನಕ್ಕಾಗಿ ಅಂಗಲಾಚಿದಾಗ ಅವರ ಮೇಲೆ ಬುಲೆಟ್ ಚೆಲ್ಲಿದವರು ಅವರು; ತಮ್ಮ ಹಕ್ಕುಗಳಿಗೋಸ್ಕರ ಹೋರಾಡುತ್ತಾ ಜನ ಉಪವಾಸ ಸಾಯುತ್ತಿರುವಾಗ ಅವರ ಮೇಲೆ ಗುಂಡಿನ ಮಳೆಗರೆದವರು ಅವರು; ಮುಸ್ಲಿಮರ ಮೇಲೆ ಗುಂಡಿನ ಬೆಂಕಿ ಉಗುಳಿದವರು ಅವರು; ಸಮಾನತೆಗೆ ಬೇಡಿಕೆ ಇಟ್ಟ ಮಹಿಳೆಯರಿಗೆ ಗುಂಡಿಕ್ಕಿದವರು ಅವರು.

ಎಲ್ಲಾ ಐದು ಬೆರಳುಗಳು ಸಮನಾಗಿರೊಲ್ಲ ಅಂತ ಅವರು ಹೇಳ್ತಾರೆ. ಮಹಿಳೆಯರು ಸೀತೆಯನ್ನು ಅನುಕರಿಸಬೇಕು ಮತ್ತು ಆಕೆಯಂತೆ ಅಗ್ನಿಪರೀಕ್ಷೆ ಹಾದುಬರಬೇಕು ಅಂತ ಅವರು ವಾದಿಸುತ್ತಾರೆ. ಈ ದೇಶದಲ್ಲಿ ಅಸ್ತಿತ್ವದಲ್ಲಿರೋದು ಪ್ರಜಾಪ್ರಭುತ್ವ ಮತ್ತು ಈ ಪ್ರಜಾಪ್ರಭುತ್ವ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳನ್ನು ಕೊಟ್ಟಿದೆ; ಅದು ವಿದ್ಯಾರ್ಥಿಯಿರಬಹುದು, ಕಾರ್ಮಿಕನಿರಬಹುದು, ಬಡವ ಅಥವಾ ಸಿರಿವಂತನಿರಬಹುದು, ಅಂಬಾನಿ ಇಲ್ಲವೇ ಅದಾನಿಯೇ ಆಗಿರಬಹುದು. ಆದರೆ ನಾವು ಮಹಿಳಾ ಸಮಾನತೆಯ ಬಗ್ಗೆ ಮಾತನಾಡಿದ ಕೂಡಲೇ, ನಾವು ಭಾರತೀಯ ಸಂಸ್ಕೃತಿಯನ್ನು ಹಾಳುಗೆಡವುತ್ತಿದ್ದೇವೆ ಅಂತ ನಮ್ಮ ಮೇಲೆ ಆರೋಪಗೈಯ್ಯುತ್ತಾರೆ.

ನಾವು ಶೋಷಣೆಯ ಸಂಸ್ಕೃತಿಯನ್ನು, ಜಾತಿ ಸಂಸ್ಕೃತಿಯನ್ನು, ಮನುವಾದಿ ಸಂಸ್ಕೃತಿಯನ್ನು ಮತ್ತು ಬ್ರಾಹ್ಮಣವಾದ ಸಂಸ್ಕೃತಿಯನ್ನು ನಾಶ ಮಾಡಲು ಬಯಸುತ್ತೇವೆ. ಇಲ್ಲಿಯವರೆಗೂ 'ಸಂಸ್ಕೃತಿ' ಎಂಬುದರ ವ್ಯಾಖ್ಯಾನ ಕುರಿತ ಗೊಂದಲವೇ ಬಗೆಹರಿದಿಲ್ಲ, ಈ ದೇಶದ ಜನ ಪ್ರಜಾಪ್ರಭುತ್ವದ ಬಗ್ಗೆ ಧ್ವನಿ ಎತ್ತಿದಾಗ, ಲಾಲ್ ಸಲಾಂ ಜೊತೆಜೊತೆಗೆ ನೀಲಿ ಸಲಾಂ ಬಗ್ಗೆ ಮಾತನಾಡಿದಾಗ, ಅಂಬೇಡ್ಕರ್ ಜೊತೆಜೊತೆಗೆ ಮಾರ್ಕ್ಸ್ ಬಗ್ಗೆಯೂ ಮಾತಾಡಿದಾಗ, ಜನ ಅಸ್ಫಾಖುಲ್ಲಾ ಖಾನ್ ಬಗ್ಗೆ (ಸ್ವಾತಂತ್ರ್ಯ ಹೋರಾಟಗಾರ) ಮಾತಾಡಿದಾಗ ಅವರಿಗೆ ಕಿರಿಕಿರಿಯಾಗುತ್ತೆ, ಅವರಿಗೆ ಸಹಿಸಿಕೊಳ್ಳಲಾಗುವುದಿಲ್ಲ, ಇದೇ ಅವರ ಪಿತೂರಿ. ಅವರು ಬ್ರಿಟಿಷರ ವಿದೂಷಕರು. ಹೀಗೆ ಮಾತನಾಡಿದ್ದಕ್ಕೆ, ಬೇಕಾದರೆ ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹಾಕಲಿ, ನನಗೆ ಅಂಜಿಕೆಯಿಲ್ಲ, ಆರೆಸ್ಸೆಸ್ ಇತಿಹಾಸ ಬ್ರಿಟಿಷರ ಅಜುಬಾಜಿನಲ್ಲೇ ಸಾಗಿ ಬರುವಂತದ್ದು ಅಂತ ನಾನು ಹೇಳುತ್ತೇನೆ. ಅಂತಾ ದ್ರೋಹಿಗಳು ಇವತ್ತು ದೇಶಪ್ರೇಮದ ಸರ್ಟಿಫಿಕೇಟುಗಳನ್ನು ಹಂಚುತ್ತಿದ್ದಾರೆ.

ನನ್ನ ಮತ್ತು ನನ್ನ ಸ್ನೇಹಿತರ ಮೊಬೈಲ್‌ಗಳನ್ನು ಚೆಕ್ ಮಾಡಿ. ನಮ್ಮ ತಾಯಂದಿರು, ಅಕ್ಕ-ತಂಗಿಯರನ್ನು ಹೀನಾಯವಾಗಿ ಬೈದ ಮೆಸೇಜುಗಳು ದಂಡಿಯಾಗಿ ಸಿಗುತ್ತವೆ. ನೀವು ಯಾವ ಭಾರತ ಮಾತೆಯ ಬಗ್ಗೆ ಮಾತನಾಡುತ್ತಿದ್ದೀರಿ? ಒಂದೊಮ್ಮೆ ನಿಮ್ಮ 'ಭಾರತ ಮಾತೆ'ಯ ಕಲ್ಪನೆಯಲ್ಲಿ ನನ್ನ ತಾಯಿಗೆ ಜಾಗವಿಲ್ಲ ಎಂದಾದರೆ ಅಂತಹ ಭಾರತ ಮಾತೆಯ ಪರಿಕಲ್ಪನೆಯೇ ನನ್ನ ಪಾಲಿಗೆ ಸ್ವೀಕಾರಾರ್ಹವಲ್ಲ.

ನನ್ನ ತಾಯಿ ಒಬ್ಬ ಅಂಗನವಾಡಿ ಕಾರ್ಯಕರ್ತೆ, ಆಕೆ ದುಡಿಯುವ ಮೂರು ಸಾವಿರ ರೂಪಾಯಿ ಸಂಬಳದಲ್ಲಿ ಇಡೀ ಕುಟುಂಬ ಸಾಗುತ್ತಿದೆ; ಅಂತಹವಳನ್ನು ಅವರು ನಿಂದಿಸುತ್ತಿದ್ದಾರೆ. ಈ ದೇಶದಲ್ಲಿ ಬಡವರ ಮತ್ತು ದಲಿತರ ತಾಯಂದಿರು 'ಭಾರತಮಾತೆ'ಯ ಭಾಗವಲ್ಲ ಅನ್ನೋದರ ಕುರಿತಂತೆ ನನಗೆ ನಾಚಿಕೆಯಿದೆ. ನಾನು ಈ ದೇಶದ ತಾಯಂದಿರನ್ನು, ಈ ದೇಶದ ಅಪ್ಪಂದಿರನ್ನು, ಈ ದೇಶದ ಅಕ್ಕ-ತಂಗಿಯರನ್ನು, ಈ ದೇಶದ ಬಡ ರೈತರು, ದಲಿತರು, ಆದಿವಾಸಿಗಳು ಮತ್ತು ಕಾರ್ಮಿಕರನ್ನು ಗೌರವಿಸುತ್ತೇನೆ. ನಾನು ಅವರಿಗೆ ಹೇಳಬಯಸುತ್ತೇನೆ, ನಿಮಗೆ ಧೈರ್ಯವಿದ್ದರೆ 'ಇನ್‌ಕ್ವಿಲಾಬ್ ಜಿಂದಾಬಾದ್', 'ಭಗತ್‌ಸಿಂಗ್ ಜಿಂದಾಬಾದ್', 'ಸುಖ್‌ದೇವ್ ಜಿಂದಾಬಾದ್'. 'ಅಸ್ಫಾಖುಲ್ಲಾ ಖಾನ್ ಜಿಂದಾಬಾದ್', 'ಬಾಬಾಸಾಹೇಬ್ ಅಂಬೇಡ್ಕರ್ ಜಿಂದಾಬಾದ್' ಅಂತ ಘೋಷಣೆ ಮೊಳಗಿಸಿ. ಆಗ ಅವರಿಗೆ ಈ ದೇಶದ ಮೇಲೆ ನಂಬಿಕೆ ಇದೆ ಅಂತ ನಾನು ಒಪ್ಪಿಕೊಳ್ತೇನೆ.

ಅಂಬೇಡ್ಕರರ 125ನೇ ಜನ್ಮದಿನವನ್ನು ಆಚರಿಸಿದಂತೆ ಅವರೆಲ್ಲ ಕಪಟ ನಾಟಕವಾಡುತ್ತಿದ್ದಾರೆ. ಅವರಿಗೆ ನಿಜಕ್ಕೂ ಧೈರ್ಯವಿದ್ದರೆ, ಅಂಬೇಡ್ಕರ್ ಎತ್ತಿದ್ದ ಸವಾಲುಗಳನ್ನು ಮುಟ್ಟಿನೋಡಲಿ. ಜಾತಿವ್ಯವಸ್ಥೆ ಈ ದೇಶದ ಬಹುದೊಡ್ಡ ಸವಾಲುಗಳಲ್ಲಿ ಒಂದು. ಜಾತಿವ್ಯವಸ್ಥೆಯ ಬಗ್ಗೆ ಮಾತಾಡಿ, ಎಲ್ಲಾ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಿಸುವ ಕುರಿತು ಮಾತಾಡಿ, ಖಾಸಗಿ ವಲಯಕ್ಕೂ ಮೀಸಲಾತಿ ಹಿಗ್ಗಿಸುವ ಮಾತಾಡಿ. ಈ ಪ್ರಶ್ನೆಗಳನ್ನು ಮುನ್ನೆಲೆಗೆ ತರುವ ಧೈರ್ಯ ಮಾಡಿ, ಆಗ ನಿಮಗೆ ಈ ದೇಶದ ಮೇಲೆ ನಂಬಿಕೆ ಇದೆ ಅಂತ ನಾನು ಒಪ್ಪಿಕೊಳ್ತೇನೆ.

ಈ ದೇಶ ಯಾವತ್ತಿಗೂ ನಿಮ್ಮದಾಗಿರಲಿಲ್ಲ ಮತ್ತು ಯಾವತ್ತಿಗೂ ನಿಮ್ಮದಾಗುವುದಿಲ್ಲ, ಈ ನೆಲದ ಜನರಿಂದ ಈ ದೇಶ ಜನ್ಮತಾಳಿದೆ. ನಿಮ್ಮ 'ದೇಶ'ದ ಕಲ್ಪನೆಯಲ್ಲಿ ಹಸಿದ, ಬಡ ಜನರಿಗೆ ಸ್ಥಾನವಿಲ್ಲ ಎನ್ನುವುದಾದರೆ, ಅದು ಒಂದು ದೇಶವೇ ಅಲ್ಲ.

ನಿನ್ನೆ, ಒಂದು ಟೀವಿ ಚರ್ಚೆಯಲ್ಲಿ ನಾವೀಗ ಸಂಕಷ್ಟದ ದಿನಗಳಲ್ಲಿದ್ದೇವೆ ಅಂತ ನಾನು ಹೇಳಿದ್ದೆ. ಫ್ಯಾಸಿಸಂ ಯಾವ ಆವೇಗದಲ್ಲಿ ಈ ದೇಶದೊಳಕ್ಕೆ ನುಗ್ಗುತ್ತಿದೆಯೆಂದರೆ, ಮಾಧ್ಯಮಗಳಿಗೂ ಕೂಡಾ ಉಳಿಗಾಲವಿಲ್ಲದಂತಾಗಿದೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮಾಧ್ಯಮಗಳಿಗೆ ಹೇಗೆ ಕಾಂಗ್ರೆಸ್ ಕಚೇರಿಯಿಂದ ಲಿಖಿತ ಸುದ್ದಿಗಳು ರವಾನೆಯಾಗುತ್ತಿದ್ದವೋ ಅದೇರೀತಿ ಇವತ್ತು ಆರೆಸ್ಸೆಸ್ ಕಚೇರಿಯಿಂದ ಮಾಧ್ಯಮಗಳಿಗೆ ಸುದ್ದಿಗಳು ಬರೆದು ತಳ್ಳಲ್ಪಡುತ್ತಿವೆ.

ಕೆಲ ಮಾಧ್ಯಮ ಮಿತ್ರರು ಹೇಳುತ್ತಾರೆ, ಜೆಎನ್‌ಯು ಜನರ ತೆರಿಗೆ ಹಣದಲ್ಲಿ ಸಾಗುತ್ತಿದೆ, ಅನುದಾನವನ್ನು ಪಡೆಯುತ್ತಿದೆ. ಹೌದು, ಜೆಎನ್‌ಯು ಅನುದಾನದಡಿಯಲ್ಲಿ ನಡೆಯುತ್ತಿದೆ ಅನ್ನೋದು ಸತ್ಯ. ಆದರೆ ನಾನೊಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ: ಯೂನಿವರ್ಸಿಟಿಗಳ ಉದ್ದೇಶವಾದರು ಏನು? ವಿಶ್ವವಿದ್ಯಾಲಯಗಳು, ಸಮಾಜದ ಸಂಗ್ರಹಾತ್ಮಕ ಮನಸ್ಸಾಕ್ಷಿಯ ವಿಮರ್ಶಾತ್ಮಕ ವಿಶ್ಲೇಷಣೆಗೆಂದೇ ಇರೋದು. ವಿಮರ್ಶಾತ್ಮಕ ವಿಶ್ಲೇಷಣೆಯನ್ನು ಪ್ರಚುರಪಡಿಸಬೇಕಾಗಿದೆ. ಯೂನಿವರ್ಸಿಟಿಗಳು ತಮ್ಮ ಈ ಕರ್ತವ್ಯವನ್ನು ನಿಭಾಯಿಸಲು ಸೋತರೆ, ಆಗ ದೇಶವೇ ಇರುವುದಿಲ್ಲ, ಜನರು ದೇಶದ ಭಾಗವಾಗದೇ ಇದ್ದರೆ, ಅದೊಂದು ಸಿರಿವಂತರ, ಶೋಷಣೆಯ, ಲೂಟಿಯ ಬರಡು ನೆಲವಾಗಿ ಉಳಿಯುತ್ತದೆ ಅಷ್ಟೆ!

ಜನರ ಸಂಸ್ಕೃತಿ, ನಂಬಿಕೆಗಳು ಮತ್ತು ಹಕ್ಕುಗಳನ್ನು ನಾವು ಸಮೀಕರಿಸಲು ಸಾಧ್ಯವಾಗದಿದ್ದರೆ ಒಂದು ದೇಶವನ್ನು ನಿರ್ಮಿಸಲಾಗದು. ನಾವು ದೇಶಕ್ಕೋಸ್ಕರ ದೃಢವಾಗಿ ನಿಲ್ಲಬೇಕಿದೆ, ಭಗತ್‌ಸಿಂಗ್ ಮತ್ತು ಬಾಬಾಸಾಹೇಬ್ ಅಂಬೇಡ್ಕರ್‌ರ ಕನಸುಗಳಿಗಾಗಿ ನಾವೆಲ್ಲ ಒಗ್ಗೂಡಿ ನಿಲ್ಲಬೇಕಿದೆ. ಬದುಕುವ ಹಕ್ಕಿಗಾಗಿ ನಾವು ನಿಲ್ಲಬೇಕಿದೆ. ಈ ಹಕ್ಕುಗಳಿಗೋಸ್ಕರ ನಿಂತುದ್ದಕ್ಕಾಗೇ ರೋಹಿತ್ (ವೇಮುಲ) 'ತನ್ನ ಬದುಕನ್ನೇ ಕಳೆದುಕೊಳ್ಳಬೇಕಾಯ್ತು'.

ನಾವು ಈ ಸಂಘಗಳಿಗೆ ಕೂಗಿ ಹೇಳಬೇಕಿದೆ 'ನಿಮ್ಮ ಸರ್ಕಾರಕ್ಕೆ ನಾಚಿಕೆಯಾಗಬೇಕು'. ರೋಹಿತ್‌ಗೆ ಆದಂ[ತೆ] ಜೆಎನ್‌ಯುನಲ್ಲಿ ಆಗಲು ಬಿಡುವುದಿಲ್ಲ ಅಂತ ನಾ[ವು] ಕೇಂದ್ರ ಸರ್ಕಾರಕ್ಕೆ ಸವಾಲು ಎಸೆಯುತ್ತೇವೆ. ಇಲ್ಲಿ ರೋಹಿತ್[...] ಪ್ರಾಣ ಕಳೆದುಕೊಳ್ಳುವುದಿಲ್ಲ, ನಾವು ರೋಹಿತ್[...] ಬಲಿದಾನವನ್ನು ಮರೆಯುವುದಿಲ್ಲ, ನಾವು ಅಭಿವ್ಯ[ಕ್ತಿ] ಸ್ವಾತಂತ್ರ್ಯದ ಪರವಾಗಿ ನಿಲ್ಲುತ್ತೇವೆ.

ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳನ್ನು ಪಕ್ಕಕ್ಕಿಡಿ, ಇಡೀ ಪ್ರಪಂಚದ ಬಡ ಮತ್ತು ಶ್ರಮಿಕ ವರ್ಗಗಳ ಒಗ್ಗೂಡುವಿಕೆ[ಗೆ] ನಾವು ಕರೆಕೊಡುತ್ತೇವೆ. ನಾವು ಈ ಪ್ರಪಂಚದ ಮಾನವೀಯತೆಯನ್ನು ಗೌರವಿಸುತ್ತೇವೆ, ನಾವು ಭಾರತದ ಮಾನವೀಯತೆಯನ್ನು ಗೌರವಿಸುತ್ತೇವೆ.

ಮನುಷ್ಯತ್ವಕ್ಕೆ ವಿರುದ್ಧವಾಗಿ ನಿಂತಿರುವವರು ಯಾರೆಂಬುದು ನಮಗೆ ಗೊತ್ತು. ಇವತ್ತು ನಮ್ಮ ಮುಂದಿರುವ ಬಲುದೊಡ್ಡ ಸವಾಲೇ ಇದು. ಜಾತಿವಾದದ ಮುಖ, ಮನುವಾದದ ಚಹರೆ, ಬ್ರಾಹ್ಮಣವಾದ ಹಾಗೂ ಬಂಡವಾಳಶಾಹಿಗಳ ನಡುವಿನ ಕೂಡುವಳಿಯ ಆ ಮುಖ ಎಲ್ಲವೂ ನಮಗೆ ಗೊತ್ತು, ಈ ಮುಖಗಳನ್ನು ನಾವು ಬೆತ್ತಲುಗೊಳಿಸಬೇಕಿದೆ. ನಾವು ನೈಜ ಸ್ವಾತಂತ್ರ್ಯದೆಡೆಗೆ ಮುನ್ನುಗ್ಗಬೇಕು; ಅಂತಹ ಸ್ವಾತಂತ್ರ್ಯ ಸಂವಿಧಾನ, ಸಂಸತ್ತುಗಳ ಮೂಲಕ ಲಭಿಸುತ್ತದೆ ಮತ್ತು ಅದನ್ನು ನಾವು ಸಾಧಿಸಿಯೇ ತೀರುತ್ತೇವೆ.

ಸ್ನೇಹಿತರೆ ನಾನು ನಿಮ್ಮಲ್ಲಿ ಬೇಡಿಕೊಳ್ಳುವುದೊಂದೇ[...] ನಮ್ಮ ನಡುವೆ ಹಲವು ಅಭಿಪ್ರಾಯ ಭೇದಗಳಿದ್ದಾಗಿಯೂ[...] ನಾವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲು, ನಮ್ಮ ಸಂವಿಧಾನವನ್ನು ರಕ್ಷಿಸಲು, ಈ ದೇಶದ ಏಕತೆ ಮತ್ತು ಸಾರ್ವಭೌಮತೆಯನ್ನು ರಕ್ಷಿಸಲು ಒಗ್ಗೂಡಬೇಕಿದೆ. ಅದಕ್ಕೋಸ್ಕರ ನಾವು ನಮ್ಮ ದೇಶವನ್ನು ವಿಭಜಿಸುವ ಶಕ್ತಿಗಳು ಮತ್ತು ಭಯೋತ್ಪಾದಕರಿಗೆ ಆಶ್ರಯ ಒದಗಿಸುವ ಶಕ್ತಿಗಳ ವಿರುದ್ಧ ನಾವೆಲ್ಲ ಒಗ್ಗೂಡಿ ಹೋರಾಡಬೇಕಿದೆ.

ನನ್ನ ಮಾತು ಮುಗಿಸುವ ಮುನ್ನ ಒಂದು ಪ್ರಶ್ನೆ[...] ಕೇಳಬಯಸುತ್ತೇನೆ. ಕಸಬ್ ಯಾರು? ಅಫ್ಜಲ್ ಗುರು ಯಾರು? ಯಾರು ಇವರೆಲ್ಲ, ತಮ್ಮ ದೇಹಗಳ ಸುತ್ತ[...] ಬಾಂಬುಗಳನ್ನು ಸುತ್ತಿಕೊಂಡು ಸಾಯಿಸಲು ಸಜ್ಜಾದ ಸ್ಥಿತಿಯಲ್ಲಿರುವ ಇವರು ಯಾರು? ನಾವು ಈ ಪ್ರಶ್ನೆಗಳನ್ನು ಯೂನಿವರ್ಸಿಟಿಗಳಲ್ಲಿ ಕೇಳಿಕೊಳ್ಳದಿದ್ದರೆ, ವಿವಿಗಳ ಅಸ್ತಿತ್ವವೇ ಶೂನ್ಯವಾಗಿಬಿಡುತ್ತದೆ. ನ್ಯಾಯವನ್ನು ವ್ಯಾಖ್ಯಾನಿಸಲು ಸಾಧ್ಯವಾಗದಿದ್ದರೆ, ಹಿಂಸೆಯನ್ನು ವ್ಯಾಖ್ಯಾನಿಸಲು ನಮಗೆ ಸಾಧ್ಯವಾಗದಿದ್ದರೆ ಹಿಂಸೆಯನ್ನು ಕಾಣುವುದಕ್ಕೆ ಸಾಧ್ಯವಾಗುವುದಾದರು ಹೇಗೆ? ಹಿಂಸೆ ಎಂದರೆ, ಕೇವಲ ಬಂದೂಕಿನಿಂದ ಮತ್ತೊಬ್ಬರನ್ನು ಕೊಲ್ಲುವುದಷ್ಟೇ ಅಲ್ಲ, ದಲಿತರಿಗೆ ದಕ್ಕಬೇಕಾದ ಸಾಂವಿಧಾನಿಕ ಹಕ್ಕುಗಳನ್ನು ಜೆಎನ್‌ಯು ಆಡಳಿತ ಮಂಡಳಿ ನಿರಾಕರಿಸುವಲ್ಲೂ ಹಿಂಸೆ ಇಣುಕುತ್ತದೆ. ಇದೊಂಥರಾ ಸಾಂಸ್ಥಿಕ ಹಿಂಸೆ!

ಅವರು ನ್ಯಾಯದ ಬಗ್ಗೆ ಮಾತನಾಡುತ್ತಾರೆ. ನ್ಯಾಯ ಯಾವುದು ಅಂತ ಯಾರು ನಿರ್ಧರಿಸುತ್ತಾರೆ? ದಲಿತರು ದೇವಸ್ಥಾನ ಪ್ರವೇಶಿಸುವುದನ್ನು ಬ್ರಾಹ್ಮಣರು ಸಹಿಸರು. ನಾಯಿಗಳು ಮತ್ತು ಭಾರತೀಯರು ರೆಸ್ಟೋರೆಂಟ್ ಒಳಗೆ ಪ್ರವೇಶಿಸುವುದನ್ನು ಬ್ರಿಟಿಷರು ಸಹಿಸುತ್ತಿರಲಿಲ್ಲ, ಆ ಕಾಲಕ್ಕೆ ಅದೇ ನ್ಯಾಯ. ನಾವು ಆ ನ್ಯಾಯಕ್ಕೆ ಸವಾಲೆಸೆದವು ಮತ್ತು ಇವತ್ತು ಎಬಿವಿಪಿ ಹಾಗೂ ಆರೆಸ್ಸೆಸ್ ನ್ಯಾಯಕ್ಕೆ ಸವಾಲೆಸೆಯುತ್ತಿದ್ದೇವೆ; ಯಾಕೆಂದರೆ, ಅವರ ನ್ಯಾಯದಲ್ಲಿ ನಮಗೆ ಜಾಗವಿಲ್ಲ, ಅವರ ನ್ಯಾಯದಲ್ಲಿ ನಮಗೆ ಜಾಗವಿಲ್ಲ ಎಂದಾದರೆ, ನಾವು ಯಾಕೆ ಅವರ ನ್ಯಾಯ ಮತ್ತು ಅವರ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕು. ಪ್ರತಿಯೊಬ್ಬನೂ ತನ್ನ ಸಾಂವಿಧಾನಿಕ ಹಕ್ಕುಗಳನ್ನು ಹೊಂದುವ ಸ್ವಾತಂತ್ರ್ಯವನ್ನು ಮಾತ್ರ ನಾವು ಅಂಗೀಕರಿಸುತ್ತೇವೆ. ಎಲ್ಲರಿಗೂ ಸಮಾನತೆ ಇದ್ದಾಗ ಮಾತ್ರ ನಾವು ಅಂತ ನ್ಯಾಯವನ್ನು ಒಪ್ಪಿಕೊಳ್ತೇವೆ.

ಸ್ನೇಹಿತರೆ, ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಯಾವುದೇ ಸಂದರ್ಭದಲ್ಲೂ ನಮ್ಮ ಜೆಎನ್‌ಯು ವಿದ್ಯಾರ್ಥಿ ಸಂಘಟನೆಯು ಹಿಂಸೆ, ಭಯೋತ್ಪಾದನೆ, ಯಾವುದೇ ಬಗೆಯ ಆತಂಕವಾದ ಮತ್ತು ಭಾರತ-ವಿರೋಧಿ ಚಟುವಟಿಕೆಗಳನ್ನು

ಪ್ರೋತ್ಸಾಹಿಸುವುದಿಲ್ಲ, ಕೆಲ ಅಪರಿಚಿತ ವ್ಯಕ್ತಿಗಳಿಂದ ಕೂಗಲ್ಪಟ್ಟ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆಯನ್ನು ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ವಾಗಿ ನಾನು ಖಂಡಿಸುತ್ತೇನೆ.

ನಿಮ್ಮ ಜೊತೆಗೆ ನಾನೊಂದು ವಿಚಾರವನ್ನು ಹಂಚಿಕೊಳ್ಳಬೇಕು, ಸ್ನೇಹಿತರೆ. ವು ಜೆಎನ್‌ಯು ಆಡಳಿತ ಮಂಡಳಿ ಮತ್ತು ಎಬಿವಿಪಿಗೆ ಸಂಬಂಧಿಸಿದ ಕೆ. ಜೆಎನ್‌ಯು ಕ್ಯಾಂಪಸ್‌ನಲ್ಲಿ ಸಾವಿರಾರು ಘಟನೆಗಳು ಜರುಗುತ್ತವೆ. ವಿಪಿಯಿಂದ ಮೊಳಗಿಸಲ್ಪಡುತ್ತಿರುವ ಘೋಷಣೆಯನ್ನು ಗಮನವಿಟ್ಟು ಲಿಸಿಕೊಳ್ಳಿ, ಅವರು ನಮ್ಮನ್ನು 'ಕಮ್ಯುನಿಸ್ಟ್ ನಾಯಿ'ಗಳು ಎಂದು ಕೂಗುತ್ತಿದ್ದಾರೆ. ಅವರು ನಮ್ಮನ್ನು 'ಅಫ್ಜಲ್ ಗುರುವಿನ ನಾಯಿಗಳು' ಎಂದು ಕೂಗುತ್ತಿದ್ದಾರೆ. ಅವರು ನಮ್ಮನ್ನು 'ಜೆಹಾದಿ ಸಂತಾನಿಗಳು' ಎಂದು ಕೂಗುತ್ತಿದ್ದಾರೆ. ನಮ್ಮ ಸಂವಿಧಾನ ನಾಗರಿಕತೆಯ ಹಕ್ಕನ್ನು ನಮಗೆ ಕೊಟ್ಟಿದೆ ಎನ್ನುವುದಾದರೆ ನಮ್ಮ ತ್ತವರನ್ನು ನಾಯಿಗಳು ಎಂದು ಕರೆಯುವುದು ನಮ್ಮ ಸಾಂವಿಧಾನಿಕ ಹಕ್ಕಿನ ಮೇಲಾಗುತ್ತಿರುವ ದಾಳಿಯಲ್ಲವೇ? ನಾವು ಈ ಪ್ರಶ್ನೆಯನ್ನು ಜೆಎನ್‌ಯು ಆಡಳಿತ ಮಂಡಳಿ ಮತ್ತು ಎಬಿವಿಪಿಗೆ ಕೇಳಬೇಕಿದೆ.

ನೀವು ಯಾರಿಗೋಸ್ಕರ, ಯಾರ ಜೊತೆಗೆ ಮತ್ತು ಯಾವ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದೀರಿ ಅಂತ ಜೆಎನ್‌ಯು ಆಡಳಿತ ಮಂಡಳಿಯನ್ನು ಪ್ರಶ್ನಿಸಬೇಕಿದೆ. ಜೆಎನ್‌ಯು ಆಡಳಿತ ಮಂಡಳಿ ಮೊದಲು ಅನುಮತಿ ನೀಡಿ, ನಂತರ ನಾಗ್ಪುರದಿಂದ ಫೋನ್ ಕರೆ ಬರುತ್ತಿದ್ದಂತೆಯೇ ಅನುಮತಿಯನ್ನು ರದ್ದು ಮಾಡಿದ್ದು ಈಗ ಸುಸ್ಪಷ್ಟವಾಗಿದೆ. ಮೊದಲು ಅನುಮತಿ ಕೊಟ್ಟು, ನಂತರದಲ್ಲಿ ವಾಪಾಸ್ ಪಡೆಯುವುದು ನಿಜಕ್ಕೂ ತೀವ್ರಗಾಮಿ ಧೋರಣೆ. ಮೊದಲು, ಅವರು ಫೆಲೋಶಿಪ್ ಘೋಷಿಸುತ್ತಾರೆ, ಆಮೇಲೆ ಅದನ್ನು ವಾಪಾಸ್ ಪಡೆಯುತ್ತಾರೆ. ಇದು ಈ ದೇಶವನ್ನು ಆಳಲು ಬಯಸುತ್ತಿರುವ ಆರೆಸ್ಸೆಸ್ ಮತ್ತು ಎಬಿವಿಪಿ ಬಗೆಯಾಗಿದೆ.

ನಾವು ಜೆಎನ್‌ಯು ಆಡಳಿತ ಮಂಡಳಿಯನ್ನು ಪ್ರಶ್ನಿಸಬೇಕಿದೆ. ಎಲ್ಲಾ ಕಡೆ ಪೋಸ್ಟರ್ ಅಂಟಿಸಿ, ಭಿತ್ತಿಪತ್ರಗಳನ್ನು ಹಂಚಿದ ಹೊರತಾಗಿಯೂ ಅನುಮತಿ (ಭಾರತ-ವಿರೋಧಿ ಘೋಷಣೆ ಕೇಳಿಬಂದ ಫೆಬ್ರವರಿ 09ರ ಕಾರ್ಯಕ್ರಮಕ್ಕೆ) ನೀಡಲಾಗಿತ್ತು, ಆ ಅನುಮತಿ ನೀಡಿದ ಮೇಲೆ ಯಾರ ನಿರ್ದೇಶನದಂತೆ ಅದನ್ನು ವಾಪಾಸ್ ಪಡೆಯಲಾಯಿತು?

ಇದೇವೇಳೆ, ಈ ಜನರ (ಎಬಿವಿಪಿ) ನಿಜಮುಖವನ್ನು ಅರ್ಥಮಾಡಿಕೊಳ್ಳಿ. ಅವರನ್ನು ದ್ವೇಷಿಸಬೇಡಿ. ಅವರ ಬಗ್ಗೆ ನನಗೆ ವಿಷಾದವಿದೆ. ಗಜೇಂದ್ರ ಚೌಹಾಣ್‌ನನ್ನು ಪತಿಷ್ಠಾಪಿಸಿದ (ಎಫ್‌ಟಿಟಿಐನಲ್ಲಿ) ಭಾವನೆಯಲ್ಲೇ ಇವತ್ತು ಅವರು ನಮ್ಮ ಮೇಲೆ ಧುಮುಕುತ್ತಿದ್ದಾರೆ; ಪ್ರತಿ ಸಂಸ್ಥೆಯಲ್ಲೂ ಅಂತವರು ಸಿಗುತ್ತಾರೆ ಅನ್ನೋ ಭ್ರಮೆ ಅವರದು. ಚೌಹಾಣ್ ತರದವರು ಎಲ್ಲಾ ಕಡೆ ಇರುತ್ತಾರೆ, ಅವರು ಉದ್ಯೋಗಗಳನ್ನು ಪಡೆಯುತ್ತಾರೆ ಅನ್ನೋದು ಅವರ ನಂಬಿಕೆ. ಒಮ್ಮೆ ಅವರಿಗೆ ಕೆಲಸ ಸಿಕ್ಕಿಬಿಟ್ಟಿತೆಂದರೆ ದೇಶಸೇವೆ ಮತ್ತು ಭಾರತಮಾತೆ ಎಲ್ಲವೂ ಅವರಿಗೆ ಮರೆತುಹೋಗುತ್ತದೆ. ಇನ್ನು ತ್ರಿವರ್ಣಧ್ವಜದ ಬಗ್ಗೆ ಕೇಳುವುದೇ ಬೇಡ, ಅವರು ಯಾವತ್ತಿಗೂ ಅದಕ್ಕೆ ಗೌರವ ಕೊಟ್ಟವರಲ್ಲ, ಅವರು ತಮ್ಮದೆ ಕೇಸರಿ ಬಾವುಟವನ್ನೂ ಮರೆತುಬಿಡುತ್ತಾರೆ.

ಅವರು ಹೇಳುತ್ತಿರುವ ದೇಶಸೇವೆ ಅಂದರೆ ಏನು? ಅಂತ ನಾನು ತಿಳಿಯಬಯಸುತ್ತೇನೆ. ಯಜಮಾನ ತನ್ನ ನೌಕರರ ಜೊತೆಗೆ ಸರಿಯಾಗಿ ನಡೆದುಕೊಳ್ಳದಿದ್ದರೆ, ರೈತ ಕೂಲಿಕಾರ್ಮಿಕರ ಜೊತೆ ಸರಿಯಾಗಿ ವರ್ತಿಸದಿದ್ದರೆ, ಪುಡಿಗಾಸು ಸಂಬಳಕ್ಕೆ ದುಡಿಯುವ ವರದಿಗಾರರ ಜೊತೆ ಲಕ್ಷಾಂತರ ಸಂಬಳ ಗಳಿಸುವ ಸಿಇಒ ಸರಿಯಾಗಿ ವ್ಯವಹರಿಸದಿದ್ದರೆ, ಅದೆಂತಹ ದೇಶಸೇವೆ ಆದೀತು?

ನನಗೆ ಬಹಳಷ್ಟು ಎಬಿವಿಪಿ ಮಂದಿ ಪರಿಚಿತರಿದ್ದಾರೆ, ಅವರನ್ನು ನಾನು "ನಿಮ್ಮ ರಾಷ್ಟ್ರೀಯತೆ ಉದ್ರೇಕ ನಿಮ್ಮನ್ನು ಮುಂದಕ್ಕೇನಾದರು ಕೊಂಡ್ಯೊದಿದೆಯಾ?" ಅಂತ ಕೇಳಿದಾಗ ಅವರು ಹೀಗೆ ಉತ್ತರಿಸುತ್ತಾರೆ; 'ಏನ್ ಮಾಡೋದು, ಗುರು, ಈ ಸರ್ಕಾರ ಐದು ವರ್ಷಗಳ ಕಾಲ ಇರುತ್ತೆ, ಅದರಲ್ಲಿ ಈಗಾಗಲೇ ಎರಡು ವರ್ಷ ಸರಿದಾಗಿದೆ. ಇನ್ನು ಮೂರುವರ್ಷ 'ಟಾಕ್‌ಟೈಮ್' ಬಾಕಿ ಉಳಿದಿದೆ. ನಾವು ಏನು ಮಾಡಬೇಕು ಅದನ್ನೆಲ್ಲ ಈ ಅವಧಿಯಲ್ಲೇ ಮಾಡಿ ಮುಗಿಸಬೇಕು!"

ಇದೆಲ್ಲವನ್ನೂ ನಾನು ಯಾಕೆ ಹೇಳುತ್ತಿದ್ದೇನೆಂದರೆ ಮುಂಬರುವ ಮಾರ್ಚ್‌ನಲ್ಲಿ ಚುನಾವಣೆಗಳು ಎದುರಾಗಲಿವೆ. ಎಬಿವಿಪಿ ಮಂದಿ 'ಓಂ'ಕಾರ ಪತಾಕೆ ಹಿಡಿದು ನಿಮ್ಮ ಮತಗಳನ್ನು ಕೇಳುತ್ತಾರೆ. ಆಗ ಅವರನ್ನು ಕೇಳಿ: 'ನಾವು ಜೆಹಾದಿಗಳು, ನಾವು ಭಯೋತ್ಪಾದಕರು, ನಾವು ದೇಶದ್ರೋಹಿಂಗಳು, ನಮ್ಮಂತವರ ಮತಗಳನ್ನು ಪಡೆಯುವ ಮೂಲಕ ನೀವೂ ದೇಶದ್ರೋಹಿಂಗಳಾಗುವುದಿಲ್ಲವೇ?' ಅಂತ. ಈ ಪ್ರಶ್ನೆಗಳನ್ನು ಕೇಳಿನೋಡಿ. ನನಗೆ ಚೆನ್ನಾಗಿ ಗೊತ್ತು, ನೀವು ಈ ಪ್ರಶ್ನೆ ಕೇಳುತ್ತಿದ್ದಂತೆಯೇ ಅವರ ಉತ್ತರ ಸಿದ್ಧವಾಗಿರುತ್ತದೆ, 'ನೀನಲ್ಲ, ಕೆಲವರು ಮಾತ್ರ ದೇಶದ್ರೋಹಿಂಗಳು'. ಆಗ ಮತ್ತೆ ಪ್ರಶ್ನಿಸಿ, 'ಹಾಗಿದ್ದರೆ ಅವತ್ತೇ ಈ ವಿಚಾರವನ್ನು ಮಾಧ್ಯಮಗಳೆದುರು ಏಕೆ ಹೇಳಲಿಲ್ಲ?', ನಿಮ್ಮ ಕುಲಪತಿ ಮತ್ತು ರಿಜಿಸ್ಟ್ರಾರ್‌ಗಳು ಯಾಕೆ ಹೇಳಲಿಲ್ಲ ಅಂತ ಅವರನ್ನು ಕೇಳಿ.

ಆಗ ಅವರಿಗೆ ಹೇಳಿ, 'ಆ ಕೆಲವರು' ಕೂಡಾ 'ಪಾಕಿಸ್ತಾನ್ ಜಿಂದಾಬಾದ್' ಅನ್ನೋ ಘೋಷಣೆ ಕೂಗಲಿಲ್ಲ; ಆ ಕೆಲವರು ಭಯೋತ್ಪಾದನೆಗೆ ಬೆಂಬಲವನ್ನೂ ನೀಡುತ್ತಿಲ್ಲ; ಆ ಕೆಲವರು ಕೇಳುತ್ತಿರೋದು ಒಂದೇ ಪ್ರಶ್ನೆ 'ಮೊದಲು ಅನುಮತಿಯನ್ನು ನೀಡಿ ಆಮೇಲೆ ಯಾಕೆ ಹಿಂತೆಗೆದುಕೊಳ್ಳಲಾಯಿತು'; ಅದು ನಮ್ಮ ಪ್ರಜಾತಾಂತ್ರಿಕ ಹಕ್ಕಿನ ಮೇಲಿನ ಹಲ್ಲೆಯಲ್ಲವೇ? ಎಂಬುದಷ್ಟೇ ಆ ಕೆಲವರ ಆತಂಕ. ಎಲ್ಲಿ ಏನೇ ಆಗಲಿ ಪ್ರಜಾಪ್ರಭುತ್ವದ ಸಂಘರ್ಷ ಏರ್ಪಟ್ಟಾಗ ಆ ಕೆಲವರು ಹೋರಾಟಕ್ಕೆ ಸಿದ್ಧರಿರುತ್ತಾರೆ ಅಂತ ಅವರಿಗೆ ಹೇಳಿ.

ಜೆಎನ್‌ಯು ಚಿರಾಯುವಾಗಲಿ. ದೇಶದುದ್ದಕ್ಕೂ ನಡೆಯುವ ಪ್ರಜಾತಾಂತ್ರಿಕ ಸಂಘರ್ಷದಲ್ಲಿ ಪಾಲ್ಗೊಳ್ಳುವುದನ್ನು; ಪ್ರಜಾಪ್ರಭುತ್ವದ, ಸ್ವಾತಂತ್ರ್ಯದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ದನಿಯನ್ನು ಗಟ್ಟಿಗೊಳಿಸುವಿಕೆಯಲ್ಲಿ ತೊಡಗಿಕೊಳ್ಳುವುದನ್ನು ಜೆಎನ್‌ಯು ಸಕ್ರಿಯವಾಗಿ ಮುಂದುವರೆಸುತ್ತದೆ. ಈ ದೇಶದ ವಂಚಕರ ವಿರುದ್ಧ ಹೋರಾಡುತ್ತೇವೆ ಮತ್ತು ಅವರ ಮೇಲೆ ಜಯ ಸಾಧಿಸುತ್ತೇವೆ. ಈ ಮೂಲಕ ನಾನು ನಿಮಗೆ ಧನ್ಯವಾದ ಅರ್ಪಿಸುತ್ತೇನೆ ಮತ್ತು ಒಗ್ಗಟ್ಟಾಗಿ ನಿಮ್ಮನ್ನು ಪೊರೆಯುತ್ತೇನೆ.

ಜೈ ಭೀಮ್, ಲಾಲ್ ಸಲಾಂ.

■ ಕನ್ಹಯ್ಯ ಕುಮಾರ್

(ಅನುವಾದ: ಗಿರೀಶ್ ತಾಳಿಕಟ್ಟೆ)

ಸಾಹಿತ್ಯ ಪರಿಷತ್ತಿಗೆ ಬೇಕು ಮನು ಬಳಿಗಾರ



ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎನ್ನುವ ಗೌರವಕ್ಕೆ ಪಾತ್ರವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನನ್ನದು 18 ವರ್ಷಗಳ ಅವಿನಾಭಾವ ಸಂಬಂಧ. ಸಾಹಿತ್ಯ ಪರಿಷತ್ತಿನ ಸದಸ್ಯನೇ ಆಗಿರದಿದ್ದ ನಾನು ಡಾ. ಸಾ.ಶಿ. ಮರುಳಯ್ಯನವರು ಅಧ್ಯಕ್ಷರಾಗಿದ್ದಾಗ ಆಕಸ್ಮಿಕವಾಗಿ ಪರಿಷತ್ತಿಗೆ ಪ್ರವೇಶಿಸಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಯ ಬಗೆಗೆ ನನಗಿದ್ದ ಅಭಿಮಾನ, ಸಾಹಿತ್ಯ ಪರಿಷತ್ತನ್ನು ವೇದಿಕೆಯಾಗಿಸಿಕೊಂಡು ಕನ್ನಡಕ್ಕೆ ಸಂಬಂಧಿಸಿದ ಮಹತ್ವದ ಕೆಲಸಗಳನ್ನು ಹೇಗೆ ಮಾಡಬಹುದು ಎನ್ನುವ ಬಗ್ಗೆ ನನಗಿದ್ದ ಕನಸು ಮತ್ತು ಬದ್ಧತೆಯಿಂದ ಕೆಲಸ ಮಾಡುವ ಹುಮ್ಮಸ್ಸು ನನ್ನನ್ನು 18 ವರ್ಷಗಳ ಕಾಲ ಅಲ್ಲಿ ಕಟ್ಟಿಹಾಕಿತು. ಸತತ ನಾಲ್ವರು ಅಧ್ಯಕ್ಷರ ಅವಧಿಯಲ್ಲಿ ಗೌರವ ಕಾರ್ಯದರ್ಶಿಯಾಗಿ, ಗೌರವ ಕೋಶಾಧ್ಯಕ್ಷನಾಗಿ ಅತ್ಯಂತ ಶಿಸ್ತಿನಿಂದ ಕೆಲಸ ಮಾಡುವ ಅವಕಾಶ ನಾನು ಬಯಸದೆಯೇ ಒದಗಿಬಂತು. ನನಗೇ ವಿಶಿಷ್ಟ ಎನಿಸುವ ಕಾರ್ಯವೈಖರಿ ಮತ್ತು ಸಾಹಿತಿ- ಸಾಹಿತ್ಯಾಭಿಮಾನಿಗಳೊಂದಿಗೆ ನನಗಿದ್ದ ವ್ಯಾಪಕ ಪರಿಚಯ, ಒಡನಾಟಗಳು ಪ್ರತಿ ಚುನಾವಣೆಯಲ್ಲಿ ಅಧ್ಯಕ್ಷರನ್ನು ಆಯ್ಕೆಮಾಡುವಲ್ಲಿ ನಾನು ನಿರ್ಣಾಯಕ ಪಾತ್ರ ವಹಿಸುವಂತೆ ಮಾಡಿದವು. ನನ್ನನ್ನು ಅಧ್ಯಕ್ಷ ಪೀಠದಲ್ಲಿ ಅನಾಯಾಸವಾಗಿ ಕೂರುವಂತೆ ಮಾಡಿದವು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಆಯ್ಕೆ ಮಾಡುವಲ್ಲಿ ನನಗಿರುವ ಶಕ್ತಿಯನ್ನು ಮನಗಂಡೇ ಈ ಬಾರಿಯ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಕೋರಿ ನನ್ನನ್ನು ಸಂಪರ್ಕಿಸಿದ ಅಭ್ಯರ್ಥಿಗಳಲ್ಲಿ ಡಾ. ಮನು ಬಳಿಗಾರ್ ಅವರನ್ನು 'ನಾನು ಬೆಂಬಲಿಸುವ ಅಭ್ಯರ್ಥಿ' ಎಂದು ಘೋಷಿಸುವ ತೀರ್ಮಾನ ತೆಗೆದುಕೊಂಡೆ. ಹೀಗೆ ತೀರ್ಮಾನಿಸುವ ಮುನ್ನ ನಾನು ಸಾಕಷ್ಟು ಆಲೋಚಿಸಿದ್ದೇನೆ. ಸಾಹಿತ್ಯ ಪರಿಷತ್ತು ಎನ್ನುವ ಕನ್ನಡದ ತೇರನ್ನು ಇಲ್ಲಿಂದ ಮುಂದಕ್ಕೆ ಸಮರ್ಥವಾಗಿ ಎಳೆದುಕೊಂಡುಹೋಗುವ ಸಾಮರ್ಥ್ಯ, ಕನ್ನಡ ನಾಡು-ನುಡಿ, ಸಂಸ್ಕೃತಿ ಕುರಿತಾದ ತಿಳಿವಳಿಕೆ, ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರ ಹುಡುಕಬಲ್ಲ ಸೂಕ್ಷ್ಮತೆ, ಕನ್ನಡದ ವಿಚಾರದಲ್ಲಿ ನ್ಯಾಯನಿಷ್ಠುರಿಯಾಗಿದ್ದೂ ಆಳುವ ಸರ್ಕಾರ ದೊಂದಿಗೆ ಇರಿಸಿಕೊಳ್ಳಬೇಕಾದ ಬಾಂಧವ್ಯ, ಪರಿಷತ್ತಿನ ಇತಿಹಾಸದ ಅರಿವಿನೊಂದಿಗೆ ನಾಡಿನ ಜನ ಮೆಚ್ಚುವಂತೆ ಹೊಸ ಇತಿಹಾಸವನ್ನು ಸೃಷ್ಟಿಸುವ ಅದಮ್ಯ ಛಲ, ಸಾಹಿತಿ ಕಲಾವಿದರು ಹೋರಾಟಗಾರರ ಬಗೆಗೆ ಗೌರವ ಇರಿಸಿ ಕೊಂಡರೆ ಸಾಲದು ಅವರನ್ನು ಪರಿಷತ್ತಿನ ಚಟುವಟಿಕೆಗಳಲ್ಲಿ ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದು, ಬಹುಜನ ಕನ್ನಡಿಗರ ಹಿತಾಸಕ್ತಿಗೆ ಸ್ಪಂದಿಸುವ ಸಂವೇದನಾಶೀಲತೆ..... ಇತ್ಯಾದಿ ಗುಣಗಳನ್ನು ನಾನು ಯಾರಲ್ಲಿ ಗುರುತಿಸಿದ್ದೇನೋ ಅಂಥವರ ಪರವಾಗಿ ನಿಲ್ಲಬೇಕೆನ್ನುವ ಸಂಕಲ್ಪದಲ್ಲಿ ನನ್ನ ಸ್ವಾರ್ಥವೇನೂ ಇಲ್ಲ, ಯಾಕೆಂದರೆ 'ನಾನೇ ಗೆಲ್ಲಿಸಿದೆ' ಎಂದು ಹೇಳಿಕೊಂಡು ನಾನು ಯಾರಿಂದಲೂ ಏನನ್ನೂ ಪಡೆಯುವ ಅಗತ್ಯವಿಲ್ಲ; ಪಡೆದುಕೊಳ್ಳಬೇಕಾದ ಎಲ್ಲವನ್ನೂ ನನ್ನ ಸ್ವಂತ ಪ್ರಯತ್ನ ಮತ್ತು ಪರಿಶ್ರಮದಿಂದ ಪಡೆದುಕೊಂಡಿದ್ದೇನೆ. ಆ ವಿಚಾರದಲ್ಲಿ ನನಗೆ ಸಂತೋಷವೂ ಇದೆ, ಸಂತೃಪ್ತಿಯೂ ಇದೆ.

ಇಲ್ಲಿ ಉಲ್ಲೇಖಿಸಿದ, ವಿವರಿಸಿದ ಕಾರಣಗಳ ಹಿನ್ನೆಲೆ ಯಲ್ಲಿ ಈ ಬಾರಿ ನಾನು ಡಾ. ಮನು ಬಳಿಗಾರ್ ಅವರನ್ನು ಬೆಂಬಲಿಸಿರುವುದು ಮಾತ್ರವಲ್ಲ, ಅವರನ್ನು ಗೆಲ್ಲಿಸಲು, ಅಧ್ಯಕ್ಷ ಸ್ಥಾನದಲ್ಲಿ ಪ್ರತಿಷ್ಠಾಪಿಸಲು ನನಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದೇನೆ. ಮನು ಬಳಿಗಾರರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ರಾಗಿದ್ದಾಗ, ಆಯುಕ್ತರಾಗಿದ್ದಾಗ ಒಬ್ಬ ಅಧಿಕಾರಿಯಾಗಿ ಕುರ್ಚಿಗೆ ಅಂಟಿ ಕುಳಿತಿರಲಿಲ್ಲ, ಕನ್ನಡದ ಕೆಲಸಗಳನ್ನು ಪ್ರೀತಿ, ಆಸಕ್ತಿಗಳಿಂದ ಮಾಡಿದರು. ಇಲಾಖೆ ಪ್ರಕಟಿಸುತ್ತಿದ್ದ ಅಪರೂಪದ ಮತ್ತು ಅಮೂಲ್ಯವಾದ ಪುಸ್ತಕಗಳನ್ನು ಕನ್ನಡಿಗರು ಸಂತೋಷದಿಂದ ಕೊಂಡು ಓದಲಿ, ಕನ್ನಡದ ಪ್ರಕಟಣೆಗಳು ಅವರ ಮನೆಯ ಕಪಾಟುಗಳನ್ನು ಅಲಂಕರಿಸಲಿ ಎನ್ನುವ ಸದುದ್ದೇಶದಿಂದ ಕೃತಿ ಪ್ರಕಟಣೆಯ ಖರ್ಚನ್ನು ಮಾತ್ರ ಭರಿಸುವಷ್ಟು ಕಡಿಮೆ ಬೆಲೆ ನಿಗದಿಪಡಿಸುವ ಆದೇಶ ಸರ್ಕಾರದಿಂದ ಹೊರಬೀಳುವಂತೆ ಮಾಡಿದರು. ಅನೇಕ ವರ್ಷಗಳಿಂದ ಬಹುಬೇಡಿಕೆಯಿದ್ದರೂ ತಾಂತ್ರಿಕ ತೊಡಕು ಗಳಿಂದ ನೆನೆಗುದಿಗೆ ಬಿದ್ದಿದ್ದ ಸಮಗ್ರ ವಚನಸಂಪುಟಗಳನ್ನು, ಡಾ. ಬಿ.ಆರ್.ಅಂಬೇಡ್ಕರ್ ಅವರ ಸಮಗ್ರ ಬರಹಗಳ ಸಂಪುಟಗಳನ್ನು, ಹಿರಿಯ ಲೇಖಕರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಪ್ರಕಟಿಸಿ, ಕೇವಲ ಅಧ್ಯಾಪಕ-ಸಂಶೋಧಕರು ಮಾತ್ರವಲ್ಲ ಅಪಾರ ಓದುಗ ವಲಯದ ಆದರಾಭಿಮಾನಗಳಿಗೆ ಪಾತ್ರರಾದರು. ಕನ್ನಡ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಸ್ಥಾಪಿಸಿದರು. ಟ್ರಸ್ಟ್‌ಗಳಿಗೆ ವಾರ್ಷಿಕ ಅನುದಾನ ನಿಗದಿಪಡಿಸಿ ಅವು ಜೀವಚೈತನ್ಯ ತುಂಬಿಕೊಂಡು ಕ್ರಿಯಾಶೀಲವಾಗುವಂತೆ ಮಾಡಿದರು.


ಕನ್ನಡ ಸಾಹಿತ್ಯ ಪರಿಷತ್ತಿನ ಪುರೋಭಿವೃದ್ಧಿಯ ದೃಷ್ಟಿಯಿಂದಲೂ ಮನು ಬಳಿಗಾರರಂಥವರು ಅಧ್ಯಕ್ಷರಾಗುವುದರಲ್ಲಿ ಅರ್ಥವಿದೆ ಎಂದು ನಾನು ನಂಬಿದ್ದೇನೆ. ಯಾಕೆಂದರೆ, ಎರಡು ಬಾರಿ ಅಧ್ಯಕ್ಷ ಚುನಾವಣೆಯ ಪೂರ್ವ ಅವಧಿಯಲ್ಲಿ ಬಳಿಗಾರರು ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿದ್ದು ಅದರ ಅಂತರಂಗ-ಬಹಿರಂಗಗಳನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಎಲ್ಲಿ ಏನನ್ನು ಸರಿಪಡಿಸಬೇಕೆಂಬುದನ್ನು ತಿಳಿದಿದ್ದಾರೆ. ಆ ನಂತರದಲ್ಲೂ ಪರಿಷತ್ತಿನೊಂದಿಗೆ ಆತ್ಮೀಯ ಬಾಂಧವ್ಯ ಇರಿಸಿಕೊಂಡಿದ್ದಾರೆ. ಅಧಿಕಾರಿಯ ಗತ್ತಿಲ್ಲದೆ ಸಾಮಾನ್ಯನಾಗಿಯೇ ಪರಿಷತ್ತಿಗೆ ಬಂದು ಅಧ್ಯಕ್ಷರೊಂದಿಗೆ ಚರ್ಚೆ, ಸಮಾಲೋಚನೆ ನಡೆಸಿ ಹೋಗಿದ್ದಾರೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಲಿ, ಪದಾಧಿಕಾರಿಗಳಾಗಲಿ ಕಾರ್ಯನಿಮಿತ್ತ ಕನ್ನಡ ಸಂಸ್ಕೃತಿ ಇಲಾಖೆಗೆ ಭೇಟಿ ಕೊಟ್ಟಾಗ ಎಷ್ಟೇ ಒತ್ತಡದಲ್ಲಿದ್ದರೂ ಒಳಗೆ ಬರಮಾಡಿಕೊಂಡು ಮಾತನಾಡಿದ್ದಾರೆ, ಮಾತು ಕೇಳಿಸಿಕೊಂಡಿದ್ದಾರೆ. ನಾನು ಅಧ್ಯಕ್ಷನಾಗಿದ್ದ ಅವಧಿಯಲ್ಲಂತೂ ಸರ್ಕಾರ ಮತ್ತು ಸಾಹಿತ್ಯ ಪರಿಷತ್ತಿನ ನಡುವೆ ಸಂಪರ್ಕ ಸೇತುವೆ ಮಾತ್ರವಲ್ಲ, ಸುವರ್ಣ ಸೇತುವೆಯಂತೆ ಸ್ವಯಂಪ್ರೇರಿತ ಆಸಕ್ತಿಯಿಂದ ಕೆಲಸ ಮಾಡಿದ್ದಾರೆ. ಸರ್ಕಾರ, ಮುಖ್ಯಮಂತ್ರಿ, ಮಂತ್ರಿಗಳ ವಿಚಾರದಲ್ಲಿ ನಾನು ನಿಷ್ಠುರವಾಗಿ ಮಾತನಾಡಿದಾಗಲೂ ಬಳಿಗಾರರು ಸರ್ಕಾರದ ಪರವಾಗಿ ನಿಲ್ಲುವ ಧಾರ್ಷ್ಟ್ಯವನ್ನು ತೋರದೆ ನ್ಯಾಯದ ಪರವಾಗಿ ನಿಂತಿದ್ದಾರೆ. ಸರ್ಕಾರ ಮತ್ತು ಪರಿಷತ್ತಿನ ಬಾಂಧವ್ಯ ಕೆಟ್ಟುಹೋಗದತೆ ನೋಡಿಕೊಂಡಿದ್ದಾರೆ. ಘೋಷಿತ ಅನುದಾನ ಮಾತ್ರವಲ್ಲ ಹೆಚ್ಚುವರಿ ಅನುದಾನ, ವಿಶೇಷ ಅನುದಾನ, ಸಮ್ಮೇಳನಗಳಿಗೆ ಹೆಚ್ಚಿನ ಹಣ ಸರ್ಕಾರದಿಂದ ಬಿಡುಗಡೆಯಾಗುವಲ್ಲಿ ಮಹತ್ವದ ಪಾತ್ರವನ್ನು ವಹಿಸಿ ದ್ದಾರೆಂದು ಹೇಳದಿದ್ದರೆ ಅದು ಖಂಡಿತ ಆತ್ಮವಂಚನೆ ಯಾಗುತ್ತದೆ. ಅನಾರೋಗ್ಯದ ಕಾರಣ ನಾನು ಓಡಾಟ ಮಾಡಲಾಗದ್ದನ್ನು ಅರ್ಥಮಾಡಿಕೊಂಡು, ನನ್ನ ಪರವಾಗಿ ಅವರೇ ಓಡಾಟ ಮಾಡಿ ಪರಿಷತ್ತಿನ ಕೆಲಸಗಳು, ಯೋಜನೆ ಗಳು ಅಬಾಧಿತವಾಗಿ ನಡೆಯಲು ಕಾರಣರಾಗಿರುವುದು ಸಾಹಿತ್ಯ ಪರಿಷತ್ತಿನ ಬಗೆಗೆ ಅವರಿಗಿರುವ ಪ್ರೀತಿ ಗೌರವಗಳಿಂದಾಗಿಯೇ.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯೆನ್ನುವ ಹೆಮ್ಮೆ ಸಾಹಿತ್ಯ ಪರಿಷತ್ತಿನದಾಗಿದ್ದರೂ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಸಮ್ಮೇಳನಗಳನ್ನು ನಡೆಸಲು ದಾನಿಗಳನ್ನೋ ಸಂಘಸಂಸ್ಥೆಗಳ ಸಹಕಾರವನ್ನೋ ಬೇಡಬೇಕಾಗಿದ್ದ ಸ್ಥಿತಿಯಲ್ಲಿ ಕಾರ್ಯಕ್ರಮ ಗಳನ್ನು ನಡೆಸುವುದೇ ದುಸ್ತರವೆನಿಸಿತ್ತು. ಪರಿಷತ್ತನ್ನು ಈ ಸಂಕಟದಿಂದ ಪಾರುಮಾಡುವ ಉಪಾಯ ವನ್ನು ಆಲೋಚಿಸಿದ ಬಳಿಗಾರರು ಕಾರ್ಯಪ್ರವೃತ್ತರೂ ಆದರು. ತಾಲ್ಲೂಕು ಹಾಗೂ ಜಿಲ್ಲಾ ಸಮ್ಮೇಳನಗಳಿಗೆ ಕ್ರಮವಾಗಿ ಒಂದು ಲಕ್ಷ ಮತ್ತು ಐದು ಲಕ್ಷ ಅನುದಾನ ಸರ್ಕಾರದಿಂದ ಪ್ರತಿವರ್ಷ ನಿರಂತರವಾಗಿ ಬರುವಂತೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸಿಬ್ಬಂದಿಯ ವೇತನಕ್ಕಾಗಿ ಸರ್ಕಾರದ ಕ್ರಿಯಾಯೋಜನೆ ಯಲ್ಲಿಯೇ ಒಂದು ಕೋಟಿ ರೂಪಾಯಿ ಮೀಸಲಿಡುವಂತೆ ಮಾಡಿದರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೋಟಿ ರೂಪಾಯಿ ಯಷ್ಟು ಅನುದಾನ ಸಿಗುವಂತೆ ಪ್ರಸ್ತಾವನೆ ಮಂಡಿಸಿ, ಕ್ರಮೇಣ ಅದು ಹೆಚ್ಚಾಗಲು ಕಾರಣರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ವಿಚಾರದಲ್ಲಿ ಇಷ್ಟೆಲ್ಲ ಪ್ರೀತಿ, ಕಾಳಜಿಗಳನ್ನು ತೋರಿರುವ ಬಳಿಗಾರರು ಅದನ್ನು ಇನ್ನಷ್ಟು ಸುಸಂಪನ್ನ ಮಾರ್ಗದಲ್ಲಿ ಕೊಂಡೊಯ್ಯುವ ಎಲ್ಲ ಸಾಧ್ಯತೆಗಳೂ ಇವೆ.

ಕನ್ನಡ ಪ್ರೀತಿಯ ದಕ್ಷ ಆಡಳಿತಗಾರರಾಗಿ ಹೆಸರು ಮಾಡಿರುವ ಮನು ಬಳಿಗಾರರಿಗೆ ಇಷ್ಟೇ ಮುಖ್ಯವಾದ ಮತ್ತೊಂದು ಮುಖವೂ ಇದೆ. ಅದು ಅವರ ಕನ್ನಡ ಸಾಹಿತ್ಯ ಸೇವೆ. ನಲವತ್ತು ವರ್ಷಗಳಿಂದ ಸಾಹಿತ್ಯ ಕೃಷಿ ಮಾಡುತ್ತಿರುವ ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಉತ್ತಮ ಎನ್ನಬಹುದಾದ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಬೇರೆ ಭಾಷೆಯ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅವರ ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದ ಗೊಂಡಿವೆ. ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಗೌರವ ಡಾಕ್ಟರೇಟ್ ಪಡೆದಿದ್ದಾರೆ. ಬೆಳಗಾವಿಯ ವಿಶ್ವಕನ್ನಡ ಸಮ್ಮೇಳನವನ್ನು ಅರ್ಥಪೂರ್ಣವೆನಿಸುವಂತೆ ಸಂಘಟಿಸಿದ್ದಾರೆ. ಸರ್ಕಾರಿ ಸೇವೆ ಯಲ್ಲಿನ ಅತ್ಯುತ್ತಮ ಸಾಧನೆಗಾಗಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ.

ಇವೆಲ್ಲವೂ ಉಳಿದ ಅಭ್ಯರ್ಥಿಗಳಿಗಿಂತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಾದಿಯೇರಲು ಹೆಚ್ಚಿನ ಅರ್ಹತೆಗಳನ್ನು ಮನು ಬಳಿಗಾರರು ಪಡೆದುಕೊಂಡಿದ್ದಾರೆಂಬುದನ್ನು ಸಾಬೀತುಪಡಿಸುವ ಸಂಗತಿಗಳು. ಮನು ಬಳಿಗಾರರ ಆಡಳಿತಾನುಭವ, ಸಂಘಟನಾ ಶಕ್ತಿ, ಕನ್ನಡ ಸೇವೆ, ಸಾಹಿತ್ಯ ಸೃಷ್ಟಿ ಇವುಗಳ ಜೊತೆಗೆ ಅವರನ್ನು ಬೆಂಬಲಿಸುವಲ್ಲಿ ನನ್ನ ಸ್ವಾರ್ಥವೂ ಇದೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದವರು ಹಿಂದಿನ ಅಧ್ಯಕ್ಷರ ನಿಸ್ವಾರ್ಥ ಸೇವೆಯನ್ನು ಗಮನದಲ್ಲಿರಿಸಿ ಕೊಂಡು, ಸೇವಾಮನೋಭಾವದಿಂದ ಕೆಲಸ ಮಾಡಬೇಕು. ಕನ್ನಡದ ಕೆಲಸವನ್ನು ಹಣದಲ್ಲಿ ಅಂದಾಜು ಮಾಡಿ ಸಂಬಳ ಪಡೆಯುವುದು ಹೇಯವಾದದ್ದು. ಇಂಥದ್ದು ಹಿಂದೆ ನಡೆದದ್ದು ದುರದೃಷ್ಟಕರ. ಇದಕ್ಕಾಗಿ ನನಗೆ ಬೇಸರವಿದೆ . ಇಂಥದ್ದನ್ನೆಲ್ಲ ಆಲೋಚನೆ ಮಾಡಿಯೇ ನಾನು ಹರಿಕೃಷ್ಣ ಪುನರೂರ ಮಾದರಿಯನ್ನಿರಿಸಿಕೊಂಡೆ. ಅಧ್ಯಕ್ಷನಾಗಿ ಗೌರವಧನ ಪಡೆಯಲು ಹೋಗಲಿಲ್ಲ. ಸಾಹಿತ್ಯ ಪರಿಷತ್ತಿನ ಸ್ವತಂತ್ರ ಸಾರ್ವಭೌಮತ್ವವನ್ನು ದೃಷ್ಟಿಯಲ್ಲಿರಿಸಿಕೊಂಡು ಕನ್ನಡ ನಿಧಿಯನ್ನು ಉಬ್ಬಿಸುವ ಪ್ರಯತ್ನವನ್ನು ನಾನು ಮಾಡಿದ್ದೇನೆ.

ಈ ವಿಚಾರಗಳನ್ನು ಬಳಿಗಾರರಲ್ಲಿ ಪ್ರಸ್ತಾಪಿಸಿದಾಗ, "ನಾನು ಅಧ್ಯಕ್ಷನಾಗಿ ಆಯ್ಕೆಯಾದಲ್ಲಿ, ಹಿಂದಿನ ಎಲ್ಲ ಅಧ್ಯಕ್ಷರು ಮಾಡುತ್ತ ಬಂದಿರುವ ಉತ್ತಮ ಕೆಲಸಗಳನ್ನು ಮುಂದುವರಿಸುತ್ತೇನೆ. ಪರಿಷತ್ತಿನ ಸಿಬ್ಬಂದಿ-ಸದಸ್ಯರೊಂದಿಗೆ ವಿಶ್ವಾಸಪೂರ್ಣವಾದ ಬಾಂಧವ್ಯ ಇರಿಸಿಕೊಳ್ಳುತ್ತೇನೆ. ಶಿಸ್ತು-ಬದ್ಧತೆಗಳಿಂದ ಕನ್ನಡ ಸೇವೆ ಮಾಡುತ್ತೇನೆ. ಅಧ್ಯಕ್ಷನಾಗಿ ಮಾಸಿಕ ಗೌರವಧನ ಪಡೆಯುವುದಿಲ್ಲ" ಎಂದು ಹೇಳಿದ್ದಾರೆ. ಅವರ ಮಾತುಗಳನ್ನು ಅನುಮಾನದಿಂದ ನೋಡಬೇಕಾದ ಅಗತ್ಯವಿಲ್ಲ, ಹೇಳಿದಂತೆ ನಡೆಯುತ್ತಾರೆಂಬ ವಿಶ್ವಾಸ ನನಗಿದೆ. ಪರಿಷತ್ತಿನ ಮತದಾರ ಸದಸ್ಯರ ನಾಡಿಮಿಡಿತವನ್ನು ಅನುಭವದಿಂದ ಚೆನ್ನಾಗಿ ಬಲ್ಲ ನನಗೆ ಮನವರಿಕೆಯಾಗಿದೆ, ಈ ಚುನಾವಣೆಯಲ್ಲಿ ಮನು ಬಳಿಗಾರರು ಗೆಲ್ಲುವುದನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವುದನ್ನು ಯಾರೂ ತಡೆಯಲಾರರು.



ಪುಂಡಲೀಕ ಹಾಲಂಬಿ

ನಿಕಟಪೂರ್ವ ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು



ಮಲೆಯಾಳಂ ಸಾಹಿತ್ಯ ವಲಯದಲ್ಲಿ ಕೆ.ಆರ್.ಮೀರಾ ಅವರದು ಪ್ರಸಿದ್ಧ ಹೆಸರು. ಈ ಹಿಂದೆ ಪತ್ರಕರ್ತೆಯಾಗಿದ್ದ ಮೀರಾ ಅವರು ಆನಂತರ ಸಾಹಿತ್ಯಲೋಕವನ್ನು ಪ್ರವೇಶಿಸಿದರು. ಅವರು ಹಲವಾರು ಕಥಾ ಸಂಗ್ರಹಗಳನ್ನು ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಅವರ 'ಅವೆ ಮರಿಯಾ' ಕಿರುಗತೆಗೆ 2009ರಲ್ಲಿ ಕೇರಳ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿತ್ತು. ಅವರ ಕಾದಂಬರಿ 'ಅರಾಚಾರ್' ಮಲೆಯಾಳಂ ಸಾಹಿತ್ಯದಲ್ಲಿ ಉತ್ತಮವಾದದ್ದು ಎಂದೇ ಭಾವಿಸಲಾಗಿದೆ. ಆ ಕಾದಂಬರಿಗೆ ಕೇರಳ ಸಾಹಿತ್ಯ ಅಕಾಡಮಿ ಪ್ರಶಸ್ತಿ ಮಾತ್ರವಲ್ಲ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಯೂ ಲಭಿಸಿದೆ.



ಮೀರಾ ಅವರು ಕನ್ನಡ ಲೇಖಕ ಪ್ರೊ. ಕೆ.ಎಸ್. ಭಗವಾನ್ ಅವರಿಗೆ ಬಂದ ಪ್ರಾಣ ಬೆದರಿಕೆಗಳನ್ನು ಆಧರಿಸಿ ಬರೆದಿರುವ ಕತೆಯ ಎರಡನೆ ಭಾಗ ಇಲ್ಲಿದೆ. ಇದನ್ನು ಮಲೆಯಾಳಂನಿಂದ ಇಂಗ್ಲಿಷಿಗೆ ಪಿ. ದೇವಿಕಾ ಅವರು ಅನುವಾದಿಸಿದ್ದರೆ, ಅದನ್ನು ಸ್ವತಃ ಭಗವಾನ್ ಅವರೇ ಕನ್ನಡಕ್ಕೆ ಅನುವಾದಿಸಿದ್ದಾರೆ.

ಭಗವಾನರ ಮರಣ



ರಾತ್ರಿ ಊಟವಾದ ಮೇಲೆ ಪ್ರಾಧ್ಯಾಪಕರು ಔಷಧಿ ಕೊಟ್ಟು, ನಿನ್ನ ಹೆಸರೇನು? ಹೇಳು ಎಂದು ಕೇಳಿದರು. ಅಮರ ಸಂಕೋಚಪಟ್ಟನು. ಇಲ್ಲ, ನನ್ನ ಹೃದಯದಲ್ಲಿ ನಿನ್ನ ಹೆಸರು ಭಗವಾನ್ ಅಂತ – ಪ್ರೊಫೆಸರ್ ಹೇಳಿದರು. ಓ ಭಗವಾನ್, ಎಷ್ಟು ಜನರನ್ನ ನೀನು ಭವಬಂಧನದಿಂದ ಮುಕ್ತಗೊಳಿಸಿದ್ದಿ? ಹೇಳು. ಈ ಪ್ರಶ್ನೆಗೆ ಅಮರ ದಿಗ್ಭ್ರಮೆಗೊಂಡ. ತನ್ನ ಎಡಗೈನ ಮೂರು ಬೆರಳುಗಳನ್ನು ಎತ್ತಿ ಹಿಡಿಯುತ್ತಾ ಸುಧಾರಿಸಿಕೊಂಡನು. ಆದರೆ ನಾನು ಒಂದು ಪೋಲೀಸ್ ಕೇಸಲ್ಲೂ ಸಿಕ್ಕಿಕೊಂಡಿಲ್ಲ ಎಂದು ತ್ವರಿತವಾಗಿ ಹೇಳಿದ. ಪ್ರೊಫೆಸರ್ ದೀರ್ಘವಾಗಿ ಸುಯ್ದರು – ಅದು ನಿನ್ನನ್ನ ಮುಕ್ತಗೊಳಿಸಿದೆಯೇ? ಹೇಗೆ? ಹೇಗೆ ಅದನ್ನು ಮಾಡುತ್ತೀಯೆ? ಮಾತುಗಳು ಒಳಗೆ ಹೆಣಗುತ್ತಿದ್ದಂತೆ ಅಮರನ ಕೈಯನ್ನು ಪ್ರಾಧ್ಯಾಪಕರ ನಡುಗುತ್ತಿದ್ದ ಬೆರಳುಗಳು ಹಿಡಿದವು. ಆಗ ಕಿಂಚಿತ್ ಮೆಲುನುಡಿಯಲ್ಲಿ ಅವರು ಹಾಡಿದರು: ಅಯ್ಯಾ, ನನ್ನ ಇರವನ್ನೆ ಅಲುಗಾಡಿಸುವ ಚಾಲಕ ಶಕ್ತಿಯಾಗಿ ನೀವು ಬಂದಿರಿ. ನೋಡಿ, ನಾನು ಹೇಗೆ ನಿಮ್ಮ ವಾಹನವಾದೆ, ನೋಡಿ, ಓ ಕೂಡಲಸಂಗಮದೇವಾ! ನೀನು ತುಪಾಕಿ ನಳಿಗೆಯನ್ನು ಹಿಂದಿನ ಸಾರಿಯಂತೆಯೇ ಹಣೆಯ ಮೇಲೆ ಒತ್ತಿದೆಯಾ? ಎಂದು ಅವರು ಕೇಳಿದರು, ತಮ್ಮ ಹಣೆಯನ್ನು ಅವರು ತೋರುಬೆರಳಿನಿಂದ ಮುಟ್ಟಿಕೊಂಡರು. ಇನ್ನೊಂದು ಕ್ಷಣ ಹೆಚ್ಚು ಒತ್ತಿದ್ದರೆ ಇಲ್ಲಿ ಕೆಂಪುಚುಕ್ಕಿ ಮೂಡುತ್ತಿತ್ತು – ಎಂದು ಮುಗುಳ್ನಕ್ಕರು. ಕೆಂಪು ಚುಕ್ಕಿ? ಅಮರ ಬೆಚ್ಚಿಬಿದ್ದ. ಓ ಇದೇ ನಿನ್ನ ಸಮಸ್ಯೆ ಎಂದು ಪ್ರೊಫೆಸರ್ ತುಟಿ ಮುಂದೆ ಮಾಡಿ ಹೇಳಿದರು – ನಿನಗೆ ಗುಂಡು ಹಾರಿಸೋದು ಗೊತ್ತು, ಆದರೆ ಸ್ಪರ್ಶ ಮಿತಿಯಲ್ಲಿ ಗುಂಡು ಹೊಡೆದರೆ ಗಾಯ ನಕ್ಷತ್ರಾಕಾರದಲ್ಲಿರುತ್ತದೆಂಬುದು ನಿನಗೆ ಗೊತ್ತಿಲ್ಲ. ಏಯ್ ಹುಡುಗಾ, ಗುಂಡಿನ ರಭಸಕ್ಕೆ ಮೊದಲು ಚರ್ಮ ತೂತಾಗಿ, ಆಮೇಲೆ ಅದು ತಲೆ ಬುರುಡೆಯನ್ನು ಒಡೆದು ಚೂರು ಮಾಡುತ್ತದೆ. ಏಕೆಂದರೆ ನೀನು ತುಂಬ ಹತ್ತಿರ ನಿಂತಿರೋದ್ರಿಂದ ಗುಂಡು ನನ್ನ ಮಿದುಳಿನ ಮೂಲಕ ಹಾದು ಹೋದ ಕೆಲವು ಕ್ಷಣಗಳಾದ ಮೇಲೆ ಅದರ ಸದ್ದನ್ನ ನಾನು ಕೇಳಬಹುದಿತ್ತು, ಅದೂ ತೀರಾ ಸಣ್ಣ ಸದ್ದು. ಅಮರ ಗಾಬರಿಯಾಗಿ ಅವರನ್ನು ದಿಟ್ಟಿಸಿ ನೋಡಿದ. ಪ್ರೊಫೆಸರ್ ಮತ್ತೆ ಮುಗುಳ್ನಕ್ಕು, ಅಮರನ ಹಣೆಯನ್ನ ನೇವರಿಸಿದರು. ಇನ್ನೊಂದು ವಿಷಯ – ಈಗ ಅವರ ದನಿ ತೊದಲಿತು – ಮಗು, ನಿನ್ನನ್ನ ತಡೆಯಬಹುದಾಗಿದ್ದಂತಹ ಪ್ರೀತಿ ನಿನಗೆ ಗೊತ್ತೇ ಇಲ್ಲವೆ?

ತನ್ನ ವೈಷಮ್ಯ ಮೂರನೆ ದಿನಕ್ಕೆ ಹೇಗೆ ಸಂಪೂರ್ಣ ಕರಗಿಹೋಯಿತು ಎಂದು ಅವನು ಈಗ ನೆನಸಿಕೊಂಡಾಗ ಅವನ ಹೃದಯ ಮೃದುವಾಯಿತು. ಬಹಳ ಕಾಲದಿಂದಲೂ ಇದು ತನ್ನ ಮನೆ ಮತ್ತು ಬೇರುಗಳು ಇಲ್ಲಿವೆ ಎಂದು ಅವನು ಭಾವಿಸತೊಡಗಿದನು. ಈಗ ಬದುಕು ಯೋಗ್ಯ ಲಯಕ್ಕೆ ಬಂದಿತು. ಅವನಲ್ಲಿ ಈಗ ಕಾವ್ಯ ಬೆಳಗಿತು. ಕತೆಗಳು ಅವನಲ್ಲಿ ಕಣ್ಣೀರು ಒರೆಸಿದವು. ಕಾವೇರಿಯನ್ನು ಬಿಟ್ಟು ಅನುಷಾ ಮತ್ತು ಫರೀದಾ ಸೇರಿದಂತೆ ಎಲ್ಲ ಹುಡುಗಿಯರನ್ನೂ ಎದೆ ಮತ್ತು ಪಿರ್ರೆಗಳಿಗೆ ಇಳಿಸುವ ಚಾಳಿ ಅವನನ್ನು ಬಿಡತೊಡಗಿತು. ಅವನು ಈಗ ಷಹೀದಾಳ ಕಲೆಗೆ ನಗಬಲ್ಲ, ಸ್ವಾತಿಯ ತೀಕ್ಷ್ಣ ಮನಸ್ಸು ಅವನಲ್ಲಿ ವಿಸ್ಮಯ ತುಂಬಿತು. ದಲಿತ ಮಹಿಳೆ ಕಣ್ಣಮ್ಮನ ಸೂಚನೆಗಳನ್ನು ಶ್ರದ್ಧಾಪೂರ್ವಕವಾಗಿ ಅನುಸರಿಸುವುದನ್ನು ಅವನು ಕಲಿತನು. ನಾಲ್ಕನೆಯ ದಿನ, ಎಷ್ಟು ಪುಸ್ತಕಗಳನ್ನ ಓದಿದೆ? ಎಂದು ಪ್ರೊಫೆಸರ್ ಅವನನ್ನು ಕೇಳಿದರು. ಅಮರ ಗಾಳಿಯಲ್ಲಿ ಕರಗಿಹೋದ. ಪ್ರೊಫೆಸರ್ ನೋವಿನಲ್ಲಿ ಇದ್ದಾರೆಂಬಂತೆ ಅವರ ಮುಖ ಕೆಂಪಾಯಿತು. ಅವರ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವನ್ನು ಕೊಂದು ಊನಮಾಡಿದ್ದಕ್ಕಾಗಿ ನಿನಗೆ ಶಿಕ್ಷೆ ಕೊಡುತ್ತೇನೆ, ಮುಂದಿನ ಕೊಲೆಗಾಗಿ ಹೊರಡುವ ಮುನ್ನ ನೀನು ಅದನ್ನ ನಿಜಕ್ಕೂ ಓದಬೇಕು. ಈ ದಪ್ಪ ಪುಸ್ತಕ? ಅಮರನ ಕಣ್ಣುಗಳು ಬಹುಮಟ್ಟಿಗೆ ಸಿಡಿದೇಹೋದವು. ಆದರೆ ಪ್ರೊಫೆಸರ್ ಅದನ್ನು ಓದುತ್ತಾ ವಿವರಿಸುತ್ತಾ ಹೋದರು. ಅಮರ ಕಾಲಿನ ಮೇಲೆ ನಿಂತುಕೊಂಡು ಮೆಲ್ಲಗೆ ನಡೆಯುವಷ್ಟು ಗುಣವಾದ ಮೇಲೆ ಅವರು ಅವನನ್ನು ಗೋಡೆ ಮೇಲಿದ್ದ ಕಪ್ಪುಬಿಳುಪು ಫೋಟೊ ಹತ್ತಿರ ಕರೆದುಕೊಂಡು ಹೋದರು. ಇದು ಗಾಂಧೀಜಿಯ ಕೊನೆ ಫೋಟೊ, ಗಾಯ ಅವರ ಎದೆ ಮೇಲೆ ಆಗಿತ್ತು ಎಂದರು. ಅವರು ನಡೆಯುವ ಭಂಗಿ ನೋಡು. ಹೇಗೆ ಗುಂಡು ಹೊಡೆದರೂ ಎದೆಯನ್ನ ತಾಕುತ್ತೆ. ಆ ರಾತ್ರಿ ಪ್ರೊಫೆಸರ್ ದಿಂಬಿನ ಅಡಿಯಿಂದ ತುಪಾಕಿ ಎಳೆದುಕೊಂಡರು. ಬಾ, ಇದನ್ನ ತೆಗೆದುಕೊ ಎಂದರು. ಅಮರನಿಗೆ ನಾಚಿಕೆಯಲ್ಲಿ ಮುಳುಗಿಹೋಗುತ್ತಿದ್ದೇನೆ ಎನ್ನಿಸಿತು. ಪ್ರೊಫೆಸರ್ ಅದನ್ನು ಅಲ್ಲಿಯೇ ಇಟ್ಟು, ನಿನಗೆ ಬೇಕಾದಾಗ ಯಾವ ಗಳಿಗೆಯಲ್ಲಾದರೂ ತೆಗೆದುಕೊಳ್ಳಬಹುದು ಎಂದರು. ಆದರೆ ನಾನು ಎಚ್ಚರವಿದ್ದಾಗ ಬೇಡ; ಅದನ್ನ ನೋಡಿದರೆ ನಾನು ಮತ್ತೆ ಬಸವಣ್ಣನ ವಚನ ಹೇಳಬಹುದು: ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲಲು ಬಾರದು, ಓ ಕೂಡಲಸಂಗಮದೇವಾ!

ಮೊದಲ ದಿನವೇ ಕಾವೇರಿಯ ಬಗ್ಗೆ ಪ್ರಾಧ್ಯಾಪಕರಿಗೆ ಹೇಳುವ ವಿವೇಕ ತನಗೆ ಇರಲಿಲ್ಲವಲ್ಲ ಎಂದು ಈಗ ಅಮರ ವಿಷಾದ ಪಟ್ಟ. ಮಗು, ನೀನು ಪ್ರೀತಿಸುತ್ತಿದ್ದೀಯಾ? ಮನೆಗೆ ಹೋಗಲು ಅನುಮತಿ ಕೇಳಿದಾಗ ಪ್ರೊಫೆಸರ್ ಪ್ರಶ್ನಿಸಿದ್ದರು. ದೀಪಗಳನ್ನು ಆರಿಸಿ ಅವರು ಮಲಗಿದರು. ಕತ್ತಲೆಯಲ್ಲಿ ತನ್ನ ನಾಚಿಕೆಯನ್ನ ಬಚ್ಚಿಟ್ಟು, ಸಂಕೋಚದಿಂದ, ತಡವರಿಸುತ್ತಾ ಕಾವೇರಿಯ ಬಗ್ಗೆ ಪ್ರಾಧ್ಯಾಪಕರಿಗೆ ತಿಳಿಸಿದನು. ದೇವಸ್ಥಾನ ಪ್ರವೇಶಿಸಿದ ದಲಿತರನ್ನು ಬಡಿಯಲು ಅಮರ ಹೋಗಿದ್ದಾಗ ಅವಳು ಅವನಿಗೆ ದೃಢ ದೀರ್ಘ ಚುಂಬನ ಕೊಟ್ಟದ್ದನ್ನು ಪ್ರಾಧ್ಯಾಪಕರು ಕೇಳಿ ಭಯಚಕಿತರಾದರು. ಮೈಲಿಗೆಯಾಗು ಎಂದು ಅವಳು ಶಪಿಸಿ, ತನ್ನ ನಾಲಿಗೆಯನ್ನು ಅವನ ಬಾಯೊಳಗೆ ತುರುಕಿದ್ದಳು. ಅವಳನ್ನು ಕೊಲ್ಲಲು ಅವನು ತೀರ್ಮಾನಿಸಿದ್ದನು. ಒಂದಿಡೀ ತಿಂಗಳು ಅವಳಿಗಾಗಿ ಬೀದಿಬೀದಿಗಳಲ್ಲಿ ಹುಡುಕಿ ಪತ್ತೆಮಾಡಿದ್ದನು. ತನ್ನ ಸಣ್ಣ ಗುಡಿಸಿಲಿನ ಜಗಲಿಯ ಮೇಲೆ ಮಕ್ಕಳ ಗುಂಪಿಗೆ ಅವಳು ಪಾಠ ಹೇಳಿಕೊಡುತ್ತಿದ್ದಳು. ಮೈಲಿಗೆ ಆಗುವುದೆಂಬ ಎಚ್ಚರಿಕೆಯಿಂದ ಅವನು ಹೊರಗೇ ನಿಂತುಕೊಂಡ. ಭಾರತ ಸಂವಿಧಾನದ ಶಿಲ್ಪಿ ಯಾರು? ಎಂದು ಜಗಲಿಯಿಂದಲೇ ಅವಳು ಗಟ್ಟಿಯಾಗಿ ಕೇಳಿದಳು. ಅವನಿಗೆ ಗೊತ್ತಿರಲಿಲ್ಲ, ಅವಳು, ಅವಳ ವಿದ್ಯಾರ್ಥಿಗಳು ಗಟ್ಟಿಯಾಗಿ ನಕ್ಕರು. ಇವನು ಸಿಟ್ಟಿನಿಂದ ನೆಗೆದು ಅವಳನ್ನ ಹಿಡಿದುಕೊಂಡನು. ಆಗಲಿ, ನೀನು ಗಂಡಸು ಅಂತೀನಿ. ಮೊದಲು ಹೇಳು, ಭಾರತೀಯ ಪ್ರಜೆಯ ಎಂಟು ಮೂಲಭೂತ ಹಕ್ಕುಗಳು ಯಾವುವು? ಹೆಂಗಸಿನ ಮೇಲೆ ಯಾವ ನಾಯಿಯಾದರೂ ಹತ್ತುತ್ತೆ. ನೀನು ಚೂಟಿಯಾಗಿದ್ದರೆ, ಜ್ಞಾನದಿಂದ ನನ್ನನ್ನ ಕೆಡಗು! ನಿನ್ನ ಜೊತೆ ಖುಷಿಯಾಗಿ ಮಲಗ್ತೀನಿ. ಇವನು ಅವಳನ್ನ ಗುದ್ದಿದ. ಅವಳು ನಕ್ಕಳು. ಅವಳು ಗಾಬರಿಗೊಳ್ಳಲಿ ಎಂದು ಕೆಲವು ದಿನಗಳ ಕಾಲ ಅವಳನ್ನು ಬಾಲದಂತೆ ಹಿಂಬಾಲಿಸಿದ. ಅವಳು ನಗುತ್ತಿದ್ದಳು. ಈ ಮಧ್ಯೆ ಯಾವಾಗಲೋ ಅವನು ಅವಳನ್ನು ಪ್ರೀತಿಸತೊಡಗಿದ. ಅವಳನ್ನ ಕಳೆದುಕೊಳ್ಳುತ್ತೇನೆಂಬ ಭಯ ಉಂಟಾಯಿತು. ಇದು ಪ್ರೀತಿಯಲ್ಲ ಎಂದು ಆಕೆ ದೂರಿದಳು. ಆಮೇಲೆ ಅವಳು ನಿಧಾನವಾಗಿ ಕರಗಿ ವಶವಾದಳು. ಅದು ಗಟ್ಟಿಯಾಗಿ ಬೆಳೆಯಿತು. ಒಂದು ದಿನ ಅಮರನ ಭಾವ ಅವಳ ಅಪ್ಪನನ್ನು ಹೊಡೆದ. ಅಮರನ ಅಕ್ಕ ಅವನಿಗೆ ಅಪ್ಪಳಿಸಿದಳು. ಮಲ್ಲಪ್ಪನಿಗೆ ಭಾವ ದೂರಿತ್ತ. ಆ ರಂಡೆ ಮಗಳನ್ನ ಬಳಸಿ ಬಿಸಾಕು ಎಂದು ಮಲ್ಲಪ್ಪ ಅವನಿಗೆ ಸಲಹೆ ಕೊಟ್ಟ. ಅಮರ ಇವನ ಸಂಬಂಧ ಕಡಿದುಕೊಳ್ಳುವಂತೆ ಕಂಡ. ತಮ್ಮ ಮೈತ್ರಿಯ ಬಗ್ಗೆ ಮಲ್ಲಪ್ಪ ಮೃದುವಾದ. ಆದರೆ ಪ್ರಾಧ್ಯಾಪಕರು ಆ ಸಮಯದಲ್ಲೆ ಭಗವದ್ಗೀತೆಯನ್ನ ಬೆಂಕಿಗೆ ಹಾಕಬೇಕು ಎಂದು ಎಲ್ಲೋ ಸೂಚಿಸಿದ್ದರು. ಅಮರನ ಕತೆಯನ್ನು ಕೇಳುತ್ತಾ ಪ್ರೊಫೆಸರ್ ನಿಡುಸುಯ್ದರು. ಅಮರನ ಹೃದಯ ಬಡಿದುಕೊಳ್ಳುತ್ತಿತ್ತು. ಆ ದಿನ ಆಕೆ ರೈಲು ನಿಲ್ದಾಣದಲ್ಲಿ ಕಾದು ಮನೆಗೆ ಹಿಂದಿರುಗಿರಬೇಕು ಎಂದು ಅಮರ ಹೇಳಿದ. ನಮ್ಮ ಕುಟುಂಬ ಅವಳಿಗೆ ಹಾನಿ ಮಾಡದಿದ್ದರೆ ಸಾಕು. ಯಾವ ರೈಲು ನಿಲ್ದಾಣ? ಪ್ರೊಫೆಸರ್ ಮಾತಿನ ಮಧ್ಯೆ ಬಾಯಿ ಹಾಕಿದರು. ಹಳೆಯ ವಾರ್ತಾ ಪತ್ರಿಕೆಯನ್ನು ಹುಡುಕಲೆಂದು ಅವರು ಕತ್ತಲೆಯನ್ನೂ ಲೆಕ್ಕಿಸದೆ ಇನ್ನೊಂದು ಕೋಣೆಗೆ ಮುಗ್ಗರಿಸುತ್ತಾ ಹೋದರು. ದೀಪದ ಸ್ವಿಚ್ ಒತ್ತಿ ಮೊದಲ ಪುಟದಲ್ಲಿದ್ದ ಫೋಟೊವನ್ನು ಅವನಿಗೆ ತೋರಿಸಿದರು – ಇದು ಆಕೆ ಅಲ್ಲ? ಅಲ್ಲವಾ?

ಇದ್ದಕ್ಕಿದ್ದಂತೆ ಚಿಮ್ಮಿದ ಬೆಳಕಿನಿಂದ ಅಮರನ ಕಣ್ಣು ಕೋರೈಸಲ್ಪಟ್ಟು ಕತ್ತಲಿಡಿದು ವಾರ್ತಾ ಪತ್ರಿಕೆಯ ಮೇಲೆ ಬದ್ದಿತು – ತಡವರಿಸುತ್ತಾ ದಿಟ್ಟಿಸಿತು – ಆ ಘಳಿಗೆಯ ನೆನಪು ಈಗಲೂ ಅಮರನನ್ನು ನಡುಗುವಂತೆ ಮಾಡಿತು. ಚಿತ್ರದಲ್ಲಿ ಹುಡುಗಿ ಮಕಾಡೆ ಮಲಗಿದ್ದಾಳೆ. ಕಾಲುಗಳು ಬಿಚ್ಚಿಕೊಂಡಿವೆ. ಅವಳ ಸೊಂಟದಿಂದ ಕಾಲಿನವರೆಗೆ ರಕ್ತದ ಲೇಪ ಹರಿದು, ಸೊಗಸಾದ ರೇಷ್ಮೆಯ ಹಾಳೆಯಂತೆ ನೆಲವನ್ನು ಮುಚ್ಚಿತ್ತು, ಅವಳ ಶ್ಯಾಮಲ ವರ್ಣದ ಮೊಲೆಗಳ ಕೆಳಗೆ ಮತ್ತು ಸುತ್ತೆಲ್ಲ ರಕ್ತ ಮಡುಗಟ್ಟಿತ್ತು, ಅವಳ ತಲೆ ಚೂರಾಗಿ, ಮಿದುಳು ಚೆಲ್ಲಾಪಿಲ್ಲಿಯಾಗಿತ್ತು, ಇಲ್ಲ, ಇಲ್ಲ ನೋಡಲಾರೆ ಎಂದು ಈಗ ಕಣ್ಗತ್ತಲು ಹಿಡಿದ ಅಮರ

ಗೋಳಾಡಿದ. ಮೇಲೇಳಲು ಪ್ರಯತ್ನಿಸುತ್ತಾ ನೋ
ಚೀರಿದ. ಪ್ರಾಧ್ಯಾಪಕರು ಅವನ ಎದೆಯನ್ನ ಉ
ಇನ್ನೊಂದು ಕೋಣೆಯಲ್ಲಿ ನಿದ್ದೆ ಮಾಡುತ್ತಿದ್ದ ಸ್ವಾತಿ
ಶಾಹೀದ್ ರಭಸದಿಂದ ಬಂದರು. ಪ್ರೊಫೆಸರ್ ಅವರ
ಮಾತಾಡಿದರು. ಅವರು ಕಿರಣ್ ಕಾ
ಹೊರಗೆಹೋದರು. ಚಿತ್ರದಲ್ಲಿದ್ದ ಹುಡುಗಿ ನಿಜವಾಗಿ
ಕಾವೇರಿಯೇ ಆಗಿದ್ದಳು. ಅವಳ ಮನೆ
ಸುಟ್ಟುಹಾಕಿದ್ದರು. ಅವಳ ಅಪ್ಪ ಸೋದರಳಿಯ
ಸೋದರ ಸೊಸೆಯರು ಸತ್ತು ಕರಕಲಾಗಿದ್ದರು.
ವಿರುದ್ಧವೂ ಕೇಸು ದಾಖಲಾಗಿರಲಿಲ್ಲ. ಪ್ರೊ
ಪತ್ರಿಕಾಗೋಷ್ಠಿ ನಡೆಸಿದರು. ಅತ್ಯಾಚಾರಿ ಸೇವಾ
ಎಂದು ಗರ್ಜಿಸಿದರು. ಅದೇ ರಾತ್ರಿ ಅವರ ಮನೆಗ
ಬಿದ್ದವು. ಅನುಷಾಳ ಹಣೆಯಲ್ಲಿ ರಕ್ತ ಬಂತು. ಸ್
ಸ್ಕೂಟರಿಗೆ ಬೆಂಕಿ ಹಚ್ಚಿದರು. ಶಾಹೀದನಿಗೆ
ಬೆದರಿಕೆಗಳು ಬಂದವು. ಅಮರ ಜರ್ಜರಿತನಾಗಿ
ಅವನಿಗೆ ಶಮನವನ್ನು ಉಂಟುಮಾಡುವ ಸಲು
ಪ್ರೊಫೆಸರ್ ವೈದ್ಯನನ್ನು ಕರೆಸಿದರು. ತಮ್ಮ ತೊ
ಮೇಲಿದ್ದ ಅಮರನ ತಲೆಯನ್ನು ಸವರುತ್ತಾ ಅವರು
ರಾತ್ರಿ ಎದ್ದು ಕುಳಿತಿದ್ದರು. ಇಡೀ ಮನೆ
ಎಚ್ಚರವಾಗಿದ್ದುಕೊಂಡು ಕಾವಲು ಕಾಯುತ್ತಿತ್ತು.
ತನ್ನ ಸೊರಗಿದ ಕಣ್ಣುಗಳನ್ನು ತೆರೆದು ಸುತ್ತಲಿದ್ದ ಮ
ಜೀವಿಗಳನ್ನೆಲ್ಲ ನೋಡಿದನು. ಅವರಲ್ಲಿ ಹತ್ತು ಜನ ಕ
ಸುಂದರಣ್ಣ, ಕಣ್ಣಮ್ಮ ಮತ್ತು ವೈದ್ಯರು ಸೇರಿದಂತೆ. ಅ
ಹಿಂದೂಗಳು ಎಷ್ಟು ಮಂದಿ ಎಂದು ಅ
ಗುರುತಿಸಲಾಗಲಿಲ್ಲ. ಎಷ್ಟು ಜನ ಗಂಡಸರು ಅ
ಹೆಂಗಸರು ಇದ್ದರು, ಮುಸ್ಲಿಮರೆಷ್ಟು ಎಂದು ತಿಳಿಯ
ಗೋಜಿಗೆ ಅವನು ಹೋಗಲಿಲ್ಲ. ಆದರೆ ಅಲ್ಲಿದ್ದ
ಅವನಿಗಾಗಿ ಅಳುತ್ತಿರುವುದು ಕಾಣಿಸುತ್ತಿತ್ತು. ಅವನಿಗೆ
ಯಾರೆಂದು, ಹಿಂದೂವೆ? ಮುಸ್ಲಿಮನೆ? ಎಂಬ
ನೆನಪಾಗಲಿಲ್ಲ. ಎಲ್ಲವೂ ತಲೆಕೆಳಕಾಗಿತ್ತು. ನಾನು ಭಗ
ಅಲ್ಲ ಎಂದು ಗೊಣಗಿದ. ನನಗಾಗಿ ನೀವೇಕೆ ಶೋಕಿಸು
ಅವರನ್ನ ನಾನು ಕೊಲ್ಲಬೇಕು. ತಮ್ಮ ಡವಡವಗುಟ
ಹೃದಯಕ್ಕೆ ಅಮರನನ್ನ ಒತ್ತಿ ಹಿಡಿದುಕೊಂಡರು ಪ್ರೊ
ಏಯ್, ಮೂರ್ಖ, ವಧಿಸಲು ಗುರುತು ಮಾಡಿ
ಈ ದನಗಳ ರಹಸ್ಯ ಲೋಕದಲ್ಲಿ ನಿಜವಾದ ಶಿಕ್ಷೆ ಎ
ಬದುಕಲಿಕ್ಕೆ ಬಿಡುವುದು. ನೀನು ಬಸವಣ್ಣನ
ಕೇಳಿಲ್ಲವೆ? ಅಳುವಿಗೆ ಜಾರುತ್ತಿದ್ದ ದನಿಯಲ್ಲಿ ಅ
ಹಾಡಿದರು: ನಾಳೆ ಬಪ್ಪುದು ನಮಗಿಂದೇ ಬರಲಿ, ಇ
ಬಪ್ಪುದು ನಮಗೀಗಲೇ ಬರಲಿ, ಇದಕಾರಂಜುವ
ಇದಕಾರಳುಕುವರು? ಜಾತಸ್ಯ ಮರಣಂ ಧ್ರುವಂ...
ಕೂಡಲಸಂಗಮದೇವಾ!

ಆ ದಿನಗಳ ನೆನಪಿನಲ್ಲಿ ಸುತ್ತಾಡುತ್ತಿದ್ದ ಅಮರ, ತನ್ನ
ಗೂಳಿ ಕೊಂಬಿನಿಂದ ನೇರವಾಗಿ ಇರಿದಂತಾಗಿ ಬೆಚ್ಚಿ
ಅವನ ಹೃದಯ ಚೂರುಚೂರಾಗಿತ್ತು. ಶೂನ್ಯವನ್ನು ಎ
ತುಂಬಲು ಸಾಧ್ಯವಿಲ್ಲ ಎಂದು ಅವನು ಅಳುಕಿ
ಅವನನ್ನು ಸಮಾಧಾನಪಡಿಸಲು ಪ್ರೊಫೆಸರ್ ಪ್ರಯತ್ನಿಸಿ
ಅವನನ್ನು ಪ್ರವಾಸಗಳಿಗೆ ಕರೆದುಕೊಂಡು ಹೋದ
ಕಂಪ್ಯೂಟರ್ ಬಳಸುವುದನ್ನು ಹೇಳಿಕೊಟ್ಟರು. ಮಾತಿ
ಮತ್ತು ಕೇವಲ ಛಾತಿಯಿಂದ ಅಮರ ಹೊಸಜೀ
ಪಡೆದುಕೊಂಡನು. ಒಂದು ದಿನ ಅವನು ತನ್ನ ಅಕ್ಕ
ನೋಡಲು ಹೋದನು. ಅವನು ಹುಟ್ಟಿ ಬೆಳೆದ
ಪರಕೀಯವಾಗಿ ಕಂಡಿತು. ಇದನ್ನೆಲ್ಲ ಸುಟ್ಟುಹಾಕ
ಎಂಬ ಸಿಟ್ಟು ಅವನಲ್ಲಿ ಪ್ರಬಲವಾಯಿತು. ಅವಳ ಮನೆ
ಅವರು ಸುಟ್ಟುಹಾಕಿದಂತೆ ನಾನು ಇದನ್ನ ಸುಟ್ಟುಹಾಕ
ಅವರು ಅವಳನ್ನ ಕೊಂದುಹಾಕಿದಂತೆ ಇವರ
ಕೊಂದುಹಾಕಬೇಕು. ಶಿವಪ್ಪ ಮತ್ತು ಆರ್ಯ ಅವ
ಹುಡುಕಿಕೊಂಡು ಬಂದರು. ಅವನ ಮುರಿದ ಕಾ
ಮತ್ತು ತೋಳನ್ನು ನೋಡಿ ಮರುಗಿದರು. ತಮಾಷೆ ಮ
ಅವನನ್ನು ಖುಷಿಪಡಿಸಲು ಪ್ರಯತ್ನಿಸಿದರು. ಅ
ಅವರೊಡನೆ ಕುಳಿತಿದ್ದಾಗ ಒಳಗೆ ಏನೋ ಎದ್ದು ಅ
ಕುತ್ತಿಗೆ ಹಿಸುಕಿದಂತಾಯಿತು. ಅವನು ಮಾತಾಡ
ನಗಲೂ ಇಲ್ಲ. ಛೀ, ದೆವ್ವ ಹಿಡಿದುಕೊಂಡಿದೆ ಎ
ಅವನಕ್ಕ ವ್ಯಥೆಪಟ್ಟಳು. ಕತ್ತರಿಸಲಿಕ್ಕಾಗಿ ಗುರುತು ಮಾಡಿ
ದನಗಳ ರಹಸ್ಯ ಲೋಕ ಅವನಿಗೆ ವಾಕರಿಕೆ ಬರಿ

ಕತೆ

...ವನರಿಗೆ ಅವು ಬದುಕುವುದೇ ಒಳ್ಳೆಯದು ಅಂತ ...ಗೆ ಅನ್ನಿಸಿತು. ಆಗತಾನೆ ಹುಟ್ಟಿದ ಕರು ತಾಯಿಯ ...ನ್ನು ಹುಡುಕುವಂತೆ, ಪ್ರೊಫೆಸರ್ ಮನೆಯ ದಾರಿಯನ್ನು ...ರ ಹಿಡಿದ. ಅವರ ವಿದ್ಯಾರ್ಥಿ ಡಾ. ಸಾಹಿರ್, ...ಮನಲ್ಲಿ ವಾಲ್ಮೀಕಿ ರಾಮಾಯಣವನ್ನು ಸಂಶೋಧನೆ ...ತ್ತಿದ್ದ. ಅಮರನನ್ನು ಕಿರಣನ ಸಂಗಡ ಸಾಹಿರ್‌ನಲ್ಲಿಗೆ ...ಫಸರ್ ಕಳುಹಿಸಿಕೊಟ್ಟರು. ಅಲ್ಲಿ ಅವನು ವಾಲ್ಮೀಕಿ ...ಮಾಯಣವನ್ನು ಓದಿಮುಗಿಸಿದ. ವಾಲ್ಮೀಕಿ ರಾಮನಿಗೂ ...ಷ್ಣನ ರಾಮನಿಗೂ ಇರುವ ಅಗಾಧ ಅಂತರ ಬಹಳ ...ತ್ತು ಅವನನ್ನು ನಗಿಸಿತು. ತಿಂಗಳುಗಳು ಎತ್ತಿನ ಗಾಡಿ ...ಯಂತೆ ಬಿರುಸಾಗಿ ಆವೇಶದಿಂದ ಸಾಗಿದವು. ಅವನು ...ನನ್ನು, ಭಗವದ್ಗೀತೆಯನ್ನು ಓದಿದನು. ಈಗ ಅವನು ...ಧ್ಯಾಪಕರಂತೆ ಬೆಳಗ್ಗೆ ಬೇಗನೆ ಎದ್ದು ನಿಷ್ಠೆಯಿಂದ ...ತ್ತಿದ್ದನು. ಬಸವಣ್ಣನ ವಚನಗಳು ಈಗ ಅವನ ಸ್ಮರಣೆಗೆ ...ಭವಾಗಿ ಇಳಿದವು. ಪ್ರತಿ ಶುಕ್ರವಾರವೂ ಅವನು ...ಧ್ಯಾಪಕರ ಬಳಿಗೆ ಹೋಗುತ್ತಿದ್ದ. ಅವರು ಪೊಲೀಸ್ ...ಯನ್ನು ನಿರಾಕರಿಸಿದ್ದರು. ಹಾಗಾಗಿ ವಾರದ ಕೊನೆಯಲ್ಲಿ ...ರ ಜೊತೆಯಲ್ಲಿಯೇ ಉಳಿಯುತ್ತಿದ್ದನು. ಬಸವಣ್ಣನ ...ನಗಳ ಬಗ್ಗೆ ಅವನ ವ್ಯಾಖ್ಯಾನವನ್ನು ಅವರು ಓದಿ, ... ವಯಸ್ಸನ್ನೂ ಮರೆತು ಅವರು ಸಂತೋಷದಿಂದ ...ದಾಡಿದರು. ಏಕಕಾಲದಲ್ಲಿ ಅಳುತ್ತಲೂ ನಗುತ್ತಲೂ ...ನನ್ನು ಅಪ್ಪಿ ಮುದ್ದಾಡಿದರು. ಆಮೇಲೆ ಒಂದು ದಿನ ... ಮನೆಗೆ ಅಮರನನ್ನು ಕರೆಸಿಕೊಂಡು, ವಚನೋಪಾಸನ ...ತ ಸಂಶೋಧನೆಯನ್ನು ಪ್ರೋತ್ಸಾಹಿಸುವ ಟ್ರಸ್ಟಿಗೆ ತಮ್ಮ ...ೀನು ಮತ್ತು ಮನೆಯನ್ನು ದಾನ ಕೊಡುವುದಾಗಿ ...ಟಿಸಿದರು. ನೀನೂ ಒಬ್ಬ ಟ್ರಸ್ಟಿ ಆಗಿರು ಎಂದರು.

...ಇಷ್ಟೊಂದು ಅವಸರ? ತಬ್ಬಿಬ್ಬಾದ ಅಮರ ಕೇಳಿದನು. ...ಧ್ಯಾಪಕರ ಕಣ್ಣಿನಲ್ಲಿ ತುಂಟನಗೆ ನಲಿದಾಡುತ್ತಿದ್ದಂತೆ ಈ ...ನವನ್ನು ಹಾಡಿದರು: ಮಗು, ಬೆಕ್ಕು ಸುಳಿದಾಡುತ್ತಿದೆ ...ದು ತಿಳಿಯದ ಗಿಳಿಗೆ ಓದಲು ಕಲಿಸುವುದರಿಂದೇನು ...? ಅವರು ಈ ವಚನವನ್ನ ಹೇಳಿದಾಗ ಇಂದು ...ಡ ಅಮರ ರೋಮಾಂಚನ ಅನುಭವಿಸಿದನು. ಜಗವನ್ನೆಲ್ಲ ...ೋಡುವ ಕಣ್ಣುಗಳು, ತನ್ನದೇ ಓರೆಗಣ್ಣ ನೋಡಲಾರದು; ...ರನ್ನೂ ಬಲ್ಲೆ ಎನ್ನುವವರು ತಮ್ಮನ್ನೆ ತಿಳಿದವರಾಗರು, ... ಕೂಡಲಸಂಗಮದೇವಾ!

...ಅನುಪಾಳ ಮದುವೆಯನ್ನು ಅವಳ ಮನೆಯವರು ...ತ್ತುಮಾಡಿದ ಮೇಲೆ ಅಮರನ ಜಗತ್ತು ಮತ್ತೆ ...ಕೆಳಗಾಯಿತು. ಪ್ರಾಧ್ಯಾಪಕರ ಮುಂದೆ ಅನುಪಾ ಮತ್ತು ...ೀದ್ ಅತ್ತುಕೊಂಡು ಮುಗಿಬಿದ್ದರು. ಇವರು ಅವರ ...ಮದುವೆಯನ್ನು ಮಾಡಿಸಿದರು. ಗಲಭೆಕೋರರು ರಿಜಿಸ್ಟ್ರಾರ್ ...ೀರಿಯನ್ನ ಸುತ್ತುವರೆದರು. ಲಾಠಿ ಪ್ರಯೋಗ ನಡೆಯಿತು. ...ಮರನಿಗೆ ಅಪಾಯದ ವಾಸನೆ ಬಡಿದು ಪ್ರಾಧ್ಯಾಪಕರ ...ನೆಗೆ ಓಡಿಹೋದನು. ಕೆಳಗೆ ಬಿದ್ದು ಪ್ರಾಂಗಣವನ್ನು ...ರಿಸಿಕೊಂಡಿದ್ದ ಮಲ್ಲಿಗೆ ಹೂವುಗಳನ್ನು ರಭಸದಿಂದ ...ಟಿ ಹೋದಾಗ, ಪ್ರಾಧ್ಯಾಪಕರ ರಕ್ತದೊತ್ತಡವನ್ನು ವೈದ್ಯ ...ೀಕ್ಷಿಸುತ್ತಿದ್ದುದನ್ನು ಅವನು ಕಂಡನು. ಅವರು ತಮ್ಮ ...ಲಿದ ತೋಳುಗಳನ್ನು ಅವನತ್ತ ಚಾಚಿ, ಕಣ್ಣು ಮಿಟುಕಿಸಿ ಮುಗುಳ್ನಗೆ ಬೀರಿದರು – ನೋಡಿದೆಯಾ? ನಿರ್ಣಾಯಕ ಸಂದರ್ಭದಲ್ಲಿ ಎಲ್ಲಾ ಮತಗಳೂ ಒಂದೇ ಅಲ್ಲ? ಎಲ್ಲರನ್ನೂ ಪ್ರೀತಿಸು ಎಂದು ಉಪನಿಷತ್ ಮತ್ತು ಕುರಾನ್‌ಗಳು ಆದೇಶಿಸುತ್ತವೆ. ಹೆಣ್ಣು-ಗಂಡು ಪ್ರೀತಿಗೆ ಸಿಲುಕಿದಾಗ? ಮಾತು ಕೃತಿ ಕೂಡದಿದ್ದರೆ ಹೇಗೆ ಕರುಣೆ ತೋರುತ್ತಾನೆ, ನಿಮ್ಮ ಕೂಡಲಸಂಗಮದೇವಾ? ಅಮರನ ಕಣ್ಣುಗಳು ದುಃಖ ಮತ್ತು ಭೀತಿಯಿಂದ ನೀರಾಡಿದವು. ಜೋಕೆ, ವ್ಯಥೆ ಬೇಡ ಎಂದು ಅವರು ಗದರಿದರು. ಜೊತೆಗೆ ಒಂದು ವಚನ ಹೇಳಿದರು: ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ, ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ, ನೋಡಯ್ಯಾ. ಮೊಲನಿಂದ ಕರಕಷ್ಟ ನರನ ಬಾಳುವೆ, ಸಲೆ ನಂಬೊ ನಮ್ಮ ಕೂಡಲಸಂಗಮದೇವನ.

ಅಂದು ರಾತ್ರಿ ಕಣ್ಣಮ್ಮನ ಮಾತು ಮತ್ತು ಅವನ ದೂಷಣೆಯನ್ನ ಕಡೆಗಣಿಸಿ, ತಮ್ಮ ಪುಸ್ತಕ ಕಪಾಟಿನಲ್ಲಿ ಚರ್ಚಿನಲ್ಲಿ ಕಗ್ಗೊಲೆ **(Murder in the Cathedral)** ಎಂಬ ಪುಸ್ತಕ ಹುಡುಕಲು ಪ್ರೊಫೆಸರ್ ಮರದ ಏಣಿ ಹತ್ತಿದರು. ಅವರು ಬೀಳದಂತೆ ಅಮರ ಏಣಿಯನ್ನ ಬಿಗಿಯಾಗಿ ಹಿಡಿದುಕೊಂಡಿದ್ದ. ಆ ಆಲೋಚನೆಯೇ ಅವನನ್ನು ಈಗ ನಡುಗಿಸಿತು. ರಾತ್ರಿಯೆಲ್ಲ ಅವನ ಬೆನ್ನು ಸವರುತ್ತ ಅವನ ಜೊತೆಯೇ ಅವರು ಕುಳಿತಿದ್ದರು. ಪ್ರೊಫೆಸರ್ ತಮಾಷೆ, ಮಾರ್ಗದರ್ಶನ, ಬೋಧನೆ, ಬುದ್ಧಿವಾದ ಹೇಳುತ್ತಿದ್ದಂತೆ ಅವನು ತನ್ನ ಗತಕಾಲವನ್ನ ತಿರುವಿ ಹಾಕುತ್ತಿದ್ದನು. ಆದರೆ ಈ ಮಧ್ಯೆ ಯಾವಾಗಲೊ ಅವನು ನಿದ್ದೆಗೆ ಸರಿದನು. ಅವನನ್ನು ಹಾಸಿಗೆಯಲ್ಲಿ ಮಲಗಿಸಿ ಹೊದಿಸಿ ಸದ್ದಾಗದಂತೆ ಹೊರಗೆಹೋದರು. ಭೀಕರವಾಗಿ ಏನೋ ಒಡೆದ ಸದ್ದು ಅಮರನ ನಿದ್ದೆಯನ್ನ ಕೆಡಿಸಿತು. ಅವನು ಕಣ್ಣುಜ್ಜಿಕೊಳ್ಳುತ್ತಾ ಹೊರಬಂದು ಪುಸ್ತಕಗಳು ತುಂಬಿದ್ದ ಕೊಠಡಿಯಲ್ಲಿ ಗಾಜು ಒಡೆದು ಚೂರಾಗಿರುವುದನ್ನು ನೋಡಿದ. ಗೋಡೆಯ ಮೇಲೆ ಮೆಲ್ಲಗೆ ಅಲುಗಾಡುತ್ತಿದ್ದ ಗಾಂಧೀಜಿಯ ಕೊನೆಯ ಚಿತ್ರಪಟವನ್ನು ಈಗ ಅವನು ಸುಸ್ಪಷ್ಟವಾಗಿ ಕಂಡನು. ಗುಂಪು ನೋಡುತ್ತಿತ್ತು. ಅಂಗಿ ಮತ್ತು ಇಜಾರ ಧರಿಸಿದ್ದ ವ್ಯಕ್ತಿ ನೆಟ್ಟಗೆ ನಿಂತಿದ್ದ. ಕಪ್ಪು ಬಣ್ಣದ ವಸ್ತು ಅವನ ಬಲಗೈಯಲ್ಲಿತ್ತು, ಗಾಂಧಿಯ ತೋಳುಗಳು ಅಪ್ಪಿಕೊಳ್ಳುವಂತೆ ಚಾಚಿದ್ದವು. ಗಾಂಧೀಜಿಯ ಮೇಲುಡುಪಿನಲ್ಲಿ ಹೊಸದಾಗಿ ಆಗಿರುವ ರಂಧ್ರವನ್ನು ಅವನು ಗಮನಿಸುತ್ತಿದ್ದಂತೆ ಮೊಳಗುವ ಸದ್ದೊಂದು ಅವನ ಮಿದುಳನ್ನು ಭೇದಿಸಿತು. ಸಿಡಿಮದ್ದಿನ ವಾಸನೆ ಅವನನ್ನು ಇನ್ನೂ ಹೆಚ್ಚಿನ ಭೀತಿಗೆ ಒಗೆಯಿತು. ಮಾಳಿಗೆ ಮಟ್ಟದ ಪುಸ್ತಕ ಕಪಾಟುಗಳಿದ್ದ ಕೊಠಡಿಗೆ ಹೋಗುವ ಬಾಗಿಲ ಬಳಿ ಸರಳಿನ ಕಟಕಟೆಯ ಪ್ರಾಂಗಣದ ನೆಲದ ಮೇಲೆ ಪ್ರೊಫೆಸರ್ ಬಿದ್ದಿದ್ದರು. ಚರ್ಚಿನಲ್ಲಿ ಕಗ್ಗೊಲೆ ಪುಸ್ತಕ ಅವರ ಬಳಿಯಲ್ಲಿತ್ತು, ಅದರ ಹೊರ ಹಾಳೆಗಳು ಚೆಲ್ಲಾಪಿಲ್ಲಿಯಾಗಿದ್ದವು. ಪ್ರಾಧ್ಯಾಪಕರ ತಲೆಯನ್ನು ಅಮರ ತನ್ನ ಕೈಗಳಲ್ಲಿ ಹಿಡಿದುಕೊಂಡನು. ಅದು ಪೂರಾ ಮರಗಟ್ಟಿತ್ತು, ಅವನಿಗೆ ಅಳಬೇಕೆನ್ನಿಸಿದರೂ ಅಳಲಾಗಲಿಲ್ಲ, ಆ ಸಣ್ಣ ಸೊರಗಿದ ಶರೀರವನ್ನು ತನ್ನೆದೆಗೆ ಅವಚಿಕೊಂಡನು. ಅದು ತುಂಬ ಬೆಚ್ಚಗಿತ್ತು, ಬಯಸಿದ ಸಾವು ಬಂದದ್ದರಿಂದ ಸಂತೋಷವಾಗಿ ಮುಖದ ಕಳೆ ಏರಿತ್ತು, ಏನೋ ಹೇಳುವಂತೆ ತುಟಿಗಳು ತೆರೆದಿದ್ದವು. ಹಾಲು ಬೆಳ್ಳಗಿನ ಹುಬ್ಬುಗಳ ಮಧ್ಯೆ ಕೆಂಪು ನಕ್ಷತ್ರ ಮೂಡಿತ್ತು, ಧೂಮಕೇತುವಿನ ಬಾಲದಂತೆ ಮೂಗಿನ ತುದಿಯವರೆಗೆ ಮಂದನೆಯ ಕೆಂಪು ರಕ್ತದ ಎಳೆ ಜಿನುಗಿತ್ತು.

ತಾನು ಒಮ್ಮೆ ಹರಿದ ಉಡುಪಿನಂತೆ ಮಲಗಿದ್ದ ಅದೇ ಮಂಚದ ಮೇಲೆ ಕುಳಿತು ಈಗ ಮಲ್ಲಪ್ಪ ಕಣ್ಣು ತೆರೆಯಲೆಂದು ಕಾಯುತ್ತಿದ್ದಾಗ ಅಮರನಿಗೆ ಮತ್ತೆ ನಗು ತಡೆಯಲಾಗಲಿಲ್ಲ, ಸಂಹಾರ ದೂತನನ್ನ ಪುನರ್ ರೂಪಿಸಲು ಪ್ರಾಧ್ಯಾಪಕರಿಗೆ ಪದಗಳಿದ್ದವು. ಆದರೆ ಅಮರ ಪ್ರೊಫೆಸರ್ ಅಲ್ಲ, ಆದ್ದರಿಂದ ಇತ್ತೀಚಿನ ಲಾರಿಯಲ್ಲಿ ತುಂಬಿ ಬಂದ ದನಗಳನ್ನು ವಿಂಗಡಿಸುತ್ತಿದ್ದ ಮಲ್ಲಪ್ಪನನ್ನು ಕೆಡಗಲು ಅವನಿಗೆ ತುಪಾಕಿ ಬೇಕಿತ್ತು, ಮಲ್ಲಪ್ಪನ ಮಾಂಸ ರಫ್ತು ಕಾರ್ಖಾನೆಗೆ ಅವರು ಸ್ಯಾನ್ಲಿಯ ಇನೊವ ಕಾರಿನಲ್ಲಿ ಹೋಗಿದ್ದರು. ಅವನನ್ನು ಕಂಡು ಮಲ್ಲಪ್ಪ ಮುಖ ಸಿಂಡರಿಸಿ ಬಲಗೈ ಎತ್ತಿ ತನ್ನ ಮೀಸೆ ಒರೆಸಿಕೊಂಡನು. ನೀನು? ಎಂದು ಅವನು ಪ್ರಶ್ನಿಸುತ್ತಿದ್ದಂತೆ ಅವನ ಮುಂಗೈಗೆ ಕಟ್ಟಿದ್ದ ಕೆಂಪು ಹಳದಿ ಬಣ್ಣದ ದಾರಗಳು ಕೋರೈಸಿದವು. ಇಷ್ಟು ದಿವಸ ಎಲ್ಲಿ ಹಾಳಾಗಿಹೋಗಿದ್ದ್ಯೋ, ನಾಯಿ ಮಗನೆ? ಅಂದನು. ಕತ್ತು ಮತ್ತು ಕೊಂಬುಗಳನ್ನು ಒಟ್ಟಿಗೆ ಕಟ್ಟಿ ಸಾಗಾಣಿಕೆ ಮಾಡಿದ್ದರಿಂದ ಆ ಪಶುಗಳು ಮೌನವಾಗಿ ಸಂಕಟಪಡುತ್ತಿದ್ದವು. ಅವು ತಮ್ಮ ನೋವಿನಲ್ಲೂ ಗಂಜಳ ಹೋಯ್ದು ತೊಪ್ಪೆ ಹಾಕಿದ್ದವು. ಅವುಗಳ ಬೆನ್ನು ಅಸಾಧ್ಯವಾಗಿ ನೋಯುತ್ತಿದ್ದು ಅವು ಮಲಗಲು ಹಂಬಲಿಸಿದವು. ಮಲ್ಲಪ್ಪನ ಮಂಡಿಗಳನ್ನು ಅಮರನ ಗುಂಡುಗಳು ಪುಡಿಪುಡಿ ಮಾಡಿದಾಗ, ಗಾಜನ್ನು ಒಡೆದ ಸದ್ದಿರಲಿಲ್ಲ, ಗುಂಡುಗಳು ಮಾಂಸಖಂಡವನ್ನು ಸೀಳಿಕೊಂಡು ಮಂದವಾದ ಮಣ್ಣಿನಲ್ಲಿ ಹೊಕ್ಕವು. ಅವನು ರೋಷದಿಂದ ಚೀರುತ್ತ ಕಡಿದುರುಳಿದ ಮರದಂತೆ ಬಿದ್ದನು. ಅದೇ ಆಸ್ಪತ್ರೆಯ ಅದೇ ಹಿರಿಯ ವೈದ್ಯ ಗುಂಡುಗಳನ್ನು ತೆಗೆದು ಪ್ಲಾಸ್ಟರ್ ಕವಚ ಹಾಕಿದರು. ಯಾರು, ಏಕೆ, ಏನು? ಎಂದು ಆತ ಕೇಳಲಿಲ್ಲ, ಆದರೂ ಅಮರ ಪ್ರಕಟಿಸಿದ – ನನ್ನ ಹೊಸ ವಿದ್ಯಾರ್ಥಿ. ಪ್ರೊಫೆಸರ್ ತನ್ನನ್ನು ಮಲಗಿಸಿದ್ದ ಅದೇ ಮಂಚದ ಮೇಲೆ ಮಲ್ಲಪ್ಪನನ್ನು ಅವನು ಮಲಗಿಸಿದ. ಏಯ್ ಕಜ್ಜಿನಾಯಿ ಮಗನೆ, ನಿನಗೇನು ಅನ್ಯಾಯ ಮಾಡಿದ್ನೋ? ತನಗೆ ಕೊಟ್ಟಿದ್ದ ಚುಚ್ಚುಮದ್ದುಗಳೊಡನೆ ಹೋರಾಡುತ್ತಾ, ಮಲ್ಲಪ್ಪ ಸಿಡುಕಿದನು. ಅದಕ್ಕೆ ಉತ್ತರವಾಗಿ ಅಮರ ತನಗೆ ಪ್ರಿಯವಾದ ವಚನವನ್ನ ಹೇಳಿದನು: ಹಾವಾಡಿಗನು ಮೂಕೊರತಿಯು ತನ್ನ ಕೈಯಲ್ಲಿ ಹಾವು, ಮಗನ ಮದುವೆಗೆ ಶಕುನ ನೋಡಹೋಹಾಗ, ಇದಿರಲ್ಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು, ಶುಕುನ ಹೊಲ್ಲೆಂಬ ಚದುರನ ನೋಡಾ, ಓ ಕೂಡಲಸಂಗಮದೇವಾ!

ಉಲ್ಲಾಸಕರ ಆಶ್ಚರ್ಯದಿಂದ ಮಲ್ಲಪ್ಪ ಎದ್ದುದನ್ನು ಅಮರ ಗಮನಿಸಿದನು. ತನ್ನ ಕಣ್ಣು ಬಿಟ್ಟು ದಿಗ್ಭ್ರಮೆಯಿಂದ ಅಮರ ಆ ಅಪರಿಚಿತ ಸ್ಥಳದಲ್ಲಿ ಇರುವುದನ್ನು ನೋಡಿ, ಏನಾಯಿತೆಂದು ಜ್ಞಾಪಿಸಿಕೊಳ್ಳುತ್ತ... ಮಲ್ಲಪ್ಪ ತನ್ನ ಕಣ್ಣ ರೆಪ್ಪೆಗಳನ್ನ ಅಗಲಿಸಿದನು - ಅಮರ, ನನಗೇನು ಮಾಡಲಿಕ್ಕೆ ಹೊರಟಿದ್ದಿ? ಎಂದು ಬೊಬ್ಬರಿದನು. ಪುಸ್ತಕಗಳನ್ನು ಪೇರಿಸಿಟ್ಟಿದ್ದ ತಗ್ಗು ಮೇಜನ್ನ ಅವನ ಕಡೆಗೆ ತಳ್ಳಿದನು - ವಾಲ್ಮೀಕಿ ರಾಮಾಯಣ, ಭಗವದ್ಗೀತೆ, ವ್ಯಾಸಭಾರತ, ವಚನೋಪಾಸನೆ...

ಇವನ್ನೆಲ್ಲಾ ನೀನು ಓದಬೇಕು. ಪ್ರಶ್ನೆ ಕೇಳ್ತೀನಿ. ಉತ್ತರಿಸಲೇಬೇಕು. ಮಲ್ಲಪ್ಪನಿಗೆ ಈಗ ತಟಕ್ಕನೆ ಪೂರ್ಣ ಎಚ್ಚರವಾಯಿತು. ನಿನಗೆ ಹುಚ್ಚೆ? ಎಂದು ಗೊಣಗಿದ. ಅಮರ ಅವನ ಗಲ್ಲ ಸವರಿ ಅವನನ್ನು ಮೃದುವಾಗಿ ನೋಡಿದ. ಯಾರು ಹೆಚ್ಚು ಹುಚ್ಚ ಅಂತ ನನಗೆ ಗೊತ್ತಿಲ್ಲ, ಆದರೆ ಇವನ್ನೆಲ್ಲ ನೀನು ಓದಿ ಮುಗಿಸದ ಹೊರತು ಹೋಗಲು ಬಿಡುವುದಿಲ್ಲ, ಸುಂದರಣ್ಣ ಬೆಳಗ್ಗೆ ನಮಗೆ ಹಾಲು ತರುತ್ತಾನೆ. ಕಣ್ಣಮ್ಮ ಅಡುಗೆ ಮಾಡುತ್ತಾಳೆ, ಶಾಹೀದ್, ಅನುಪಾ, ಸ್ಯಾನ್ಲಿ ಮತ್ತು ಫರೀದಾ ಬರುತ್ತಿರುತ್ತಾರೆ. ಅವರು ಓದ್ತಾರೆ, ಚರ್ಚೆ ಮಾಡ್ತಾರೆ, ನಗ್ತಾರೆ, ಸಂವಾದ ನಡೆಸ್ತಾರೆ. ನಾವು ಒಟ್ಟಿಗೆ ಊಟ ಮಾಡೋಣ. ಈ ಮಧ್ಯೆ ಇವೆಲ್ಲವನ್ನ ನೀನು ಓದಿ ಮುಗಿಸ್ತೀಯ. ಅಮರ ಕೋಣೆಯ ಎದುರುಗಡೆ ಇದ್ದ ಇನ್ನೊಂದು ಮಂಚದ ಬಳಿ ಹೋಗಿ, ತುಪಾಕಿಯನ್ನು ಎತ್ತಿಕೊಂಡು ಪರೀಕ್ಷಿಸಿ, ದಿಂಬಿನ ಅಡಿಯಲ್ಲಿಟ್ಟ. ಮಲ್ಲಪ್ಪ, ಈ ಪುಸ್ತಕಗಳನ್ನೆಲ್ಲ ಓದಿ ಮುಗಿಸಿದನಂತರ ಇದನ್ನ ನೀನು ಎತ್ತಿಕೊಳ್ಳಬಹುದು ಎಂದು ಅವನು ಹೇಳಿದ.

ಮಲ್ಲಪ್ಪ ಹುಚ್ಚು ಕೋಪದಲ್ಲಿ ತನ್ನ ತಲೆಯನ್ನಾಡಿಸಿದ, ಅವನ ಕಣ್ಣುಗಳು ಉಬ್ಬಿದ್ದವು..

"ಇದರ ಹಿಂದೆ ಯಾರಿದ್ದಾರೆ, ಬೊಗಳು."

ಅಮರನಿಗೆ ಖುಷಿ ತಡೆಯಲಾಗಲಿಲ್ಲ,

"ಭಗವಾನ್ ಅಲ್ಲದೆ ಇನ್ಯಾರು?"

"ಪ್ರೊಫೆಸರ್ ಭಗವಾನ್ ಬಸಪ್ಪ? ಅವರು ಸತ್ತಿಲ್ಲವೆ?"

"ಸತ್ತಿದ್ದಾರಾ? ಭಗವಾನ್ ಸತ್ತಿದ್ದಾರಾ?" ಅಮರ ಗಟ್ಟಿಯಾಗಿ ನಕ್ಕನು.

ರಾತ್ರಿ ಇಳಿಯುತ್ತಿತ್ತು, ಹೊರಗಡೆ ಮಲ್ಲಿಗೆಯ ಚಪ್ಪರದಲ್ಲಿ ಹೊಸ ಹೂವುಗಳು ಅರಳಿದವು. ರಸ್ತೆ ಆಚೆಗಿನ ಕೊಳದಲ್ಲಿ ಕಮಲಗಳಿಗೆ ತೊಂದರೆ ಕೊಡದಂತೆ ನೀರುಕೋಳಿಗಳು ಎಚ್ಚರದಿಂದ ಹೆಜ್ಜೆ ಹಾಕುತ್ತಿದ್ದವು. ಇದನ್ನ ಕೇಳು, ನಿನ್ನ ಕಟುಕ ಬರುತ್ತಿದ್ದಾನೆ, ಎಂದು ಮಲ್ಲಪ್ಪ ಗುರುಗುಟ್ಟಿದ. ಅಮರ ಖುಷಿಯಾಗಿ ಪಠಿಸಿದ: ತನ್ನನ್ನು ಹಿಡಿಯಲು ಬೆಕ್ಕು ಹೊಂಚುಹಾಕುತ್ತಿದೆ ಎಂದು ತಿಳಿಯದ ಗಿಳಿಗೆ ಪಾಠ ಹೇಳಿ ಏನು ಫಲ? ಆನೆ ಅಂಕುಶಕ್ಕೆ ಅಂಜೂದೆ ಅಯ್ಯ ಮಾಣದೆ ಸಿಂಹದ ನಖವೆಂದು ಅಂಜೂದಲ್ಲದೆ. ಆನೀ ಬಿಜ್ಜಳಂಗಂಜುವೆನೆ, ಅಯ್ಯಾ? ಓ ಕೂಡಲಸಂಗಮ ದೇವಾ?

■ ಪ್ರೊ.ಕೆ.ಎಸ್.ಭಗವಾನ್


ಪೇಜಾವರರೆ, ಇದು ಭ್ರಷ್ಟಾಚಾರವಲ್ಲವೇ?

'ಸಮಾಜದಲ್ಲಿ ಶೇ.75 ಭ್ರಷ್ಟರಿದ್ದಾರೆ ಆದರೆ ಶೇ.25 ಮಂದಿ ಭ್ರಷ್ಟರಲ್ಲ, ...ಕೆಂದರೆ ಅವರಿಗಿನ್ನೂ ಭ್ರಷ್ಟಾಚಾರ ಮಾಡಲು ಅವಕಾಶ ಸಿಕ್ಕಿಲ್ಲ' ಎಂದು ...ಜಾವರ ಶ್ರೀ ಉಡುಪಿ ಮಠದಲ್ಲಿ ಮೊನ್ನೆ ನೀಡಿದ ಉಪನ್ಯಾಸದ ಮೂಲಕ ...ಷ್ಟಾಚಾರದ ವಿರುದ್ಧ ಚಾಟಿ ಬೀಸಿದ್ದಾರೆ ಎಂದು ಉಡುಪಿ ಮಠದ ಆಸ್ಥಾನ ...ಕೆ ವಿಜಯ ಕರ್ನಾಟಕ ದೈನಿಕದಲ್ಲಿ ವರದಿಯಾಗಿದೆ.

ಇದರ ಅರ್ಥ ನೂರಕ್ಕೆ ನೂರು ಜನರು ಮೂಲದಲ್ಲಿ ಅಪ್ರಾಮಾಣಿಕರು ...ದು ಸ್ವಾಮಿಗಳು ಒಪ್ಪಿಕೊಂಡಂತಾಯಿತು. ಹಾಗಾದರೆ ಈ ಶೇ.100 ...ಪ್ರಾಮಾಣಿಕರಲ್ಲಿ ಸ್ವತಃ ಪೇಜಾವರ ಶ್ರೀ ಸಹಿತ ಎಂಟು ಸ್ವಾಮೀಜಿಗಳು ...ಗೂ ಮಠದ ದಿವಾಣ ಸಹಿತ ಎಲ್ಲಾ ನೌಕರರೂ ಶಾಮೀಲು ಎಂದು ...ಜಾವರ ಸ್ವಾಮೀಜಿಗಳೇ ಒಪ್ಪಿಕೊಂಡಂತಾಯಿತು. ಹಾಗಾದರೆ ...ಮೀಜಿಗಳೇ ಒಪ್ಪಿಕೊಂಡಿರುವಂತೆ ಇಂತಹ ಅಪ್ರಾಮಾಣಿಕರಿಂದಲೇ ...ಇರುವ ಉಡುಪಿ ಮಠ ಪವಿತ್ರ ಸ್ಥಾನ ಎನಿಸಿಕೊಳ್ಳಲು ಅರ್ಹವೇ?

ಪೇಜಾವರ ಶ್ರೀಗಳು ಹೋದಲ್ಲೆಲ್ಲಾ ಧನಿಕ ಭಕ್ತರಿಗೆ ತಾವೇ ದುಂಬಾಲು ...ದ್ದು ಪಾದಪೂಜೆ ಮಾಡಿಸಿಕೊಳ್ಳುವುದು ಹಾಗೂ ಭಾರಿ ಕಾಣಿಕೆ ...ತೆಯುವುದು ಅಥವಾ ತನ್ನ ಪೀಚಲು ದೇಹದ ತುಲಾಭಾರ ...ಮಾಡಿಸಿಕೊಳ್ಳುವುದು ಭ್ರಷ್ಟಾಚಾರ ಅಲ್ಲವೇ? ಚಾತುರ್ಮಾಸ್ಯವನ್ನು ಮುಂಬೈನ ...ಒಂದು ಮಠದಲ್ಲಿ ಮುಗಿಸಿ ಅದರ ಸಮಾರೋಪವನ್ನು ಮಾತ್ರ ಮುಂಬೈನ ...ದ, ಬಂಟರ ಸಂಘದಲ್ಲಿ ಇಟ್ಟುಕೊಂಡು ಅಲ್ಲಿಯ ಡ್ಯಾನ್ಸ್ ಬಾರ್ ...ಗಳ ಪಾಪಕೂಪದ ಹಣದಿಂದ ತನ್ನ ಪಾದಪೂಜೆ ಮಾಡಿಸಿಕೊಂಡು ...ರಿ ಕಾಣಿಕೆ ಪೀಕಿಸುವುದು ಸಹ ಅಪವಿತ್ರ, ಭ್ರಷ್ಟಾಚಾರ ತಾನೇ.

ಭೀಕರ ಕಾರ್ಗಿಲ್‌ನಲ್ಲಿ ದೇಶದ ಗಡಿ ಕಾಯ್ದು ದೇಶ ಸೇವೆ ಮಾಡಿ ...ತ್ತರಾದ ತುಳುವ ಜೊದ್ಧ ಯೋಧನೊಬ್ಬ ಮಂಗಳೂರಿನ ಎಮ್‌ಆರ್‌ಪಿಎಲ್ ...ಪನಿಯಲ್ಲಿ ಸೆಕ್ಯುರಿಟಿ ಅಧಿಕಾರಿ ಹುದ್ದೆಗೆ ಅರ್ಜಿ ಗುಜರಾಯಿಸಿದ್ದನು. ಪೇಜಾವರ ...ಗಳಿಂದ ಅವರದೇ ಜಾತಿಯ ಎಮ್‌ಆರ್‌ಪಿಎಲ್ ಕಂಪನಿಯ ...ಅಧಿಕಾರಿಗೆ ಹೇಳಿಸಿದರೆ ನಿಮ್ಮ ಕೆಲಸ ಗ್ಯಾರಂಟಿ ಎಂದು ಒಬ್ಬ ನಿವೃತ್ತ ಆ ನಿವೃತ್ತ ಯೋಧನಿಗೆ ಹೇಳಿದ್ದರಿಂದ ಅವನು ಪೇಜಾವರ ಶ್ರೀಗಳನ್ನು ಭೇಟಿಯಾಗಿ ಈ ವಿಷಯ ಭಿನ್ನವಿಸಿಕೊಂಡನು. ಆಗ ಶ್ರೀಗಳು ತನ್ನ ದಿವಾಣನನ್ನು ಕರೆದು ಮೂರು ಬೆರಳು ತೋರಿಸಿ ದಿವಾನನ ಕಿವಿಯಲ್ಲೇನೋ ಉಸುರಿದರು. ದಿವಾಣ ಆ ಯೋಧನನ್ನು ಬದಿಗೆ ಕರೆದೊಯ್ದು ಆ ಮೂರು ಬೆರಳಿನ ಅರ್ಥ ಮೂರು ಲಕ್ಷ ಎಂದು ಹೇಳಿ ಅಷ್ಟು ಕೊಟ್ಟರೆ ನೌಕರಿ ಗ್ಯಾರಂಟಿ ಎಂದರು. ಆಗ ಆ ದೇಶ ರಕ್ಷಕ ಸೈನಿಕ ಎಲ್ಲಾ ಮಠಾಧೀಶರಲ್ಲಿ ಹಾಗೂ



ದೇವರಲ್ಲಿ ನಂಬಿಕೆ ಕಳೆದುಕೊಂಡ. ಬೆಂಗಳೂರಿಗೆ ಹೋಗಿ ಅಲ್ಲಿ ಒಂದು ಖಾಸಗಿ ಕಂಪನಿಯಲ್ಲಿ ಸೆಕ್ಯುರಿಟಿ ಅಧಿಕಾರಿಯಾಗಿ ಸೇರಿಕೊಂಡು ಈಗ ಸುಖವಾಗಿದ್ದಾನೆ ಆ ನನ್ನ ಸೈನಿಕ ಮಿತ್ರ.

ಐದು ವರ್ಷಗಳ ಹಿಂದೆ ಸ್ಥಳೀಯರು ನಾಗಾರ್ಜುನ ವಿದ್ಯುತ್ ಕಂಪನಿಯ ಹಾರುಬೂದಿ ಸಮಸ್ಯೆ ವಿರುದ್ಧ ಸಂಘಟಿತ ಪ್ರತಿಭಟನೆ ಮಾಡುತ್ತಿದ್ದಾಗ ಪೇಜಾವರರು ತಾವೂ ಕಂಪನಿಯ ವಿರುದ್ಧದ ಪ್ರತಿಭಟನೆಯನ್ನು ಬೆಂಬಲಿಸುವುದಾಗಿ ಹೇಳಿ ಅದರ ನೇತೃತ್ವವನ್ನು ಹೈಜಾಕ್ ಮಾಡಿದ್ದರು. ಆದರೆ ಆನಂತರ ನಾಗಾರ್ಜುನ ಕಂಪನಿಯ ಆಡಳಿತದವರೊಂದಿಗೆ ಒಳಒಪ್ಪಂದ ಮಾಡಿಕೊಂಡು ಸ್ಥಳೀಯರ ಪ್ರತಿಭಟನೆ ಸೋಲುವಂತೆ ಮಾಡಿದ್ದರು. ಆ ಮೂಲಕ ಭಾರಿ ಸೂಟ್‌ಕೇಸ್ ಪಡೆದು 'ಸೂಟ್‌ಕೇಸ್‌ಸಾಮಿ' ಎಂದು ಹೆಸರು ಗಳಿಸಿದ್ದು ಭ್ರಷ್ಟಾಚಾರವಲ್ಲವೇ?

ಮಂಗಳೂರಿನಲ್ಲಿ ಎಮ್‌ಆರ್‌ಪಿಎಲ್ ಕಂಪನಿಯು ಕುತ್ತೆತ್ತೂರು ಮತ್ತು ಪೆರ್ಮುದೆ ಎಂಬ ಹಳ್ಳಿಗಳ ರೈತರ ಭೂಮಿಗೆ ಮಾರುಕಟ್ಟೆದರದಲ್ಲಿ ಉತ್ತಮ ಬೆಲೆ ಕೊಡಲು ಮುಂದೆ ಬಂದಾಗ ಸ್ಥಳೀಯ ರೈತರು ಖುಷಿಯಿಂದ ಭೂಮಿ ಕೊಡಲು ಒಪ್ಪಿದ್ದರು. ಆದರೆ ಆ ಪ್ರದೇಶದಲ್ಲಿ ಹಲವು ಬ್ರಾಹ್ಮಣ ಕುಟುಂಬಗಳು ಅನಧಿಕೃತವಾಗಿ ಸರಕಾರಿ ಭೂಮಿ ಅನುಭವಿಸುತ್ತಿದ್ದು ಒಂದು ವೇಳೆ ಆ ಬ್ರಾಹ್ಮಣರ ಭೂಮಿಯನ್ನೂ ಎಮ್‌ಆರ್‌ಪಿಎಲ್‌ಗೆ ಕೊಡಬೇಕಾಗಿ ಬಂದರೆ ಕಾನೂನುಪ್ರಕಾರ ಕಂಪನಿಯಿಂದ ಯಾವುದೇ ಪರಿಹಾರ ಸಿಗಲಾರದು ಎಂದು ಗೊತ್ತಾದ ಮೇಲೆ ಈ ಪೇಜಾವರರು ಅಲ್ಲಿ ವಿನಾಕಾರಣ ಮೂಗು ತೂರಿಸಿ ಧರಣಿ ನಡೆಸಿ ಎಮ್‌ಆರ್‌ಪಿಎಲ್ ಕಂಪನಿಯು ಆ ಪ್ರದೇಶದ ರೈತರ ಭೂಮಿ ತೆಗೆದುಕೊಳ್ಳದಂತೆ ಹುನ್ನಾರ ನಡೆಸಿ ಯಶಸ್ವಿಯಾದರು. ಇದರಿಂದಾಗಿ ಅಲ್ಲಿ ಅಧಿಕೃತ ಭೂಮಿ ಹೊಂದಿದ್ದ ರೈತರು ಈ ಪೇಜಾವರರನ್ನು ಇಂದಿಗೂ ಶಪಿಸುವಂತೆ ಆಗಿದೆ. ಈತನೂ ಒಬ್ಬ ಸನ್ಯಾಸಿಯೇ ಎಂದವರು ಕೇಳುತ್ತಿದ್ದಾರೆ.

ಕಾಂಗ್ರೆಸ್ಸಿನ ಆಸ್ಕರ್ ಫರ್ನಾಂಡಿಸರನ್ನು ಬ್ಲ್ಯಾಕ್‌ಮೇಲ್ ಮಾಡಿ ಮೊನ್ನೆಯ ಪರ್ಯಾಯಕ್ಕೆ ಸಿದ್ದರಾಮಯ್ಯ ಸರಕಾರದಿಂದ ಮೂರು ಕೋಟಿ ಪೀಕಿಸಿದ್ದು ಭ್ರಷ್ಟಾಚಾರ ಅಲ್ಲವೇ? ಅದೇ ಪರ್ಯಾಯ ಮಹೋತ್ಸವಕ್ಕೆ ಪೇಜಾವರರು ಯೂಪಿಸಿಎಲ್ ವಿದ್ಯುತ್ ಕಂಪನಿಯ ಅಧ್ಯಕ್ಷ ಗೌತಮ್ ಅದಾಣಿಯಿಂದ ಕಿಶೋರ್ ಶೆಟ್ಟಿಯ ಮುಖಾಂತರ ಐವತ್ತು ಲಕ್ಷ ಪಡೆದದ್ದು ಪ್ರಾಮಾಣಿಕತೆ ಆಗಿದ್ದರೆ ಭಾರತದ ನೂರಕ್ಕೆ ನೂರು ಜನರು ಅಷ್ಟು ಪ್ರಾಮಾಣಿಕರು ಎನ್ನಬೇಕಾಗುತ್ತದೆ! ಹೀಗಿದೆ ಅನಾಥಭೂತಿ ಸ್ವಾಮೀಜಿಯ ಭ್ರಷ್ಟಾಚಾರ ವಿರೋಧಿ ಅಭಿಯಾನ ಹಾಗೂ ಕೆಲವು ವೈದಿಕ ಪತ್ರಿಕೆಗಳ ಭಟ್ಟಂಗಿತನ.

-ಹರೀಶ್ ಎಮ್.ಆರ್. ಉಡುಪಿ

ಹೆಡ್ಲಿ ವಿಚಾರಣೆಯೂ ಕರಿ, ಬಿಳಿ ದಾಡಿಗಳೂ



ನವಂಬರ್ 26, 2008ರ ಮುಂಬೈ ದಾಳಿ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಡೇವಿಡ್ ಹೆಡ್ಲಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಆತನಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾರತದ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಅನುಮತಿ ನೀಡಿರುವ ವಿಚಾರ ಮೇಲುನೋಟಕ್ಕೆ ಕಾಣಿಸುವಷ್ಟು ಸರಳವಲ್ಲ. ಕಾನೂನಿನ ಪ್ರಕಾರ (1) ಹೆಡ್ಲಿಗೆ ಕ್ಷಮಾದಾನ ನೀಡಿರುವುದು ಸಿಆರ್‌ಪಿಸಿ ಸೆಕ್ಷನ್ 306ರ ಉಲ್ಲಂಘನೆಯಾಗಿದೆ ಏಕೆಂದರೆ ಅಂತಹ ಸಾಕ್ಷಿಯನ್ನು ವಿಚಾರಣೆ ಮುಗಿಯುವತನಕ ಬಂಧನದಲ್ಲಿ ಇರಿಸಬೇಕೆಂದು ಸದರಿ ಸೆಕ್ಷನ್ ಹೇಳುತ್ತದೆ. (2) ಮೌಖಿಕ ಹೇಳಿಕೆಯಷ್ಟೆ ಸಾಲದು; ಅದಕ್ಕೆ ಪೂರಕವಾಗಿ ಭೌತಿಕ ಪುರಾವೆಗಳನ್ನೂ ಒದಗಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇಡೀ ವಿದ್ಯಮಾನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದರ ಹಿಂದೆ ಕೆಲವೊಂದು ರಾಜಕೀಯ ಹಿತಾಸಕ್ತಿಗಳ ಕೈವಾಡವಿರುವಂತೆ ತೋರುತ್ತದೆ. ಮುಂಬೈ ದಾಳಿಗಳಿಗೆ ಏನೇನೂ ಸಂಬಂಧವಿಲ್ಲದ ಇಶ್ರತ್ ಜಹಾನ್ ನಕಲಿ ಎನ್ಕೌಂಟರ್ ವಿಷಯವನ್ನು ಪ್ರಸಕ್ತ ಪ್ರಕರಣಕ್ಕೆ ಎಳೆತಂದಿರುವುದನ್ನು ಇನ್ಯಾವ ರೀತಿಯಲ್ಲೂ ವಿವರಿಸಲು ಬರುವುದಿಲ್ಲ. ಏಕೆಂದರೆ ಮುಂಬೈ ದಾಳಿಗಳು ಸಂಭವಿಸಿದ್ದು ನವಂಬರ್ 26, 2008ರಲ್ಲಿ, ಇಶ್ರತ್ ಜಹಾನ್ ನಕಲಿ ಎನ್ಕೌಂಟರ್ ನಡೆದಿರುವುದು ಜೂನ್ 15, 2004ರಲ್ಲಿ, ಅಂದರೆ ಸುಮಾರು ನಾಲ್ಕೂವರೆ ವರ್ಷಗಳ ಹಿಂದೆ! ಅಂದು ಈ ಎನ್ಕೌಂಟರ್‌ನ ತನಿಖೆ ನಡೆಸಿದ್ದ ನ್ಯಾ! ತಮಾಂಗ್ ಸಪ್ಟಂಬರ್ 7, 2009ರಂದು ಕೊಟ್ಟ ವರದಿಯಲ್ಲಿ ಇದೊಂದು ನಕಲಿ ಎನ್ಕೌಂಟರ್ ಎಂದು ಸ್ಪಷ್ಟವಾಗಿ ದಾಖಲಿಸಲಾಗಿದೆ. ಈ ಪಿತೂರಿ ನಡೆಸಿದ ಪೊಲೀಸ್ ಅಧಿಕಾರಿಗಳ ಹೆಸರುಗಳನ್ನೂ ವರದಿಯಲ್ಲಿ ನಮೂದಿಸ ಲಾಗಿದೆ: ಅಹಮದಾಬಾದ್ ಪೊಲೀಸ್ ಆಯುಕ್ತ ಕೆ.ಆರ್.ಕೌಶಿಕ್, ಜಂಟಿ ಆಯುಕ್ತ ಪಿ.ಪಿ.ಪಾಂಡೆ, ಡಿ.ಜಿ.ವಂಜಾರ, ಜೆ.ಎಲ್.ಸಿಂಘಾಲ್, ಎನ್.ಕೆ.ಅಮೀನ್, ಕೆ.ಎಂ.ವಘೇಲ, ಜೆ.ಜಿ.ಪರ್ಮಾರ್, ವಿ.ಡಿ.ವನಾರ್, ಎಸ್.ಪಿ.ಅಗ್ರಾವತ್, ಡಿ.ಎಚ್.ಗೋಸ್ವಾಮಿ, ಆರ್.ಐ.ಪಟೇಲ್, ಬಿ.ಎ.ಚಾವ್ಡಾ, ತರುಣ್ ಬಾರೋತ್, ಕೆ.ಎಸ್.ದೇಸಾಯಿ, ಐ.ಕೆ.ಚೌಹಾಣ್, ಎಂ.ಎಲ್.ಕಲಾಸವ, ಎಂ.ಎಸ್.ವ್ಯಾಸ್, ಎನ್.ಬಿ.ಮಿಯಾ, ಎ.ಜೆ.ಚೌಧರಿ, ಎಂ.ನಾಂಜಿಭಾಯಿ ಮತ್ತು ಡ್ರೈವರ್ ಭಾಲಾಭಾಯಿ. ಆ ಪ್ರಕರಣದಲ್ಲಿ ನರೇಂದ್ರ ಮೋದಿಯನ್ನು ಹತ್ಯೆ ಮಾಡಲು ಬಂದಿದ್ದರೆನ್ನಲಾದ ಇಶ್ರತ್ ಮತ್ತಿತರ ಮೂವರು ಶಂಕಿತ ಉಗ್ರರನ್ನು ಗುಂಡಿಕ್ಕಿ ಕೊಂದವನಾದ ಇದೇ ಜೆ.ಎಲ್.ಸಿಂಘಾಲ್ ನಂತರ ತನ್ನ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಟ್ಟಿದ್ದ. ಸಿಬಿಐ ವಿಚಾರಣೆಯ ಸಂದರ್ಭದಲ್ಲಿ "ಇದು ದೈವಿಕ ನ್ಯಾಯ......... ಇದು ನಿರಪರಾಧಿಗಳನ್ನು ಕೊಂದಿದ್ದಕ್ಕಾಗಿ ನನಗೆ ಸಿಕ್ಕ ಶಿಕ್ಷೆ" ಎಂದಿದ್ದ.

ಈಗ ಡೇವಿಡ್ ಹೆಡ್ಲಿಯ ವಿಚಾರಣೆಗೆ ಮರಳೋಣ. ಹೆಡ್ಲಿ ಇಲ್ಲಿ ತಾಳಮೇಳವಿಲ್ಲದ ಹೇಳಿಕೆ ನೀಡಿ ಎಡವಿ ಬಿದ್ದಿದ್ದಾನೆ. ಏಕೆಂದರೆ ಇಶ್ರತ್ ಕುರಿತಂತೆ ಆತನ ಇಂದಿನ ಹೇಳಿಕೆಗಳನ್ನು ಐದು ವರ್ಷಗಳ ಕೆಳಗೆ ಆತ ಭಾರತದ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ನಾಲ್ವರು ಅಧಿಕಾರಿಗಳಿಗೆ ನೀಡಿದ್ದನೆನ್ನಲಾದ ಹೇಳಿಕೆಗಳೊಂದಿಗೆ ಹೋಲಿಸಿದಾಗ ಬಹಳಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಹೆಡ್ಲಿಯ ಅಂದಿನ ಹೇಳಿಕೆಗಳನ್ನು ಎನ್‌ಐಎ ವರದಿಯ ಪ್ಯಾರಾ 168-169ರಲ್ಲಿ ದಾಖಲಿಸಲಾಗಿತ್ತು. (ತದನಂತರ ಈ ಪ್ಯಾರಾಗಳನ್ನು 'ಕಡತದಿಂದ ಕಿತ್ತುಹಾಕಲಾಗಿದೆ ಎಂಬ ಆರೋಪಗಳು ಕೇಳಿಬರುತ್ತಿವೆ). ಆ ಹೇಳಿಕೆಗಳು ಹೀಗಿವೆ:

ಪ್ಯಾರಾ 168. "ಇಶ್ರತ್ ಜಹಾನ್ ಕುರಿತ ಪ್ರಶ್ನೆಗುತ್ತರವಾಗಿ ನಾನು (ಹೆಡ್ಲಿ) ಹೇಳುವುದೇನೆಂದರೆ 2005ನೆ ಇಸವಿಯ ಕೊನೆಯಲ್ಲಿ ಜಾಕಿಉರ್ ರಹಮಾನ್ ಲಕ್ವಿ ನನಗೆ ಮುಜಾಮಿಲ್‌ನನ್ನು ಪರಿಚಯಿಸಿ ಆತ ಲಷ್ಕರ್ ಎ ತೋಯ್ಬಾದ ಓರ್ವ ಕಮಾಂಡರ್ ಎಂದು ತಿಳಿಸಿದ. ಬಳಿಕ ಮುಜಾಮಿಲ್‌ನ ಸಾಧನೆಗಳ ಕುರಿತು ಮಾತನಾಡುತ್ತಾ ಉನ್ನತ ಮಟ್ಟದ ಕಮಾಂಡರ್ ಆದ ಮುಜಾಮಿಲ್‌ನ ಪ್ರತಿಯೊಂದು ಯೋಜನೆಯೂ ವೈಫಲ್ಯ ಕಂಡಿದೆ ಎಂದು ಕಟಕಿಯಾಡಿದ. ಆತನ ಕೆಟ್ಟುಹೋದ ಕಾರ್ಯಾಚರಣೆಗಳಲ್ಲಿ ಇಶ್ರತ್ ಜಹಾನ್ ಪ್ರಕರಣವೂ ಒಂದು ಎಂದು ಹೇಳಿದ."

ಪ್ಯಾರಾ 169. "ಇಶ್ರತ್ ಜಹಾನ್ ಕುರಿತಂತೆ ತಾನು ಮೇಲೆ ಹೇಳಿರುವುದಕ್ಕೆ ಹೊರತಾಗಿ ಇನ್ಯಾವ ಮಾಹಿತಿಯೂ ತನ್ನಲ್ಲಿಲ್ಲ" ಎಂದು ಹೆಡ್ಲಿ ತಿಳಿಸಿದ.

ಮೇಲಿನ ಎರಡು ಪ್ಯಾರಾಗಳಿಂದ ನಮಗೆ ತಿಳಿದುಬರುವುದೇನೆಂದರೆ ಹೆಡ್ಲಿಗೆ ಮುಜಾಮಿಲ್ ಬಟ್‌ನ ಪರಿಚಯ ಆಗಿರುವುದು 2005ರ ಕೊನೆಯಲ್ಲಿ, ಅಂದು ಮುಜಾಮಿಲ್‌ನ ಪರಿಚಯ ಮಾಡಿಸಿದ ಜಾಕಿಉರ್ ರಹಮಾನ್ ಲಕ್ವಿ, ಇಶ್ರತ್ ಜಹಾನ್ ಪ್ರಕರಣ ಒಂದು ವಿಫಲ ಯತ್ನವಾಗಿತ್ತೆಂದು ಹೇಳಿದ್ದ.



ಆದರೆ ಅದೇ ಎನ್‌ಐಎ ವರದಿಯ ಪ್ಯಾರಾ 17 ಮತ್ತು 28ರಲ್ಲಿ ಇದಕ್ಕೆ ತದ್ವಿರುದ್ಧ ಅಂಶಗಳಿರುವುದನ್ನು ಗಮನಿಸಬಹುದು. ಇಲ್ಲಿ ಹೆಡ್ಲಿ ತಾನು ಮುಜಾಮಿಲ್ ಬಟ್‌ನನ್ನು 2002ನೆ ಇಸವಿಯಲ್ಲಿ ಭೇಟಿಯಾಗಿದ್ದೆ ಎನ್ನುತ್ತಾನೆ. ಮಾತ್ರವಲ್ಲ ತದನಂತರ 2004ರಲ್ಲಿ ಆತನನ್ನು ಹಲವಾರು ಸಲ ಕಂಡಿದ್ದೆನೆಂದೂ ತಿಳಿಸುತ್ತಾನೆ. ಪ್ಯಾರಾ 17 ಮತ್ತು 28ರಲ್ಲಿ ದಾಖಲಾಗಿರುವ ಹೆಡ್ಲಿ ಹೇಳಿಕೆಗಳು ಈ ಕೆಳಗಿನಂತಿವೆ:

ಪ್ಯಾರಾ 17. "ಕಾಶ್ಮೀರದ ಪ್ರಜೆಯಾದ ಮುಜಾಮಿಲ್ ಬಟ್‌ನನ್ನು ನಾನು 2002ರಲ್ಲಿ ಮುಜಾಫರಾಬಾದ್‌ನಲ್ಲಿ ಭೇಟಿಯಾದೆ. ಆತನನ್ನು ನನಗೆ ಪರಿಚಯ ಮಾಡಿಸಿದಾತ ಅಬು ದುಜಾನ ಎಂಬ ವ್ಯಕ್ತಿ. ಇವರಿಬ್ಬರೂ ಕಾಶ್ಮೀರದಲ್ಲಿ ಒಟ್ಟಿಗೆ ವಾಸಮಾಡುತ್ತಿದ್ದರು. ಮುಜಾಮಿಲ್ ಬಟ್ ಲಷ್ಕರ್‌ನ ಓರ್ವ ಬಹುಮುಖ್ಯ ಕಾರ್ಯಕರ್ತ. ಆತ ಕಾಶ್ಮೀರದಲ್ಲಿದ್ದಾಗ ಭಾರತೀಯ ಭದ್ರತಾ ಪಡೆಗಳ ಮೇಲಿನ ಅನೇಕ ದಾಳಿಗಳಲ್ಲಿ ಭಾಗಿಯಾಗಿದ್ದ. ತಾನು ಆಗಿನ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಭೇಟಿಗೆ ಮುನ್ನ ಒಂದು ಗ್ರಾಮಕ್ಕೆ ಹೋಗಿ ಅಲ್ಲಿನ ಜನರನ್ನು ಕೊಂದು ಹಾಕಿದ್ದೆನೆಂದು ಮುಜಾಮಿಲ್ ನನಗೆ ಹೇಳಿರುವುದು ನೆನಪಿದೆ. ಆತ ಮುಜಾಫರಾಬಾದ್‌ಗೆ ಬಂದನಂತರ ಆರಂಭದಲ್ಲಿ ಆತನನ್ನು ಭಾರತದಲ್ಲಿನ ಕಾರ್ಯಾಚರಣೆಗಳ ಮುಖ್ಯಸ್ಥನನ್ನಾಗಿ ನೇಮಿಸಲಾಯಿತು.

ಪ್ಯಾರಾ 28. ತರಬೇತಿಯ ನಂತರ ನಡೆಸಿದ ಕಾರ್ಯಾಚರಣೆಗಳು: "2004ರ ಆಗಸ್ಟ್ ತಿಂಗಳಲ್ಲಿ ನಾನು ಲಕ್ವಿಯನ್ನು ಭೇಟಿಯಾಗಿ ನನಗೆ ನನ್ನ ನಿರ್ವಾಹಕನಾದ ಯಾಕೂಬ್ ಜೊತೆ ಸರಿಬರದ ಕಾರಣ ಆತನನ್ನು ಬದಲಾಯಿಸುವಂತೆ ಕೋರಿಕೊಂಡೆ. ಆಗ ಲಕ್ವಿ ನನ್ನನ್ನು ಮುಜಾಮಿಲ್ ಕೈಗೊಪ್ಪಿಸಿದ. ಮುಜಾಮಿಲ್‌ನ ತಂಡದಲ್ಲಿ ಅಬ್ದುರ್ ರಹಮಾನ್ ಕೂಡಾ ಇದ್ದ."

ಪ್ಯಾರಾ 168, 169 ಮತ್ತು ಪ್ಯಾರಾ 17, 28ರಲ್ಲಿರುವ ಈ ಎರಡು ಹೇಳಿಕೆಗಳೂ ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಒಂದು ಕಡೆ ಆತ ಮುಜಾಮಿಲ್‌ನ ಪರಿಚಯ ಆಗಿರುವುದು 2005ರಲ್ಲಿ ಮತ್ತು ಆಗಷ್ಟೆ ತನಗೆ ಇಶ್ರತ್ ಬಗ್ಗೆ ತಿಳಿಯಿತು ಎಂದು ಹೇಳಿದ್ದರೆ ಇನ್ನೊಂದು ಕಡೆ ಮುಜಾಮಿಲ್‌ನನ್ನು 2002ರಲ್ಲಿ ಭೇಟಿಯಾದ ಬಳಿಕ 2004ರಲ್ಲಿ ಆತ ತನ್ನ ನಿರ್ವಾಹಕ ಆಗಿದ್ದ ಎನ್ನುತ್ತಾನೆ.

ಅಜ್ಮಲ್ ಕಸಬ್ ಜೈಲಿನಲ್ಲಿದ್ದಾಗ ಬಿರಿಯಾನಿ ಊಟ ಕೇಳಿದ್ದನೆಂದು ಸುಳ್ಳು ಹೇಳಿ ಮಾಧ್ಯಮಗಳ ಮೂಲಕ ಅಪಪ್ರಚಾರ ಮಾಡಿದ, ತಾನೋರ್ವ "ಏಕವ್ಯಕ್ತಿ ಸೈನ್ಯ" ಎಂದು ಬಣ್ಣಿಸಿಕೊಂಡ ಸರಕಾರಿ ವಕೀಲ ಉಜ್ವಲ್ ನಿಕಮ್ ನೆನಪಿದೆಯೇ? ನ್ಯಾಯಾಲಯದಲ್ಲಿ ದೊಡ್ಡ ಡ್ರಾಮಾ ಮಾಡಲು ಖುಷಿಪಡುವ ಈತ ಮುಂಬೈನ ಸಾಮೂಹಿಕ ಅತ್ಯಾಚಾರ ಪ್ರಕರಣ ಒಂದರಲ್ಲಿ ಸಂತ್ರಸ್ತೆಗೆ ಹೊಸದೊಂದು ಜೊತೆ ಚಪ್ಪಲಿಗಳನ್ನು ಖರೀದಿಸಿ ನೀಡುವಂತೆ ಕ್ರೈಮ್ ಬ್ರಾಂಚ್‌ಗೆ ಆದೇಶಿಸಿ 'ನಿನಗಿಷ್ಟವಿದ್ದರೆ ನ್ಯಾಯಾಲಯದೊಳಗೆ ಆರೋಪಿಗೆ ಥಳಿಸಬಹುದು' ಎಂದು ಸಂತ್ರಸ್ತೆಗೆ ಹೇಳಿ ಆಕೆ ಹಾಗೆ ಮಾಡದಿದ್ದಾಗ ಕಲಾಪದ ಬಳಿಕ 'ಅವಳು ಆರೋಪಿಗಳಿಗೆ ಚಪ್ಪಲಿಯೇಟು ನೀಡಬಯಸಿದ್ದಳು' ಎಂದು ಮಾಧ್ಯಮಗಳಿಗೆ ಹೇಳಿಕೆ ನೀಡಿದವರು! ಈ ವರ್ಷ ಮೋದಿ ಸರ್ಕಾರದಿಂದ ಪದ್ಮ ಪ್ರಶಸ್ತಿಯನ್ನು ಪಡೆದುಕೊಂಡಿರುವ ಇದೇ ವ್ಯಕ್ತಿ ಈಗ ಹೆಡ್ಲಿ ಪ್ರಕರಣದಲ್ಲೂ ಸರಕಾರದ ವಕೀಲ. ಆತ ಮೊನ್ನೆ ನ್ಯಾಯಾಲಯದಲ್ಲಿ ಹೆಡ್ಲಿಗೆ ಹಾಕಿದ ಪ್ರಶ್ನೆಗಳು ಮತ್ತು ಹೆಡ್ಲಿಯ ಉತ್ತರಗಳು ಹೇಗಿದ್ದವೆಂದು ಕೊಂಚ ನೋಡೋಣ.

ಪ್ರ: ಲಷ್ಕರ್‌ನಲ್ಲಿ ಮಹಿಳಾ ವಿಭಾಗ ಇದೆಯೇ?

ಉ: ಹೌದು.

ಪ್ರ: ಅದರ ಮುಖ್ಯಸ್ಥೆ ಯಾರು?

ಉ: ಅಬು ಐಮನ್‌ನ ತಾಯಿ.

ಪ್ರ: ಲಷ್ಕರ್‌ನಲ್ಲಿ ಮಹಿಳಾ ಆತ್ಮಹತ್ಯಾ ಬಾಂಬರ್‌ಗಳು ಇದ್ದಾರೆಯೇ?

ಉ: ಇಲ್ಲ, ನನಗೆ ಗೊತ್ತಿಲ್ಲ.

ಪ್ರ: ಒಬ್ಬ ಆತ್ಮಹತ್ಯಾ ಬಾಂಬರ್‌ನ ಹೆಸರು ತಿಳಿಸಬಹುದೇ?

ಉ: ನನ್ನಿಂದ ಹೆಸರಿಸಲು ಸಾಧ್ಯವಿಲ್ಲ.

ಪ್ರ: ಭಾರತದಲ್ಲಿ ನಡೆದ ಒಂದು ಕಾರ್ಯಾಚರಣೆ ಕೆಟ್ಟುಹೋಗಿತ್ತೇ?

ಉ: ಜಾಕಿ ಲಕ್ವಿ ಮತ್ತು ಮುಜಾಮಿಲ್ ಬಟ್ ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದ ವೇಳೆ ಒಂದು ಕೆಟ್ಟುಹೋದ ಕಾರ್ಯಾಚರಣೆ ಬಗ್ಗೆ ಅರಿತೆ. ಸ್ವಲ್ಪ ಕಾಲದ ನಂತರ ಇದರ ಬಗ್ಗೆ ಮುಜಾಮಿಲ್‌ನಲ್ಲಿ ವಿಚಾರಿಸಿದಾಗ ಆತ ಒಂದು ಚೆಕ್‌ಪೋಸ್ಟ್‌ನಲ್ಲಿ (ನಾಕಾ) ಪೊಲೀಸರ ಗುಂಡು ಹಾರಾಟದ ವೇಳೆ ಲಷ್ಕರ್‌ನ ಓರ್ವ ಮಹಿಳಾ ಸದಸ್ಯೆ ಹತಳಾದಳೆಂದು ತಿಳಿಸಿದ. ಆ ಜಾಗ ಯಾವುದೆಂದು ನನಗೆ ಜ್ಞಾಪಕವಿಲ್ಲ.

ಪ್ರ: ನಾನು ಮೂರು ಹೆಸರುಗಳನ್ನು ಹೇಳುತ್ತೇನೆ. ನೂರ್ ಬೇಗಂ. ಇಶ್ರತ್ ಜಹಾನ್ ಮತ್ತು ....

ಉ: ಇಶ್ರತ್ ಜಹಾನ್.

ಮೊದಲನೆಯದಾಗಿ ಉಜ್ವಲ್ ನಿಕಮ್ ಇಲ್ಲಿ ಇಶ್ರತ್ ಜಹಾನ್‌ಳನ್ನು ಹೆಸರಿಸುವಂತೆ ಚುಚ್ಚಿ ಚುಚ್ಚಿ ಪ್ರಚೋದಿಸುತ್ತಿರುವುದು ಸ್ಪಷ್ಟವಿದೆ. ಎನ್‌ಐಎ ವಿಚಾರಣೆಯ ವೇಳೆ ತನಗೆ ಮುಜಾಮಿಲ್‌ನ ಕೆಟ್ಟುಹೋದ ಕಾರ್ಯಾಚರಣೆ ಬಗ್ಗೆ ನೇರವಾಗಿ ತಿಳಿಸಿದಾತ ಲಕ್ವಿ (ಪ್ಯಾರಾ 168 ನೋಡಿ) ಎಂದು ಹೇಳಿದ್ದ ಹೆಡ್ಲಿ ಇಲ್ಲಿ ಲಕ್ವಿ ಮತ್ತು ಮುಜಾಮಿಲ್ ನಡುವಣ ಸಂಭಾಷಣೆಯ ವೇಳೆ ತಾನಿದನ್ನು ಕೇಳಿಸಿಕೊಂಡೆ ಎನ್ನುತ್ತಿದ್ದಾನೆ!


ಎರಡನೆ ಅಂಶ ಏನೆಂದರೆ ಎನ್‌ಐಎ ವರದಿಯ ಪ್ಯಾರಾ 169 ರಲ್ಲಿ "ಇಶ್ರತ್ ಜಹಾನ್ ಕುರಿತಂತೆ ತಾನು ಮೇಲೆ ಹೇಳಿರುವುದಕ್ಕೆ ಹೊರತಾಗಿ ಇನ್ಯಾವ ಮಾಹಿತಿಯೂ ತನ್ನಲ್ಲಿಲ್ಲ" ಎಂದು ಹೇಳಿದಾತ ಈಗ ಚೆಕ್‌ಪೋಸ್ಟ್ (ನಾಕಾ) ಒಂದರಲ್ಲಿ ಪೊಲೀಸರು ಶೂಟೌಟ್ ನಡೆಸಿದ ವಿಷಯವನ್ನು ಮುಜಾಮಿಲ್ ತನಗೆ ತಿಳಿಸಿದನೆಂದು ಹೇಳುತ್ತಿದ್ದಾನೆ.


ಇವು ನಿಚ್ಚಳವಾಗಿ ಒಂದಕ್ಕೊಂದು ವಿರುದ್ಧವಾದ ಹೇಳಿಕೆಗಳು. ಎಲ್ಲಕ್ಕಿಂತಲೂ ಮುಖ್ಯವಾಗಿ ಹತ್ಯೆಗೀಡಾದ ಮಹಿಳೆ ಯಾರೆಂದು ಹೆಡ್ಲಿಗೆ ಗೊತ್ತೇ ಇರಲಿಲ್ಲ, ಅದು ಯಾವ ರಾಜ್ಯದಲ್ಲಿ ನಡೆದಿತ್ತೆಂಬುದೂ ತಿಳಿದಿಲ್ಲ! ಅಸಲಿಯತ್ತು ಏನೆಂದರೆ ಹೆಡ್ಲಿಯ ಹೇಳಿಕೆಗಳೆಲ್ಲವೂ ಹೇಳಿಕೊಡಲಾಗಿರುವ ಹೇಳಿಕೆಗಳು. ಆತ ಹಿಂದೆ ಮಾಡಿರುವ ಹಾಗೆ ಈ ಬಾರಿಯೂ ಅದೇ ದೋಷಯುತ, ಅಸಂಗತ ಹೇಳಿಕೆಗಳನ್ನು ಪುನರಾವರ್ತಿಸಿದ್ದಾನೆ. ಆದರೆ ಈ ಬಾರಿಯ ಹೇಳಿಕೆಗಳಲ್ಲಿ ಇನ್ನಷ್ಟು ಅಸಂಗತತೆಗಳು ತುಂಬಿಕೊಂಡಿರುವುದನ್ನು ಕಾಣಬಹುದಾಗಿದೆ. ವಿಡಿ... ವಿಚಾರಣೆಯ ವೇಳೆ ಹೆಡ್ಲಿ ಅನೇಕ ಬಾರಿ ತನ್ನ ಲಾಯರುಗಳು ಕೊಟ್ಟಿದ್ದ ಟಿಪ್ಪಣಿಗಳನ್ನು ಓದುತ್ತಿದ್ದ ಮತ್ತು ಇತರ ಕಾಗದಪತ್ರಗಳನ್ನು ನೋಡುತ್ತಿದ್ದನಂತೆ. ಆತ ಕೆಲವೊಮ್ಮೆ ಪ್ರಶ್ನೆಗೆ ಉತ್ತರಿಸುವ ಮುನ್ನ ಧ್ವನಿವರ್ಧಕವನ್ನು ಮೂಕಗೊಳಿಸಿ ಲಾಯರುಗಳ ಸ... ಪಡೆಯುತ್ತಿದ್ದ ಎಂದು ಸ್ಥಳದಲ್ಲಿದ್ದ ಪತ್ರಕರ್ತರು ಹೇಳುತ್ತಾರೆ.

ಗುಪ್ತಚರ ಇಲಾಖೆಯ ಮಾಜಿ ಅಧಿಕಾರಿ ವ... ಬಾಲಚಂದ್ರನ್ ಅಭಿಪ್ರಾಯದಲ್ಲಿ "ಉಜ್ವಲ್ ನಿಕಮ್ ಹಾಕಿದ ಪ್ರಶ್ನೆಗೂ ಮುಂಬೈ ದಾಳಿಗೂ ಯಾವುದೇ ಸಂಬಂಧ ಇರಲಿಲ್ಲ. ಸಾಕ್ಷ್ಯಾಧಾರ ಕಾಯ್ದೆಯಡಿ ಸಾಕ್ಷಿ ಕೇವಲ ತನಗೆ ತಿಳಿದಿರುವ ವಿಚಾರಗಳನ್ನಷ್ಟೆ ಹೇಳಬಹುದು. ಆದರೆ ಇಲ್ಲಿ ಹೆಡ್ಲಿ ಬೇರೊಬ್ಬನನ್ನು ಉಲ್ಲೇಖಿಸುತ್ತಾನೆ. ಇದು ಕೇಳಿಕೆಯ ಸಾಕ್ಷ್ಯ (hearsay). ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ. ಹಾಗಾಗಿ ಮುಂಬೈ ದಾಳಿಯ ಮತ್ತೋರ್ವ ಪ್ರಮು... ಆರೋಪಿಯಾಗಿರುವ ಅಬು ಜುಂದಲ್ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಕೇಳದೆ 2004ರಲ್ಲಿ ನಡೆದ ಇಶ್ರತ್ ಜಹಾನ್ ಪ್ರಕರಣವನ್ನು 2008ರ ಈ ಪ್ರಕರಣಕ್ಕೆ ಎಳೆದು ತಂದಿರುವ ಉದ್ದೇಶ ಏನೆಂದು ಕೇಳಬೇಕಾಗಿದೆ. ಇಲ್ಲಿ ಯಾವ ರಾಜಕೀಯ ಹಿತಾಸಕ್ತಿಗಳು ಕೆಲಸ ಮಾಡಿವೆ ಎಂದು ಪ್ರಶ್ನಿಸಬೇಕಾಗಿದೆ. ಇಶ್ರತ್ ವಿರುದ್ಧ ಕಪೋಲಕಲ್ಪಿತ ಆರೋಪಗಳನ್ನು ಮಾಡಿರುವುದಕ್ಕೆ ಪ್ರತಿಫಲವಾಗಿ ಯಾವ ರೀತಿಯ ಒಳಒಪ್ಪಂದ ಆಗಿರಬಹುದು? ಇಶ್ರತ್ ಪ್ರಕರಣದ ಆರೋಪಪಟ್ಟಿಯಲ್ಲಿರುವ ಕರಿ ದಾಡಿ ಮತ್ತು ಬಿಳಿ ದಾಡಿಗಳು ಹೆಡ್ಲಿಗೆ ಏನೆಲ್ಲ ಭರವಸೆಗಳನ್ನು ಕೊಟ್ಟಿರಬಹುದು? 2015ರ ಡಿಸೆಂಬರ್‌ನಲ್ಲಿ ಹೆಡ್ಲಿಯ ಅಪರಾಧವನ್ನು ಮನ್ನಿಸಿರುವುದು ಇವುಗಳಲ್ಲೊಂದು ಆಗಿರಬಹುದೇ

ಈ ಸಂದರ್ಭದಲ್ಲಿ ಕೊಂಚ ಡೇವಿಡ್ ಹೆಡ್ಲಿಯ... ಹಿನ್ನೆಲೆ ಬಗ್ಗೆ ತಿಳಿಯುವುದೂ ಅತ್ಯಗತ್ಯವಾಗಿದೆ. ಆತ... ಅಂದು ಅಮೆರಿಕದ ಡ್ರಗ್ ಎನ್‌ಫೋರ್ಸ್‌ಮೆಂಟ್ ಇಲಾಖೆಯ ಮಾಹಿತಿದಾರನಾಗಿದ್ದ. ಅಂದು ಅದೇ ಗುರುತನ್ನು ಬಳಸಿಕೊಂಡು ಭಾರತಕ್ಕೆ ಹಲವು ಬಾರಿ ಭೇಟಿ ನೀಡಿ ದಾಳಿಯ ಗುರಿಗಳನ್ನು ಗುರುತಿಸಿದ್ದ; ಉಗ್ರರ ಆಗಮನ ಮತ್ತು ನಿರ್ಗಮನದ ಮಾರ್ಗಗಳ... ನಿರ್ಧರಿಸಿದ್ದ. ಮುಂಬೈ ದಾಳಿಯ ನಂತರ 2009ರ... ಆತ ಭಾರತಕ್ಕೆ ಬಂದಿರುವ ವಿಷಯವನ್ನು ಅಮೆರಿಕ... ಭಾರತಕ್ಕೆ ತಿಳಿಸಿಯೆ ಇಲ್ಲ! ಆತನಿಗೆ ಪಾಕಿಸ್ತಾನಿ ಸೈನ್ಯ... ಜೊತೆ ಇದ್ದ ಸಂಬಂಧಗಳ ಬಗ್ಗೆಯೂ ಯಾವುದೇ ತನಿಖೆಯನ್ನೂ ಮಾಡಿಲ್ಲ! ಇತ್ತ ಭಾರತವೂ ಹೆಡ್ಲಿಯನ್ನು ಭಾರತೀಯ ನ್ಯಾಯಾಲಯಗಳ ವಿಚಾರಣೆಗೊಪ್ಪಿಸಲು ಎರಡು ವರ್ಷ ತಡಮಾಡಿರುವ... ಅಮೆರಿಕದ ನಡೆಯನ್ನು ಪ್ರಶ್ನಿಸುವ ಗೋಜಿಗೆ ಹೋಗಿಲ್ಲ! ಇದರ ಜೊತೆಗೆ ಆತನನ್ನು ಭಾರತಕ್ಕೆ ಹಸ್ತಾಂತರಿಸುವ ಸಾಧ್ಯತೆಗಳನ್ನು ಕೂಡ ಬಿಟ್ಟುಕೊಡಲಾಗಿದೆ. ಇವೆಲ್ಲವನ್ನು ನೋಡಿದಾಗ ಕೆಲವೊಂದು ಪ್ರಶ್ನೆಗಳು ಉದ್ಭವಿಸುತ್ತವೆ. ಹಾಗಾದರೆ ಡೇವಿಡ್ ಹೆಡ್ಲಿ ಮಾಹಿತಿದಾರನಿಗೂ ಮಿಗಿಲಾಗಿ ಓ... ಸಿಐಎ ಏಜೆಂಟ್ ಆಗಿದ್ದನೇ? ಮುಂಬೈ ದಾಳಿ ಸಿಐ... ಮತ್ತು ಐಎಸ್‌ಐಗಳ ಜಂಟಿ ಕಾರ್ಯಾಚರಣೆ ಆಗಿತ್ತೇ... ಇದರ ಹಿಂದೆ ವಿಶ್ವಾದ್ಯಂತ ಅಲ್ಲಲ್ಲಿ ನಿರಂತರ ಸಶಸ್ತ್ರ ಸಂಘರ್ಷಗಳು ನಡೆಯುತ್ತಲೇ ಇರಬೇಕೆಂದು ಬಯಸು... ಅಮೆರಿಕದ ಯುದ್ಧೋಪಕರಣ ಉದ್ದಿಮೆಯ ಕೈವಾಡ... ಇರಬಹುದೇ?

ಬೂಸಿ ಬಸ್ಯ... ಮೋದಿ






ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ಕರುಣಾಳು ಬಾ ಬೆಳಕೇ



ದೇವರು, ವರ, ಶಾಪ ಇತ್ಯಾದಿಗಳೆಲ್ಲವೂ ಬಹಳ ಕ್ಷ್ಮವಾಗಿರುವಂತಹ ವಿಷಯಗಳಲ್ಲದೇ ಸರಳ ಮತ್ತು ದು ಮನಸ್ಥಿತಿಗಳಿಗೆ ಅನಿವಾರ್ಯ ಆಸರೆಯೂ ಆಗಿರು ತೆ. ಇಲ್ಲಿ ದುರ್ಬಲ ಎಂಬ ಶಬ್ದವನ್ನು ಬಳಸಿ ನಮ್ಮ ರ್ವಜರಿಂದ ಹಿಡಿದು, ಈಗಿನ ಸಹಜೀವಿ ಆಸ್ತಿಕರ ನಸ್ಥಿತಿಯನ್ನು, ಅವರ ಮನಸ್ಸನ್ನು, ಮಗುವಿನಂತಹ ನಸ್ಸನ್ನು ಅಪಮಾನಿಸಲಾಗದು. ಕುವೆಂಪು, ಎಸ್.ಮೂರ್ತಿರಾವ್, ಶಿವರಾಮ ಕಾರಂತರನ್ನು ಓದಿರದ, ಲೀಲ್, ಚಾಮ್‌ಸ್ಕಿ ಉಮರ್ ಖಯ್ಯಾಮ್, ಅಬ್ರಾಹಂ ೋವೂರ್, ಕೋಸಂಬಿ, ದೇಬೀಪ್ರಸಾದ್ ಚಟ್ಟೋಪಧ್ಯಾಯ ತ್ತು ತಾಪಿ ಧರ್ಮರಾವ್; ಇವರುಗಳೆಲ್ಲಾ ತಿಳಿಯದ ವರಿಗೆ ದೇವರು ಗೊತ್ತು, ಆದರೆ ಅವನ ಪೂರ್ವೇತಿಹಾಸ ೇನೂ ತಿಳಿದಿರುವುದಿಲ್ಲ, ತಿಳಿಯುವುದೂ ಬೇಕಿಲ್ಲ.

ದೇವರಿಲ್ಲದೇ ನಾವೆಲ್ಲಿ?

ಇತ್ತೀಚೆಗೆ ಪೌರಕಾರ್ಮಿಕರ ಸಭೆಯೊಂದಕ್ಕೆ ಭಾಷಣ ಾಡಲು ನನ್ನನ್ನು ಕರೆದಿದ್ದರು. ನನ್ನೊಂದಿಗೆ ವೇದಿಕೆ ಂಚಿಕೊಂಡಿದ್ದವರಲ್ಲಿ ಕಟ್ಟರ್ ಪೆರಿಯಾರ್ ನುಯಾಯಿಗಳೂ ಇದ್ದರು. ಅವರು ರಾಮ, ಕೃಷ್ಣ ಮತ್ತು ತರ ಬ್ರಾಹ್ಮಣೀಕೃತ ದೇವರುಗಳನ್ನು, ದೇವರ ಹೆಸರುಗಳಲ್ಲಿ ಚರಿಸುವ ಕಂದಾಚಾರಗಳನ್ನು ಸಾರಾಸಗಟಾಗಿ ಬೈದು, ಜನರು ಅವರಿಗೆ (ಅರ್ಚಕರಿಗೆ) ಹೆದರಿಕೊಂಡು ಬರಿದೇ ಣ ಹಾಳು ಮಾಡಿಕೊಳ್ಳುತ್ತಾರೆ. ನೀವು ಸ್ವಲ್ಪ ಹೇಳಿ ೇಷ್ಟ್ರೇ ಎಂದೇ ನನಗೆ ಹೇಳಿದರು. ಆ ಸಭೆಯಲ್ಲಿ ಹುಪಾಲು ಮಂದಿ ಮಹಿಳೆಯರೇ ಇದ್ದರು. ಅವರೆಷ್ಟು ುಗ್ಧರು ಮತ್ತು ಸರಳರು ಎಂದರೆ ಈತ ಯಾರೋ ೋಗೇಶ್ ಮಾಸ್ಟರ್ ಎಂಬ ಲೇಖಕ ನಮ್ಮನ್ನುದ್ದೇಶಿಸಿ ಾತಾಡಲು ಬಂದಿರುವನು ಎಂಬುದಾಗಲಿ, ನನ್ನ ಮೊದಲು ಾತಾಡಿದ ವ್ಯಕ್ತಿಗಳು ಪೆರಿಯಾರ್ ಎಂಬ ವಿಚಾರವಾದಿಯ ರಿತಾಗಲಿ ಮಾತಾಡಿದರು ಎಂದಾಗಲಿ, ಅಷ್ಟೆಲ್ಲಾ ಇರಲಿ, ಾವೊಂದು ಸಭೆಯಲ್ಲಿ ಕುಳಿತುಕೊಂಡಿದ್ದೇವೆ, ಇಷ್ಟವಿರಲಿ ಲ್ಲದಿರಲಿ, ಸಭಾ ಮರ್ಯಾದೆಯಂತೆ ಗಂಭೀರವಾಗಿ ಳಿತುಕೊಂಡು ಒಂದು ಬಗೆಯ ಪಾಂಡಿತ್ಯದ ತಲೆದೂಗು ಕೆಯನ್ನು ಆಗಾಗ ಆದರೂ ಪ್ರದರ್ಶಿಸಬೇಕೆಂದಾಗಲಿ ಂಡಿತ ತಿಳಿದಿರಲಿಲ್ಲ, ಅವರವರಲ್ಲಿ ವೀಳ್ಯದೆಲೆ, ಅಡಿಕೆ, ಣ್ಣವನ್ನು ಕೊಟ್ಟುಕೊಳ್ಳುತ್ತಿದ್ದರು. ಕಾಫಿ ಬಂದಾಗ ಅದನ್ನು ಡಿದು ಸೊರ್ರ್ ಎಂದು ಹೀರಿದರು. ಯಾರೋ ಒಬ್ಬರಿಗೆ ನೋ ಹೇಳಬೇಕೆಂದು ಅನ್ನಿಸಿದಾಗ ಯಾವ ುಲಾಜೂ ಇಲ್ಲದೇ ಎದ್ದು ಹೋಗಿ ೇಳುತ್ತಿದ್ದರು. ಅವರ ವಿಷಯಗಳಲ್ಲಿ ಕೆಲಸ ಾಡುವವರು ವೇದಿಕೆಯ ಮೇಲಿಂದಲೇ ದರಿಸಿ ಕೂರಿಸುತ್ತಿದ್ದರು. ಬೆಳಗಿನಿಂದ ಕೆಲಸ ಾಡಿ ದಣಿದಿದ್ದ ಅವರಲ್ಲಿ ಅನೇಕರು ೊಡ್ಡದಾಗಿ ಗೊರಕೆ ಹೊಡೆಯುತ್ತಲೇ ನಿದ್ರೆ ೋಗುತ್ತಿದ್ದರು. ಇವರಿಗೆ ಮೇಷ್ಟ್ರು ಏನೋ ೇಳ್ತಾರೆ ಕೇಳಿ ಎಂದು ವೇದಿಕೆಯ ೀಲಿದ್ದವರು ಬೈದು ಎಬ್ಬಿಸಿದರು.



ಇವರಿಗೆ ಹೇಳುವುದಾದರೂ ಏನು? ಾಗೂ ಯಾಕಾದರೂ ಹೇಳಬೇಕು? ಆಸೆಯೇ ದುಃಖಕ್ಕೆ ಕಾರಣ; ಆಸೆಯನ್ನು ಬಿಟ್ಟು ಂಪೂರ್ಣವಾಗಿ ಎಲ್ಲಾ ಮನೋಬಂಧನಗಳಿಂದ ಮುಕ್ತರಾಗಿ ಂದು ಹೇಗೆ ಹೇಳಲು ಸಾಧ್ಯ? ಭಯವೇ ನಿಮ್ಮ ೌರ್ಬಲ್ಯ, ಅದನ್ನು ಕಿತ್ತೊಗೆಯಿರಿ, ಸ್ವತಂತ್ರ ವಿಚಾರಗಳಿಂದ ಭಿವ್ಯಕ್ತಿಸಿ ಪುರೋಹಿತಶಾಹಿ ವರ್ಗವನ್ನು ಧಿಕ್ಕರಿಸಿ ಎಂದು ೇಳಿದರೆ ಅದನ್ನು ಅವರು ಹೇಗೆ ಅರ್ಥ ಾಡಿಕೊಂಡಾರು? ಆದರೂ ಭಾಷಣವೆಂದಲ್ಲದೇ, ಅವರ ೊತೆಗೆ ಮಾತುಕತೆಗಿಳಿದೆ. ಕಂದಾಚಾರ, ಮೌಢ್ಯತೆಗಳಿಂದ ಾವು ಹೇಗೆ ಭಯದಲ್ಲಿ ಬದುಕುತ್ತೇವೆ ಎಂದು ಹೇಳಲು ್ರಯತ್ನ ಮಾಡಿದೆ. ಮಾತಿಗೆ ಮಾತು ಬಂದು ದೇವರನ್ನು ಿಟ್ಟುಬಿಡಿ ಎಂದೆ. ತಕ್ಷಣವೇ ಅಲ್ಲಿನ ತಾಯಂದಿರು, "ಹೋಗಿ ಸ್ವಾಮಿ, ದೇವರನ್ನು ಬಿಟ್ಟು ನಾವೆಂಗೆ ಇರಕ್ಕಾಗತ್ತೆ?" ಎಂದರು. ದೇವರಿಗೆ ಒಂದೇ ಒಂದು ತಿಂಗಳು ರಜೆ ೊಟ್ಟು ಬರೀ ನಮ್ಮಷ್ಟಕ್ಕೆ ನಾವು ನಮ್ಮ ಬದುಕು ಾಡಿಕೊಂಡು ನೋಡುವ ಒಂದು ಪ್ರಯೋಗ ಮಾಡಲು ೇಳಿದೆ. ಅದಕ್ಕೆ ಓರ್ವ ಮಹಿಳೆ ಹೇಳಿದ್ದೇನೆಂದರೆ, "ದೇವರಿಗೆ ಒಂದು ತಿಂಗಳು ರಜೆ ಕೊಟ್ಟರೆ, ಜನ್ಮ ಪೂರ್ತಿ ದಕ್ಕೋಷ್ಟು ಪಾಪ ಕರ್ಮ ಮಾಡಿಬಿಡ್ತೇವೆ" ಎಂದು. ಅಲ್ಲದೇ ನಂತರ ನಡೆದ ಸಂವಾದದಲ್ಲಿ ತಿಳಿದಿದ್ದೇನೆಂದರೆ, ದೇವರು ಎಲ್ಲಾ ಕಡೆ ಇರುವ ಸ್ವಾಮಿ. ಜಗತ್ತಿನ ಒಡೆಯ. ಅವನು ಎಲ್ಲಾ ನೋಡುತ್ತಿರುತ್ತಾನೆ. ತಪ್ಪು ಮಾಡಬಾರದು. ಒಳ್ಳೆಯದು ಮಾಡಬೇಕು. ಒಳ್ಳೆಯದು ಮಾಡಿದರೆ ನಮಗೆ ಒಳ್ಳೆಯದೇ ಆಗುತ್ತದೆ. ಕೆಟ್ಟದು ಮಾಡಿದರೆ ನಮಗೆ ಕೆಟ್ಟದ್ದು ಆಗುತ್ತದೆ. ಅವನ ಕಣ್ಣು ತಪ್ಪಿಸಿ ಏನೂ ಮಾಡಕ್ಕಾಗಲ್ಲ, ನಾವು ಏನು ಯೋಚನೆ ಮಾಡುತ್ತೇವೆಯೋ ಅದೂ ಕೂಡ ಅವನಿಗೆ ತಿಳಿಯುತ್ತದೆ. ನಮಗೆ ಕಷ್ಟ ಬಂದಾಗ, ಯಾರೂ ಕೈ ಹಿಡಿಯದೇ ಹೋದಾಗ ಈ ದೇವರು ಎಂಬುವನು ಕಾಪಾಡುತ್ತಾನೆ. ಅವನನ್ನು ನಂಬಿದರೆ ಎಂತದ್ದೇ ಸಂದರ್ಭದಲ್ಲಿ ಸ್ವಾಮೀ ಅಂದರೆ ಕಾಪಾಡುತ್ತಾನೆ. ಯಾಕೆಂದರೆ ಅವನು ಸರ್ವಶಕ್ತ.

ತನ್ನ ಬಡತನದ ಮನೆಯಲ್ಲಿ ಆರ್ಥಿಕತೆಯ ಸದೃಢತೆಯನ್ನು ಮುಂಗಾಣುವ ತಾಯಿಯ ಹಂಬಲವನ್ನು ಆಸೆ ಪಡಬಾರದಮ್ಮಾ ಎಂದು ಹೇಗೆ ಹೇಳಲಿ? ತಾವು ಇತರರಿಗೆ ಕೆಟ್ಟದು ಮಾಡಿದರೆ, ನಮಗೂ ಕೆಟ್ಟದ್ದಾಗುತ್ತದೆ ಎಂಬ ಭಯವಿದ್ದು, ತನ್ನನ್ನು ತಾನು ನೈತಿಕ ಚೌಕಟ್ಟಿಗೆ ಒಳಪಡಿಸಿಕೊಳ್ಳುವ ಅವರ ಬದ್ಧತೆಯನ್ನು ಒಡೆಯಲು ಹೇಗೆ ಸಾಧ್ಯ? ಸಹಜವಾಗಿರುವ, ಜೀವಿಸಲು, ಬದುಕಲು ಅಗತ್ಯವಾಗಿರುವ ಆಸೆಗಳನ್ನಾಗಲಿ, ಭಯದ ರೂಪದಲ್ಲಿರುವ ತನ್ನವರ ಮೇಲೆ ಇರುವಂತಹ ಕಾಳಜಿಗಳನ್ನಾಗಲಿ ಖಂಡಿಸಲು ಹೇಗಾಗುವುದು?

ಮಗುವಿನಂತಹ ಮನುಷ್ಯರು

ಹರ್ಮನ್ ಹೆಸ್ ತನ್ನ 'ಸಿದ್ಧಾರ್ಥ' ಕಾದಂಬರಿಯಲ್ಲಿ ಮಗುವಿನಂತಹ ಮನುಷ್ಯರು ಎಂದು ಕರೆಯುವುದು ಇವರನ್ನೇ. ಇವರು ಯಾವ ಪಾಂಡಿತ್ಯದ ಭಾರಗಳಿಲ್ಲದೇ, ಪ್ರಕೃತಿಯಲ್ಲಿ ಸಹಜವಾಗಿರುವಂತಹ ವಿದ್ಯಮಾನಗಳಿಗೆ ಸ್ಪಂದಿಸುತ್ತಾ ತಮ್ಮ ಅನುಭವ ಮತ್ತು ನೋವುನಲಿವುಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುತ್ತಾ ಇರುವಂತಹ ಸರಳ ಜೀವಿಗಳು: ಬುದ್ಧನನ್ನೇ ಪ್ರಶ್ನಿಸಿ, ಅವನನ್ನು ನಿರಾಕರಿಸಿ ತಾನೇ ತನ್ನ ವೈಚಾರಿಕತೆ ಮತ್ತು ಅಸ್ತಿತ್ವದ ಕುರುಹುಗಳನ್ನು ಗುರುತಿಸಿಕೊಂಡು ಹೋಗುವಂತಹ ಸಿದ್ಧಾರ್ಥನು ಇಂಥಾ ಜನರನ್ನು ಮೊದಲು ಮೂರ್ಖರು ಎಂದು ತಿಳಿದು ಕೊಂಡಿರುತ್ತಾನೆ. ಆದರೆ ನಂತರ ಅವನಿಗೇ ಅರಿವಾಗುತ್ತದೆ ಅವರು ಮೂರ್ಖರಲ್ಲ ಮುಗ್ಧರು ಎಂದು. ಮಗುವಿನಂತಹ ಮನುಷ್ಯರು ಎಂದು ತನ್ನ ಸಹಜ ಮಮತೆಯನ್ನು ಅವರ ಕುರಿತಾಗಿ ಹೊಂದುತ್ತಾನೆ. ಹಾಗೆಯೇ ಅವರಿಗಿರುವ ಸರಳತೆ ತನಗಿಲ್ಲದಿರುವೆ ಕಾರಣವೇ ತಾನು ಸಹಜಾನಂದದಿಂದ ವಂಚಿತನಾಗಿದ್ದೇನೆ ಎಂದೂ ಅರಿಯುತ್ತಾನೆ. ನೈಸರ್ಗಿಕವಾಗಿ ಘಟಿಸುವುದೆಲ್ಲಾ ಘಟಿಸಲೇ ಬೇಕು. ಸಹಜವಾಗಿ ಬರುವಂತ ಹದ್ದು ಬರಲೇ ಬೇಕು. ಬ್ರಹ್ಮಜ್ಞಾನಿ ಎಂದು ಆಧರಿಸಿಕೊಳ್ಳಲ್ಪಡುವ ಪಂಡಿತನಿಗೆ ಹಸಿವು ನೀರಡಿಕೆಗಳಾಗದೇ? ಮಲಮೂತ್ರ ವಿಸರ್ಜನೆ ಗಳಾಗದೇ? ಸ್ವಾಮಿ ವಿವೇಕಾನಂದರನ್ನು 'ಹೀ-ಮ್ಯಾನ್' ಎಂದು ಪ್ರೊಜೆಕ್ಟ್ ಮಾಡಿದ್ದರ ಪ್ರತಿಫಲವೇ ಈಗಲೂ ಬಹಳಷ್ಟು ಯುವಕರು, ವಿವೇಕಾನಂದರಂತಹ ಅಖಂಡ ಬ್ರಹ್ಮಚಾರಿಯ ವೀರ್ಯ ನೆತ್ತಿಗೇರಿ ಪ್ರಾಣಬಿಟ್ಟ ಕಥೆಯನ್ನು ಮಾತಾಡಿಕೊಳ್ಳುತ್ತಿರುವುದು.

ಜಪಾನಿನಲ್ಲಿ ಜೈನ್ ಗುರುವೊಬ್ಬ ತೀರಿಕೊಂಡಾಗ, ಅವರಿಗೆ ಜ್ಞಾನೋದಯವಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾಗ ಶಿಷ್ಯನೊಬ್ಬ ಬಿಕ್ಕಿಬಿಕ್ಕಿ ಮಗುವಿನಂತೆ ಅಳುತ್ತಿದ್ದನಂತೆ. ಆಗ ಆತನ ಸನಿಹದವರು, "ನೀನೊಬ್ಬ ಪರಮ ಜ್ಞಾನಿ. ಸಾಮಾನ್ಯರಿಗೆ ನಿಲುಕದ ಜ್ಞಾನೋದಯವಾಗಿರುವಂತವನು. ನೀನು ಹೀಗೆ ಅತ್ತರೆ ನಿನ್ನ ಪ್ರಬುದ್ಧತೆ ಬಗ್ಗೆ ಹಾಗೂ ನಿನ್ನ ಬುದ್ಧತ್ವದ ಬಗ್ಗೆ ಇತರರಿಗೆ ಅನುಮಾನ ಬರುತ್ತದೆ" ಎಂದು ಹೇಳಿದರಂತೆ. ಆಗ ಆ ಶಿಷ್ಯ "ನನ್ನಲ್ಲಿ ನಿಜವಾಗಿ ಬರುತ್ತಿರುವ ಅಳುವನ್ನು, ನನ್ನ ಪ್ರೀತಿಯ ಗುರುವಿಯ ಮರಣದಿಂದ ತಾನಾಗಿ ಉಂಟಾಗಿರುವ ಈ ದುಃಖವನ್ನು ಜ್ಞಾನೋದಯದ ಪ್ರಬುದ್ಧತೆಯಿಂದ ತಡೆಯಬೇಕಾಗುತ್ತದೆ ಎಂದರೆ, ನಾನು ಈ ಜ್ಞಾನೋದಯ ಎಂಬುದನ್ನು ಬಿಟ್ಟುಬಿಡುತ್ತೇನೆ" ಎಂದನಂತೆ.


ಪೌರಕಾರ್ಮಿಕರ ಸಭೆಯಲ್ಲಿ ಆ ಮಹಿಳೆಯರೊಂದಿಗೆ ಮಾತಾಡುವಾಗ ಈ ಶಿಷ್ಯ ನೆನಪಿಗೆ ಬಂದ. ಅವರು ಸರಳವಾಗಿದ್ದಾರೆ, ಸಹಜವಾಗಿದ್ದಾರೆ. ಅವರ ಹಿನ್ನೆಲೆಗಳೇನೇ ಇರಲಿ, ತಮ್ಮ ಜೀವನ, ಕುಟುಂಬ, ಬದುಕು ಭವಿಷ್ಯಗಳ ನಿರ್ವಹಣೆಗೆ ತೋಚಿದ ರೀತಿಯಲ್ಲಿ ಆಲೋಚಿಸುತ್ತಾರೆ. ಕಣ್ಣಿಗೆಂದೂ ಕಾಣದ ಆದರೆ ನಮ್ಮನ್ನು ಕಾಪಾಡುವ ಎಂಬ ಭರವಸೆಯಿಂದ ಇಂದಿನ ಕಷ್ಟಗಳು ತಮ್ಮನ್ನು ಇಂದೇ ನುಂಗಿಹಾಕಿಕೊಳ್ಳಲು ಬಿಡದೇ, ಅವನ್ನು ನಾಳೆಯ ಹೊತ್ತಿಗೆ ಪರಿಹಾರವಾಗುವುದು ಎಂಬ ಭರವಸೆಯಿಂದ ಮುಂದೂಡುತ್ತಾರೆ. ಇಲ್ಲಿ ನಮಗೆ ಖಂಡಿಸಲು, ತಿರಸ್ಕರಿಸಲು ಬೇಕಾಗಿರುವುದು ಇಲ್ಲದ ದೇವರಲ್ಲ, ಮಾನ್ಯ ಮಾಡಬೇಕಾಗಿರುವುದು, ಒಪ್ಪಿಕೊಳ್ಳಬೇಕಾಗಿರುವುದು ಅವರ ಭರವಸೆ. ಆ ಭರವಸೆಗಳೇ ಅವರ ಬದುಕನ್ನು ಒಂದು ಹಂತಕ್ಕೆ ಕಾಪಾಡುತ್ತಿರುವುದು.

ಕೈ ಹಿಡಿದು ನಡೆಸೆನ್ನನು

ಕರುಣಾಳು ಬಾ ಬೆಳಕೇ,
ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು,
ಇರುಳು ಕತ್ತಲೆಯಾ ಗವಿ, ಮನೆ ದೂರ ಕನಿಕರಿಸಿ ಕೈಹಿಡಿದು ನಡೆಸೆನ್ನನು

ಎಂದು ಕತ್ತಲಿನಲ್ಲಿಯೇ ನಿಲ್ಲದೇ ಬದುಕ ಪಯಣವನ್ನು ಮುಂದುವರಿಸುವುದು.

ಹಾಗಾದರೆ ನಿಮ್ಮ ನಾಸ್ತಿಕವಾದವನ್ನು ಏಕೆ ಬರೆಯುತ್ತೀರಿ? ದೇವರನ್ನು, ಧರ್ಮವನ್ನು ಏಕೆ ಖಂಡಿಸುತ್ತೀರಿ? ಪೌರಾಣಿಕ ದೇವರುಗಳನ್ನೆಲ್ಲಾ ಏಕೆ ಅವಹೇಳನ



ಮಾಡುತ್ತೀರಿ? ಎಂದು ಸಹಜವಾಗಿ ಕೇಳಬಹುದು.

ಅದಕ್ಕೆ ಸ್ಪಷ್ಟ ಉತ್ತರವೇನೆಂದರೆ ನನ್ನನ್ನೂ ಸೇರಿದಂತೆ ಬಹುಪಾಲು ಪ್ರಗತಿಪರರ ನಿಲುವು ಮತ್ತು ಒಲವುಗಳು ನಾಸ್ತಿಕವಾದದ ಮಂಡನೆಯೇನಲ್ಲ. ಆದರೆ ದೇವರು, ಶಾಪ, ವರ, ಅನುಗ್ರಹದಂತಹ ಮನುಷ್ಯನ, ಮಗುವಿನಂತಹ ಮನುಷ್ಯರ ಸೂಕ್ಷ್ಮ ಮನೋಭಾವಗಳ ಜೊತೆ ಧಾರ್ಮಿಕ ಮುಖಂಡರು, ಜ್ಯೋತಿಷಿಗಳು, ಧರ್ಮವನ್ನು ರಾಜಕೀಯಗೊಳಿಸಿ ಸಮಾಜದಲ್ಲಿ ದ್ವೇಷಭಾವನೆಗಳನ್ನು ಹುಟ್ಟು ಹಾಕುವ ಕೆಲವು ಪಟ್ಟಭದ್ರ ಹಿತಾಸಕ್ತರು ಮಾಡುವ ಶೋಷಣೆಗಳ ವಿರುದ್ಧ ವೈಚಾರಿಕ ದನಿಯನ್ನು ಎತ್ತುವುದು.

ಪುರಾಣಗಳನ್ನೇ ಆಗಲಿ, ಇನ್ನಿತರ ಧಾರ್ಮಿಕಾಚರಣೆಗಳನ್ನೇ ಆಗಲಿ ತಮ್ಮದೇ ರೀತಿಯಲ್ಲಿ ಅಪವ್ಯಾಖ್ಯಾನಗೊಳಿಸುತ್ತಾ ಜನರು ಎಂದಿಗೂ ವೈಚಾರಿಕವಾಗಿ, ವೈಜ್ಞಾನಿಕವಾಗಿ ವಿಕಾಸವಾಗದಂತೆ ತಡೆಯುತ್ತಾ ತಮ್ಮ ಅಡಿಯಾಳಾಗಿರುವಂತೆ ನೋಡಿಕೊಳ್ಳುತ್ತಲೇ ಇರುವ ವರ್ಗಗಳ ಜೀವವಿರೋಧಿ ವಿಚಾರಗಳನ್ನು, ಅಸಂವಿಧಾನಾತ್ಮಕ ನಡವಳಿಕೆಗಳನ್ನು, ಸಮಾಜದ ಕೂಡು ಜೀವನವನ್ನು ಛಿದ್ರಗೊಳಿಸುವ ಮನೋಭಾವನೆಗಳನ್ನು ಖಂಡಿಸುವುದು.

ಕರುಣಾಳು ಬಾ ಬೆಳಕೇ ಎಂದು ಪ್ರಾರ್ಥಿಸುತ್ತಾ ಬದುಕು ಸಾಗಿಸುವ ಮಗುವಿನಂತಹ ಮನುಷ್ಯರಿಗೆ ನಮ್ಮ ಲೇಖನಗಳಿಂದ ಮತ್ತು ವಿಚಾರಗಳಿಂದ ಏನೂ ಆಗುವುದಿಲ್ಲ, ನಮ್ಮಿಂದ ಅವರ ಶ್ರದ್ಧಾನಂಬಿಕೆ ಘಾಸಿಯಾಗುವುದೋ, ಅಥವಾ ಅವರು ಕೆರಳುವುದೋ ಇರಲಿ, ಅವರಿಗೆ ತಿಳಿಯುವುದೂ ಇಲ್ಲ, ಅವರ್ಯಾರೂ ಕತ್ತಿ, ದೊಣ್ಣೆ ಮತ್ತು ಬಂದೂಕುಗಳನ್ನು ಹಿಡಿದು ಬರುವುದಿಲ್ಲ.

ದೇವರು ಸರ್ವಶಕ್ತ ಎನ್ನುತ್ತಾ ದೇವರ ಪರವಾಗಿ ಮಾತಾಡುತ್ತಾ, ಆತನ ಮಾನ ಮತ್ತು ಪಾವಿತ್ರ್ಯತೆಗಳನ್ನು ರಕ್ಷಿಸಲು ಯತ್ನಿಸುವ ಡಾಂಭಿಕ ಧರ್ಮರಕ್ಷಕರಿಗೆ ನಮ್ಮ ಲೇಖನಗಳು, ಪುಸ್ತಕಗಳು, ವಿಚಾರಗಳು ಸಮಸ್ಯೆ. ಅವರ ಸುಳ್ಳುಗಳನ್ನು ಪ್ರಶ್ನಿಸುವಂತಹ ವಿಚಾರಗಳನ್ನು ಜನರಿಗೆ ತರುವ ಮೂಲಕ ಅವರು ಬಯಲಾಗಿಬಿಡುತ್ತಾರೆ ಎಂಬ ಭಯವೇ ಅವರದ್ದು, ಆ ಭಯದಿಂದಲೇ ಅವರು ಹುಚ್ಚು ಹಿಡಿದ ರೀತಿಯಲ್ಲಿ ವರ್ತಿಸುತ್ತಾರೆ.

ಗಂಡು ಹೆಣ್ಣಿನ ಸಂಬಂಧವು ಸ್ವೇಚ್ಛೆಗಿಳಿದು ಸಂಬಂಧಗಳು ಸಿಕ್ಕಾಗಿ, ಕುಟುಂಬ ಮತ್ತು ಸ್ನೇಹ ಪರಿಸರಗಳು ಪತನವಾಗದಿರಲೆಂದೇ ಪ್ರಕೃತಿ ಧರ್ಮವೇನೂ ಅಲ್ಲದ ಮದುವೆ ಎಂಬ ನೈತಿಕ ಚೌಕಟ್ಟನ್ನು ಹಾಕಿಕೊಂಡಂತೆ, ಮನುಷ್ಯ ತನ್ನ ಆಸೆ ಮತ್ತು ಅಹಂಕಾರಗಳಿಂದ ಹುಚ್ಚೆದ್ದು ಯಾರೂ ಯಾರನ್ನೂ ಘಾಸಿಗೊಳಿಸದಿರಲು, ತನ್ನ ಶಕ್ತಿಯನ್ನು ವಿನಯಗೊಳಿಸಿಕೊಂಡು ಪೆಡಂಗೊಳಿಸಿಕೊಳ್ಳುವ ಅಂತಃಕರಣಕ್ಕೆ ಬದ್ಧವಾಗಿರಲು ಮಾನವಾತೀತವಾದ ದೇವರ ಪರಿಕಲ್ಪನೆಯನ್ನು ಹಿರಿಯ ತಲೆಮಾರಿನವರು ನೈತಿಕ ಚೌಕಟ್ಟಿನ ಅನಿವಾರ್ಯತೆಗಾಗಿಯೇ ಕಟ್ಟಿಕೊಟ್ಟಿದ್ದರು. ವಿಪರ್ಯಾಸವೆಂದರೆ, ನೈತಿಕ ಚೌಕಟ್ಟನ್ನು ಮುರಿಯುವುದಕ್ಕಾಗಿಯೇ ದೇವರು ಮತ್ತು ಧರ್ಮವನ್ನು ಬಳಸುವ ಮತಾಂಧ, ಶ್ರೇಷ್ಠತೆಯ ಗೀಳಿನ ಜನಾಂಗೀಯ ಧೋರಣೆಯ ಮತ್ತು ಸ್ವಾರ್ಥಿ ಜನರು ಬಳಸಿಕೊಳ್ಳುತ್ತಿದ್ದಾರೆ. ಇಂಥವರ ವಿರುದ್ಧವಾಗಿ, ಅವರ ಮೊಂಡುತನದ, ಅವೈಚಾರಿಕ ನಿಲುವಿನ ಧೋರಣೆಗಳನ್ನು ಖಂಡಿಸುವುದಕ್ಕಾಗಿ ಎತ್ತುವ ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವದ ದನಿಗಳು ನಮ್ಮದಾಗಿರುವವೇ ಹೊರತು, ಇಲ್ಲದ ದೇವರ ಪರಿಕಲ್ಪನೆಗಳ ಜೊತೆಗೆ ಗುದ್ದಾಡಿ ಫಲವೇನು?


ಮಾಧ್ಯಮದವರು ಸೇತುವೆಗಳೋ ಕಂದಕಗಳೋ

ನಮ್ಮಂತವರ ಬರಹಗಳಲ್ಲಿನ ಧೋರಣೆ ಮತ್ತು ನಿಲುವುಗಳನ್ನು, ವಿಚಾರ ಮತ್ತು ರೂಪಕಗಳನ್ನು, ಆಶಯ ಮತ್ತು ಉದ್ದೇಶಗಳನ್ನು ಸಾಮಾನ್ಯ ಜನರು ಅರ್ಥ ಮಾಡಿಕೊಳ್ಳದೇ ಇದ್ದಾಗ ಅಥವಾ ಅವುಗಳನ್ನು ತಪ್ಪಾಗಿ ಅರ್ಥೈಸಿಕೊಂಡು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದಾಗ ಅವುಗಳನ್ನು ಸರಳಗೊಳಿಸಿ ವಸ್ತುಸ್ಥಿತಿಯನ್ನು ತಿಳಿಸಬೇಕಾದವರು ಪತ್ರಿಕೆ ಅಥವಾ ಯಾವುದೇ ಸುದ್ದಿ ಮಾಧ್ಯಮದವರು. ಏಕೆಂದರೆ ಅವರು ಸಾಮಾನ್ಯ ಜನರಿಗಿಂತ ಅಧ್ಯಯನವನ್ನು ಹೊಂದಿರುವವರೂ, ಒಂದು ಹಂತಕ್ಕೆ ಬೌದ್ಧಿಕವಾಗಿ ಉನ್ನತ ಮಟ್ಟದಲ್ಲಿರುವವರು ಹಾಗೂ ವೈಚಾರಿಕವಾಗಿ ವಿಷಯಗಳನ್ನು ಅರ್ಥೈಸಿಕೊಳ್ಳುವ, ವಿಶ್ಲೇಷಿಸುವ ಸಾಮರ್ಥ್ಯವುಳ್ಳವರು ಆಗಿರಬೇಕಾಗಿರುವಂತವರು. ಆದರೆ, ಪುರಾಣಗಳ ಒಗಟುಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ವಿಶ್ಲೇಷಿಸುವಂತಹ ಲೇಖನಗಳು (ಇದೇ ಪುರಾಣದ ಹೂರಣ ಅಂಕಣಗಳ ಆಯ್ದ ಲೇಖನಗಳು) ಒಂದು ಸಣ್ಣ ಪುಸ್ತಕವಾಗಿ ಬಂದಾಗ, ಉದಯವಾಣಿಯಂತಹ ಕೆಲವು ಪತ್ರಿಕೆಗಳು ಕೋಮುವಾದಿಗಳ ಮುಖವಾಣಿಗಳಂತೆ ವರ್ತಿಸುತ್ತಾ, ಸುಮ್ಮನಿರುವ ಜನರನ್ನು ಕೆರಳಿಸುವಂತ ಆಯ್ದ ಸಾಲುಗಳನ್ನು ಮಾತ್ರ ಉಲ್ಲೇಖಿಸುತ್ತಾ, ಉಳಿದಂತೆ ವಿಚಾರ, ವಿಶ್ಲೇಷಣೆ ಮತ್ತು ಅಧ್ಯಯನದ ಉಲ್ಲೇಖಗಳನ್ನು ಕೊಂಚವೂ ಗಮನಿಸದೇ ಕೆರಳಿಸುವುದನ್ನು ನೋಡಿದರೆ, ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯ ಹಾಳು ಮಾಡುವ ಗಂಭೀರವಾದ ಆರೋಪವನ್ನು ಮಾಡಬೇಕಾಗುತ್ತದೆ ಹಾಗೂ ಅಂತಹ ಪತ್ರಿಕೆಯವರ ಉದ್ದೇಶವು ಸಮಾಜವನ್ನು ವಿಚಾರವಂತರನ್ನಾಗಿ ಮಾಡದಿರದೇ ಮೌಢ್ಯಕ್ಕೆ ತಳ್ಳುವುದೂ ಹಾಗೂ ಚಿಂತಕರ ವಿರುದ್ಧ ಜನರನ್ನು ಎತ್ತಿಕಟ್ಟಿ ವೈಚಾರಿಕ ಪರಂಪರೆಯನ್ನು, ವೈಜ್ಞಾನಿಕ ಮನೋಭಾವದ ಅಳವಡಿಕೆಯನ್ನು ಪ್ರೋತ್ಸಾಹಿಸದೇ ಇರುವುದಾಗಿ ತೋರುತ್ತದೆ. ಇಂಥಾ ಮನೋಧರ್ಮದವರಿಗೆ "ಕರುಣಾಳು ಬಾ ಬೆಳಕೇ ಮುಸುಕಿದೀ ಮಬ್ಬಿನಲಿ" ಎಂದು ಮೊರೆಯಿಡುತ್ತಿರುವ ಮಗುವಿನಂತಹ ಮನುಷ್ಯರ ದುಃಖದುಮ್ಮಾನಗಳು ತಿಳಿಯುವುದಿಲ್ಲ, ಸದಾಶಯದ ವಿಷಯವನ್ನು ನಕಾರಾತ್ಮಕವಾಗಿ ಪ್ರದರ್ಶಿಸುತ್ತಾ ಜನರು ಮತ್ತು ಲೇಖಕರ ಮಧ್ಯೆ ಕಂದಕಗಳನ್ನು ಉಂಟುಮಾಡುವ ವಿಕೃತ ಆನಂದವನ್ನು ಪಡೆಯುವ ಇವರಿಗೆ ಮಹಾವೀರನ "ಬಾಳು, ಬಾಳಗೊಡು" ಎಂಬ ಮಾತು ಅರ್ಥವಾಗುವುದಿರಲಿ, ಹಾಗೊಂದು ಮಾತಿದೆ ಎಂದೂ ತಿಳಿದಿಲ್ಲ, ಲೇಖಕರು, ಚಿಂತಕರು, ಪ್ರಗತಿಪರರು; ಇಂಥವರ ಮತ್ತು ಸಾಮಾನ್ಯ ಜನರ ನಡುವೆ ಸೇತುವೆಗಳಾಗಬೇಕಿರುವ ಮಾಧ್ಯಮದವರು ಕಂದಕಗಳಾಗುತ್ತಿರುವುದು ಈ ನಮ್ಮ ಯುಗದ ದುರಂತ.

ಜೈನ ತೀರ್ಥಂಕರ ಪರಂಪರೆಯ ಮಹಾವೀರನ ಮಹಾವಾಕ್ಯವೇ ಜೀವಪರ ಮತ್ತು ಸಮಾಜಮುಖಿ. ನೀನೂ ಬದುಕು, ಅಂತೆಯೇ ಉಳಿದ ಜೀವಿಗಳಿಗೂ ಬದುಕಲು ಅಸ್ಪದ ಮಾಡಿಕೊಡು ಎಂಬ ಧೋರಣೆ ಪ್ರಕೃತಿಯಿಂದ ಪ್ರೇರಿತವಾಗಿರುವುದು. ಅಸ್ತಿತ್ವವಾದದ ತಿರುಳಾಗಿರುವುದು.

ಈಗಲೇ ಹೀಗಿರುವಾಗ, ಇನ್ನು ಅರಿಸ್ಟಾಟಲ್, ಗೆಲಿಲಿಯೋ, ಬುದ್ಧ, ಬಸವರೇ ಇತರರ ವೈಚಾರಿಕ ಹೋರಾಟಗಳ ಸಮಯಗಳಲ್ಲಿ ಇನ್ನೆಂಥದ್ದಿರಬಹುದು! ■

ವ್ಯಾಲಂಟೈನ್ಸ್ ಎಂಬ ಹಫ್ತಾವಸೂಲಿ ಡೇ



ವ್ಯಾಲಂಟೈನ್ಸ್ ಡೇ ಗಿಂತ ಮೂರು ದಿನ ಮೊದಲು ಮಂಗಳೂರಿನ ಕೇಸರಿ ಪಡೆಗಳ ಮುಖಂಡನೊಬ್ಬ ಇಲ್ಲಿಯ ಜಿಲ್ಲಾಡಳಿತ ಮತ್ತು ಪೊಲೀಸ್ ವರಿಷ್ಠರಿಗೆ ಎಚ್ಚರಿಕೆ ಕೊಡುತ್ತಾ 'ವ್ಯಾಲಂಟೈನ್ಸ್ ದಿನದಂದು ಯಾರಾದರೂ ಯುವಕ-ಯುವತಿಯರು ಸಾರ್ವಜನಿಕ ಸ್ಥಳದಲ್ಲಿ ಅಸಭ್ಯವಾಗಿ ವರ್ತಿಸುವುದು ಕಂಡುಬಂದರೆ ನಮ್ಮ ಹಿಂದೂ ಸಂಘಟನೆಯ ವರು ಸುಮ್ಮನಿರುವುದಿಲ್ಲ' ಎಂದು ಹೇಳಿ 'ನಾವು ಕಾನೂನು ಕೈಗೆ ಎತ್ತಿಕೊಳ್ಳುತ್ತೇವೆ' ಎಂದು ಸರಕಾರಿ ಅಧಿಕಾರಿಗಳಿಗೇ ಪರೋಕ್ಷ ವಾರ್ನಿಂಗ್ ಕೊಟ್ಟಿದ್ದ. ಆದರೆ ವ್ಯಾಲಂಟೈನ್ಸ್ ದಿನ ಯಾವುದೇ ಅಹಿತಕರ ಘಟನೆ ನಡೆಯದೇ ಶಾಂತಿಯಿಂದ ಸರಿದುಹೋಗಿದ್ದರಿಂದ ಪೊಲೀಸರು ಮತ್ತು ಜನಸಾಮಾನ್ಯರು ಬಿಡುಗಡೆಯ ನಿಟ್ಟುಸಿರು ಬಿಟ್ಟಿರಬಹುದು. ಯಾಕೆಂದರೆ ಇದು ಶಾಂತಿಯುತವಾಗಿರುತ್ತದೆ ಎಂದು ಅನೇಕರಿಗೆ ಮೊದಲೇ ಸುಳಿವು ಸಿಕ್ಕಿತ್ತು, ಕಾರಣ ಕೇಸರಿ ಪಡೆಗಳು ಮೂರು ದಿನ ಮೊದಲು ಎಚ್ಚರಿಕೆ ಕೊಟ್ಟಿದ್ದು ಮಾಲ್, ಸಿನಿಮಾ, ರೆಸಾರ್ಟಿನವರು ಕೇಸರಿ ಪಂಟರ್‌ಗಳು ಬಂದಾಗ ಕೊಡಲು ಹಫ್ತಾ ರೆಡಿ ಇಟ್ಟಿರಬೇಕು ಎಂದು ಪರೋಕ್ಷವಾಗಿ ಕೊಟ್ಟ ಮುನ್ಸೂಚನೆಯಾಗಿತ್ತು ಎಂಬ ಒಳಗುಟ್ಟು ಕೇಸರಿಗಳನ್ನು ಬಲ್ಲವರಿಗೆ ಗೊತ್ತಿತ್ತು. ಅದಕ್ಕೆ ಅನುಗುಣವಾಗಿಯೇ ವಾರ್ನಿಂಗ್ ಕೊಟ್ಟ ಮರುದಿನದಿಂದ ಮಂಗಳೂರಿನ ಎಲ್ಲೆಡೆ ಹಫ್ತಾ ವಸೂಲಿ ನಡೆದಿರುವುದು ಮಾಲ್ ವ್ಯಾಪಾರಿಗಳು ಖಚಿತಪಡಿಸಿದ್ದಾರೆ. ಹೀಗಿದೆ ನೋಡಿ ಹಿಂದೂ ಸಂಸ್ಕೃತಿ ರಕ್ಷಕರ ನಿಜರೂಪ.

ಸಾವಿರಾರು ನಕಲಿ ಖಾತೆಗಳನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣದ ಸಮರ್ಥ (ದುರು) ಉಪಯೋಗದಿಂದಲೇ ಬಿಜೆಪಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಭರ್ಜರಿ ಜಯಗಳಿಸಿದ್ದು ನಿಜ ಎಂದು ಸ್ವತಃ ಬಿಜೆಪಿಯ ಮುಖಂಡರೇ ಒಪ್ಪಿಕೊಂಡಿದ್ದರು. ಆದರೆ ಈ ಒಳದಾರಿಯನ್ನೇ ಈಗಲೂ ಅವರು ನಂಬಿಕೊಂಡು ಸಾಮಾಜಿಕ ತಾಣಗಳ ಮುಖಾಂತರ ಸಮಾಜದಲ್ಲಿ ಒಡಕು ಹುಟ್ಟುಹಾಕಿ ತಮ್ಮ ವಿರೋಧಿಗಳು ದೇಶದ್ರೋಹಿಗಳು ಎಂದು ಹಣೆಪಟ್ಟಿ ಕಟ್ಟಿ ತಮ್ಮ ಬಿಜೆಪಿಯ ಕುಂದುತ್ತಿರುವ ಜನಪ್ರಿಯತೆಯನ್ನು ತಡೆಯಲು ಮೂರ್ಖ ಯತ್ನ ಮಾಡಿ ಮುಗ್ಗರಿಸಿ ಬಿದ್ದು ನಗೆಪಾಟಲಿ ಗೀಡಾಗುತ್ತಿದ್ದಾರೆ. ಆದರೆ ಕೇಸರಿಗಳ ಈ ದುಸ್ಸಾಹಸ ಅತ್ಯಂತ ಅಪಾಯಕಾರಿಯಾಗಿದ್ದು ಸಮಾಜದಲ್ಲಿ ಹೀನ ವೈರತ್ವ ಹುಟ್ಟುಹಾಕುತ್ತಿದೆ.

ದಿಲ್ಲಿಯ ಜೆಎನ್‌ಯೂ ವಿದ್ಯಾರ್ಥಿಗಳ ಪ್ರತಿಭಟನೆ, ಹೈದರಾಬಾದಿನ ರೋಹಿತ್ ವೇಮುಲಾ ಪ್ರಕರಣ, ಉತ್ತರ ಪ್ರದೇಶದ ಗೋಹತ್ಯೆ-ಅಖ್ಲಾಕ್ ಹತ್ಯೆಯ ವಿಷಯ, ಗುಜರಾತಿನ ಗುಜ್ಜು-ಲವ್ ಜಿಹಾದ್ ಇವೆಲ್ಲವುಗಳ ವಿಷಯದಲ್ಲಿ ಸಾಮಾಜಿಕ ತಾಣದಲ್ಲಿ ಸಾವಿರಾರು ನಕಲಿ ಖಾತೆ ತೆರೆದು ನಾಜಿ-ಗೋಬೆಲ್ ತರಹದ ಸುಳ್ಳು ಸುದ್ದಿ ಹಬ್ಬಿಸಿ ಕೇಸರಿ ಟ್ರೋಲ್‌ಗಳು ಸಿಕ್ಕಿ ಬೀಳುತ್ತಿದ್ದಾರೆ. ಪಾಕಿಸ್ತಾನದ ಭೀಕರ ಉಗ್ರವಾದಿ ಸಯೀದ್ ಹಾಫೀಜ್ ಈತನ ಹೆಸರಲ್ಲೂ ನಕಲಿ ಟ್ವೀತರ್ ಖಾತೆ ತೆರೆದು ಎಡಪಂಥೀಯ ಜೆಎನ್‌ಯೂ ವಿದ್ಯಾರ್ಥಿಗಳಿಗೆ ಹಫೀಜನ ಹೆಸರಲ್ಲಿ ಅಭಿನಂದಿಸುವ ಮೆಸೇಜ್ ಕಳುಹಿಸಿ ಈ ವಿದ್ಯಾರ್ಥಿಗಳು ಪಾಕಿ ಉಗ್ರವಾದಿಗಳೊಂದಿಗೆ ಕೈಜೋಡಿಸಿದ್ದಾರೆ ಮತ್ತು ದೇಶದ್ರೋಹಿಗಳಾಗಿದ್ದಾರೆ ಎಂದು ಬಿಂಬಿಸುವ ಅಪಾಯಕಾರಿ ಹುನ್ನಾರು ಕೇಸರಿ ಟ್ರೋಲ್‌ಗಳು ನಡೆಸಿದ್ದಾರೆ. ಯಾವುದೇ ವಿದ್ಯೆ ಜ್ಞಾನ ಅಥವಾ ತಂತ್ರಜ್ಞಾನವನ್ನು ತಮ್ಮ ಸ್ವಾರ್ಥಕ್ಕೆ ದುರುಪಯೋಗ ಮಾಡಿಕೊಳ್ಳುವುದರಲ್ಲಿ ವೈದಿಕರಿಗೆ ಮೂರು-ನಾಲ್ಕು ಸಾವಿರ ವರ್ಷಗಳ ದೀರ್ಘ ಅನುಭವ ಇದೆ ತಾನೇ.

ಇತ್ತೀಚೆಗೆ ಮೋದಿಯವರು ಅಫಘಾನಿಸ್ತಾನ ದೇಶದ ಅಧ್ಯಕ್ಷರಿಗೆ 96 ದಿನ ಮುಂಚಿತವಾಗಿ ಹುಟ್ಟುಹಬ್ಬದ ಶುಭಾಶಯ ಹೇಳಿ ನಗೆಪಾಟಲಿಗೀಡಾದ ಘಟನೆ ಸಾಮಾಜಿಕ ತಾಣದಲ್ಲಿ ಚರ್ಚೆಯ ವಿಷಯವಾಗಿದೆ. ಭಾರತದಂತೆ ಅಫಘಾನಿಸ್ತಾನವೂ ಅದೇ ಆಫ್ರಿಕನ್ ದೇಶಗಳಿಂದ ಕೆಜಿಗೆ 40/- ರೂಪಾಯಿಯಂತೆ ತೊಗರಿ ಬೇಳೆ, ಉದ್ದಿನ ಬೇಳೆ ಖರೀದಿಸಿ ತನ್ನ ಪ್ರಜೆಗಳಿಗೆ ಅದನ್ನು ಕೇವಲ 80 ರೂಪಾಯಿ ಕಿಲೋಗೆ ಕೊಡುತ್ತಿದೆ. ಆದರೆ ಭಾರತದಲ್ಲಿ ಮಾತ್ರ ಅದೇ ಆಫ್ರಿಕನ್ ತೊಗರಿ-ಉದ್ದು ಕೇವಲ ರೂ.40/-ಕ್ಕೆ ಆಮದು ಮಾಡಿಕೊಂಡು ರೂ. 200/-ಕ್ಕೆ ಯಾಕೆ ಮಾರಲಾಗುತ್ತಿದೆ. ಬಡವರ ಈ ಪ್ರಮುಖ ಆಹಾರದ ವಿಷಯದಲ್ಲಿ ಮಾತ್ರ ಸಾಮಾಜಿಕ ತಾಣಗಳಲ್ಲಿ ಚರ್ಚೆಯಾಗದಿರುವುದು ಖೇದಕರ.

-ವೀರಪ್ಪ ದಿ ನಾಯ್ಕ್, ಮಂಗಳೂರು

ಜೆಎನ್‌ಯೂ ಮತ್ತು ಚೆಡ್ಡಿಗಳ ನಿಜ ವರಸೆ


'ಗುಜರಾತಿನಲ್ಲಿ ಲವ್ ಜಿಹಾದ್' ಎಂಬ ತಲೆಬರಹದ ಸುದ್ದಿ ಕಳೆದ ಶನಿವಾರ ಸುದ್ದಿ-ಚಾನೆಲ್ ಮತ್ತು ಪತ್ರಿಕೆಗಳಲ್ಲಿ ರಾರಾಜಿಸಿತ್ತು, ಬೇರೆ ಬೇರೆ ಜಾತಿಯ ಹಿಂದೂ ಹೆಣ್ಣುಗಳನ್ನು ಮುಸ್ಲಿಂ ಹುಡುಗರು ಮದುವೆಯಾದರೆ ಇಂತಿಷ್ಟು ಲಕ್ಷ ಹಣ ಮುಸ್ಲಿಂ ಹುಡುಗನಿಗೆ ಕೊಡುವುದಾಗಿ ವಾಗ್ದಾನ ಮಾಡುವ ವಾಟ್ಸಪ್ ಸಂದೇಶಗಳು ಗುಜರಾತಿ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಗುಜರಾತ್ ರಾಜ್ಯದೊಳಗೆ ಮಾತ್ರ ಹರಿದಾಡಿದೆ ಎಂದು ವರದಿಯಾಗಿತ್ತು, ಆದರೆ ಈಗ ಬಂದ ಸುದ್ದಿಯೆಂದರೆ ಇಂತಹ ಲವ್ ಜಿಹಾದ್ ಸಂದೇಶ ಮುಸ್ಲಿಮರ ಹೆಸರಿನಲ್ಲಿ ಹರಿಯ ಬಿಟ್ಟವರು ಸಂಘ ಪರಿವಾರದ ಸದಸ್ಯರೇ ಆಗಿರುವುದಾಗಿ ದೃಢ ಪಟ್ಟಿದೆ.

ಮಂಗಳೂರಿನ ಕೋಮು ಸೌಹಾರ್ದ ವೇದಿಕೆಯ ಅಧ್ಯಕ್ಷ ಸುರೇಶ್ ಭಟ್ ಬಾಕ್ರಬೈಲ್ ಅವರು ಬಹಿರಂಗ ಪಡಿಸಿರುವಂತೆ - ಸಂಘ ಪರಿವಾರದ ಅಂಗ ಸಂಸ್ಥೆಗಳ ಲ್ಲೊಂದಾದ ಸನಾತನ ಸಂಸ್ಥೆ 2011ರಲ್ಲಿ ಹೊರತಂದಿರುವ ಲವ್ ಜಿಹಾದ್ ಮತ್ತು ಮತಾಂತರ ಎಂಬ ಕಿರುಹೊತ್ತಗೆಯಲ್ಲಿ ಇರುವುದನ್ನೇ ಮಕ್ಕಾಮಕ್ಕಿ ಈಗಿನ ಗುಜರಾತಿನ ವಾಟ್ಸಪ್‌ನಲ್ಲಿ ಕಾಪಿ ಮಾಡಲಾಗಿದೆ (ಇದರ ಫೋಟೋಕಾಪಿಯನ್ನು 'ಕರಾವಳಿ ಕರ್ನಾಟಕ.ಕಾಮ್' ಎಂಬ ಸುದ್ದಿ ಪೋರ್ಟಲ್ಲಿನಲ್ಲಿ ಸುರೇಶ್ ಭಟ್ ದಾಖಲೆಯಾಗಿ ಹಾಕಿದ್ದಾರೆ).



ಗುಜರಾತಿನಲ್ಲಿ ಇತ್ತೀಚಿನ ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿ ಭಾರಿ ಸೋಲು ಅನುಭವಿಸಿದ ನಂತರ ಹಾಗೂ ಹಾರ್ದಿಕ್ ಪಟೇಲನ ಜಾತಿ ಸಂಘಟನೆಯು ಬಿಜೆಪಿಯಿಂದ ಬಹುಸಂಖ್ಯಾತ ಮತದಾರರು ವಿಮುಖವಾಗುವಂತೆ ಮಾಡಿದೆಯೆಂದು ಖಚಿತಪಟ್ಟಿರುವುದರಿಂದ ತನ್ನ ಹಿಂದೂ ಮತ ಬ್ಯಾಂಕ್ ಮರಳಿ ಗಳಿಸಲು ಬಿಜೆಪಿ ಮತ್ತು ಸಂಘ ಪರಿವಾರ ಕೂಡಿಕೊಂಡು ಈ ಲವ್ ಜಿಹಾದ್ ಸಂದೇಶ ಗಳನ್ನು ಮುಸ್ಲಿಮರ ಖೋಟಾ ಹೆಸರಲ್ಲಿ ವಾಟ್ಸಪ್‌ನಲ್ಲಿ ಹರಿಯ ಬಿಟ್ಟಿರುವುದೆಂದು ಖಚಿತವಾಗಿದೆ. ತಮ್ಮ ಗುಪ್ತ ಅಜೆಂಡಾ ಸಾಧಿಸಲು ಕೇಸರಿ ಪಡೆಗಳು ಯಾವ ಕೀಳು ಮಟ್ಟಕ್ಕೆ ಇಳಿಯಲೂ ಹೇಸುವುದಿಲ್ಲ ಎಂದು ಇದರಿಂದ ಸಾಬೀತಾಯಿತು.

ಎರಡನೆಯದಾಗಿ ದಿಲ್ಲಿಯ ಜೆಎನ್‌ಯೂನಲ್ಲಿ ಈಗ ಆಗುತ್ತಿರುವ ವಿದ್ಯಾರ್ಥಿಗಳ ಗಲಾಟೆಯ ಸಂದರ್ಭದಲ್ಲಿ ಮೊನ್ನೆ ಝಿ-ನ್ಯೂಸ್ ಹಿಂದಿ ಚಾನೆಲ್ಲಿನಲ್ಲಿ ತೋರಿಸಿದ ಒಂದು ವಿಡಿಯೋದಲ್ಲಿ ಬಿಜೆಪಿಯ ಅಂಗ ಸಂಸ್ಥೆಯಾದ ಎಬಿವಿಪಿ ವಿದ್ಯಾರ್ಥಿ ಸಂಘಟನೆಯವರೇ ಪಾಕಿಸ್ತಾನದ ಪರ ಮತ್ತು ಭಾರತ ವಿರೋಧಿ ಘೋಷಣೆ ಕೂಗಿದ್ದು ಎಂದು ಸಾಬೀತಾಗಿದೆ. ಮೊದಲು ಬಿಜೆಪಿಯ ಅಂಗಸಂಸ್ಥೆಯಾದ



ಎಬಿವಿಪಿ ಸಭೆಯಲ್ಲಿ ಭಾಗವಹಿಸಿದ ಐದು ಯು
ಮಾತ್ರವಲ್ಲ ಇಬ್ಬರು ಯುವತಿಯರೂ ತದನಂತರ ಜೆ
ಯೂ ವಿದ್ಯಾರ್ಥಿ ಸಂಘಟನೆಯ ಸಭೆಯಲ್ಲಿ ಕಾಣಿಸಿಕೊ
ಭಾರತ ವಿರೋಧಿ ಹಾಗೂ ಅಫ್ಜಲ್ ಗುರು ಪರ ಘೋ
ಕೂಗುತ್ತಿದ್ದುದನ್ನು ಝಿ-ನ್ಯೂಸ್‌ನವರು ತಮ್ಮ ವಿಡಿಯೋ
ನಿಖರವಾಗಿ ಗುರುತಿಸಿ ವರ್ತುಲ ಹಾಕಿ ಪ್ರೇಕ್ಷ
ತೋರಿಸಿದ್ದಾರೆ. ಪಾಕಿಸ್ತಾನದ ಉಗ್ರ ಹಫೀಜ್ ಸಯಿ
ಎಂಬವನ ಸುಳ್ಳು ಹೆಸರಲ್ಲಿ ಒಂದು ಟ್ವಿಟರ್ ಅಕೌ
ತೆರೆದು ಅದರ ಮುಖಾಂತರ ಭಾರತದ ಜೆಎನ್‌
ಎಡಪಂಥೀಯ ವಿದ್ಯಾರ್ಥಿ ಸಂಘಟನೆಗೆ ಶುಭಾ
ಕಳುಹಿಸಿ, ಈ ಜೆಎನ್‌ಯೂ ವಿದ್ಯಾರ್ಥಿಗಳಿಗೆ ಪಾಕಿಸ
ಉಗ್ರನ ನಿಕಟ ಸಂಬಂಧವಿದೆ ಎಂದು ಖೋಟಾ ಪ್ರ
ಸೃಷ್ಟಿಸುವ ಹುನ್ನಾರು ಸಹಾ ಸಂಘಿಗಳು ಮಾಡಿ ಸಿಕ್ಕಿಬಿದ್ದಿ


ಆದರೂ ಜೆಎನ್‌ಯೂ ವಿದ್ಯಾರ್ಥಿ ಸಂಘಟನ
ಕನ್ಹಯ್ಯ ಕುಮಾರ್ ಮತ್ತು ಇತರ ಎಡಪಂಥೀ
ವಿದ್ಯಾರ್ಥಿಗಳನ್ನು ದಿಲ್ಲಿ ಪೊಲೀಸರು ದೇಶದ್ರೋ
ಆರೋಪದಲ್ಲಿ ಬಂಧಿಸಿರುವುದರ ಹಿಂದೆ ದೊಡ್ಡ ಷಡ
ಇರುವುದು ನಿಜ. ಜತೆಗೆ ಕನ್ಹಯ್ಯ ಕುಮಾರ್ ಇವರ
ನಿಮಿಷದ ಭಾಷಣ ಸಹ ಯೂಟ್ಯೂಬಿನಲ್ಲಿ ಲಭ್ಯವಿ
ಅದರಲ್ಲಿ ಆತ ಯಾವುದೇ ಭಾರತ ವಿರೋಧಿ ಭಾ
ಮಾಡಿರುವಂತೆ ಕಾಣುತ್ತಿಲ್ಲ. ಮೇಲಾಗಿ ಅಡಿಗಡಿಗೆ ಅ
ಭಾರತವೇ ನನ್ನ ದೇಶ ಇಲ್ಲಿಯ ಸಂವಿಧಾನವೇ
ಪರಮ ಪವಿತ್ರ ಗ್ರಂಥ ಎಂದು ಹೇಳಿದ್ದು ದಾಖಲಾ
ಕೊನೆಗೆ ಅವನು ಹೇಳಿದ್ದು- ಮನುಸ್ಮೃತಿಯೇ ಸಂಘಿ
ಪವಿತ್ರ ಗ್ರಂಥ ಹಾಗೂ ಮನು-ಸ್ಮೃತಿ ಐರಾನಿಯೇ (ಐ
= ವಿಪರ್ಯಾಸ) ಶಿಕ್ಷಣ ಸಚಿವೆ ಆಗಿರುವುದು ಈ
ಭಾರತೀಯರ ದುರಾದೃಷ್ಟ ಎಂದು ಹೇಳಿದ್ದು ನಿಜ. ಬ
ಐಐಟಿ ಕ್ಯಾಂಪಸ್ಸಿನಲ್ಲಿ ಆಗಿದ್ದು ಮತ್ತು ಹೈದರಾಬಾ
ವಿವಿಯಲ್ಲಿ ಆಗಿದ್ದು ಈಗ ದಿಲ್ಲಿ ಜೆಎನ್‌ಯೂ
ಕ್ಯಾಂಪಸ್ಸಿನಲ್ಲಿ ಪುನರಾವೃತ್ತಿ ಆಗುತ್ತಿರುವಂತೆ ಕಾಣು
ಆರ್‌ಎಸ್‌ಎಸ್‌ನವರ ವಿದ್ಯಾರ್ಥಿ ವಿಭಾಗವಾದ ಎಬಿ
ಈಗ ನಮ್ಮ ಮಂಗಳೂರು ವಿವಿ ಸಹಿತ ದೇಶದ
ವಿಶ್ವವಿದ್ಯಾಲಯಗಳಲ್ಲಿ ತನ್ನ ಕಬಂಧ ಬಾಹು ಚಾ
ಎಂಬ ಕರಾಳ ಸತ್ಯವನ್ನು ನಾವು ಅರಿಯಬೇಕಿದೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಬುದ್ಧಿಜೀವಿಗಳ ಬಗ್ಗೆ ಖಾವಿಧಾರಿಗಳಿಗೆ ನಡುಕ

'ಹಿಂದೂ ಧರ್ಮದಲ್ಲಿ ಬುದ್ಧಿಜೀವಿಗಳು ಮತ್ತು ಪ್ರಗತಿಪರ ಮಹಿಳೆಯರು ಕಳೆಯಾಗಿದ್ದಾರೆ, ಈ ಕಳೆಯ ಕೊಳೆಯನ್ನು ಕೀಳದೇ ಹಾಗೇ ಬಿಟ್ಟರೆ ಧರ್ಮದ ಕೊಲೆ ಯಾಗುತ್ತದೆ' ಎಂದು ಉಡುಪಿಯ ವಿಶ್ವಸಂತೋಷ ಭಾರತಿ ಸ್ವಾಮಿ (ಉರ್ಫ್-ಸಂತೋಷ್ ಶೆಟ್ಟಿ) ಮೈಸೂರಿನ ಸುತ್ತೂರು ಜಾತ್ರಾ ಸಮಾರಂಭದಲ್ಲಿ ಕೊಟ್ಟ ಬಾಲಿಶ ಹೇಳಿಕೆ. ಇದಕ್ಕೆ ಮೈಸೂರು ಜಿಲ್ಲೆಯಲ್ಲಿ ತುಂಬಾ ಖಾರದ ಪ್ರತಿಕ್ರಿಯೆ ಬಂದಿದೆ ಹಾಗೂ ಈ ಸ್ವಾಮಿ ತಾನು ಉಡುಪಿ ಬಂಟ ಸಂಸ್ಥಾನದ ಜಗದ್ಗುರು ಎಂದು ಹೇಳಿಕೊಳ್ಳುತ್ತಿರುವುದರಿಂದ ಮೈಸೂರಲ್ಲಿ ಈತನಿಂದಾಗಿ ಉಡುಪಿಯ ಬಂಟರ ಮಾನ ಹರಾಜಾಗಿದೆ.

ಬುದ್ಧಿಜೀವಿಗಳೆಂಬ ಕಳೆಯನ್ನು ಕೀಳಬೇಕು ಎಂದು ಈ ಸ್ವಾಮೀಜಿ ಹೇಳಿರುವುದು ದಾಭೋಲ್ಕರ್, ಗೋವಿಂದ ಪಾನ್ಸರೆ ಮತ್ತು ಡಾ.ಕಲಬುರ್ಗಿ ಇವರನ್ನು ಹತ್ಯೆ ಮಾಡಿದಂತೆ ಎಲ್ಲಾ ಬುದ್ಧಿಜೀವಿಗಳನ್ನು ಹತ್ಯೆ ಮಾಡಬೇಕು ಎಂದು ಧಾರ್ಮಿಕ ಕ್ರಿಮಿನಲ್ಲುಗಳನ್ನು ನೇರವಾಗಿ ಪ್ರಚೋದಿಸಿದಂತೆ. ಹೀಗೆ ಜನರನ್ನು ಕೊಲೆಗೆ ಪ್ರಚೋದಿಸುವುದು ಕ್ರಿಮಿನಲ್ ಅಪರಾಧವಾಗಿದೆ. ಪೊಲೀಸರು ಇದನ್ನು ಗಮನಿಸಬೇಕು.



'ನಮ್ಮ ದೇಶದಲ್ಲಿ ಮಹಿಳೆಯರ ಆಟಾಟೋಪ ತುಂಬಾ ಹೆಚ್ಚಿದೆ, ಇವರನ್ನೂ ಹದ್ದುಬಸ್ತಿನಲ್ಲಿಡಬೇಕು' ಎಂದು ಹೇಳಿರುವ ಈ ಸಂತೋಷ್ ಭಾರತಿ ಮೂಲತಃ ಶಿವಮೊಗ್ಗದ ಒಬ್ಬ ಆಯುರ್ವೇದ ವೈದ್ಯ. ಈತ ಮದುವೆಯಾಗಿದ್ದು ಮಕ್ಕಳಿದ್ದಾರೆ. ಈತನ ಕಾವಿ ದಂಧೆಗೆ ಅಡ್ಡಿ ಬಂದ ಈತನ ಪತ್ನಿ ಈಗ ಗೃಹಬಂಧನದಲ್ಲಿದ್ದಾಳಂತೆ. ಈತ ವೈದ್ಯ ವೃತ್ತಿಯಲ್ಲಿ ವಿಫಲನಾದ ನಂತರ ಕಾವಿ ಉಟ್ಟು ತನ್ನ ಔಷಧಗಳನ್ನು ಬ್ರಾಂಡ್ ಮಾಡಿ ಮಾರಿ ತಾನು ದಕ್ಷಿಣದ ಬಾಬಾ ರಾಂದೇವ (ಅರ್ಥಾತ್ ಕಾವಿ ವೇಷದ ಉದ್ಯಮಿ) ಎಂದು ಹೇಳಿಕೊಳ್ಳು ತ್ತಿದ್ದಾನೆ. ಇಂತಹ ಸೋಗಲಾಡಿಗಳಿಗೆ ನಾವು ಪ್ರಾಮುಖ್ಯತೆ ಕೊಡಬೇಕಾಗಿಲ್ಲ.

ಈ ವ್ಯಕ್ತಿ ಮೊದಲು ತಾನು ಬಂಟ-ಒಕ್ಕಲಿಗ ಜಾತಿಯವ ಎಂದು ಹೇಳಿಕೊಂಡು ಮಠ-ಮಾನ್ಯದಲ್ಲಿ ನಂಬಿಕೆಯಿಲ್ಲದ ಬಂಟರ ಜಾತಿಗೆ ಒಂದು ಮಠ ಸ್ಥಾಪಿಸಿ ತಾನು ಅದರ ಜಗದ್ಗುರು ಆಗಲು ಪ್ರಯತ್ನಿಸಿ ಸೋತವನು. ನಂತರ ಉಡುಪಿಯ ಮಧ್ವ ಬ್ರಾಹ್ಮಣ ಮಠದವರ ಸಹಾಯದಿಂದ ಯಾವುದೋ ಒಂದು ವೈದಿಕ ಹೆಸರಲ್ಲಿ (ಕ್ಷತ್ರಿಯರ ಬದ್ಧ ದ್ವೇಷಿಯಾದ ಭಾರ್ಗವ ಪರಶುರಾಮನ ಹೆಸರಲ್ಲಿ) ಬಾರಕೂರಲ್ಲಿ ಒಂದು ಸಣ್ಣ ಮಠ ಸ್ಥಾಪಿಸಿಕೊಂಡು ತನ್ನ ಆಯುರ್ವೇದ ಔಷಧಿ ಮಾರಾಟ ಮುಂದುವರಿಸಿದ್ದಾನೆ. ಜತೆಗೆ ತನ್ನದು ಬಂಟರ ಮಹಾಸಂಸ್ಥಾನ ಎಂದು ಬಲಾತ್ಕಾರದಿಂದ ಬಂಟರ ಸಮಾಜದ ಮೇಲೆ ಹೇರಲು ಈಗಲೂ ಪ್ರಯತ್ನಿಸುತ್ತಿದ್ದಾನೆ.

ಹಾವೇರಿಯ ಮಲೆಯಾಳಿ ಸ್ವಾಮಿ ಪ್ರಣವಾನಂದನಂತೆ ಮತ್ತು ವಜ್ರದೇಹಿಸ್ವಾಮಿ ನೋಣಯ್ಯ ಶೆಟ್ಟಿಯಂತೆ ಈ ಸಂತೋಷ್ ಭಾರತಿ ಸಹ ವಿಎಚ್‌ಪಿ ಸದಸ್ಯನಾಗಿದ್ದಾನೆ. ಅಂದರೆ ಈತನ ಬೆನ್ನ ಹಿಂದೆ ಎಂತಹಾ ಫ್ಯಾಸಿಸ್ಟ್ ಸಂಘಟನೆ ಇದೆ ಎಂಬ ಅಂದಾಜು ಸಿಗಬಹುದು. 'ಮುಸ್ಲಿಂ ಉಗ್ರಗಾಮಿಗಳು ಮತ್ತು ಕ್ರೈಸ್ತ ಮಿಷನರಿಗಳು ಕೂಡ ಕಳೆಯಾಗಿದ್ದಾರೆ, ಕ್ರೈಸ್ತರಿಗೆ ಬಡವರು ಮತ್ತು ಕೆಳ ಜಾತಿಯವರನ್ನು ಮತಾಂತರ ಮಾಡುವುದು ಕರಗತವಾಗಿದೆ. ಈ ಎರಡು ಕಳೆಗಳನ್ನೂ ಕೀಳಬೇಕು' ಎಂದೂ ಇದೇ ಸಂತೋಷ್ ಶೆಟ್ಟಿ ಕರೆಕೊಟ್ಟಿದ್ದಾನೆ. ಈ ಸ್ವಾಮೀಜಿ ಸಂಘಪರಿವಾರಕ್ಕೆ ಸೇರಿದವನೆಂಬುದಕ್ಕೆ ಪಕ್ಕಾ ಪುರಾವೆಯೆಂದರೆ ಎಲ್ಲಾ ಸಂಘಿಗಳಂತೆ ಈತನೂ ಮುಸ್ಲಿಂ, ಕ್ರೈಸ್ತ ಪ್ರಗತಿಪರ ಮತ್ತು ಮಹಿಳೆಯರ ವಿರುದ್ಧ ಸಾರ್ವಜನಿಕವಾಗಿ ವಿಷ ಕಾರುತ್ತಿರುವುದು.

ಪ್ರಾಮಾಣಿಕ ಪೊಲೀಸರನ್ನು ಕಂಡರೆ ಕಳ್ಳ ಹ
ದ್ವೇಷಿಸುತ್ತಾನೋ ಅದೇ ರೀತಿಯಲ್ಲಿ ದೇವರು-ಧರ್ಮ
ಹೆಸರಲ್ಲಿ ಹೊಟ್ಟೆ ಹೊರೆದುಕೊಳ್ಳುತ್ತಿರುವ ಧಾರ್ಮಿ
ವ್ಯಕ್ತಿಗಳು ಬುದ್ಧಿಜೀವಿಗಳನ್ನು ಕಂಡರೆ ಯಾವಾಗ
ದ್ವೇಷಿಸುತ್ತಾರೆ. ಕಾರಣ ಪುರೋಹಿತಶಾಹಿ ಮತ್ತು ಧಾರ್ಮಿ
ಸೋಗಲಾಡಿಗಳು ದೇವರು-ಧರ್ಮದ ಹೆಸರಲ್ಲಿ ಮುಗ್ಧ
ಮೋಸ ಮಾಡುವುದನ್ನು ಈ ಬುದ್ಧಿಜೀವಿಗ
ಯಾವಾಗಲೂ ಬಯಲಿಗೆಳೆಯುವುದು.

ಬ್ರಿಟಿಷ್ ಶಿಕ್ಷಣ ತಜ್ಞ ಮೆಕಾಲೆ ಕೆಳಜಾತಿ
ಭಾರತೀಯರಿಗೆಲ್ಲಾ ಅಕ್ಷರಜ್ಞಾನ ಸಿಗುವಂತೆ ಮಾಡಿದನೆ
ಒಂದೇ ಕಾರಣಕ್ಕೆ ಆರ್‌ಎಸ್‌ಎಸ್‌ನವರು ಮೆಕಾಲೆಯ
ವಿಪರೀತ ದ್ವೇಷಿಸಿದಂತೆ ಢೋಂಗಿ ಕಾವಿಧಾರಿಗ
ಯಾವಾಗಲೂ ಬುದ್ಧಿಜೀವಿಗಳನ್ನು ದ್ವೇಷಿಸುವು
ಸ್ವಾಭಾವಿಕ. ನಿಜವಾಗಿ ಈ ಢೋಂಗಿ ಕಾವಿಧಾರಿಗ
ಹಿಂದೂ ಸಮಾಜದ ಕಳೆ-ಕೊಳೆ, ಇದನ್ನು ಮೊದ
ಕೀಳಬೇಕು!

ಅದೇ ಮೈಸೂರಿನ ಸುತ್ತೂರು ಜಾ
ಸಮಾರಂಭದಲ್ಲಿ ಮಾತನಾಡಿದ ಪ್ರಗತಿ
ನಿಡುಮಾಮಿಡಿ ಸ್ವಾಮೀಜಿಗಳು "ಸ್ವಹಿತ
ಬಲಿಯಾಗಿ ಧರ್ಮದ ದುರುಪಯೋಗ ಮಾಡು
ಕಾವಿಧಾರಿಗಳ ಸಂಖ್ಯೆ ವೃದ್ಧಿಸುತ್ತಿದೆ ಮ
ಇವರಿಂದಾಗಿ ಧರ್ಮ ಕ್ಷೀಣಿಸುತ್ತಿದೆ ಹಾಗ
ಇವರಲ್ಲಿ ಕೆಲವರು ದುರಾಚಾರದಲ್ಲಿ ತೊಡಗಿ
ಬೇಗದಲ್ಲಿ ಜೈಲು ಸೇರಲಿರುವರು. ಹಾಗಾ
ಪೀಠದಲ್ಲಿ ಕುಳಿತವರು ಆ ಸ್ಥಾನದ ಘನ
ಗಾಂಭೀರ್ಯವನ್ನು ಅರಿತು ವರ್ತಿಸಬೇಕು. ಹಾಗಾದ
ಮಾತ್ರ ಮಠ-ಮಂದಿರಗಳ ಮೇಲಿನ ಜನರ ಭಕ್ತಿ ಭಾವಗಳ
ಉಳಿಸಿಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಮಠಾಧೀಶರ
ನಾವು ಆತ್ಮಾವಲೋಕನ ಮಾಡಿಕೊಳ್ಳ ಬೇಕಿದೆ" ಎಂ
ಕರೆನೀಡಿದ್ದು ತುಂಬಾ ಸಮಯೋಚಿತ ವಾಗಿತ್ತು, ನ
ಸಮಾಜಕ್ಕೆ ಈಗ ಅತೀ ಅಗತ್ಯವಿರುವುದು ನಿಡುಮಾಮಿ
ಸ್ವಾಮೀಜಿಗಳಂತಹ ನಿಜವಾದ ಮಾನವ ತಾವಾದಿಗ
ಹೊರತು ಕರಾವಳಿಯ ಕಾವಿಧಾರಿಗಳಂತಹ ಮೌ
ರಾಯಭಾರಿಗಳಲ್ಲ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂ


ದೇಶದ-ಎಲ್ಲಾ ಪ್ರಗತಿಪರ ಸಂಘಟನೆಗಳು ಒಟ್ಟುಗೂಡಿ ಪರಿಹಾರ ಹುಡುಕದಿದ್ದರೆ ದೇಶದ ಎಲ್ಲಾ ವಿವಿ ಕ್ಯಾಂಪಸ್ಸಿನಲ್ಲಿ ಸಂಘಿಗಳು ವಿಜೃಂಭಿಸಲಿದ್ದಾರೆ ಹಾಗೂ ಉಳಿದ ಎಲ್ಲಾ ವಿದ್ಯಾರ್ಥಿ ಸಂಘಟನೆಗಳು ಉಸಿರು ಕಟ್ಟಿ ಸಾಯಲಿವೆ.

-ಆರ್. ಬಿ. ಶೇಣವ, ಮಂಗಳೂರು

ವಿಷ ಭಟ್ಟ ಹೇಳಿದ್ದೇ ಸರಿ!

ದಲಿತ ವಿದ್ಯಾರ್ಥಿ ರೋಹಿತ್ ವೇಮುಲ ಪ್ರಕರಣದ ಬಗ್ಗೆ ಮಾನಸ ಗಂಗೋತ್ರಿಯ ಸಭೆಯೊಂದರಲ್ಲಿ ಮಾತನಾಡುತ್ತಾ ಪ್ರೊ ಮಹೇಶ್ ಚಂದ್ರ ಗುರು ಅವರು "ಜನರಲ್ಲಿ ಅಚ್ಛೇ ದಿನ್‌ಗಳ ಭ್ರಮೆ ಬಿತ್ತಿ ಅಧಿಕಾರಕ್ಕೇರಿದ ಮೋದಿ ಸರಕಾರ ಚುನಾವಣೆಗೆ ದುಡ್ಡು ಸುರಿದಿದ್ದ ಕಾರ್ಪೊರೇಟ್ ಕಂಪೆನಿಗಳ ಗುಲಾಮನಂತೆ ವರ್ತಿಸುತ್ತಿದೆ ಹಾಗು ಈಮೂಲಕ ಇಲ್ಲಿನ ಬಡವರು, ದಲಿತರು, ರೈತ, ಆದಿವಾಸಿ ಜನರ ಬದುಕನ್ನು ಮತ್ತಷ್ಟು ದುರ್ಭರಗೊಳಿಸುತ್ತಿದ್ದಾರೆ" ಎಂದಿರುವುದನ್ನೇ ಇನ್ನೊಂದು ರೀತಿಯಲ್ಲಿ ಉಲ್ಲೇಖಿಸುತ್ತಾ ಮೋದಿ ಇವರನ್ನೆಲ್ಲ ಬೇವರ್ಸಿಗಳನ್ನಾಗಿಸುತ್ತಿದ್ದಾರೆ ಎಂದಿದ್ದರು. ಹೌದು, ಬೇವರ್ಸಿ ಎಂದರೆ ನಿರ್ಗತಿಕ ಎಂದರ್ಥವೇ ಹೊರತು ಬೇರೆ ವಿಶೇಷಾರ್ಥಗಳಿಲ್ಲ. ಇಲ್ಲ ಎನ್ನುವ ಅರ್ಥಕೊಡುವ 'ಬೇ' ಹಾಗು 'ವಾರಿಸ್' ಶಬ್ದಗಳು ಸೇರಿ 'ಬೇವಾರಿಸ್' ಪದ ಸೃಷ್ಟಿಯಾಗಿ ಆಡುಮಾತಿನಲ್ಲಿ ಬೇವರ್ಸಿಯಾಗಿದೆ ಅಷ್ಟೆ. (ಬೇ ಜವಾಬ್ದಾರಿ ಅಂದರೆ ಜವಾಬ್ದಾರಿ ಇಲ್ಲದ್ದು ಎಂದರ್ಥ ಇರುವಂತೆ.)

ದುಡಿಯುವ ವರ್ಗವನ್ನು ದಿಕ್ಕಿಲ್ಲದಂತಹ ಅನಾಥಸ್ಥಿತಿಗೆ ಈ ಮೋದಿ ಸರಕಾರ ತಳ್ಳುತ್ತಿರುವುದನ್ನು ಎಲ್ಲರೂ ಗಮನಿಸುತ್ತಿದ್ದಾರೆ. ಇದರಲ್ಲಿ ಹೊಸ ವಿಚಾರವೇನೂ ಇಲ್ಲದಿದ್ದರೂ "ವಿಕಲಚೇತನ" ಭಟ್ಟನಿಗೆ (ವಿಕಲಚೇತನ ಎನ್ನುವ ಕೆಟ್ಟಾ ಕೊಳಕು ಪದ ಈ ಭಟ್ಟನದ್ದೇ ಸೃಷ್ಟಿ) ಅಡ್ಡದಾರಿಯಲ್ಲಿ ತನ್ನ 'ವೈಭವ'ವನ್ನು ಮರಳಿ ಪಡೆಯುವ ತವಕ ಇದರ ಹಿಂದಿರುವುದು ಸ್ಪಷ್ಟ.



ಮೋದಿ ಸರಕಾರ ಬಡವರನ್ನು, ರೈತರನ್ನು ಇನ್ನಷ್ಟು ನಿರ್ಗತಿಕರನ್ನಾಗಿಸಿದರೂ ಆತನ ಅನುಯಾಯಿಗಳನ್ನು ಮಾತ್ರ ಎಷ್ಟಕ್ಕೂ ಕೈಬಿಡಲಿಲ್ಲ. ತನ್ನ ಚೇಲಾ, ಪುತ್ರಜೀವಕ ಔಷಧಿಯ ಹೆಸರಲ್ಲಿ ದೇಶದ ಮಹಿಳೆಯರನ್ನು ಅವಮಾನಿಸಿ ಜೈಲಲ್ಲಿರಬೇಕಾದ ಬಾಬಾ ರಾಮದೇವನಿಗಾಗಿ ನೆಸ್ಲೆ ಕಂಪನಿಯ ಜನಪ್ರಿಯ 'ಮ್ಯಾಗಿ' ನೂಡಲ್ಸ್‌ನ ಮಾರುಕಟ್ಟೆಯನ್ನೇ ಕಾನೂನಾತ್ಮಕವಾಗಿ ನಿಲ್ಲಿಸಿ ರಾಮ್‌ದೇವ್ ಪ್ರಾಡಕ್ಟ್‌ಗೆ ಅನುವು ಮಾಡಿ ಕೊಟ್ಟಂತವನು. ತನ್ನನ್ನು ಹೊಗಳುವ ನೊಬೆಲ್ ಕನಸ್ಸುಳ್ಳ ಕಳ್ಳ ರವಿಶಂಕರ ಮೊದಲಾದ ಖಾವಿಗಳಿಗೆ ಉನ್ನತ ಗೌರವವನ್ನು ಕೊಡಿಸಿದಂತವನು. ಭೈರಪ್ಪನಂತವರನ್ನೆಲ್ಲ ಎತ್ತರದಲ್ಲಿಟ್ಟು ಸಾಕತೊಡಗಿದರೆ ಕೇವಲ ಹೊಗಳುತ್ತಿದ್ದನೆಂಬ ಅರ್ಹತೆಯ ಮೇರೆಗೆ ಶೂದ್ರ ಚೆಡ್ಡಿ ಭೋಪರಾಕ್ ಪ್ರತಾಪ ಎಂಬುವವನಿಗೆ ಸೀಟು ಕೊಡಿಸಿ ಉಳಿಸಿಕೊಂಡತಹ ಕೃತಜ್ಞತೆಯೂ ಈತನಲ್ಲಿದೆ.

ವೈದಿಕರ ಪಾದ ನೆಕ್ಕುವುದರಲ್ಲೇ ತನ್ನ ಸಾರ್ಥಕತೆಯಿದೆ ಎಂದು ಭಾವಿಸುವ ಶೂದ್ರ ಪ್ರತಾಪನಿಂದ ಈ ವಿಷ ಭಟ್ಟ ನಾಡಿನ ಪ್ರಜೆಗಳು ಗೌರವಿಸುವ ದಿನೇಶ್ ಅಮೀನ್ ಮಟ್ಟು ಅವರ ಕುರಿತು 'ಬೋಳು ಮಂಡೆಯ' ಎನ್ನುವ ವಿಕೃತ ಲೇಖನ ಬರೆಸುತ್ತಾನೆ. ಈಗ ಯಾರೋ ಏನೋ ಅಂದಿದ್ದನ್ನು ತಿರುಚಿ ಪದದ ಅರ್ಥ ತಿಳಿಯಹೋಗದೇ ಇದೊಂದು ಪ್ರಸಿದ್ಧ ಬೈಗುಳ ಪದವೆಂಬ ಭ್ರಮೆಯಿಂದ ಮೋದಿಯನ್ನೇ ಬೇವರ್ಸಿ ಎಂದಿದ್ದಾರೆಂದು ತನ್ನ ವಿಷವಾಣಿಯಲ್ಲಿ ಪುಕಾರು ಹಬ್ಬಿಸುತ್ತಾನೆ. ಆತ ವಿಷಭಟ್ಟ, ಈತ ನಂಜುಂಡಿ. ಈ ಎರಡು 'ನಂಜು'ಗಳು ಒಂದೆಡೆ ಸೇರಿದರೆ ಏನಾಗಬೇಕಿತ್ತೋ ಅದೇ ನಡೆಯುತ್ತಿದೆ. ನೇರ ದಾರಿಯಿಂದ ಸುದ್ದಿ ಮಾಡಿ ಪ್ರಕಾಶಿಸಲು ಆಗದೇ ಸಿನಿಮಾದವರಂತೆ ವಿವಾದವನ್ನು ಎಳೆದುಕೊಂಡು ಗಿಮಿಕ್ ಪರಾವಲಂಬಿತನಗಳ ಮೂಲಕ ಸುದ್ದಿ ಮಾಡುವ ಹುಚ್ಚು ಇವರದ್ದು. ಇವರ ಯಾವ ಹುಚ್ಚಾಟಕ್ಕೂ ಜನ ಬಲಿಯಾಗದೇ ಸುಮ್ಮನಿದ್ದದ್ದು ಒಳ್ಳೆಯ ಬೆಳವಣಿಗೆ.

ಅಷ್ಟಕ್ಕೂ ಈತ ಅಂದಂತೆ ಈತನ ಆರಾಧ್ಯನಾದ ಮೋದಿ ಇದೀಗ ಮಹಾಬೇವರ್ಸಿ (ಅನಾಥ) ಆಗುತ್ತಿರುವುದನ್ನು ಆತನ ಪಕ್ಷದವರೇ ಒಪ್ಪಿಕೊಳ್ಳುತ್ತಿದ್ದಾರೆ. ಮೊದಲಿನಂತೆ ಮೋದಿಯ ಚಾರ್ಮ್ ಆತನ ಪಕ್ಷದಲ್ಲೇ ಉಳಿದಿಲ್ಲ. ಎಲ್ಲಾ ರಾಜ್ಯದಲ್ಲೂ ಮೋದಿ ಅಲೆಯ ಹಣೆಬರಹ ಜಗಜ್ಜಾಹೀರಾಗುತ್ತಾ ಹೋಗುತ್ತಿದ್ದಂತೆ ಪಂಚತಂತ್ರದ ಕರಟಕ ದಮನಕ ಜೋಡಿಯಂತಿದ್ದ ಮೋದಿ ಹಾಗು ಅಮಿತ್ ಷಾ ಜೋಡಿಗಳು ನಿಂತಂತಹ ನೆಲವೇ ಕುಸಿಯತೊಡಗಿದೆ. ಮೋದಿ ಹಿಂಬಾಲಕರ ಸಂಖ್ಯೆ ಪಕ್ಷದಲ್ಲೇ ಕುಸಿಯ ತೊಡಗಿ ಆತ ಬೀದಿ ಪಾಲಾಗುವ ಹಂತ ತಲುಪಿದ್ದಾನೆ. ವಿಷ ಭಟ್ಟ ಹೇಳಿದ ಬೇವರ್ಸಿ ಸ್ಥಿತಿ ಎಂದರೆ ಇದೇ ತಾನೇ?

ಇತ್ತೀಚೆಗೆ ವಾಷಿಂಗ್ಟನ್ ಟೈಮ್ಸ್ ಮೊದಲಾದ ಸಮೀಕ್ಷೆಗಳಲ್ಲೂ ಮೋದಿ ಪ್ರಭಾವ ದಯನೀಯವಾಗಿ ಕುಸಿತ ಕಂಡಿರುವ ಬಗ್ಗೆ ವರದಿಗಳು ಬಂದಿದ್ದವು. ಅಂತೂ ವಿಷ ಭಟ್ಟ ಹೇಳಿದ್ದೇ ನಿಜವಾಗುತ್ತಲಿದೆ ಎಂದಾಯ್ತು.

ಅಂತೂ ಆ "ಅಚ್ಛೇ ದಿನ್" ಗಳು ಬೇಗ ಬರುವಂತಾಗಲಿ.

-ಅವಿನಾಶ ಎಮ್.ಎಸ್. ನೆಲ್ಲಿಕಾರ್

ಈ ವಾರದ ಸಂಪಾದಕೀಯ ಕಂಡಹಾಗೆ 'ಪ್ರೇಮಲತಾರ ಮೌನ ಮತ್ತು ಪೂಜಾರಿಯ ಬದ್ಧಿ' ಪ್ರಸ್ತುತವಾಗಿತ್ತು.


ಪ್ರೇಮಲತಾರ ವಿಷಯಕ್ಕೆ ಬಂದಾಗ ಸಮಾಜವನ್ನು ತಿದ್ದುವ, ಎಚ್ಚರಿಸುವ, ಮಾರ್ಗದರ್ಶನ ನೀಡಬೇಕಾದ ಖಾವಿಧಾರಿಗಳೇ ಇಂತಹ ಹೀನಕೃತ್ಯಕ್ಕೆ ಕೈ ಹಾಕಿದರೆ ಹೇಗೆ? ಆರ್ಥಿಕ, ಸಾಮಾಜಿಕವಾಗಿ ಪ್ರಬಲ ಹಿನ್ನೆಲೆಯುಳ್ಳ ಇಂತವರು ಏನು ಮಾಡಿಬೇಕಾದರೂ ದಕ್ಕಿಸಿಕೊಳ್ಳಬಲ್ಲರು ಎನ್ನುವುದಕ್ಕೆ ಈ ಪ್ರಕರಣ ಸಾಕ್ಷಿ! ಇಲ್ಲಿ ಪ್ರೇಮಲತಾರ ಅಸಹಾಯಕತೆ, ಹತಾಶೆ ಎದ್ದು ಕಾಣುತ್ತದೆ. ಆಕೆಗೆ ಕಾನೂನಿನ ನ್ಯಾಯದ ಜತೆಗೆ ಸಮಾಜದ ಸಹಾಯ, ಸಹಕಾರವೂ ಬೇಕು. ಹೆಣ್ಣು ಪ್ರತಿಯೊಂದು ಕ್ಷೇತ್ರದಲ್ಲೂ ಲೈಂಗಿಕವಾಗಿ, ಮಾನಸಿಕವಾಗಿ ಶೋಷಣೆಗೆ ಒಳಗಾಗುತ್ತಾ ಬರುತ್ತಿದ್ದಾಳೆ. ಈ ಬಗ್ಗೆ ಪುರುಷ ಸಮಾಜದಲ್ಲಿ ಅರಿವು, ಜಾಗೃತಿ ಮೂಡಿದಾಗ ಮಾತ್ರ ಹೆಣ್ಣಿನ ಶೋಷಣೆ ತಪ್ಪಿಸಲು ಸಾಧ್ಯ!

-ಶ್ರೀಧರ್ ಡಿ. ರಾಮಚಂದ್ರಪ್ಪ, ಚಿತ್ರದುರ್ಗ

ಕನ್ನಡ ಸಿನಿಮಾರಂಗದ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದವರು ಸಾಧು ಕೋಕಿಲಾ. ಸದ್ಯ ಇವರ ನಿರ್ದೇಶನದ 'ಭಲೇ ಜೋಡಿ' ಸಿನಿಮಾ ರಿಲೀಸ್ ಆಗುತ್ತಿದೆ. ಜತೆಗೆ ಅವರು ಮತ್ತೊಂದು ಸಿನಿಮಾ ನಿರ್ದೇಶಿಸಲು ರೆಡಿ ಆಗುತ್ತಿದ್ದಾರೆ. ಈ ಕುರಿತಾಗಿ ಮಾತಾಡಿದ್ದಾರೆ.

ಸ್ಟಾರ್ ನಟರಿಗಷ್ಟೇ ಸಿನಿಮಾ ನಿರ್ದೇಶಿಸುತ್ತೇನೆ

ಸಾಧು ಕೋಕಿಲಾ ಕನ್ನಡ ಸಿನಿಮಾ ರಂಗ ಕಂಡ ಪ್ರತಿಭಾವಂತ ಸಂಗೀತ ನಿರ್ದೇಶಕ. ಜೊತೆಗೆ ನಟ, ಗಾಯಕ ಮತ್ತು ಚಿತ್ರ ನಿರ್ದೇಶಕ. ಸದ್ಯ ನಾಲ್ಕು ವಿಭಾಗಗಳಲ್ಲೂ ಸಕ್ರಿಯರಾಗಿದ್ದಾರೆ. ಇವರು ಈಗ ಹಿನ್ನೆಲೆ ಸಂಗೀತ ನೀಡುವಲ್ಲೂ ಬಿಜಿ ಆಗಿದ್ದಾರೆ. ಈ ವಾರ ಇವರ ನಿರ್ದೇಶನದ 'ಭಲೇ ಜೋಡಿ' ಚಿತ್ರ ಬಿಡುಗಡೆ ಆಗುತ್ತಿದೆ. ಈ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ ಸಾಧು. ಜತೆಗೆ ತಮ್ಮ ವೃತ್ತಿಜೀವನದ ಹಲವು ನೆನಪುಗಳನ್ನು ಹಂಚಿಕೊಂಡಿದ್ದಾರೆ.



** ಈ ಹಿಂದೆ ನಿಮ್ಮ ನಿರ್ದೇಶನದ 'ಸೂಪರ್ ರಂಗ' ಚಿತ್ರ ಸೋತಿತ್ತು. ಆದರೂ ನೀವು ಮತ್ತೆ ರೀಮೇಕ್ ಚಿತ್ರವನ್ನೇ ಕೈಗೆತ್ತಿಕೊಂಡಿದ್ದು ಯಾಕೆ?*

ನಾನು ಸಂತೋಷಂ ಅವಾರ್ಡ್‌ನ ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿ ಬಹುತೇಕ ಪ್ರಶಸ್ತಿಗಳು 'ಅಲ ಮೊದಲಾಯಿಂದಿ' ಸಿನಿಮಾಗೆ ಸಿಕ್ಕಿದ್ದವು. ಅಷ್ಟೊಂದು ಸುಂದರವಾಗಿದೆಯಾ ಆ ಸಿನಿಮಾ ಅಂತ ಕ್ಯೂರಿಯಾಸಿಟಿಯಿಂದಲೇ ತರಿಸಿಕೊಂಡು ನೋಡಿದೆ. ಚಿತ್ರಕತೆ ಸಖತ್ ಆಗಿತ್ತು. ಹೀಗಾಗಿ ರೀಮೇಕ್ ಮಾಡಬೇಕು ಅನಿಸಿತು. ಇನ್ನೊಂದು ಪ್ರಯತ್ನ ಮಾಡೋಣ ಅಂತ ಒಪ್ಪಿಕೊಂಡೆ.



** ಮುಂದೆ ರೀಮೇಕ್ ಮಾಡುವುದಿಲ್ಲ ಅನ್ನುವ ಮಾತುಗಳನ್ನು ಆಡಿದ್ದೀರಿ. ಆ ಮಾತಿಗೆ ಬದ್ಧರಾಗಿ ಇರುತ್ತೀರಾ?*

ರೀಮೇಕ್ ಸಿನಿಮಾ ಮಾಡುವುದಿಲ್ಲ ಅನ್ನುವ ಶಪಥ ಮಾಡಿಲ್ಲ. ಹೆಚ್ಚೆಚ್ಚು ಸ್ವಮೇಕ್ ಸಿನಿಮಾಗಳಲ್ಲಿ ತೊಡಗಿಕೊಳ್ಳಬೇಕು ಅನ್ನುವ ಆಸೆ ಇದೆ. ರೀಮೇಕ್ ಸಿನಿಮಾ ಗೆದ್ದರೂ, ಸೋತರೂ ಅದಕ್ಕೆ ರೀಮೇಕ್ ಅನ್ನುವ ಹಣೆಪಟ್ಟೆ ಇದ್ದೇ ಇರುತ್ತದೆ. ಹೀಗಾಗಿ ನಮ್ಮದೇ ಕತೆಯನ್ನು ಸಿನಿಮಾ ಮಾಡುವ ನಿರ್ಧಾರಕ್ಕೆ ಬಂದಿದ್ದೇನೆ. ಆದಷ್ಟು ಸ್ವಮೇಕ್ ಚಿತ್ರಗಳತ್ತ ಯೋಚಿಸುತ್ತೇನೆ.

** 'ಭಲೇ ಜೋಡಿ' ಸಿನಿಮಾ ಹೇಗೆ ಮೂಡಿಬಂದಿದೆ? ನೀವು ಅಂದುಕೊಂಡಂತೆ ತಯಾರಾಗಿದೆಯಾ?*

ನಾನು ಯಾವುದೇ ಚಿತ್ರವನ್ನು ಕೈಗೆತ್ತಿಕೊಂಡರೂ ಅದು ಚೆನ್ನಾಗಿಯೇ ಮೂಡಿ ಬರುತ್ತದೆ. ಇಲ್ಲದೇ ಇದ್ದರೆ ಅಂತಹ ಕತೆಯನ್ನು ನಾನು ಮುಟ್ಟುವುದಿಲ್ಲ. ಈಗಾಗಲೇ ನಾಯಕ ಸುಮಂತ್ ಹಲವು ಚಿತ್ರಗಳನ್ನು ಮಾಡಿದ್ದಾನೆ. ಅಲ್ಲದೇ ಸಾನ್ವಿ ಕೂಡ 'ಮಾಸ್ಟರ್‌ಪೀಸ್' ಸಿನಿಮಾದಲ್ಲಿ ಮೆಚ್ಚುಗೆ ಗಳಿಸಿದ್ದಾರೆ. ಈ ಸಿನಿಮಾದಲ್ಲೂ ಇಬ್ಬರ ಜೋಡಿ ಸೊಗಸಾಗಿ ಮೂಡಿಬಂದಿದೆ. ನಾವು ಏನು ಅಂದುಕೊಂಡಿದ್ದೆನೋ ಅದಕ್ಕಿಂತಲೂ ಚೆನ್ನಾಗಿ ಮೂಡಿಬಂದಿದೆ.

** ಮುಂದಿನ ನಿಮ್ಮ ಸಿನಿಮಾ ಯಾವುದು? ಯಾರಿಗೆ ಸಿನಿಮಾ ಮಾಡಬೇಕು ಅಂದುಕೊಂಡಿದ್ದೀರಿ?*

ಹೊಸಬರಿಗಂತೂ ಮಾಡಲ್ಲ. ಇನ್ನೇನಿದ್ದರೂ ಸ್ಟಾರ್ ನಟರ ಜತೆ ಕೆಲಸ ಮಾಡುತ್ತೇನೆ. ಮುಂದಿನ ನನ್ನ ಪ್ಲಾನ್ ದರ್ಶನ್ ಮತ್ತು ಪುನೀತ್ ರಾಜ್‌ಕುಮಾರ್ ಅವರಿಗೆ ಸಿನಿಮಾ ಮಾಡಬೇಕು ಅಂತಿದೆ. ಅದಕ್ಕಾಗಿ ಪ್ಲಾನ್ ಕೂಡ ಮಾಡುತ್ತಿದ್ದೇನೆ.

** ನೀವು ಹಲವು ವಿಭಾಗಗಳಲ್ಲಿ ಗುರುತಿಸಿಕೊಂಡಿದ್ದೀರಿ. ನಿಮಗಿಷ್ಟದ ವಿಭಾಗ ಯಾವುದು?*

ನಾನು ಸಿನಿಮಾರಂಗಕ್ಕೆ ಬಂದಿದ್ದು ಸಂಗೀತ ನಿರ್ದೇಶಕ ಆಗಬೇಕು ಅಂತ. ಅನಿವಾರ್ಯವಾಗಿ ನಾನು ನಟಿಸಿದೆ. ಸಂಗೀತ ನಿರ್ದೇಶಕ ಆಗಿರುವುದರಿಂದ ಗಾಯಕನಾದೆ, ಇವೆಲ್ಲವನ್ನೂ ಮಾಡಿದೆ ಅನ್ನುವ ಕಾರಣಕ್ಕೆ ಚಿತ್ರ ನಿರ್ದೇಶಕನಾದೆ. ಎಲ್ಲವೂ ಈಗ ನನ್ನಿಷ್ಟದ ಕೆಲಸಗಳಾಗಿವೆ. ಯಾವುದು ಸಿಗುತ್ತೋ ಅದನ್ನು ಮಾಡುತ್ತಲೇ ಸಾಗುತ್ತೇನೆ. ಇದೇ ವಿಭಾಗದಲ್ಲಿ ಮುಂದುವರೆಯುತ್ತೇನೆ ಎಂದು ಹೇಳುವುದು ಸದ್ಯಕ್ಕೆ ಕಷ್ಟ.

** ನಿಮ್ಮ ಮಗ ಈಗಾಗಲೇ ನಿಮ್ಮೊಂದಿಗೆ ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುತ್ತಿದ್ದಾನೆ. ಅವನ ಬಗ್ಗೆ ಹೇಳಿ.*


ಅವನು ಕೇವಲ ಸಂಗೀತ ನಿರ್ದೇಶಕ ಆಗಲ್ಲ. ಜತೆಗೆ ಚಿತ್ರ ನಿರ್ದೇಶಕನಾಗುತ್ತಾನೆ ಅನ್ನುವ ನಂಬಿಕೆ ನನಗಿದೆ. ಅವನು ತುಂಬಾ ಚೆನ್ನಾಗಿ ಕತೆಯನ್ನು ಬರೆಯುತ್ತಾನೆ. ಅವನ ಆಲೋಚನೆಯ ಕ್ರಮವೇ ಬೇರೆ ಆಗಿದೆ. ನನಗಿಂತ ವಿಭಿನ್ನವಾಗಿ ಯೋಚಿಸುತ್ತಾನೆ. ಹೀಗಾಗಿ ಸೂಕ್ತ ಸಮಯ ಸಿಕ್ಕಾಗ, ಅವನು ನನ್ನ ಹಾಗೆ ಎಲ್ಲಾ ವಿಭಾಗದಲ್ಲೂ ಕೆಲಸ ಮಾಡುತ್ತಾನೆ.

** ಇಪ್ಪತ್ತು ವರ್ಷದ ಜರ್ನಿ ಹೇಗಿದೆ?*

ಕನ್ನಡ ಸಿನಿಮಾ ಇಂಡಸ್ಟ್ರಿ ನನಗೆ ಎಲ್ಲವನ್ನೂ ಕೊಟ್ಟಿದೆ. ಎಲ್ಲವನ್ನೂ ಕಲಿಸಿದೆ. ಹೀಗಾಗಿ ಇನ್ನೆಲ್ಲೋ ಹೋಗಿ ಕೆಲಸ ಮಾಡಬೇಕು ಅಂತ ನನಗಂತೂ ಅನಿಸುತ್ತಿಲ್ಲ. ಹೀಗಾಗಿಯೇ ಇಲ್ಲಿಯೇ ಹೆಚ್ಚೆಚ್ಚು ಕೆಲಸ ಮಾಡುತ್ತಿದ್ದೇನೆ. ಸಿನಿಮಾ ನಿರ್ಮಾಣ ಮಾಡಿ ಕೈ ಸುಟ್ಟುಕೊಂಡಿದ್ದೇನೆ. ಮತ್ತೆ ಸಿನಿಮಾದಿಂದಲೇ ಅದನ್ನು ಸರಿ ಮಾಡಿಕೊಂಡಿದ್ದೇನೆ. ಇದ್ದಷ್ಟು ದಿನ ಎಲ್ಲರನ್ನೂ ಖುಷಿಯಾಗಿಡುತ್ತೇನೆ. ■

ನಮಾಜು ಮಾಡಲು ಹೋಗಿ

ಅಭಿವೃದ್ಧಿ ಕಾರ್ಯಗಳಿಗೆ ಭೂಮಿ ಬೇಕು. ಅದು ಇರೋದು ರೈತರ ಹತ್ತಿರ. ನಮ್ಮ ಹತ್ತಿರ ಇಲ್ಲ ಅಂತ ಜವಾಬ್ದಾರಿ ಸರ್ಕಾರ ಸುಮ್ಮನಿರಂಗಿಲ್ಲ. ಅಭಿವೃದ್ಧಿ ಕಾರ್ಯಗಳ ಬಿಡಂಗಿಲ್ಲ. ಹಿಂಗಿಂಗೆ ಇಂಥದ್ದು ಇಂಥದ್ದು ಮಾಡ್ತೀವಿ, ಭೂಮಿ ಕೊಡ್ರಪ್ಪ ಅಂದ್ರೆ ಆ ರೈತರು ಅನ್ನೋವು 'ನಮಗಿರೋದೇ ಇಷ್ಟು ಜಮೀನು. ಅದು ಕೊಟ್ಟು ನಾವೇನು ಮಾಡಾನ' ಹಂಗೆ ಹಿಂಗೆ ಅಂತೆಲ್ಲ ತರ್ಲೆ ಮಾಡ್ತವೆ. ಅದಕ್ಕೇನು ಮಾಡ್ತದೆ ಸರ್ಕಾರ ಅನ್ನೋದು ಅಂದ್ರೆ ಯಾವ್ದೋ ಕಾನೂನ ಮೊಕದ ಮುಂದೆ ಹಿಡ್ಕೊಳ್ತದೆ. ಸುಮ್ಮನೆ ಆಪಾದನೆ ಮಾಡಬಾರ್ದು.



ಅಷ್ಟೋ ಇಷ್ಟೋ ಪರಿಹಾರಾನೂ ಕೊಡ್ತೀವಿ ಅಂತ ಆಶ್ವಾಸನೇನೂ ನೀಡುತ್ತೆ. ಆದರೇನು ಮಾಡ್ತೀರಿ ಸರ್ಕಾರಕ್ಕೆ ಇದೊಂದೇ ಕೆಲಸವಾ. ನೂರೆಂಟು ಕೆಲ್ಸ ಸಾವಿರ್ದೆಂಟು ತಾಪತ್ರಯಗಳ ನಡುವೆ ಪರಿಹಾರ ನೀಡಬೇಕು ಅನ್ನೋದು ಮರೆತೆ ಹೋಗುತ್ತೆ. ಆದ್ರೆ ಜಮೀನ್ನೇ ನಂಬಿಕೊಂಡು ಬದುಕ್ತಿದ್ದೋರು ಸುಮ್ಮನಿರೋಕಾಗಲ್ವಲ್ಲ, ತಗಾದೆ ಮಾಡ್ತವೆ. ಹರಕಲು ಚಡ್ಡಿ ಕೊಳಕಲು ಹರಟನವೆಲ್ಲ ಸರ್ಕಾರಿ ಅಧಿಕಾರಿಗಳ ಮೇಲೇ ಹಿಂಗೆ ಹಾರಾಡ್ತವಲ್ಲ ಅಂತ ಅವರಿಗೂ ರೇಗ್ತದೋ ಏನೋ. ಏನೇನೋ ಕೊಕ್ಕೆ ಹಾಕ್ತಾರೆ. ರೈತರು ಇಲ್ಲಿ ಏನೂ ನಡೀವಲ್ದು ಅಂತಾವ ಕೋರ್ಟು ಮೆಟ್ಟಲು ಏರ್ತಾರೆ. ಇದೆಲ್ಲ ಮುಗ್ಸಿ ಆರು ಕಾಸೋ ಮೂರು ಕಾಸೋ ಕೈ ಸೇರೋದ್ರೊಳ್ಗೆ ರೈತರ ಹೆಣ ಬಿದ್ದೋಗಿರ್ತದೆ. ಇದು ಲಾಗಾಯ್ತಿನಿಂದಲೂ ನಡೆದುಬಂದಿರೋ ಸಂಪ್ರದಾಯ.

ಇಂತ ಪರಂಪರೆ, ಸಂಪ್ರದಾಯ ಮರೆಯಬಾರದು ಅಂತಲೋ ಏನೋ ಚಿತ್ರದುರ್ಗದಲ್ಲಿ ಇಂತಹದ್ದೇ ಒಂದು ಕೇಸು ನಡ್ದದೆ. ಅಲ್ಲೇನಾಗದೆ ಯಾವುದೋ ಯೋಜನೆ ಜಾರಿಗೆ ತರಬೇಕು ಅಂತ ರೈಲು ಇಲಾಖೆಗೆ ತರ್ದೂಗಾಗದೆ. ಹಂಗಾದದ್ದೆ ತಡ ಅದಕ್ಕೆ ಬೇಕಾಗಿರೋ ಭೂಮಿ ಯಾರ್ದು ಅಂತ ನೋಡದೆ. ಅದು ಐವತ್ತು ಜನರಿಗೆ ಸೇರದೆ ಅಂತ ಗೊತ್ತಾಗದೆ. ಕಾನೂನು ಮುಖಕ್ಕಿಡ್ದು ಜಮೀನ ಕಿತ್ಕಂಡದೆ. ಅಷ್ಟೋ ಇಷ್ಟೋ ಪರಿಹಾರಾನೂ ನೀಡದೆ. ರೈತರಿಗೆ ಆ ಪರಿಹಾರ ಕಡಿಮೆ ಅನ್ಸದೆ. ಕೋರ್ಟುಗೆ ಹೋಗವ್ರೆ. ಕೋರ್ಟಿಗೆ ರೈತರ ಬೇಡಿಕೆ ನ್ಯಾಯವಾದ್ದು ಅನ್ನಸದೆ. ಐವತ್ತು ಜನಾನೂ ಸೇರ್ಸಿ ಒಟ್ಟು ಒಂದು ಕೋಟಿ ಪರಿಹಾರ ನೀಡುವಂತೆ ಆಡ್ರು ಮಾಡದೆ.... ಯಥಾಸ್ಥಿತಿ. ರೈತರ ಹತ್ತಿರ ಕೋರ್ಟು ಆರ್ಡರ್ ಇತ್ತು, ರೈಲು ಇಲಾಖೆಯವರ ಹತ್ತಿರ ಹಣ ಇತ್ತು. ಬೇಸತ್ತ ರೈತರು ಮತ್ತೆ ಕೋರ್ಟಿಗೆ ಹೋಗಿದ್ರು. ಕೋರ್ಟಿನ ಆರ್ಡರಿಗೂ ಮರ್ಯಾದೆ ಸಿಗದಿದ್ದುದು ಜಡ್ಜ್ ಅವರಿಗೆ ಪಾದದಿಂದ ನೆತ್ತಿತನಕ ಸಿಟ್ಟು ಬರ್ಸಿರಬೇಕು. ರೈತ ಪರ ತೀರ್ಪು ಕೊಟ್ಟವ್ರೇ ಏನಂತ? 'ರೈಲು ಜಪ್ತಿ ಮಾಡಿ!'

ಇಪ್ಪತ್ತೈದು ವರ್ಷಗಳ ಹೋರಾಟದ ಫಲಶ್ರುತಿ ಇದು. ಖುಷಿಯಾದರು ರೈತರು, ರೈತರ ಪರ ಲಾಯರು ಸೀದಾ ರೈಲ್ವೆ ಸ್ಟೇಷನ್ನಿಗೆ ಹೋಗವ್ರೆ. ಆರ್ಡರ್ ಕಾಪಿ ತೋರಿಸವ್ರೆ. ಸೂಚಿಸಿದ್ದ ರೈಲನ್ನು ಜಪ್ತಿ ಮಾಡವ್ರೆ!

ಈ ಸುದ್ದಿ ಓದಿದಾಗ ನನಗೆ ಅನ್ನಿಸಿದ್ದು...

ರೈತರಿಗೆ ಬೇಕಾಗಿದ್ದು ಹಣ ರೈಲಲ್ಲ. ಆ ರೈಲನ್ನು ತೆಗೆದುಕೊಂಡು ಏನು ಮಾಡುವುದು? ಅದನ್ನು ಮಾರುವುದು ಯಾರಿಗೆ?

ಇನ್ನು ಮುಂದುವರೆದು....

ಒಂದುವೇಳೆ ರೈಲು ಇಲಾಖೆಯವರು ನಿಮ್ಮ ರೈಲು ನಮ್ಮ ಜಾಗವನ್ನು ಆಕ್ರಮಿಸಿಕೊಂಡಿದೆ. ಕೂಡಲೆ ಅದನ್ನು ತೆರವು ಮಾಡಿ ಎಂದು ರೈತರಿಗೆ ನೋಟಿಸು ನೀಡಿದರೆ ಏನು ಮಾಡುವುದು? ತೆರವು ಮಾಡುವುದಾದರೂ ಹೇಗೆ?

ರೈತರ ಪರ ಬರುವ ತೀರ್ಪು, ಇರುವ ಕಾನೂನು ಎಲ್ಲಾ ಇದೇ ತರಹದೇನಾ....!

■ ಎಚ್ಚೆಲ್ಕೆ


Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 02-03-2016 RNI No. KARKAN200

ಅಮೂಲ್ಯ ಸ್ಟೂಡೆಂಟ್

'ಚೆಲುವಿನ ಚಿತ್ತಾರ'ದ ನಂತರ ಅಮೂಲ್ಯ ಮತ್ತೆ ಸ್ಟೂಡೆಂಟ್ ಪಾತ್ರವನ್ನು ಒಪ್ಪಿಕೊಂಡಿದ್ದಾರೆ. 'ಗಜಕೇಸರಿ' ಸಿನಿಮಾದ ನಂತರ ತಮ್ಮ ಲುಕ್ ಅನ್ನೇ ಬದಲಾಯಿಸಿಕೊಂಡಿದ್ದವರು ಈಗ ಏಕಾಏಕಿಯಾಗಿ ಮತ್ತೆ ಹಳೆ ಸ್ಟೈಲ್‌ಗೆ ವಾಪಸ್ಸಾಗಿದ್ದಾರೆ. ದುನಿಯಾ ವಿಜಯ್ ನಟಿಸುತ್ತಿರುವ 'ಮಾಸ್ತಿ ಗುಡಿ'ಯಲ್ಲಿ ಅವರು ಸ್ಟೂಡೆಂಟ್ ಪಾತ್ರ ನಿರ್ವಹಿಸುತ್ತಿದ್ದಾರೆ.

ಇದು ನಾಗಶೇಖರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಸಿನಿಮಾ. ಇಡೀ ಕತೆಯು ನಾಯಕನ ಸುತ್ತಲೇ ಹೆಣೆಯಲಾಗಿದೆ. ಆದರೂ ಅಮೂಲ್ಯ ಪಾತ್ರಕ್ಕೂ ಮಹತ್ವವಿದೆಯಂತೆ. ಹೀಗಾಗಿಯೇ ಸ್ಟೂಡೆಂಟ್ ಆಗಲು ಒಪ್ಪಿಕೊಂಡಿದ್ದಾರೆ ಅಮೂಲ್ಯ.

ಈ ಸಿನಿಮಾದಲ್ಲಿ ದುನಿಯಾ ವಿಜಯ್ ನಾಲ್ಕು ಪಾತ್ರಗಳನ್ನು ಪೋಷಿಸುತ್ತಿದ್ದಾರೆ. ಬಹುತೇಕ ಸಿನಿಮಾ ಕಾಡಿನಲ್ಲೇ ಶೂಟಿಂಗ್ ಆಗುವುದು ಮತ್ತೊಂದು ವಿಶೇಷ. ಸದ್ಯ ವಿಜಯ್ ಭಾಗದ ಚಿತ್ರೀಕರಣ ಪ್ರಾರಂಭವಾಗಿದೆ. ಮುಂದಿನ ಹಂತದಲ್ಲಿ ಅಮೂಲ್ಯ ಸೇರ್ಪಡೆ ಆಗಲಿದ್ದಾರೆ.



ಚೇತರಿಸಿಕೊಂಡ ಸತೀಶ್



'ರಾಕೆಟ್' ಸಿನಿಮಾದ ಸೋಲಿನಿಂದ ಬಳಲಿದ್ದ ನೀನಾಸಂ ಸತೀಶ್ ಈಗ ಚೇತರಿಸಿಕೊಂಡಿದ್ದಾರೆ. ತಾವು ಎಡವಿದ್ದು ಎಲ್ಲಿ ಅನ್ನುವುದನ್ನು ಗುರುತಿಸಿಕೊಂಡು ಮುಂದಿನ ಹೆಜ್ಜೆ ಇಡುತ್ತಿದ್ದಾರೆ. ಹೀಗಾಗಿಯೇ ಸದ್ಯ ಅವರ ಕೈಯಲ್ಲಿ ನಾಲ್ಕು ಸಿನಿಮಾಗಳಿವೆ. ಅವುಗಳಲ್ಲಿ ಒಂದು ಸಿನಿಮಾ ಸೆಟ್ಟೇರಿದೆ. 'ಒಲವೇ ಮಂದಾರ' ಖ್ಯಾತಿಯ ಜಯತೀರ್ಥ 'ಬ್ಯುಟಿಫುಲ್ ಮನಸುಗಳು' ಎಂಬ ಕತೆಯನ್ನು ಸತೀಶ್‌ಗಾಗಿ ಹೆಣೆದಿದ್ದಾರೆ. ಇಬ್ಬರೂ ರಂಗಭೂಮಿಯ ಹಿನ್ನೆಲೆಯವರು ಆಗಿದ್ದರಿಂದ, ಹೊಸದಾಗಿ ಕಟ್ಟಿಕೊಡುವ ಭರವಸೆಯನ್ನು ನೀಡಿದ್ದಾರೆ.

ಹೆಸರೇ ಹೇಳುವಂತೆ ಬ್ಯುಟಿಫುಲ್ ಆದ ಮನಸಿನ ಕತೆಯನ್ನು ಈ ಸಿನಿಮಾದ ಮೂಲಕ ಹೇಳಲು ಹೊರಟಿದ್ದಾರೆ ನಿರ್ದೇಶಕರು. ಮೊನ್ನೆಯಷ್ಟೇ ಸಿನಿಮಾದ ಮುಹೂರ್ತ ಕೂಡ ಆಗಿದೆ. ಸತೀಶ್ ನಾಯಕನಾದರೆ, ಶ್ರುತಿ ಹರಿಹರನ್ ನಾಯಕಿ. ಮತ್ತೆ 'ಲೂಸಿಯಾ' ಜೋಡಿ ಈ ಸಿನಿಮಾದ ಮೂಲಕ ಒಂದಾಗಿದೆ.

"'ರಾಕೆಟ್' ನನ್ನ ಇಷ್ಟದ ಸಿನಿಮಾ. ಪ್ರೇಕ್ಷಕರು ನಾವು ಅಂದುಕೊಂಡಷ್ಟು ಸ್ವೀಕರಿಸಲಿಲ್ಲ, ಹಾಗಂತ ಬೇಸರವೂ ಇಲ್ಲ, ಸಿನಿಮಾ ರಂಗದಲ್ಲಿ ಇದೆಲ್ಲ ಇದ್ದದ್ದೇ. ಈಗ ಆಗಿರುವ ತಪ್ಪುಗಳನ್ನು ಸರಿ ಮಾಡಿಕೊಂಡು ಉತ್ತಮ ಸಿನಿಮಾ ಕೊಡುತ್ತೇನೆ" ಅನ್ನುವುದು ಸತೀಶ್ ಮಾತು.

ಗುರುವಿಗೆ ಗುರುಬಲವಿರಲಿ

'ಡೈರೆಕ್ಟರ್ ಸ್ಪೆಷಲ್' ಸಿನಿಮಾ ಮಾಡಿ ಮಕಾಡೆ ಮಲಗಿದ್ದ ನಿರ್ದೇಶಕ ಗುರುಪ್ರಸಾದ್ ವರ್ಷದ ಹಿಂದೆ ಸಿನಿಮಾ ಮಾಡುವುದಾಗಿ ಹೇಳಿದ್ದರು. 'ಎರಡನೇ ಸಲ' ಅನ್ನುವ ಶೀರ್ಷಿಕೆ ಇಟ್ಟು ಅಂದೇ ಮುಹೂರ್ತವನ್ನೂ ಮಾಡಿದ್ದರು. ಆನಂತರ ಸಿನಿಮಾದ ಬಗ್ಗೆ ಯಾವ ಮಾಹಿತಿಯೂ ಸಿಕ್ಕಿರಲಿಲ್ಲ, ಅಸಲಿಯಾಗಿ ಅವರು ಸಿನಿಮಾದ ಶೂಟಿಂಗ್ ಕೂಡ ಮಾಡಲಿಲ್ಲ, ಈಗ ಮತ್ತೆ ಅದೇ ಸಿನಿಮಾದಿಂದಾಗಿ ಸುದ್ದಿಗೆ ಬಂದಿದ್ದಾರೆ. ಹದಿನೈದು ದಿನಗಳ ಚಿತ್ರೀಕರಣ ಮುಗಿಸಿರುವ ಅಚ್ಚರಿಯ ಸುದ್ದಿಯನ್ನೂ ಕೊಟ್ಟಿದ್ದಾರೆ. ಗುರುಪ್ರಸಾದ್ ಸಿನಿಮಾಗಳೆಂದರೆ ಹಾಗೇ. ಅವು ತೆರೆಗೆ ಬರೋಕೆ ಎರಡ್ಮೂರು ವರ್ಷಗಳಾದರೂ ಬೇಕು. 'ಎರಡನೇ ಸಲ'ಕ್ಕೆ ಈಗ ಒಂದೂವರೆ ವರ್ಷ. ಬಿಡುಗಡೆ ಆಗ್ಲೋಕೆ ಇನ್ನಷ್ಟು ತಿಂಗಳು ಕಾಯಬೇಕು. ಅದನ್ನು ಸ್ವತಃ ಅವರೂ ಒಪ್ಪಿಕೊಳ್ಳುತ್ತಾರೆ. "ನಾನು ಯಾವ ಕೆಲಸವನ್ನೂ ಅವಸರದಲ್ಲಿ ಮಾಡುವುದಿಲ್ಲ, ನನ್ನ ಸಿನಿಮಾಗಳು ಕಸದಬುಟ್ಟಿಗೆ ಸೇರಿಸಲು ನನಗೆ ಇಷ್ಟವಿಲ್ಲ, ತಡವಾಗಿಯಾದರೂ ಒಳ್ಳೆಯ ಚಿತ್ರಗಳನ್ನು ನೀಡುತ್ತೇನೆ" ಅಂತಾರೆ.

ಅಂದಹಾಗೆ ಅವರ ಹೊಸ ಸಿನಿಮಾದ ನಾಯಕ ಧನಂಜಯ್. ಸಂಗೀತಾ ಭಟ್ ನಾಯಕಿ. ಎಂದಿನಂತೆ ಬಹುತೇಕ ವಿಭಾಗದಲ್ಲಿ ಗುರುಪ್ರಸಾದ್ ಇದ್ದಾರೆ.

ತಮಿಳಿಗೆ ವಿಜಯ ರಾಘವೇ

ನಟ ವಿಜಯ ರಾಘವೇಂದ್ರ ಸದ್ದಿಲ್ಲದೇ ತಮಿಳು ಮತ್ತು ತ
ಹಾರಿದ್ದಾರೆ. ಈಗಾಗಲೇ ಕನ್ನಡದಲ್ಲಿ ನಿರ್ಮಾಣವಾದ ಇವರ 'ರ
ಸಿನಿಮಾ ಈ ಎರಡೂ ಭಾಷೆಯಲ್ಲಿ ಸೆಟ್ಟೇರುತ್ತಿದೆ. ಹೀಗಾಗಿ ನಾಯಕ
ನಾಯಕಿಯ ಪಾತ್ರವನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ತೆಲುಗಿನಲ್ಲಿ ಭೀಮ
ಟಾಕೀಸ್‌ನ ನಿರ್ಮಾಪಕ ಟಿ.ರಾಮ ಸತ್ಯನಾರಾಯಣ ಹಾಗೂ ತಮ
ಡಿಜಿಟಲ್ ಥಿಯೇಟರ್ ಆದಿರಾಜ್ ಎಂಬುವವರು ಇದನ್ನು ನಿ
ಮಾಡುತ್ತಿದ್ದಾರೆ. ಈ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ ನಿರ್ದೇಶನ ಅ
ಅವರದ್ದು. ರಾಜೇಶ್ ಯಾದವ್ ಸಿನಿಮಾಟೋಗ್ರಫಿಯಲ್ಲಿ ಸಿ
ಮೂಡಿಬಂದಿದೆ. ಇದು ಕ್ಯೂಟ್ ಲವ್ ಸ್ಟೋರಿ ಹಾಗೂ ಹಾಟ್
ಆಗಿ ಮೂಡಿಬಂದಿರುವ ಚಿತ್ರ. ವಿಜಯ ರಾಘವೇಂದ್ರ ಜತೆ ಹ
ನಾಯಕಿಯಾಗಿ ನಟಿಸುತ್ತಿದ್ದಾರೆ. ಸತ್ಯಜಿತ್, ಭಜರಂಗಿ ಮಾದು, ಶ
ರಾಣಿ ಐಶ್ವರ್ಯ, ಕುರಿ ರಂಗ ಮೊದಲಾದವರ ತಾರಾಬಳಗವಿದೆ.




ಉಪ್ಪಿ ಪತ್ನಿಯಾಗಿ ನಿಖಿತಾ

ನಿಖಿತಾ ತುಕ್ರಾಲ್ ಕನ್ನಡ ಸಿನಿಮಾರಂಗದಿಂದ ದೂರಾದರು ಅನ್ನುವ ಮಾತಿತ್ತು, ಅದೀಗ ಸುಳ್ಳಾಗಿದೆ. ಉಪೇಂದ್ರ ಮತ್ತು ಸುದೀಪ್ ಒಟ್ಟಾಗಿ ನಟಿಸುತ್ತಿರುವ ಹೊಸ ಸಿನಿಮಾದಲ್ಲಿ ನಿಖಿತಾ ನಟಿಸುತ್ತಿದ್ದಾರೆ. ಉಪೇಂದ್ರರ ಜೋಡಿಯಾಗಿ ಅವರು ಕಾಣಿಸಿಕೊಳ್ಳಲಿದ್ದಾರೆ. 'ಮುಕುಂದ ಮುರಾರಿ' ಹೆಸರಿನಲ್ಲಿ ಸೆಟ್ಟೇರುತ್ತಿರುವ ಈ ಸಿನಿಮಾದಲ್ಲಿ ಉಪೇಂದ್ರ ಪತ್ನಿಯ ಪಾತ್ರದಲ್ಲಿ ಪ್ರಿಯಾಂಕ ನಟಿಸಲಿದ್ದಾರೆ ಅನ್ನುವ ಮಾತಿತ್ತು, ಆ ಜಾಗಕ್ಕೆ ನಿಖಿತಾ ಅವರನ್ನು ಕರೆತರಲಾಗಿದೆ.

"ಕನ್ನಡದ ಬಹುತೇಕ ಸ್ಟಾರ್ ನಟರ ಜತೆ ಕೆಲಸ ಮಾಡಿದ್ದೇನೆ. ಉಪೇಂದ್ರ ಅವರ ಜತೆ ಹೆಚ್ಚೆಚ್ಚು ಸಿನಿಮಾಗಳಲ್ಲಿ ಕಾಣಿಸಿಕೊಳ್ಳಬೇಕು ಅನ್ನುವ ಆಸೆಯಿತ್ತು, ಅದು ಈಡೇರುತ್ತಿದೆ. ಪಾತ್ರದ ಬಗ್ಗೆ ಹೆಚ್ಚೇನೂ ಹೇಳಿಲ್ಲ, ನಾನೂ ಕೂಡ ಕೇಳಿಲ್ಲ, ಇದು ಮಲ್ಟಿಸ್ಟಾರ್ ಸಿನಿಮಾ ಆಗಿದ್ದರಿಂದ ನಟಿಸಲು ಒಪ್ಪಿಕೊಂಡಿದ್ದೇನೆ" ಅಂದಿದ್ದಾರೆ ನಿಖಿತಾ. ಬಿಗ್‌ಬಾಸ್ ನಂತರ ಇವರಿಗೆ ಸಾಕಷ್ಟು ಅವಕಾಶಗಳು ಸಿಗುತ್ತವೆ ಎನ್ನಲಾಗಿತ್ತು, ಆದರೆ, ಅಂದುಕೊಂಡಷ್ಟು ಸಿನಿಮಾಗಳು ಸಿಗಲೇ ಇಲ್ಲ, ಹೀಗಾಗಿಯೇ ಬೇರೆ ಸಿನಿಮಾ ರಂಗದತ್ತಲೂ ಇವರು ಹೆಜ್ಜೆ ಹಾಕಿದ್ದರು. ಈಗ ಮತ್ತೆ ಕನ್ನಡಕ್ಕೆ ಬಂದಿದ್ದಾರೆ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com